# ಯುಗಶಕ್ತಿ

ತ್ರೈಮಾಸಿಕ

AHMADIYYA MUSLIM CENTENARY 1889 — 1989

ಅಹ್ಮದಿಯಾ ಶತಾಬ್ದ ವಿಶೇಷ ಸಂಚಿಕೆ - 1990

With Best Compliments From

# RABWAH WOOD INDUSTRIES

MAHDI NAGAR – VANIYAMBALAM – 679 339

MALAPPURAM DISTRICT, KERALA

Phone: Wandoor-92

Rly. VANIYAMBALAM

***Dealers in***

Round Timber, Teak Poles, Swan Sizes, Firewood And Manufacturers of Wooden Furniture, Doors, Windows & Building Materials Etc.

---

Our sister concern

# CEEKAY WOOD PRODUCTS,

# CEEKAY TIMBERS,

VANIYAMBALAM - 679 339.

IMAM TIMBERS,

VADASSERY. P.O. PALGHAT DT.

# ಯುಗರಶ್ಮಿ

## ಅಹ್ಮದಿಯಾ ಶತಾಬ್ದ ವಿಶೇಷ ಸಂಚಿಕೆ

AHMADIYYA MUSLIM CENTENARY 1889 — 1989

# YUGARASHMI

## KANNADA QUARTERLY

## AHMADIYYA CENTENARY SPECIAL

**Editor :**

*MUHAMMAD YUSUF*

# YUGARASHMI

## AHMADIYYA CENTENARY SPECIAL ISSUE COMMITTEE

1. Dr. B. Mansoor Ahmad,
   Amir, K. S. A. Committee
2. Moulvi Muhammad Abul Wafa,
   Ahmadiyya Missionary
3. Moulvi Mohammad Umar H. A.,
   Ahmadiyya Missionary
4. M. Shafiullah,
   Amir, Karnataka
5. A. P. Kunhamoo
6. Prof. B. Mahmood Ahmad
7. Bashir Ahmad Siddeeque
8. M. P. Ibrahim
9. C. Muthiullah
10. Muhammad Yusuf, Editor

بِسْمِ اللّٰهِ الرَّحْمٰنِ الرَّحِيْمِ

نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಸಂಪುಟ : 14 / 15 | ಡಿಸೆಂಬರ್ 1990 / ಫತಹ್ 1369 | ಸಂಚಿಕೆ : 1–4 / 1–2 |
| --- | --- | --- |

## ಖುರ್‌ಆನ್ ಬೋಧನೆ

★ ಯಾವುದಾದರೂ ಜನತೆಯ ವಿರೋಧವು ನಿಮ್ಮನ್ನು ಅನ್ಯಾಯದಿಂದ ವರ್ತಿಸಲು ಪ್ರೇರೇಪಿಸದಿರಲಿ. ನೀವು ನ್ಯಾಯವನ್ನೇ ಪಾಲಿಸಿರಿ. ಅದು ದೇವಭಕ್ತಿಗೆ ಅತ್ಯಂತ ಸಮೀಪದ್ದಾಗಿದೆ. (5 : 9)

★ ಕರುಣಾನಿಧಿಯಾದ ದೇವನ ಭಕ್ತದಾಸರು ಸಮಾಧಾನ ಮತ್ತು ಸೌಮ್ಯತೆಯಿಂದ ನಡೆಯುತ್ತಾರೆ. ಅಜ್ಞಾನಿಗಳಾದ ಜನರು ಅನುಚಿತವಾಗಿ ನುಡಿಯುವಾಗ ಅದಕ್ಕುತ್ತರವಾಗಿ ಅವರಿಗೆ ಶಾಂತಿಯನ್ನು ಬಯಸುತ್ತಾರೆ. (25 : 64)

★ ದೇವರು ನಿಮ್ಮ ಸಹಾಯಕ್ಕೆ ಇದ್ದರೆ ನಿಮ್ಮನ್ನು ಸೋಲಿಸಲು ಯಾರಿಂದಲೂ ಸಾಧ್ಯವಾಗದು. ಆದರೆ ಅವನು ನಿಮ್ಮ ಕೈಬಿಟ್ಟರೆ ಮತ್ತೆ ನಿಮ್ಮ ಸಹಾಯಕ್ಕೆ ಯಾರಿದ್ದಾರೆ? ಆದುದರಿಂದ ಸತ್ಯವಿಶ್ವಾಸಿಗಳು ದೇವರ ಮೇಲೆ ಪೂರ್ಣ ಭರವಸೆಯನ್ನಿಡಲಿ. (3 : 161)

# ಯುಗರಶ್ಮಿ ತ್ರೈಮಾಸಿಕ

10-23-1008 ಅನ್ಸಾರಿ ರಸ್ತೆ, ಬಂದರ್, ಮಂಗಳೂರು-575 001.

ವಿಷಯ ಸೂಚಿಕೆ — ಪುಟ


| | | |
|---|---|---|
| ✤ ಖುರ್‌ಆನ್ ಬೋಧನೆ | ... | 1 |
| ✤ ಯುಗವಾಣಿ | ... | 3 |
| ✤ ಹಝ್ರತ್ ಮೌಲಾನಾ ಹಕೀಂ ನೂರುದ್ದೀನ್ | ... | 5 |
| ✤ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ | ... | 7 |
| ✤ ಹಝ್ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್ | ... | 9 |
| ✤ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ | ... | 11 |
| ✤ ಸಂಪಾದಕೀಯ: ಅಹ್ಮದಿಯಾ ಜಮಾಅತಿಗೆ ನೂರು ವರ್ಷಗಳು | ... | 12(i) |
| ✤ ಹಝ್ರತ್ ಖಲೀಫರ ಸಂದೇಶ | ... | 12A |
| ✤ ಮನುಷ್ಯ ರಾಶಿಗೆ ಒಂದು ಆಧ್ಯಾತ್ಮಿಕ ಸಂದೇಶ | ... | 13 |
| ✤ ಸಂದೇಶ (ಮಿರ್ಝಾ ವಸೀಂ ಅಹ್ಮದ್) | ... | 19 |
| ✤ ಬೈಅತ್ ನಿಬಂಧನೆಗಳು | ... | 20 |
| ✤ ಪವಿತ್ರ ಖುರ್‌ಆನ್‌ನಿಂದ | ... | 21 |
| ✤ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು | ... | 23 |
| ✤ ಅಹ್ಮದಿಯಾ ಇತಿಹಾಸದ ಪುಟಗಳಿಂದ: ಮಂಗಳೂರು-ಮಂಜೇಶ್ವರ-ಮೊಗ್ರಾಲ್ | ... | 24A |
| ಮಡಿಕೇರಿ | ... | 24G |
| ✤ ಶತವಾರ್ಷಿಕ ಜ್ಯೂಬಿಲಿ ಆಚರಿಸುತ್ತಿರುವ ಅಹ್ಮದಿಯಾ ಸಂಘಟನೆ | ... | 25 |
| ✤ 120 ರಾಷ್ಟ್ರಗಳಲ್ಲಿ ಅಹ್ಮದಿಯಾ ಸಂಘಟನೆ | ... | 33 |
| ✤ ವಿವಿಧ ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಭಾಷಾಂತರ | ... | 35 |
| ✤ ವಿವಿಧ ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಆಯ್ದ ವಚನಗಳ ಭಾಷಾಂತರ | ... | 37 |
| ✤ ವಿವಿಧ ಭಾಷೆಗಳಲ್ಲಿ ಪ್ರವಾದಿ ವಚನಗಳ ಅನುವಾದ | ... | 39 |
| ✤ ಅಹ್ಮದಿಯಾ ಚರಿತ್ರೆ – ಕೆಲವು ಮುಖ್ಯ ಘಟನೆಗಳು | ... | 41 |
| ✤ ಇಸ್ಲಾಂ ಧರ್ಮದ ವೈಶಿಷ್ಟ್ಯಗಳು | ... | 45 |
| ✤ ಖುರ್‌ಆನಿನ ಪಾಠಗಳು | ... | 69 |
| ✤ ದೇವವಿಶ್ವಾಸ | ... | 75 |
| ✤ ಸಾಮಾಜಿಕ ಮೌಲ್ಯಗಳು | ... | 81 |
| ✤ ಇಮಾಂ ಮಹ್‌ದಿಯ ಸೂಚಕ ಕಾರ್ಯ: ಸೂರ್ಯ-ಚಂದ್ರ ಗ್ರಹಣಗಳು | ... | 91 |
| ✤ ಸರ್ವ ಧರ್ಮ ಮೈತ್ರಿ | ... | 97 |
| ✤ ಕೊಡಿಯತ್ತೂರ್‌ನಲ್ಲಿ ಮುಖಾಮುಖಿ ಮುಬಾಹಲ | ... | 101 |
| ✤ 'ಸನ್ಮಾರ್ಗ'ದ ದುರ್ಬೋಧನೆ | ... | 109 |
| ✤ ಅಹ್ಮದಿಯಾ ವಾರ್ತೆಗಳು | ... | 121 |
| ✤ ನಿಧನ ವಾರ್ತೆಗಳು | ... | 123 |

# YUGARASHMI Kannada Quarterly

10–23–1008 Ansari Road, Bunder, MANGALORE-575 001.

## CONTENTS


| | | Page |
|---|---|---|
| Exhortation of the Holy Quran | ... | 1 |
| Voice of the Age | ... | 3 |
| Hazrat Moulana Nooruddeen (Khalifatul Masih I) | ... | 5 |
| Hazrat Mirza Bashiruddeen Mahmood Ahmad (Khalifatul Masih II) | ... | 7 |
| Hazrat Hafiz Mirza Nasir Ahmad (Khalifatul Masin III) | ... | 9 |
| Hazrat Mirza Tahir Ahmad (Khalifatul Masih IV) | ... | 11 |
| Editorial : Hundred years to Ahmadiyya Jamaath | ... | 12(i) |
| Message from Hazrath Khalifatul Masih IV | ... | 12A |
| Centenary Message by Hazrat Khalifatul Masih IV | ... | 13 |
| Message (Hazrat Mirza Wasim Ahmad) | ... | 19 |
| Conditions of Bai'at | ... | 20 |
| Verses from The Holy Quran | ... | 21 |
| Sayings of Holy Prophet Muhammad | ... | 23 |
| From the pages of History of Ahmadiyyath: Mangalore–Manjeshwar–Mogral | ... | 24A |
| Madikeri | ... | 24G |
| Ahmadiyya Movement in the celebration of Centenary | ... | 25 |
| 120 Countries where Ahmadiyyat is established | ... | 33 |
| The translation of the Holy Quran in different languages | ... | 35 |
| The translation of Selected Verses of the Holy Quran in different languages | ... | 37 |
| The translation of Selected Sayings of the Holy Prophet in different languages | ... | 39 |
| The History of Ahmadiyyath – Some important events | ... | 41 |
| The Distinctive Features of Islam - by Hazrat Khalifatul Masih IV | ... | 45 |
| Teachings of The Holy Quran - by Hazrat Khalifatul Masih II | ... | 69 |
| Belief in God - by Moulana B. Abdullah H. A. | ... | 75 |
| The Social Values - by Sir Muhammad Zafrullah Khan | ... | 81 |
| The Signs of Imam Mahdi : The Lunar and Solar Eclipses - by Hafiz Saleh Muhammad Alladin, Msc., Ph. D. | ... | 91 |
| Communal Harmony - by Moulvi Muhammad Umar H. A. | ... | 97 |
| Mubahala at Kodiyathur | ... | 101 |
| A Rejoinder to 'Sanmarga' - by Ibnu Abdullah | ... | 109 |
| Ahmadiyya News | ... | 121 |
| Obituary | ... | 123 |



**Hazrat Mirza Ghulam Ahmad Qadiani**
The Promised Messiah
1835 - 1908 A.D

# ಯುಗವಾಣಿ

"ಈ ದೇಶದಲ್ಲಿ ವಿವಿಧ ಧರ್ಮಗಳೂ ಅನೇಕ ಪಂಥಗಳೂ ಇವೆ. ಅದೇ ಪ್ರಕಾರ ವಿಶ್ವಾಸ ವೈಪರೀತ್ಯಗಳೂ ವೈರುದ್ಧ್ಯಗಳೂ ಬಹಳವಾಗಿವೆ. ಇದಕ್ಕೆ ಪ್ರಧಾನ ಕಾರಣ, ಅಧಿಕಾಂಶ ಜನರ ಹೃದಯಗಳಲ್ಲಿ ಅಧ್ಯಾತ್ಮ ಶಕ್ತಿ ಮತ್ತು ದೇವಭಕ್ತಿ ಇಲ್ಲದಿರುವುದೆಂದೂ ಸತ್ಯ ಮತ್ತು ಅಸತ್ಯಗಳನ್ನು ಗುರುತಿಸಲಿಕ್ಕಿರುವ ಆಧ್ಯಾತ್ಮಿಕ ಪ್ರಕಾಶ ನಂದಿಹೋಗಿರುವುದರಿಂದಾಗಿದೆಯೆಂದೂ ದೈವಿಕ ಜ್ಞಾನ ಮೂಲಕ ನನಗೆ ಮನಗಾಣಲು ಸಾಧ್ಯವಾಯಿತು. ಇಂದು ಲೋಕದಲ್ಲಿಡೀ ನಾಸ್ತಿಕತೆ ಮತ್ತು ಅಧಾರ್ಮಿಕತೆ ವ್ಯಾಪಿಸಿಕೊಂಡಿವೆ. ಬಾಯಿಯಲ್ಲಿ ದೇವರ ಕುರಿತು ಹೇಳುವುದಾದರೂ ಹೃದಯದಲ್ಲಿ ನಾಸ್ತಿಕ, ಧರ್ಮರಾಹಿತ್ಯ ಚಿಂತನೆಗಳ ಅಲೆಯೇಳುತ್ತವೆ. ಇದಕ್ಕೆ ಜನರ ಅಂತರಂಗ ಜೀವಿತ ಮತ್ತು ಚರ್ಯೆಗಳು ಉತ್ತಮ ಸಾಕ್ಷಿಗಳು. ನಾಲಗೆಯಿಂದ ಉಚ್ಚರಿಸುವುದನ್ನು ವರ್ತನೆಯಲ್ಲಿ ನಮಗೆ ಕಾಣಲು ಸಾಧ್ಯವಾಗುವುದಿಲ್ಲ. ಯಥಾರ್ಥ ಸಾತ್ವಿಕರಾದ ಜನರ ಬಗ್ಗೆ ನಾನೇನೂ ಹೇಳುವುದಿಲ್ಲ. ಆದರೆ ಸಾಮಾನ್ಯವಾಗಿ ನೋಡುವಾಗ, ಯಾವ ಉದ್ದೇಶಾರ್ಥ ಮನುಷ್ಯನಿಗೆ ಧರ್ಮವನ್ನು ಕಡ್ಡಾಯಗೊಳಿಸಲಾಗಿದೆಯೋ, ಆ ಉದ್ದೇಶ ಇಂದು ನಮಗೆ ಕಾಣಲು ಸಾಧ್ಯವಾಗುವುದಿಲ್ಲವೆಂದು ಮನವರಿಯಬಹುದು. ಧರ್ಮದ ಜೀವನಾಡಿಯಾದ ಯಥಾರ್ಥ ಪರಿಶುದ್ಧತೆ, ದೇವಸ್ನೇಹ, ದೇವರ ಸೃಷ್ಟಿಗಳೊಡನೆ ಅನುಕಂಪ, ಕರುಣೆ, ನ್ಯಾಯ, ನೀತಿ, ವಿನಮ್ರತೆ, ಸಚ್ಚಾರಿತ್ರ್ಯ, ದೇವ ಭಕ್ತಿ ಇತ್ಯಾದಿ ಗುಣಗಳು ಇಂದು ಬಹ್ವಂತ ಜನರಲ್ಲಿ ಕಾಣಸಿಗುವುದಿಲ್ಲ. ಬದಲು, ಕಲಹಗಳೂ ಕೋಮು ಗಲಭೆಗಳೂ ದಿನೇದಿನೇ ಹೆಚ್ಚುತ್ತಿವೆ. ಹೀಗೆ ನಿಜವಾದ ಧಾರ್ಮಿಕತೆ ಮತ್ತು ದೇವಭಕ್ತಿ ಕಡಿಮೆಯಾಗುತ್ತಿರುವುದು ಬಹಳ ವೇದನಾ ಜನಕವಾಗಿದೆ.

ಸರ್ವಲೋಕಗಳ ಸೃಷ್ಟಿಕರ್ತನೂ ನಿಯಾಮಕನೂ ಆದ ದೇವನನ್ನು ಸರಿಯಾಗಿ ತಿಳಿದುಕೊಂಡು ಅವನೊಂದಿಗೆ ಜೀವಂತ ಸಂಬಂಧವನ್ನು ಸ್ಥಾಪಿಸಿ ಪವಿತ್ರವೂ ಪಾವನವೂ ಆದ ಜೀವಿತವನ್ನು ನಡೆಸಿ ಅವನ ಸೃಷ್ಟಿಗಳೊಡನೆ ಪ್ರಾಮಾಣಿಕವಾದ ಅನುಕಂಪ ಮತ್ತು ಪ್ರೀತಿಯಿಂದ ವರ್ತಿಸಬೇಕೆಂಬುದು ಸರ್ವಧರ್ಮಗಳ ಮೂಲ ತತ್ವವಾಗಿದೆ. ಆದರೆ ಈ ಉದ್ದೇಶವು ನಿರ್ಮೂಲನಗೊಂಡಿರುವುದಾಗಿ ನಾನು

ಕಾಣುತ್ತಿದ್ದೇನೆ. ಬಹುಪಕ್ಷ ಜನರು ನಾಸ್ತಿಕತೆಯ ಯಾವುದಾದರೊಂದು ಶಾಖೆಯನ್ನು ಕರಗತಮಾಡಿಕೊಂಡಿರುವರು. ದೈವಜ್ಞಾನ (ಮಅ್‌ರಿಫತ್)ದ ಅಭಾವ ಕಾರಣದಿಂದ ಭೂಮಿಯಲ್ಲಿ ದಿನೇದಿನೇ ಪಾಪಕೃತ್ಯಗಳು ವೃದ್ಧಿಗೊಳ್ಳುತ್ತಿವೆ. ಒಂದು ವಿಚಾರದ ಕುರಿತು ಸರಿಯಾದ ಜ್ಞಾನ ಇಲ್ಲವಾದರೆ ಅದರ ಮೌಲ್ಯವೂ ಘನತೆಯೂ ಹೃದಯವನ್ನು ತಟ್ಟುವುದಿಲ್ಲ. ಎಲ್ಲಾ ವಿಧ ಪ್ರೀತಿ ಮತ್ತು ಭಯ ಜ್ಞಾನ ಮೂಲಕ ಉದ್ಭವಿಸುತ್ತವೆ. ಇಂದು ಲೋಕದಲ್ಲಿ ಪಾಪ ಹೆಚ್ಚುತ್ತಿರುವುದರ ಪ್ರಧಾನ ಕಾರಣ ದೈವಿಕ ಜ್ಞಾನದ ಕೊರತೆ ಎಂಬುದು ಬಹಳ ಸ್ಪಷ್ಟವಾದ ಸತ್ಯ. ಒಂದು ಯಥಾರ್ಥ ಧರ್ಮವನ್ನು ಗುರುತಿಸಿ ಅರಿಯಲಿಕ್ಕೆ ಸಾಧ್ಯವಾದ ಲಕ್ಷಣಗಳಲ್ಲಿ ಪ್ರಧಾನವಾದುದು ಅದರಲ್ಲಿರುವ ದೈವಿಕ ಜ್ಞಾನ ಸಂಪಾದನೆಯ ಮಾರ್ಗಗಳಾಗಿವೆ. ಹಾಗಿದ್ದರೆ ಮಾತ್ರ ಮನುಷ್ಯನಿಗೆ ಪಾಪಕೃತ್ಯಗಳಿಂದ ತನ್ನನ್ನು ವಿಮುಕ್ತಗೊಳಿಸಿ ದೇವರ ಯಥಾರ್ಥ ಅಸ್ತಿತ್ವವನ್ನು ಮನಗಂಡು ಅವನೊಡನೆ ಪರಿಪೂರ್ಣ ಸಂಬಂಧ ಮತ್ತು ಅವನ ಸಂಪ್ರೀತಿಯನ್ನು ಗಳಿಸುವರೆ ಸಾಧ್ಯವಾಗುವುದು. ಅಲ್ಪಕಾಲಕ್ಕಾದರೂ ದೇವನೊಡನಿರುವ ಸಂಬಂಧವನ್ನು ಬೇರ್ಪಡಿಸುವುದು ಅವನಿಗೆ ನರಕತುಲ್ಯ ಅನುಭವವಾಗಬಹುದು. ಪಾಪಮುಕ್ತನಾಗಿ ದೇವನೊಡನಿರುವ ಸ್ನೇಹಸಂಬಂಧವನ್ನು ಸ್ಥಾಪಿಸುವುದು ಮಾನವನ ಅತ್ಯಂತ ಮಹತ್ತಾದ ಜನ್ಮೋದ್ದೇಶವಾಗಿದೆ. ಯಥಾರ್ಥವಾದ ಈ ಮನಃಸಂತೃಪ್ತಿಯನ್ನು ನಾವು ಸ್ವರ್ಗೀಯ ಜೀವಿತವೆಂದು ಅರ್ಥೈಸುತ್ತೇವೆ. ದೇವಪ್ರೀತಿಗೆ ವಿರುದ್ಧವಾದ ಎಲ್ಲಾ ಇಚ್ಛೆಗಳೂ ನರಕಾಗ್ನಿಗೆ ಸಮಾನವಾಗಿವೆ. ಅಂತಹ ಇಚ್ಛೆಗಳಿಗೆ ಶರಣಾಗಿಕೊಂಡಿರುವ ಬದುಕು ನರಕ ಜೀವನವಾಗುವುದು." (ಲೆಕ್ಚರ್ ಲಾಹೋರ್)

— **ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**
ಅಹ್ಮದಿಯಾ ಜಮಾಅತಿನ ಸ್ಥಾಪಕರು.





**HAZRATH MOULANA HAKEEM NOORUDHEEN (R)**

Khalifathul Masih I

# ಹಝ್ರತ್ ಮೌಲಾನಾ ಹಕೀಂ ನೂರುದ್ದೀನ್

## ಅಹ್ಮದಿಯಾ ಜಮಾಅತಿನ ಪ್ರಥಮ ಖಲೀಫ

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರವರ ಪ್ರಥಮ ಖಲೀಫರಾದ ಹಝ್ರತ್ ಮೌಲಾನಾ ಹಾಜೀ ಹಾಫಿಝ್ ಹಕೀಂ ನೂರುದ್ದೀನ್ ಸಾಹೇಬ್ (ರ) ಅವರು 1841ರಲ್ಲಿ ಶಾಹ್‌ಪುರ್ ಜಿಲ್ಲೆಯ ಭೇರ ಎಂಬಲ್ಲಿ ಜನಿಸಿದರು. ಅರಬಿ ಮತ್ತು ಖುರೈಶಿ ಆದ ಅವರ ಪೂರ್ವಜರಲ್ಲಿ ಅನೇಕ ಖುರ್‌ಆನ್ ಹಾಫಿಝ್‌ಗಳೂ ಸಿದ್ಧರೂ ಇದ್ದರು. ಅವರ ಪಿತೃ ವಂಶ ಪರಂಪರೆ ಹಝ್ರತ್ ಖಲೀಫ ಉಮರುಲ್ ಫಾರೂಖ್ (ರ) ಅವರಿಗೆ ಸೇರುತ್ತದೆ. ಅವರ ತಂದೆಯ ಹೆಸರು ಹಾಫಿಝ್ ಗುಲಾಂ ರಸೂಲ್ ಎಂದಾಗಿದೆ. ಮಹಾ ಸಾತ್ವಿಕೆ ಹಾಗೂ ಪಂಡಿತೆ ಆಗಿದ್ದ ತನ್ನ ಮಾತೆ ನೂರ್‌ಬಖ್ತ್‌ರಿಂದಲೇ ಅವರು ಖುರ್‌ಆನ್ ಕಲಿತರು. ಅಸಾಮಾನ್ಯ ಸ್ಮರಣ ಶಕ್ತಿ ಇದ್ದವರಾಗಿದ್ದರು ಹಝ್ರತ್ ನೂರುದ್ದೀನ್ ಸಾಹೇಬರು.

ರಾವಲ್‌ಪಿಂಡಿ, ರಾಂಪುರ್, ಲಕ್ನೋ, ಭೋಪಾಲ್ ಮುಂತಾದೆಡೆ ಪ್ರಸಿದ್ಧ ವಿದ್ಯಾಲಯಗಳಲ್ಲಿ ಅವರು ಧಾರ್ಮಿಕ ವಿದ್ಯೆಗಳನ್ನೂ ವೈದ್ಯಶಾಸ್ತ್ರವನ್ನೂ ಕಲಿತರು. ಸುಮಾರು ಒಂದೂವರೆ ವರ್ಷಕಾಲ ಅವರು ಮಕ್ಕ ಮತ್ತು ಮದೀನ ದಲ್ಲಿ ನೆಲಸಿ ಧಾರ್ಮಿಕ ಉಚ್ಚ ಅಧ್ಯಯನ ಮಾಡಿದರು. 25ನೇ ವಯಸ್ಸಿನಲ್ಲಿ ಅವರು ಹಜ್‌ಕರ್ಮ ಅನುಷ್ಠಿಸಿದರು. ಪ್ರಸಿದ್ಧ ವೈದ್ಯರೂ ಆಗಿದ್ದ ಹಝ್ರತ್ ನೂರುದ್ದೀನ್ ಸಾಹೇಬರು ಕಾಶ್ಮೀರ್ ಮಹಾರಾಜರ ಅರಮನೆ ವೈದ್ಯರಾಗಿ ನೇಮಿಸಲ್ಪಟ್ಟಿದ್ದರು.

ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರ ವಾದದ ಬಗ್ಗೆ ಅರಿತ ಅವರು 1885ರಲ್ಲಿ ಖಾದಿಯಾನಿಗೆ ಬಂದು ಮಿರ್ಝಾ ಸಾಹೇಬರನ್ನು ಭೇಟಿಯಾದರು. ಅವರ ಜೀವನದಲ್ಲಿ ಅದು ಹೊಸ ಒಂದು ಅಧ್ಯಾಯವನ್ನು ತೆರೆಯಿತು. ತನ್ನ ಈ ಗುರುವಿಗೋಸ್ಕರ ಜೀವಿತ ಸರ್ವಸ್ವವನ್ನು ಬಲಿಯರ್ಪಿಸ ಲಿಕ್ಕೆ ಅವರು ಸನ್ನದ್ಧರಾದರು. ಆ ಕಾಲದಲ್ಲಿ ಹಝ್ರತ್ ಅಹ್ಮದ್‌ರಿಗೆ ಬರೆದ ಒಂದು ಪತ್ರದಲ್ಲಿ ಅವರು ಹೇಳುತ್ತಾರೆ: "ಯಾವ ಸಂದರ್ಭದಲ್ಲೂ ತಮ್ಮ ಸನ್ನಿಧಿ ಯಲ್ಲಿ ಹಾಜರಾಗಿದ್ದುಕೊಂಡು ಇಮಾಮುಝ್ಝಮಾನ್ (ಕಾಲಘಟ್ಟದ ಇಮಾಮ್)ರಿಂದ, ಯಾವ ಉದ್ದೇಶಾರ್ಥ ಅವರು ಮುಜದ್ದಿದ್ ಆಗಿ ನಿಯೋಜಿ

ಸಲ್ಪಟ್ಟಿದ್ದಾರೋ, ಆ ಉದ್ದೇಶ ಲಕ್ಷ್ಯಗಳು ಸಾಧಿಸಲ್ಪಡಬೇಕೆಂಬುದಾಗಿದೆ ನನ್ನ ಪ್ರಾರ್ಥನೆ ...... ನಾನು ತಮ್ಮ ಮಾರ್ಗದಲ್ಲಿ ಸರ್ವಾರ್ಪಣೆ ಮಾಡಿಕೊಳ್ಳುತ್ತಿದ್ದೇನೆ. ನನಗಿರುವಂತಹದು ಯಾವುದೂ ನನ್ನದಲ್ಲ; ತಮ್ಮದಾಗಿದೆ. ನನ್ನ ಗುರುವರ್ಯರೇ, ನಾನು ಸಂಪೂರ್ಣ ಸತ್ಯಸಂಧತೆಯಿಂದ ಇದೋ ಹೇಳುತ್ತಿದ್ದೇನೆ: ನನ್ನ ಸಕಲ ಸೊತ್ತು-ಸಂಪತ್ತುಗಳೆಲ್ಲ ಧರ್ಮ ಪ್ರಚಾರಕ್ಕಾಗಿ ವ್ಯಯಿಸಲ್ಪಡುವುದಾದರೆ ನನ್ನ ಗುರಿಯನ್ನು ಸಾಧಿಸಿದೆನು ...... ಈ ಮಾರ್ಗದಲ್ಲಿ ಸರ್ವವನ್ನೂ ಬಲಿಯರ್ಪಿಸಲು ನಾನು ಸನ್ನದ್ಧನಾಗಿದ್ದೇನೆ."

1889 ಮಾರ್ಚ್ 23ರಂದು ಲುಧಿಯಾನದಲ್ಲಿ ಹಝ್ರತ್ ಅಹ್ಮದ್‌ರವರಿಗೆ ಪ್ರಥಮವಾಗಿ ಬೈಅತ್ (ಶಿಷ್ಯತ್ವ ಪ್ರತಿಜ್ಞೆ) ಸಲ್ಲಿಸಿದವರು ಹಝ್ರತ್ ಹಕೀಂ ನೂರುದ್ದೀನ್ ಸಾಹೇಬರಾಗಿದ್ದರು. 1892ರಲ್ಲಿ ಅವರು ಕಾಶ್ಮೀರದ ತನ್ನ ಉದ್ಯೋಗವನ್ನು ತೊರೆದು ಮಹ್‌ದಿ ಇಮಾಮರ ಸೇವೆಗಾಗಿ ಖಾದಿಯಾನದಲ್ಲಿ ಖಾಯಂ ವಾಸವನ್ನು ಆರಂಭಿಸಿದರು. ಹಝ್ರತ್ ಅಹ್ಮದ್‌ರವರಿಗೆ ತನ್ನ ಈ ಶಿಷ್ಯನೊಡನೆ ಅಪಾರ ಪ್ರೀತ್ಯಾದರವಿತ್ತು. ಆ ಮಹಾಪುರುಷರು ಒಂದು ಪಾರ್ಸಿ ಕವಿತೆಯಲ್ಲಿ ಹೀಗೆ ಹೇಳಿದರು: "ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿ ನೂರುದ್ದೀನ್ ಆಗಿದ್ದರೆ ಎಷ್ಟು ಚೆನ್ನಾಗಿತ್ತು! ಆದರೆ ಪ್ರತಿಯೊಂದು ಹೃದಯ ಅಲ್ಲಾಹನೊಡನಿರುವ ದೃಢವಿಶ್ವಾಸದ ಪ್ರಕಾಶದಿಂದ ತುಂಬದೆ ಹಾಗೆ ಆಗಲಾರದು."

ಅವರು ಖಾದಿಯಾನದಲ್ಲಿ ದಿನಂಪ್ರತಿ ಬೆಳಿಗ್ಗೆ ಸ್ತ್ರೀಯರಿಗೂ ಸಂಜೆ ಪುರುಷರಿಗೂ ಖುರ್‌ಆನ್ ದರ್ಸ್ ಕೊಡುತ್ತಿದ್ದರು. ಹಗಲು ಹೊತ್ತಿನಲ್ಲಿ ವಿದ್ಯಾರ್ಥಿಗಳಿಗೆ ಹದೀಸ್ ಗ್ರಂಥಗಳನ್ನೂ ವೈದ್ಯಗ್ರಂಥಗಳನ್ನೂ ಕಲಿಸುತ್ತಿದ್ದರಲ್ಲದೆ ರೋಗಿಗಳಿಗೆ ಚಿಕಿತ್ಸೆ ಸಹ ಮಾಡುತ್ತಿದ್ದರು. ಮಹಾಜ್ಞಾನಿಯಾಗಿದ್ದ ಅವರ ಮೂಲಕ ಅನೇಕ ಗಣ್ಯ ವ್ಯಕ್ತಿಗಳು ಅಹ್ಮದಿಯಾ ಜಮಾಅತನ್ನು ಪ್ರವೇಶಿಸಿದ್ದರು.

ಸರ್ ಸಯ್ಯದ್ ಅಹ್ಮದ್ ಖಾನ್‌ರವರು ಹಝ್ರತ್ ನೂರುದ್ದೀನ್ ಸಾಹೇಬರನ್ನು ಬಹಳ ಆದರಿಸುತ್ತಿದ್ದರು. ಅವರೊಮ್ಮೆ ಹಕೀಂ ನೂರುದ್ದೀನ್ ಸಾಹೇಬರ ಸ್ಥಾನವನ್ನು ಎತ್ತಿತೋರಿಸುತ್ತಾ ಹೇಳಿದರು: "ವಿದ್ವಾಂಸ ಮೇಲೇರಿದರೆ ತತ್ವಜ್ಞಾನಿಯಾಗುತ್ತಾನೆ: ತತ್ವಜ್ಞಾನಿ ಉನ್ನತಿಗೇರಿದರೆ ಸೂಫಿಯಾಗುತ್ತಾನೆ: ಸೂಫಿ ಸಹ ಪ್ರಗತಿ ಹೊಂದಿದರೆ ಮೌಲಾನಾ ನೂರುದ್ದೀನ್‌ರ ಸ್ಥಾನಕ್ಕೆ ತಲುಪುತ್ತಾನೆ."

1908 ಮೇ 26ರಂದು ಹಝ್ರತ್ ಅಹ್ಮದ್‌ರವರು ನಿಧನಹೊಂದಿದಾಗ ಅವರ ಪ್ರಥಮ ಖಲೀಫರಾಗಿ ಹಝ್ರತ್ ನೂರುದ್ದೀನ್ ಸಾಹೇಬರು ಸರ್ವಾನುಮತದಿಂದ ಚುನಾಯಿಸಲ್ಪಟ್ಟರು. ಅವರ ಖಿಲಾಫತ್ ಕಾಲದಲ್ಲಿ ಇಂಗ್ಲೆಂಡಿನ ಪ್ರಥಮ ಮಿಶನ್ ಕೇಂದ್ರ ಸ್ಥಾಪಿತವಾಯಿತು. ಮಾತ್ರವಲ್ಲ, ಭಾರತದ ವಿವಿಧ ಕಡೆಗಳಲ್ಲಿ ಅಹ್ಮದಿಯಾ ಜಮಾಅತಿನ ಸಂದೇಶವು ವ್ಯಾಪಕವಾಗಿ ಪ್ರಚಾರಗೊಂಡಿತು. 1914 ಮಾರ್ಚ್ 13ರಂದು ಅವರು ನಿಧನರಾದರು. ★



HAZRAT MIRZA BASHIRUDDIN MAHMOD AHMAD
KHALIFATUL MASIH II

# ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

## ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರವರ ವಾಗ್ದತ್ತ ಪುತ್ರ ಅಲ್‌ಹಾಜ್ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ (ರ) ಅವರು 1889 ಜನವರಿ 12ರಂದು ಪಂಜಾಬಿನ ಖಾದಿಯಾನದಲ್ಲಿ ಜನ್ಮವೆತ್ತಿದರು. ಅವರ ಮಾತೆ ಹಝ್ರತ್ ಸಯ್ಯಿದಾ ನುಸ್ರತ್ ಜಹಾನ್ ಬೇಗಂ (ರ).

ಪ್ರಥಮ ಖಲೀಫರಾದ ಹಝ್ರತ್ ಮೌಲಾನಾ ಹಕೀಂ ನೂರುದ್ದೀನ್ ಸಾಹೇಬರು ದಿವಂಗತರಾದಾಗ 1914 ಮಾರ್ಚ್ 14ರಂದು ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹೇಬರು ತನ್ನ 25ನೇ ವಯಸ್ಸಿನಲ್ಲಿ ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರಾಗಿ ಆಯ್ಕೆಗೊಂಡರು.

1886 ಜನವರಿಯಲ್ಲಿ ಹಝ್ರತ್ ಅಹ್ಮದ್‌ರವರು ಹೋಶಿಯಾರ್‌ಪುರ್ ಎಂಬಲ್ಲಿ 40 ದಿನಗಳ ತನಕ ಧ್ಯಾನನಿರತನಾಗಿ ಪ್ರಾರ್ಥಿಸಿದ ಬಳಿಕ ತನಗುಂಟಾದ ದಿವ್ಯಪ್ರಕಟನೆಯ ಆಧಾರದಲ್ಲಿ, ಜಗತ್ತಿನಲ್ಲಿ ಇಸ್ಲಾಮಿಕವಾಗಿ ಮಹಾ ಪರಿವರ್ತನೆಗಳಿಗೆ ಬುನಾದಿ ಹಾಕುವ ಪ್ರತಾಪಶಾಲಿಯೂ ಮಹಿಮಾವಂತನೂ ಐಶ್ವರ್ಯವಂತನೂ ಆದ ಒಬ್ಬ ಸುಪುತ್ರ ತನಗೆ ಜನಿಸುವನೆಂಬ ಮಹತ್ವಾದೊಂದು ಪ್ರವಾದನೆ ಮಾಡಿದರು. ಅವರು 1886 ಫೆಬ್ರವರಿ 20ರಂದು ಹೋಶಿಯಾರ್‌ಪುರದಿಂದ ಹೊರಡಿಸಿದ ಕರಪತ್ರದಲ್ಲಿ ವಾಗ್ದತ್ತ ಪುತ್ರನ ಬಗ್ಗೆ ತನಗೆ ಈ ರೀತಿ ದೈವೀಪ್ರಕಾಶನ ಉಂಟಾಗಿದೆಯೆಂದು ಹೇಳಿದರು: "ಅವನು ಪ್ರತಾಪ, ಮಹತ್ವ ಮತ್ತು ಐಶ್ವರ್ಯದಿಂದ ಕೂಡಿದವನಾಗಿರುವನು. ಅವನು ಲೋಕಕ್ಕೆ ಬಂದು ತನ್ನ ಮಸೀಹೀ ಗುಣ ಮತ್ತು 'ರೂಹುಲ್ ಹಖ್'ನ ಅನುಗ್ರಹದಿಂದ ಅನೇಕರ ಆಧ್ಯಾತ್ಮಿಕ ರೋಗಗಳನ್ನು ಗುಣಪಡಿಸುವನು. ಅವನು ದೊಡ್ಡ ಬುದ್ಧಿಶಾಲಿಯೂ ಧೀಮಂತನೂ ಸಹನಾಶೀಲನೂ ಆಗಿರುವನು. ಲೌಕಿಕ ಮತ್ತು ಆಧ್ಯಾತ್ಮಿಕ ಜ್ಞಾನಗಳನ್ನು ಅವನು ಹೊಂದಿದವನಾಗುವನು. ಅವನ ತಲೆಯ ಮೇಲೆ ದೇವರ ನೆರಳಿರುವುದು. ಅವನು ಬೇಗ ಬೇಗನೇ ಬೆಳೆಯುವನು. ಭೂಮಿಯ ಸೀಮೆಗಳ ವರೆಗೆ ಅವನ ಕೀರ್ತಿ ಹರಡುವುದು. ಜನಾಂಗಗಳು ಅವನ ಮೂಲಕ ಅನುಗ್ರಹವನ್ನು ಪಡೆಯುವುವು."

ತನ್ನ ಪಿತೃವಿಯೋಗದ ಕಾಲದಲ್ಲಿ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್‌ರಿಗೆ ಕೇವಲ 19 ವರ್ಷ ಪ್ರಾಯವಾಗಿತ್ತು. ಅವರು ತನ್ನ ತಂದೆಯ ಮೃತದೇಹದ ಸಮೀಪ ನಿಂತುಕೊಂಡು ಅಲ್ಲಾಹನ ಹೆಸರಿನಲ್ಲಿ ಆಣೆ ಹಾಕಿ ಸಾರಿದರು – ಸಮುದಾಯದ ಸಕಲ ಸದಸ್ಯರು ತೊಲಗಿ ಹೋದರೂ ತನ್ನ

ಪಿತನ ಮಹತ್ವಾದ ದೌತ್ಯವನ್ನು ಹರಡಿಸಲು ತಾನು ಒಬ್ಬಂಟಿಗನಾಗಿ ಹೋರಾ ಡುವೆನೆಂದು. 1944 ಜನವರಿ 28ರಂದು ಒಂದು ಖುತ್ಬ ಪ್ರವಚನದಲ್ಲಿ ಅವರು ತನ ಗುಂಟಾದ ಒಂದು ದಿವ್ಯದರ್ಶನವನ್ನು ವಿವರಿಸುತ್ತಾ "ಮುಸ್ಲಿಹ್ ಮೌಊದ್" ಆದ ಆ ವಾಗ್ದತ್ತ ಸುಪುತ್ರ ತಾನೇ ಎಂದು ಘೋಷಿಸಿದರು.

ಉಚ್ಚಮಟ್ಟದ ವಿದ್ಯಾಲಯುಗಳಲ್ಲಿ ಕಲಿತವರಲ್ಲವಾದರೂ ಹಝ್ರತ್ ಖಲೀಫರು ಓರ್ವ ಪ್ರಗಲ್ಭ ಲೇಖಕ ಹಾಗೂ ಉತ್ತಮ ವಾಗ್ಮಿಯಾಗಿದ್ದರು. ಒಂದೇ ಸವನೆ ಐದಾರು ಗಂಟೆಗಳ ಕಾಲ ಅವರು ಮಾಡುತ್ತಿದ್ದ ಭಾಷಣ ಗಳನ್ನು ಪ್ರೇಕ್ಷಕರು ಮಂತ್ರಮುಗ್ಧರಾಗಿ ಕೇಳುತ್ತಿದ್ದರು. ಹಝ್ರತ್ ಖಲೀಫರವರು ಪವಿತ್ರ ಖುರ್‌ಆನಿಗೆ ಅನುಪಮವಾದ ಸೇವೆಸಲ್ಲಿಸಿದ್ದಾರೆ. ಅವರು ಖುರ್‌ಆನಿಗೆ ಬರೆದ ಬೃಹತ್ ವ್ಯಾಖ್ಯಾನವಾದ "ತಫ್ಸೀರ್ ಕಬೀರ್" ಅವರು ರಚಿಸಿದ ಗ್ರಂಥಗಳಲ್ಲಿ ಸರ್ವಶ್ರೇಷ್ಠವಾದುದು. ಅದನ್ನು ಓದಿದವರಿಗೆ ಖುರ್‌ಆನಿನ ದಿವ್ಯತ್ವ, ಮಹತ್ವ ಮತ್ತು ಶ್ರೇಷ್ಠತೆಯ ಪೂರ್ಣ ಅರಿವು ಮೂಡುವುದು. ಆಧ್ಯಾತ್ಮಿಕ, ಧಾರ್ಮಿಕ, ನೈತಿಕ ವಿಷಯಗಳ ಬಗ್ಗೆ ಮಾತ್ರವಲ್ಲ ಭೌತಿಕ ಹಾಗೂ ರಾಜಕೀಯ ಸಮಸ್ಯೆಗಳ ಬಗ್ಗೆ ಸಹ ಅವರು ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿ ಕೃತಿಗಳನ್ನು ರಚಿಸಿದ್ದಾರೆ. ಇಸ್ಲಾಂ ಧರ್ಮ ಹಾಗೂ ಮುಹಮ್ಮದ್ ಪೈಗಂಬರರ ಬಗ್ಗೆ ಜನರೆಡೆಯಲ್ಲಿರುವ ತಪ್ಪು ಭಾವನೆ ಗಳನ್ನು ಹೋಗಲಾಡಿಸಲಿಕ್ಕೆ "ಪೈಗಂಬರ್ ದಿನಾಚರಣೆ"ಗೆ ಮತ್ತು ವಿವಿಧ ಧರ್ಮೀಯರೆಡೆಯಲ್ಲಿ ಮೈತ್ರಿಯನ್ನು ಬೆಸೆಯುಲಿಕ್ಕಾಗಿ "ಮತಾಚಾರ್ಯರ ದಿನಾ ಚರಣೆ"ಗೆ ಅವರು ಕರೆನೀಡಿದರು. ಹಾಗೆ 1928ರಿಂದ "ಪೈಗಂಬರ್ ದಿನಾಚ ರಣೆ" ಮತ್ತು 1939ರಿಂದ "ಮತಾಚಾರ್ಯರ ದಿನಾಚರಣೆ" ಎಲ್ಲೆಲ್ಲೂ ರೂಢಿ ಯಲ್ಲಿ ಬಂದವು.

ಅಹ್ಮದಿಯಾ ಸಂಘಟನೆಯ ಚಟುವಟಿಕೆಗಳನ್ನು ತೀವ್ರಗೊಳಿಸಲು ಅವರು 'ಮಜ್ಲಿಸ್ ಅತ್ಫಾಲುಲ್ ಅಹ್ಮದಿಯಾ', 'ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ', 'ಮಜ್ಲಿಸ್ ಅನ್ಸಾರುಲ್ಲಾ', 'ಲಜ್ನಾ ಇಮಾಇಲ್ಲಾಹ್' ಎಂಬೀ ಉಪವಿಭಾಗ ಗಳನ್ನು ರಚಿಸಿ ಆಬಾಲ-ವೃದ್ಧ ಮತ್ತು ಸ್ತ್ರೀ-ಪುರುಷರೆಡೆಯಲ್ಲಿ ನವಚೇತನವನ್ನು ತುಂಬಿದರು.

ಸುಮಾರು 52 ವರ್ಷಗಳ ಅವರ ಖಿಲಾಫತ್ ಕಾಲದಲ್ಲಿ ಲೋಕದಲ್ಲೆಲ್ಲೂ ಅಹ್ಮದಿಯತ್ ವ್ಯಾಪಿಸಿತು. ಅವರು "ತಹ್ರೀಕ್ ಜದೀದ್" ಎಂಬ ಒಂದು ಹೊಸ ಆರ್ಥಿಕ ಯೋಜನೆಯನ್ನು ರೂಪಿಸಿ ವಿದೇಶಗಳಲ್ಲಿ ವಿಪುಲವಾದ ಇಸ್ಲಾಂ ಧರ್ಮ ಪ್ರಚಾರದ ಅಭಿಯಾನವನ್ನು ಆರಂಭಿಸಿದರು. ಯುರೋಪ್, ಅಮೇ ರಿಕ, ಆಫ್ರಿಕ ಖಂಡಗಳ ಅನೇಕ ಸ್ಥಳಗಳಲ್ಲಿ ಅಹ್ಮದಿಯಾ ಪ್ರಚಾರ ಕೇಂದ್ರ ಗಳು ಸ್ಥಾಪಿತವಾದುವು. ಹಲವು ವಿದೇಶಗಳನ್ನು ಸಂದರ್ಶಿಸಿದ ಅವರು 1912ರಲ್ಲಿ ಹಜ್ ಪುಣ್ಯಯಾತ್ರೆ ಕೈಗೊಂಡಿದ್ದರು.

1965 ನವೆಂಬರ್ 8ರಂದು ಹಝ್ರತ್ ಖಲೀಫರು ಇಹಲೋಕವನ್ನು ತ್ಯಜಿಸಿದರು. ★



**HAZRATH HAFIZ MIRZA NASIR AHAMED SAHIB**

Khalifathul Masih III

# ಹಝ್ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್

## ಅಹ್ಮದಿಯಾ ಜಮಾಅತಿನ ತೃತೀಯ ಖಲೀಫ

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರವರ ವಾಗ್ದತ್ತ ಪೌತ್ರ ಹಾಗೂ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ (ರ) ಅವರ ಸೀಮಂತ ಪುತ್ರ ಹಝ್ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್ (ರಹ್) ಅವರು 1909 ನವೆಂಬರ್ 15ರಂದು ಖಾದಿಯಾನದಲ್ಲಿ ಜನ್ಮತಾಳಿದರು.

ತನ್ನ 13ನೇ ಹರೆಯದಲ್ಲಿ ಅವರು ಪವಿತ್ರ ಖುರ್‌ಆನನ್ನು ಪೂರ್ಣವಾಗಿ ಕಂಠಪಾಠ ಮಾಡಿದರು. 1929ರಲ್ಲಿ ಅವರು ಪಂಜಾಬ್ ವಿಶ್ವವಿದ್ಯಾಲಯದಿಂದ H. A. (Honours in Arabic) ಪದವಿ ಗಳಿಸಿದರು. 1938ರಲ್ಲಿ ಅವರು ಓಕ್ಸ್‌ಫರ್ಡ್ ಯುನಿವರ್ಸಿಟಿಯಿಂದ ಎಂ. ಎ. ಬಿರುದು ಪಡೆದರು. ಅವರು 1944ರಿಂದ 1965ರ ವರೆಗೆ ತಅ್‌ಲೀಮುಲ್ ಇಸ್ಲಾಂ ಕಾಲೇಜ್ (ಖಾದಿಯಾನ್ ಮತ್ತು ರಬ್ವ)ನ ಪ್ರಾಂಶುಪಾಲರಾಗಿ ಸೇವೆಸಲ್ಲಿಸಿದ್ದರು.

1965 ನವೆಂಬರ್ 8ರಂದು ಎರಡನೆಯ ಖಲೀಫ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹೇಬರು ನಿಧನಹೊಂದಿದಾಗ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು ಅಹ್ಮದಿಯಾ ಜಮಾಅತಿನ ಮೂರನೇ ಖಲೀಫರಾಗಿ ಆರಿಸಲ್ಪಟ್ಟರು. ಯಹೂದ್ಯರ ಪ್ರಸಿದ್ಧ ಪುರಾತನ ಪುಣ್ಯ ಗ್ರಂಥವಾದ ತಾಲ್ಮೂದ್‌ನಲ್ಲಿ ಈ ಮಹಾಪುರುಷರ ಬಗ್ಗೆ ಪ್ರವಾದನೆ ಇದೆ: "It is also said that he (The Messiah) shall die and his kigdom descent to his son and grand son" ["ಅವರು (ಮೆಸ್ಸಾಯ) ಮಡಿಯುವರೆಂದೂ ಅವರ (ಆಧ್ಯಾತ್ಮಿಕ) ಸಾಮ್ರಾಜ್ಯ ಅವರ ಮಗ ಮತ್ತು ಮೊಮ್ಮಗನಿಗೆ ವಂಶಾನುಗತವಾಗಿ ಬರುವುದೆಂದೂ ಸಹ ಹೇಳಲಾಗಿದೆ"] — Talmud, By Joseph Barkley, Ch. 5, p. 37. London - 1878.

ಹಝ್ರತ್ ಖಲೀಫರ ಸುಮಾರು 16 ವರ್ಷಗಳ ಖಿಲಾಫತ್ ಕಾಲದಲ್ಲಿ ಅಹ್ಮದಿಯಾ ಜಮಾಅತ್ ತುಂಬಾ ಪ್ರಗತಿಯನ್ನು ಪಡೆಯಿತು. ಸ್ಪೈಯಿನ್‌ನಲ್ಲಿ 700 ವರ್ಷಗಳ ದೀರ್ಘ ಕಾಲಾಂತರದ ಬಳಿಕ ಒಂದು ಹೊಸ ಮಸೀದಿಗೆ ಬುನಾದಿ ಹಾಕಿದ್ದು ಇವರ ಕಾಲದಲ್ಲೇ ಆಗಿತ್ತು. ಅದು ಸಹ ಒಂದು ಭವಿಷ್ಯ

ನುಡಿಯು ಈಡೇರಿಕೆಯಾಗಿತ್ತು. ಸ್ಪೈಯಿನಿನ ಓರ್ವ ಮಹಾಪುರುಷ ಮುಜದ್ದಿದೆ ಇಸ್ಲಾಂ ಹಝ್ರತ್ ಇಮಾಂ ಅಬ್ದುಲ್ ವಹ್ಹಾಬ್ ಶುಅ್‌ರಾನಿ (ರಹ್) 500 ವರ್ಷಗಳ ಪೂರ್ವದಲ್ಲಿ ಹೀಗೆ ಹೇಳಿದ್ದರು :

"ಸ್ಪೈಯ್ನ್‌ನಲ್ಲಿ ಕ್ರೈಸ್ತರ ಆಧಿಪತ್ಯದ ನಂತರ ಪುನಃ ಇಸ್ಲಾಮಿನ ವಿಜಯು ವಾಗ್ದತ್ತ ಮಹ್‌ದಿಯ ಕಾಲದಲ್ಲುಂಟಾಗುವುದು. ಸ್ಪೈಯ್ನ್‌ನ ಜನರು ಇಮಾಂ ಮಹ್‌ದಿಯೊಡನೆ ಸಹಾಯಕ್ಕೆ ಯಾಚಿಸುವಾಗ ಮಹ್‌ದಿಯ ಸೈನ್ಯದ ನಾಯಕತ್ವ ವನ್ನು ವಹಿಸುವುದು ಕಾಲಘಟ್ಟದ ಇಮಾಮರ ಉಪನಾಯಕರಾಗಿರಬಹುದು. ಅವರ ಭಾಗ್ಯ ನಕ್ಷತ್ರ ಪ್ರಭಾಪೂರ್ಣವಾಗಿರುವುದು. ಆ ಮಹಾನುಭಾವ ದೀನೆ ಇಸ್ಲಾಮಿನ ಸಹಾಯಕ (ನಾಸಿರ್) ಹಾಗೂ ವಾಸ್ತವದಲ್ಲಿ ಅಲ್ಲಾಹನ 'ವಲಿ' ಆಗಿರುವರು". (ಕಿತಾಬ್ ಮುಖ್ತಸಿರ್ ತದ್‌ಕಿರ. ಖುರ್ತುಬಿ, ಪುಟ : 130).

ಹಝ್ರತ್ ಖಲೀಫರ ಕಾಲದಲ್ಲಿ ವಿಶ್ವದ ವಿವಿಧ ಕಡೆಗಳಲ್ಲಿ ಅನೇಕ ಶಾಲೆ ಗಳೂ ಕಾಲೇಜುಗಳೂ ಆಸ್ಪತ್ರೆಗಳೂ ಪ್ರಚಾರ ಕೇಂದ್ರಗಳೂ ಸ್ಥಾಪಿತಗೊಂಡವು. "ಇನ್ಸಾನಿಯತ್ ಝಿಂದಾಬಾದ್" (ಮಾನವತೆ ಚಿರಕಾಲ ಬಾಳಲಿ) ಮತ್ತು "LOVE FOR ALL HATRED FOR NONE" (ಎಲ್ಲರೊ ಡನೆ ಪ್ರೀತಿ, ಯಾರೊಡನೆಯೂ ದ್ವೇಷವಿಲ್ಲ) ಎಂಬ ಘೋಷಣೆಗಳು ಅವರ ಕೊಡುಗೆ ಗಳಾಗಿವೆ. "ಲೀಪ್ ಫೋರ್ವರ್ಡ್," ನುಸ್ರತ್ ಜಹಾನ್ ಫಂಡ್, ಫಝ್ಲೆ ಉಮರ್ ಫೌಂಡೇಶನ್ ಫಂಡ್ ಮೊದಲಾದ ಯೋಜನೆಗಳನ್ನೂ ಅವರು ರೂಪಿಸಿದರು. ಅಹ್ಮದಿಯಾ ಶತವಾರ್ಷಿಕ ಆಚರಣೆಯ ಯೋಜನೆಗೆ ರೂಪಕೊಟ್ಟವರು ಸಹ ಅವರೇ ಆಗಿದ್ದಾರೆ. 1974ರಲ್ಲಿ ಈ ವ್ಯವಸ್ಥೆಯ ಬಗ್ಗೆ ಅವರು ಘೋಷಿಸಿದ್ದರು.

ಯುರೋಪ್, ಅಮೇರಿಕ ಮತ್ತು ಆಫ್ರಿಕ ಖಂಡಗಳ ಹಲವು ದೇಶ ಗಳಲ್ಲಿ ಅವರು ಅನೇಕ ಬಾರಿ ಸಂಚರಿಸಿದ್ದಾರೆ. 1967ರಲ್ಲಿ ಅವರು ಕೆಲವು ಯುರೋಪ್ ರಾಷ್ಟ್ರಗಳನ್ನು ಸಂದರ್ಶಿಸಿದ್ದಾಗ ಮುಂದಿನ 30 ವರ್ಷಗಳೊಳಗೆ ಜಗತ್ತಿಗೆ ಬರಲಿರುವ ಒಂದು ಮಹಾನಾಶದ ಬಗ್ಗೆ ಎಚ್ಚರಿಕೆಯನ್ನಿತ್ತಿರುವರು.

1974ರಲ್ಲಿ ಪಾಕಿಸ್ಥಾನದಲ್ಲಿ ಅಹ್ಮದಿಯಾ ವಿರೋಧಿ ಚಳವಳ ಬುಗಿಲೆದ್ದಾಗ ಅಹ್ಮದಿಯಾ ಜಮಾಅತಿನ ನಿಲುವನ್ನು ಸ್ಪಷ್ಟಪಡಿಸಲು ನ್ಯಾಶನಲ್ ಅಸೆಂಬ್ಲಿ ಹಝ್ರತ್ ಖಲೀಫರನ್ನು ಕೇಳಿಕೊಂಡಿತು. ಜಟಿಲವಾದ ಪ್ರಶ್ನೆಗಳಿಗೆಲ್ಲ ಮಂದಸ್ಮಿತ ರಾಗಿದ್ದುಕೊಂಡೇ ನ್ಯಾಷನಲ್ ಅಸೆಂಬ್ಲಿಯು ಸಬ್ ಕಮಿಟಿಯ ಮುಂದೆ 11 ದಿನಗಳ ಕಾಲ ಹಝ್ರತ್ ಖಲೀಫರು ನೀಡಿದ ಉತ್ತರಗಳು ಸಭಿಕರನ್ನು ಮೂಕವಿಸ್ಮಿತ ರನ್ನಾಗಿ ಮಾಡಿದ್ದುವು.

1982 ಜೂನ್ 9ರಂದು ಹಝ್ರತ್ ಖಲೀಫರು ನಿಧನಹೊಂದಿದರು. ★



**HAZRATH MIRZA THAHIR AHMAD**
Khalifathul Masih IV

# ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್

## ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರವರ ಮೊಮ್ಮಗ ಹಾಗೂ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ (ರ) ಅವರ ಪುತ್ರ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್‌ರವರು 1928 ಡಿಸೆಂಬರ್ 18ರಂದು ಜನಿಸಿದರು. ಮಾತೆ ಹಝ್ರತ್ ಅಹ್ಮದ್‌ರವರ ಪ್ರಧಾನ ಸಹಾಬಿಗಳ ಪೈಕಿ ಒಬ್ಬರಾದ ಹಝ್ರತ್ ಡಾಕ್ಟರ್ ಸಯ್ಯಿದ್ ಅಬ್ದುಸತ್ತಾರ್ ಶಾಹ್ (ರ) ಅವರ ಮಗಳು ಹಝ್ರತ್ ಸಯ್ಯಿದ ಮರ್‌ಯಂ ಬೇಗಂ. ಹಝ್ರತ್ ಸಯ್ಯಿದ್ ಅಬ್ದುಸತ್ತಾರ್ ಶಾಹ್‌ರವರ ಪಿತೃ ವಂಶ ಪರಂಪರೆ ಹಝ್ರತ್ ಖಲೀಫ ಅಲಿ (ರ) ಅವರಿಗೆ ಸೇರುತ್ತದೆ.

ಬಾಲ್ಯದಿಂದಲೇ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರ ಶಿಕ್ಷಣದ ಬಗ್ಗೆ ತಾಯಿ ವಿಶೇಷ ಗಮನ ಕೊಟ್ಟಿದ್ದರು. ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ಜೀವನ ಚರಿತ್ರೆಯನ್ನು ಅವರಿಗೆ ತನ್ನ ತಾಯಿ ಚಿಕ್ಕಂದಿನಲ್ಲೇ ಹೇಳಿಕೊಟ್ಟರು. ಖುರ್‌ಆನ್ ಮತ್ತು ಹದೀಸಿನ ಪಾಠಗಳನ್ನು ಸಹ ಕಲಿಸಿದರು. ಬಾಲ್ಯಪ್ರಾಯದಲ್ಲೇ ಅವರು "ದುಆ" (ಪ್ರಾರ್ಥನೆ)ಗಳಲ್ಲಿ ತಲ್ಲೀನರಾಗಿರುತ್ತಿದ್ದರು.

ಬಿ. ಎ. ಪದವೀಧರರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಧಾರ್ಮಿಕ ಶಿಕ್ಷಣದಲ್ಲಿ "ಶಾಹಿದ್" ಬಿರುದನ್ನು ಪಡೆದರು. ಉನ್ನತ ಶಿಕ್ಷಣಕ್ಕಾಗಿ 1955ರಲ್ಲಿ ಅವರು ಯುರೋಪಿಗೆ ತೆರಳಿದರು. ಅಧ್ಯಯನ ಪೂರ್ಣಗೊಳಿಸಿ 1957ರಲ್ಲಿ ಸ್ವದೇಶಕ್ಕೆ ಮರಳಿದರು. 1966ರಿಂದ 1969ರ ವರೆಗೆ "ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ" (ಅಹ್ಮದಿಯಾ ಯುವಜನ ಸಂಘ)ದ ಅಧ್ಯಕ್ಷರಾಗಿದ್ದರು. "ಫಝ್ಲೆ ಉಮರ್ ಫೌಂಡೇಶನ್"ನ ಡೈರೆಕ್ಟರ್ ಆಗಿ 1970ರಲ್ಲಿ ನೇಮಕಗೊಂಡರು. 1979ರಲ್ಲಿ ಅವರು "ಮಜ್ಲಿಸ್ ಅನ್ಸಾರುಲ್ಲಾ"ದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

1974ರಲ್ಲಿ ಅಹ್ಮದಿಯಾ ಜಮಾಅತಿನ ನಿಲುವನ್ನು ಸ್ಪಷ್ಟಪಡಿಸಲು ಪಾಕ್ ಸರಕಾರ ತೃತೀಯ ಖಲೀಫ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರನ್ನು

ಕೇಳಿಕೊಂಡಾಗ, ಖಲೀಫರ ಸಲಹಾ ಸಮಿತಿಯ ಪ್ರಧಾನ ಸದಸ್ಯ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರಾಗಿದ್ದರು.

ತೃತೀಯ ಖಲೀಫರು ದಿವಂಗತರಾದಾಗ, 1982 ಜೂನ್ 10ರಂದು ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಅಹ್ಮದಿಯಾ ಜಮಾಅತಿನ ನಾಲ್ಕನೆಯ ಖಲೀಫರಾಗಿ ಚುನಾಯಿತರಾದರು. ಹಿಂದೆಂದೂ ಉಂಟಾಗದ ಅಗ್ನಿ ಪರೀಕ್ಷೆಗೆ ಇವರ ಕಾಲದಲ್ಲಿ ಜಮಾಅತ್ ತುತ್ತಾಗಿದೆ. 1984ರಲ್ಲಿ ಪಾಕ್ ಅಧ್ಯಕ್ಷ ಜ॥ ಜಿಯಾ ಅಹ್ಮದೀ ಮುಸ್ಲಿಮರಿಗೆ ವಿರೋಧವಾಗಿ ಒಂದು ಬೀಭತ್ಸ ಅಧ್ಯಾದೇಶವನ್ನು ಹೊರಡಿಸಿದರು. ಅದರ ಪರಿಣಾಮವಾಗಿ ಅಹ್ಮದೀಯರ ಮೇಲೆ ಹಲವಿಧ ಆಕ್ರಮಣಗಳುಂಟಾದುವು. ಆದರೆ ಹಝ್ರತ್ ಖಲೀಫರ ಆದೇಶಾನುಸಾರ ಅಹ್ಮದೀಯರು ಬಹಳ ಸಯುಂಮನದಿಂದ ವರ್ತಿಸುತ್ತಿದ್ದಾರೆ.

ಹಝ್ರತ್ ಮುಹಮ್ಮದ್ ಪೈಗಂಬರರನ್ನು ಮಕ್ಕದ ಅವಿಶ್ವಾಸಿಗಳು ಹತ್ಯೆಮಾಡಲಿಕ್ಕಾಗಿ ಗೂಢಾಲೋಚನೆ ಮಾಡಿದ್ದಾಗ ಹಝ್ರತ್ ಪೈಗಂಬರರು ಗುಪ್ತವಾಗಿ ಮಕ್ಕವನ್ನು ತೊರೆದರು. ಅಲ್ಲಾಹನು ಅವರಿಗೆ ಮದೀನದಲ್ಲಿ ಅಭಯ ನೀಡಿ ರಕ್ಷಿಸಿದನು. ಪೈಗಂಬರರ ಅನುಕರಣೆ ಮಾಡಿ ಹಝ್ರತ್ ಖಲೀಫರಿಗೆ ಸಹ ಸ್ವದೇಶವನ್ನು ತೊರೆಯಬೇಕಾಗಿ ಬಂತು. ಖಲೀಫರನ್ನು ಬಂಧಿಸಿ ನೇಣುಹಾಕಲಿಕ್ಕೆ ಪಾಕ್ ಸರಕಾರ ಗೂಢಾಲೋಚನೆ ಮಾಡಿತ್ತು. ಆದರೆ, ಅಲ್ಲಾಹನು ಅದ್ಭುತಕರವಾದ ರೀತಿಯಲ್ಲಿ ಅವರಿಗೆ ಲಂಡನಿನಲ್ಲಿ ಅಭಯ ನೀಡಿದನು.

1988 ಜೂನ್ 10ರಂದು ಹಝ್ರತ್ ಖಲೀಫರು ಲೋಕವ್ಯಾಪಕವಾಗಿ ಅಹ್ಮದಿಯಾ ವಿರೋಧಿ ನೇತಾರರಿಗೆ "ಮುಬಾಹಲ" ಪಂಥಾಹ್ವಾನ ನೀಡಿದರು. ಮುಬಾಹಲದ ಪ್ರಧಾನ ಸಂಬೋಧಿತ ಪಾಕ್ ಅಧ್ಯಕ್ಷ ಜನರಲ್ ಜಿಯಾಉಲ್ ಹಕ್ ಆಗಿದ್ದರು. ಅದರ ಪರಿಣಾಮವನ್ನು ಲೋಕವು ಕಂಡಿದೆ.

ಅಹ್ಮದಿಯಾ ಜಮಾಅತ್ ಪ್ರಥಮ ಶತಾಬ್ದ ಜ್ಯೂಬಿಲಿಯನ್ನು ಆಚರಿಸುತ್ತಿರುವುದು ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರ ಕಾಲದಲ್ಲಾಗಿದೆ. ಜಗತ್ತಿನ 137 ರಾಷ್ಟ್ರಗಳಲ್ಲಿ ಅಹ್ಮದಿಯತ್ ವ್ಯಾಪಿಸಿಕೊಂಡಿದೆಯೆಂದು ಅವರು ಘೋಷಿಸಿದ್ದಾರೆ. ಅವರ ನೇತೃತ್ವದಲ್ಲಿ ಪೂರ್ಣ ವಿಧೇಯರಾಗಿದ್ದುಕೊಂಡು ಅಹ್ಮದೀ ಮುಸ್ಲಿಮರು ದ್ವಿತೀಯ ಶತಕದಲ್ಲಿ ದಿನೇ ದಿನೇ ಹೆಜ್ಜೆಹಾಕುತ್ತಾ ಪುರೋವೃದ್ಧಿಯನ್ನು ಹೊಂದುತ್ತಿದ್ದಾರೆ. ಅಲ್‌ಹಮ್ದು ಲಿಲ್ಲಾಹಿ. ★

# ಹಝ್ರತ್ ಖಲೀಫರ ಸಂದೇಶ

بسم الله الرحمن الرحيم

نحمده و نصلي على رسوله الكريم

"ಯುಗರಶ್ಮಿ" ಪತ್ರಿಕೆಯ ಸಂಪಾದಕರಾದ ಪ್ರಿಯ ಮುಹಮ್ಮದ್ ಯೂಸುಫ್ ಸಾಹೇಬರೆ,

ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತುಹು.

ಅಹ್ಮದಿಯಾ ಶತಾಬ್ದ ಕೃತಜ್ಞತಾ ಸೂಚಕ ಆಚರಣೆಯ ಅಂಗವಾಗಿ "ಯುಗರಶ್ಮಿ"ಯ ವಿಶೇಷ ಸಂಚಿಕೆಯನ್ನು ಪ್ರಕಟಿಸುವಿರಾಗಿ ನೀವು ಬರೆದ ಪತ್ರದಿಂದ ತಿಳಿದು ಸಂತೋಷವಾಯಿತು. ಅಲ್ಲಾಹನು ಅದನ್ನು ಸಫಲಗೊಳಿಸಲಿ.

ನಿಮಗೆಲ್ಲರಿಗೂ ನನ್ನ ಸಂದೇಶವೇನೆಂದರೆ — ಅಲ್ಲಾಹನೊಡನೆ ಸಜೀವ ಸಂಬಂಧ ಸ್ಥಾಪಿಸಿರಿ. ನಮಾಝ್‌ಗಳನ್ನು ನಿಷ್ಠೆಯಿಂದ ನಿರ್ವಹಿಸಲು ಗಮನ ಕೊಡಿರಿ. ಭಯಭಕ್ತಿಯ ಮಾರ್ಗವನ್ನು ಸದಾ ಅವಲಂಬಿಸಿರಿ. ನಿಮ್ಮ ಸಂತಾನಗಳು ಸಹ ಒಳಿತಿನ ಈ ಮಾರ್ಗಗಳಲ್ಲಿ ಚಲಿಸುವಂತೆ ಮಾಡಿರಿ. ಅವರು ಸಜ್ಜನರಾಗುವಂತೆ ಅವರಿಗೆ ಯೋಗ್ಯ ತರಬೇತಿ ನೀಡಿರಿ. ಈ ರೀತಿಯಲ್ಲಿ ನಿಮ್ಮ ಸಂತಾನ ತಲೆತಲಾಂತರ ಅಲ್ಲಾಹನ ಪ್ರೀತಿಗೆ ಪಾತ್ರವಾಗಿಯೂ ಧಾರ್ಮಿಕ ಮತ್ತು ಲೌಕಿಕ ಅನುಗ್ರಹಗಳನ್ನು ಗಳಿಸುವವರಾಗಿಯೂ ಮಾರ್ಪಡಲಿ. ಅಲ್ಲಾಹನು ನಿಮಗೆ ಈ ಸೌಭಾಗ್ಯವನ್ನು ದಯಪಾಲಿಸಲಿ.

ನಿಮ್ಮ ಗಮನಕ್ಕೆ ತರಲು ನಾನು ಇಚ್ಛಿಸುವ ಎರಡನೆಯ ಸಂಗತಿಯೇನೆಂದರೆ– ಎಲ್ಲ ವಿಧ ಪರಸ್ಪರ ವಿದ್ವೇಷಗಳನ್ನು ನಿವಾರಿಸುವುದು ಈ ಸಂದರ್ಭದಲ್ಲಿ ಧರ್ಮ ಮತ್ತು ದೇಶಕ್ಕೆ ಸಲ್ಲಿಸುವ ಅತ್ಯಂತ ದೊಡ್ಡ ಸೇವೆಯಾಗಿದೆ. ಅನ್ಯೋನ್ಯ ಇರುವ ಭಿನ್ನಾಭಿಪ್ರಾಯಗಳನ್ನು, ವಿವೇಚನಾಪೂರ್ವಕವಾಗಿ ತೆರೆದ ಹೃದಯದಿಂದ ಇತ್ಯರ್ಥಗೊಳಿಸಿರಿ. ನಿಮ್ಮ ಕಿರಿಯರೂ ಹಿರಿಯರೂ ಪುರುಷರೂ ಸ್ತ್ರೀಯರೂ – ಜಮಾಅತಿನ ಎಲ್ಲರೂ – ಐಕ್ಯ ಮತ್ತು ಭ್ರಾತೃತ್ವದ ಧ್ವಜಧಾರಿಗಳಾಗಿರಿ. ಅಲ್ಲಾಹನ ಏಕತೆ ಭೂಮಿಗೆ ಇಳಿದು ಬಂದುದಾಗಿ ತೋರುವಂತೆ ನಿಮ್ಮ ಜಮಾಅತ್ ಈ ರೀತಿ ಐಕ್ಯದ ದಾರದಲ್ಲಿ ಪೋಣಿಸಲ್ಪಡಲಿ. ಹಝ್ರತ್ ಮಸೀಹ್ ಮೌಊದ್ (ಅ) ಈ ಬಗ್ಗೆ ಸೂಚನೆ ನೀಡುತ್ತಾ ಹೀಗೆ ನುಡಿದಿದ್ದಾರೆ:

"ನಾನು ಎರಡೇ ನೀತಿಬೋಧೆಗಳನ್ನು ತಂದಿದ್ದೇನೆ. ಒಂದನೆಯದು – ಅಲ್ಲಾಹನ ಏಕತೆಯನ್ನು ನಂಬುವುದು. ಎರಡನೆಯದು – ಪರಸ್ಪರ ಪ್ರೀತಿ ಮತ್ತು ಅನುಕಂಪದಿಂದ ವರ್ತಿಸುವುದು. ಅನ್ಯರನ್ನು ಅದ್ಭುತಗೊಳಿಸುವ ಆದರ್ಶವನ್ನು ತೋರಿಸಿರಿ. ಪೈಗಂಬರರ ಶಿಷ್ಯವೃಂದದಲ್ಲಿ ಇದೇ ರೀತಿಯ ಮಾರ್ಪಾಟು ಸಂಭವಿಸಿತ್ತು. كنتم اعداءا فالف بين قلوبكم (ನೀವು ಮೊದಲು ಶತ್ರುಗಳಾಗಿದ್ದಾಗ ಅವನು ನಿಮ್ಮ ಹೃದಯಗಳನ್ನು ಪರಸ್ಪರ ಪ್ರೀತಿಯಿಂದ ಒಂದುಗೂಡಿಸಿದನು) ನೆನಪಿಡಿರಿ – ಸಾಮರಸ್ಯ ಒಂದು ಪವಾಡವಾಗಿದೆ." (ಮಲ್‌ಫೂಜ಼ಾತ್, ಸಂಪುಟ 2, ಪುಟ 48)

ಹಜ಼್ರತ್ ಮಸೀಹ್ ಮೌಊದ್‌ರವರ ಈ ಉಪದೇಶವನ್ನು ನಾವು ನಮ್ಮ ಹೃದಯದಲ್ಲಿ ಸ್ಥಾಪಿಸಬೇಕು ಮತ್ತು ಇತರರಿಗೂ ಬೋಧಿಸಬೇಕು. ಏಕೆಂದರೆ, ಇದು ಶಾಂತಿ, ಸಮಾಧಾನ, ಪ್ರೀತಿ, ಸಹೋದರತೆ ಹಾಗೂ ದೇವೇಕತ್ವದ ಸಂದೇಶವಾಗಿದೆ. ಲೋಕದಲ್ಲಿ ಜಯಹೊಂದುವಂತಹ ಪರಮಸತ್ಯ ಇದೇ ಆಗಿದೆ. ಯಾರು ಈ ಮಾರ್ಗದಲ್ಲಿ ತಡೆಯೊಡ್ಡುತ್ತಾರೋ ಅಥವಾ ಪರಿಸರವನ್ನು ಬಿಗಡಾಯಿಸಲು ಬಯಸುತ್ತಾರೋ ಅಂಥವರು ಸಕಲ ಸತ್ಯದ ಮೇಲೂ ಆಕ್ರಮಣ ಮಾಡುವವರಾಗುತ್ತಾರೆ. ನೀವು ಅವರೊಡನೆ ಒಳಿತಿನಿಂದ ಹೋರಾಡಿರಿ. ಅನಿಷ್ಟಕಾರಕ ಪ್ರವರ್ತನೆಗಳ ವಿರುದ್ಧ ದೇಶದ ಜನರಲ್ಲಿ ಪ್ರಜ್ಞೆ ಮೂಡಿಸುವುದು ಅದರಲ್ಲಿ ಒಂದು ವಿಧವಾಗಿದೆ. ಅಲ್ಲಾಹನು ನಿಮಗೆ ನೆರವು ನೀಡಲಿ.

ಯಾವ ರೀತಿ ಅಹ್ಮದಿಯತಿನ ಪ್ರಥಮ ಶತಮಾನದಲ್ಲಿ ಅಲ್ಲಾಹನ ಅಪಾರ ಅನುಗ್ರಹಗಳ ಲಬ್ಧಿಯಾಗಿತ್ತೋ ಅದೇ ರೀತಿ ಎರಡನೆಯ ಶತಕವು ಅಲ್ಲಾಹನ ಕಡೆಯಿಂದ ಬಹಳವಾದ ಔದಾರ್ಯಗಳ ಸಹಿತ ಉದಯಿಸಿದೆ. ಜಗತ್ತಿನಲ್ಲಿಡೀ ಒಂದು ಬದಲಾವಣೆ ವ್ಯಾಪಿಸುತ್ತಿದೆ. ಅನೇಕ ಕಡೆಗಳಲ್ಲಿ يدخلون في دين الله افواجا (ಯದ್‌ಖುಲೂನ ಫೀ ದೀನಿಲ್ಲಾಹಿ ಅಫ್‌ವಾಜ)ದ ದೃಶ್ಯ ಕಂಡು ಬರುತ್ತದೆ. ಈ ಸುಕ್ರಾಂತಿಯ ಗಾಳಿ ಮಂಗಳೂರಿಗೆ ಸಹ ತಲುಪುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನು ಅಹ್ಮದಿಯಾ ಚಟುವಟಿಕೆಗಳನ್ನು ಎಷ್ಟರ ಮಟ್ಟಿಗೆ ತೀವ್ರಗೊಳಿಸಿದ್ದಾನೆಂದರೆ, ಕೆಲವು ರಾಜ್ಯಗಳಲ್ಲಿ ಐವತ್ತು ವರ್ಷಗಳ ಕಾಲಾವಧಿಯಲ್ಲಿ ಸಾಧಿಸಬೇಕಾದಷ್ಟು ಕಾರ್ಯಗಳು ಈ ಕಳೆದ ಒಂದು ವರ್ಷದಲ್ಲಿ ಸಾಧಿಸಲ್ಪಟ್ಟಿವೆ. ಆದರಿಂದ ಮಂಗಳೂರು ಏಕೆ ಹೊರತಾಗಿದೆ? ನೀವು ಸಹ ಅದೃಷ್ಟದ ಗಾಳಿಯ ಗತಿಯಲ್ಲಿ ಮುಂದಕ್ಕೆ ಸಾಗಿರಿ; ಅಲ್ಲಾಹನ ಅನುಗ್ರಹಗಳಿಂದ ನಿಮ್ಮ ಜೋಳಿಗೆಗಳನ್ನು ತುಂಬಿಸಿಕೊಳ್ಳಿರಿ. ಅಲ್ಲಾಹನು ನಿಮ್ಮೊಂದಿಗಿರಲಿ ಮತ್ತು ಹೆಚ್ಚು ಹೆಚ್ಚು ಅನುಗ್ರಹಗಳನ್ನು ನೀಡಲಿ.

ವಸ್ಸಲಾಂ,

**ಮಿರ್ಜ಼ಾ ತಾಹಿರ್ ಅಹ್ಮದ್**

ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ

## ಸಂಪಾದಕೀಯ

# ಅಹ್ಮದಿಯಾ ಜಮಾಅತಿಗೆ ನೂರು ವರ್ಷಗಳು



**ಮುಹಮ್ಮದ್ ಯೂಸುಫ್**
**ಸಂಪಾದಕ**

1889ರಲ್ಲಿ ಸ್ಥಾಪಿತವಾದ ಅಹ್ಮದಿಯಾ ಜಮಾಅತಿಗೆ ನೂರು ವರ್ಷಗಳು ತುಂಬಿ ಇದೀಗ ಅದು ತನ್ನ ಎರಡನೆಯ ಶತಕದಲ್ಲಿ ಪಾದವಿರಿಸಿದೆ. ಈ ಅಪಾರವಾದ ದೇವಾನುಗ್ರಹವನ್ನು ಸ್ಮರಿಸಲಿಕ್ಕಾಗಿ ಜಗತ್ತಿನಾದ್ಯಂತವಿರುವ ಅಹ್ಮದೀ ಮುಸ್ಲಿಮರು ಅಲ್ಲಾಹನಿಗೆ ಕೃತಜ್ಞತೆಯನ್ನು ಸಲ್ಲಿಸುವೋಪಾದಿಯಲ್ಲಿ ವಿವಿಧ ಧರ್ಮಸೇವೆ ಮತ್ತು ಜನಸೇವೆ ಕಾರ್ಯಕ್ರಮಗಳಲ್ಲಿ ನಿರತರಾಗಿದ್ದಾರೆ. ಈ ಶುಭ ಸಂದರ್ಭದಲ್ಲಿ ಸಂಘಟನೆಯ ವಿವಿಧ ಭಾಷೆಗಳಲ್ಲಿರುವ ಪತ್ರಿಕೆಗಳೂ ನಿಯತಕಾಲಿಕಗಳೂ ಅಹ್ಮದಿಯಾ ಶತಾಬ್ದದ ಸ್ಮರಣ ಸಂಚಿಕೆಗಳನ್ನು ಹೊರಡಿಸಿವೆ. "ಯುಗರಶ್ಮಿ" ಕೂಡ ಈ ನಿಟ್ಟಿನಲ್ಲಿ ಕಿಂಚಿತ್ ಸೇವೆ ಸಲ್ಲಿಸುತ್ತಾ ತನ್ನ ಓದುಗರಿಗೆ ಈ ವಿಶೇಷ ಸಂಚಿಕೆಯ ಪುಟ್ಟ ಕೊಡುಗೆಯನ್ನು ನೀಡುತ್ತದೆ.

ಅಲ್ಲಾಹನ ಆದೇಶಾನುಸಾರ 1889 ಮಾರ್ಚ್ 23ರಂದು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ರವರು ಲುಧಿಯಾನ ಎಂಬಲ್ಲಿ ತನ್ನ ಶಿಷ್ಯರಿಂದ "ಬೈಅತ್" (ಅನುಸರಣೆಯ ಪ್ರತಿಜ್ಞೆ) ಪಡೆದುಕೊಂಡು ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದರು. ಆ ದಿನ ಅವರ ಶಿಷ್ಯತ್ವವನ್ನು ಪಡೆದವರು ಕೇವಲ ನಾಲ್ಕು ಮಂದಿಯಾಗಿದ್ದರು.

ಆರಂಭದಿಂದಲೇ ವಿರೋಧಿಗಳ ಮಹಾ ಬಿರುಗಾಳಿಗೆ ಅಹ್ಮದಿಯಾ ಜಮಾಅತ್ ಸಿಲುಕಿಕೊಂಡಿದ್ದರೂ ಅದರ ಸದಸ್ಯರ ದೃಢವಿಶ್ವಾಸ, ನಿಷ್ಠೆ, ಸಹನೆ, ಸ್ಥೈರ್ಯ ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ದೇವಸಹಾಯ ನಿಮಿತ್ತ ಅವರ ಸಂಖ್ಯೆ ಏರುತ್ತಾ ಏರುತ್ತಾ ಇದೀಗ ಒಂದು ಕೋಟಿಗೂ ಮಿಕ್ಕಿದೆ. ಇತ್ತೀಚೆಗಿನ ವರದಿ ಪ್ರಕಾರ 124 ರಾಷ್ಟ್ರಗಳಲ್ಲಿ ಅಹ್ಮದಿಯಾ ಜಮಾಅತ್‌ನ ಚಟುವಟಿಕೆಗಳು ಸುವ್ಯವಸ್ಥಿತವಾಗಿ ನಡೆಯುತ್ತಿವೆ. (ಅಲ್ಲಾಹನಿಗೆ ಸ್ತುತಿ).

ಅಹ್ಮದಿಯಾ ಜಮಾಅತಿಗೆ ನೂರು ವರ್ಷಗಳು ತುಂಬಿವೆ ಎಂಬುದು ಒಂದು ಸಾಮಾನ್ಯ ವಿಚಾರವಲ್ಲ. ಅಹ್ಮದಿಯಾ ಜಮಾಅತಿನ ಸಂಸ್ಥಾಪಕರಾದ ಹಝ್ರತ್ ಅಹ್ಮದ್(ಅ) ಸತ್ಯವಾದಿ ಎಂಬುದಕ್ಕೆ ಅದು ಒಂದು ಮಹಾ ದೊಡ್ಡ ಸಾಕ್ಷ್ಯವಾಗಿದೆ. ತಾನು ದೇವನಿಯೋಜಿತನೆಂದು ಸಾರುವ ಯಾವನೇ ಮಿಥ್ಯಾವಾದಿಯನ್ನು ಉಳಿಯಗೊಡಲಾಗುವುದಿಲ್ಲವೆಂಬುದು ಅಲ್ಲಾಹನ ನೀತಿಯಾಗಿದೆ. ಪ್ರವಾದಿತ್ವವನ್ನು ವಾದಿಸಿದ ಯಾವನೇ ಮಿಥ್ಯಾವಾದಿ ಸಫಲತೆಯನ್ನು ಪಡೆದ ಉದಾಹರಣೆ ಇಲ್ಲ. ಸುಳ್ಳು ಪ್ರವಾದಿಯ ನಾಮಾವಶೇಷ ಮತ್ತು ಆ ಪ್ರವಾದಿಯ ಅನುಯಾಯಿಗಳ ಸಂಘದ ಅಧಃಪತನ ಉಂಟಾಗುತ್ತದೆ. ಅದಕ್ಕೆ ಇತ್ತೀಚೆಗಿನ ಉದಾಹರಣೆ ಅಮೇರಿಕದಲ್ಲಿ ಪ್ರವಾದಿತ್ವವನ್ನು ವಾದಿಸಿ ಹತ್ಯೆಗೀಡಾದ ರಶಾದ್ ಖಲೀಫ.

ಅಹ್ಮದಿಯಾ ಜಮಾಅತ್ ಅನೇಕ ಅಗ್ನಿ ಪರೀಕ್ಷೆಗಳಿಗೆ ಗುರಿಯಾಗಿದೆ. 1934ರಲ್ಲಿ ಅಹ್ರಾರಿಗಳು ಅಹ್ಮದೀಯರಿಗೆ ವಿರುದ್ಧವಾಗಿ ರಂಗಪ್ರವೇಶ ಮಾಡಿದರು. ಭೂಮುಖದಿಂದ ಅಹ್ಮದಿಯತನ್ನು ನಿರ್ಮೂಲನ ಮಾಡಲು ಅವರು ಪಣತೊಟ್ಟಿದ್ದರು. ಕ್ರೂರ ಮರ್ದನಗಳಿಗೂ ನಾನಾತರ ಕಷ್ಟನಷ್ಟಗಳಿಗೂ ಅವರು ಅಹ್ಮದೀಯರನ್ನು ಗುರಿಪಡಿಸಿದರು. 1953ರಲ್ಲಿ ಪಾಕಿಸ್ಥಾನದಲ್ಲಿ ವಿರೋಧವು ಇನ್ನೂ ತೀವ್ರರೂಪವನ್ನು ತಾಳಿತು. ಬಹುಶಃ ಒಂದೆರಡು ವಾರದೊಳಗೆ ಪಾಕಿಸ್ಥಾನದಲ್ಲಿ ಯಾವನೇ ಅಹ್ಮದಿ ಬಾಕಿಯುಳಿಯಲಾರ ಎಂದು ಆ ಕಾಲದ ಪತ್ರಿಕೆಗಳು ಬರೆದಿದ್ದವು. 1974ರಲ್ಲಿ ಪಾಕಿಸ್ಥಾನದಲ್ಲಿ ಬಹಳ ಜೋರಾಗಿ ಇನ್ನೊಮ್ಮೆ ಅಹ್ಮದಿಯಾ ವಿರೋಧವು ಭುಗಿಲೆದ್ದಿತು. ಅಹ್ಮದೀಯರಿಗೆ ಅಪಾರ ಸೊತ್ತು ಹಾನಿ ಮತ್ತು ಜೀವ ಹಾನಿ ಉಂಟಾಯಿತು. 90 ವರ್ಷಗಳ ಅಹ್ಮದಿಯಾ ಸಮಸ್ಯೆಯನ್ನು 90 ದಿನಗಳಲ್ಲಿ ಪರಿಹರಿಸುವೆನೆಂದು ಅಂದಿನ ಪ್ರಧಾನಿ ಜುಲ್ಫಿಕರಲಿ ಭುಟ್ಟೋ ಘೋಷಿಸಿದರು. ಅಹ್ಮದೀ ಮುಸ್ಲಿಮರನ್ನು ಅಮುಸ್ಲಿಮರೆಂದು ಪಾಕಿಸ್ಥಾನದ ಸಂವಿಧಾನದಲ್ಲಿ ತಿದ್ದುಪಡಿ ಮಾಡಲಾಯಿತು. 1984ರಲ್ಲಿ ಪುನಃ ಪಾಕಿಸ್ಥಾನದಲ್ಲೇ ಅತ್ಯಂತ ಕಠಿಣ ವಿರೋಧವು ವ್ಯಾಪಿಸಿಕೊಂಡಿತು. ಮಾನವೀಯ ಹಕ್ಕುಗಳನ್ನು ಅಹ್ಮದೀಯರಿಂದ ಕಸಿಯಲಾಯಿತು. ಯಾವನೇ ಅಹ್ಮದೀ ಮುಸ್ಲಿಮನು ತಾನು ಮುಸ್ಲಿಮನೆಂದು ಯಾವುದಾದರೂ ರೀತಿಯಲ್ಲಿ ತೋರ್ಪಡಿಸಿದರೆ ಆತನಿಗೆ ಮೂರು ವರ್ಷಗಳ ವರೆಗೆ ಕಠಿಣ ಸಜೆ ಮತ್ತು ದಂಡವನ್ನು ವಿಧಿಸುವ ಅಧ್ಯಾದೇಶವನ್ನು ಜನರಲ್ ಝಿಯಾಉಲ್‌ಹಕ್ ಹೊರಡಿಸಿದರು. ಅನೇಕರನ್ನು ಹುತಾತ್ಮರನ್ನಾಗಿ ಮಾಡಲಾಯಿತು. ಹಲವು ಮಸೀದಿಗಳನ್ನು ಧ್ವಂಸಮಾಡಲಾಯಿತು. ಅಪಾರ ಸೊತ್ತು ಹಾನಿಯಾಯಿತು. ಅಹ್ಮದಿಯಾ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರಿಗೆ ಸ್ವದೇಶವನ್ನು ತೊರೆಯಬೇಕಾದ ಪರಿಸ್ಥಿತಿ ಬಂತು.

ಅಹ್ಮದಿಯಾ ಜಮಾಅತಿಗೆ ವಿರುದ್ಧವಾಗಿ ಶತ್ರುಗಳ ದೌರ್ಜನ್ಯ ಪರಾಕಾಷ್ಠೆಗೆ ಮುಟ್ಟಿದಾಗ, ಜಮಾಅತಿನ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು 1988, ಜೂನ್ 10ರಂದು ಜಗತ್ತಿನಾದ್ಯಂತವಿರುವ ಅಹ್ಮದಿಯಾ ವಿರೋಧಿ ನೇತಾರರಿಗೆ "ಮುಬಾಹಲ" ಪಂಥಾಹ್ವಾನದ ಕರೆ ನೀಡಿದರು. ವಾದ-ವಿವಾದಗಳಿಂದಲೂ ಸಾಕ್ಷ್ಯ-ಪುರಾವೆಗಳಿಂದಲೂ ಸತ್ಯಾಸತ್ಯಗಳನ್ನು ತಿಳಿಯಲು ಅಸಾಧ್ಯವಾದಾಗ ಸಮಸ್ಯೆಯನ್ನು ಅಲ್ಲಾಹನ ಸನ್ನಿಧಿಗೆ ಅರ್ಪಿಸಿ ಪರಿಹಾರಕ್ಕಾಗಿ ಅವನೊಡನೆ ವಿನಮ್ರವಾಗಿ ಪ್ರಾರ್ಥಿಸುವುದನ್ನು ಮುಬಾಹಲ ಪ್ರಾರ್ಥನೆ ಎಂದು ಹೇಳಲಾಗುತ್ತದೆ. ಹಝ್ರತ್ ಖಲೀಫ ನೀಡಿದ ಮುಬಾಹಲ ಪಂಥಾಹ್ವಾನದ ಪ್ರಧಾನ ಸಂಬೋಧಿತ ಪಾಕಿಸ್ಥಾನದ ಜನರಲ್ ಝಿಯಾಉಲ್‌ಹಕ್ ಆಗಿದ್ದರು. ಅಹ್ಮದಿಯಾ ವಿರೋಧಿ ದೌರ್ಜನ್ಯವನ್ನು ಅವರು ಕೈಬಿಡದಿದ್ದರೆ, ಮುಬಾಹಲ ಪಂಥಾಹ್ವಾನವನ್ನು ಸ್ವೀಕರಿಸದಿದ್ದರೂ ಅವರ ಮೇಲೆ ಶೀಘ್ರವೇ ದೇವಕೋಪ ಎರಗಲಿದೆ ಎಂದು ಹಝ್ರತ್ ಖಲೀಫ ಮುನ್ನೆಚರಿಕೆ ನೀಡಿದರು. ಖಲೀಫರ ಎಚ್ಚರಿಕೆಯ ಮಾತಿಗೆ ಕಿವಿಗೊಡದೆ ಅಹ್ಮದಿಯಾ ದಮನ ಕಾರ್ಯದಲ್ಲೇ ತತ್ಪರರಾಗಿದ್ದ ಜನರಲ್ ಝಿಯಾ 1988, ಆಗಸ್ಟ್ 17ರಂದು ಒಂದು ಅಭೂತಪೂರ್ವ ವಿಮಾನಾಪಘಾತದಿಂದ ದುರ್ಮರಣಕ್ಕೀಡಾದರು. ಇದೊಂದು ದಿವ್ಯ ದೃಷ್ಟಾಂತವಲ್ಲದೆ ಮತ್ತೇನು? ಮುಬಾಹಲದ ಅನೇಕ ದೃಷ್ಟಾಂತಗಳು ಲೋಕದ ಹಲವೆಡೆ ಕಂಡು ಬಂದಿವೆ.

ಎಲ್ಲ ಸಂಕಟಾವಸ್ಥೆಗಳಲ್ಲೂ ಅಹ್ಮದೀಯರು ಆಯಾ ಕಾಲದ ಖಲೀಫರ ನಿರ್ದೇಶಾನುಸಾರ ಸಹನೆಯಿಂದಲೂ ತಾಳ್ಮೆಯಿಂದಲೂ ವರ್ತಿಸಿದರು. ಅವರು ಶಾಂತಿಭಂಗ ಉಂಟು ಮಾಡಲಿಲ್ಲ. ಅಲ್ಲಾಹನಲ್ಲಿ ಅಚಲ ವಿಶ್ವಾಸವನ್ನಿಟ್ಟುಕೊಂಡು ಸಮಸ್ಯೆಗಳ ಪರಿಹಾರಕ್ಕಾಗಿ ಅವನ ಮೊರೆಹೊಕ್ಕರು. ಅಲ್ಲಾಹನು ಅವರಿಗೆ ಸದಾ ಸಹಾಯವನ್ನು ದಯಪಾಲಿಸಿದನು. ಅದರ ಫಲವಾಗಿ ಅಹ್ಮದಿಯಾ ಜಮಾಅತ್ ದಿನೇ ದಿನೇ ಅಭಿವೃದ್ಧಿಯತ್ತ ಸಾಗುತ್ತಿದೆ. ಕೋಟಿ ಸಂಖ್ಯೆಯ ಅಹ್ಮದೀ ಮುಸ್ಲಿಮರು ಅಲ್ಲಾಹನಿಗೆ ಕೃತಜ್ಞತಾ ನಮನ ಸಲ್ಲಿಸುತ್ತಿದ್ದಾರೆ.

ಅಹ್ಮದಿಯಾ ಜಮಾಅತಿನ ಎರಡನೆಯ ಶತಮಾನದ ಪ್ರಥಮ ವರ್ಷದಲ್ಲೇ ಅದು ಅಪೂರ್ವ ಪ್ರಗತಿಯನ್ನು ಸಾಧಿಸಿದೆ. ಇತ್ತೀಚೆಗಿನ ವರದಿಯಂತೆ 4 ಹೊಸ ರಾಷ್ಟ್ರಗಳಲ್ಲಿ ಅಹ್ಮದಿಯತ್ ಸ್ಥಾಪಿತವಾಗಿದೆ. 1,23,000 ಮಂದಿ ಹೊಸದಾಗಿ ಅಹ್ಮದಿಯತ್ ಸ್ವೀಕರಿಸಿದ್ದಾರೆ. ಒಂದು ದೇಶದ ಶಿಕ್ಷಣ ಸಚಿವರು, ಇನ್ನೊಂದು ದೇಶದ

ಕ್ರೈಸ್ತ ಗವರ್ನರ್ ಜನರಲ್ ಮತ್ತು ಆಫ್ರಿಕದಲ್ಲಿ 20 ಮಂದಿ ಪಾರಾಮೌಂಟ್ ಚೀಫ್ಸ್ (Paramount Chiefs) ಜಮಾಅತಿಗೆ ಸೇರಿದ್ದಾರೆ. ಪಾಕಿಸ್ಥಾನ ಮತ್ತು ಬಂಗ್ಲಾದೇಶವನ್ನು ಹೊರತುಪಡಿಸಿದರೆ, 1139 ಹೊಸ ಘಟಕಗಳು ಸ್ಥಾಪನೆಗೊಂಡಿವೆ. 558 ಮಸೀದಿಗಳ ಹೆಚ್ಚಳ ಉಂಟಾಗಿದೆ. ಆಫ್ರಿಕದಲ್ಲಿ 9 ಕಡೆ ಹೊಸ ಪ್ರಚಾರ ಕೇಂದ್ರಗಳು ಸ್ಥಾಪನೆಗೊಂಡಿವೆ. 16 ಕಡೆಗಳಲ್ಲಿ ಪ್ರಚಾರ ಕೇಂದ್ರಕ್ಕಾಗಿ ವಿಶಾಲವಾದ ನಿವೇಶನಗಳನ್ನು ಖರೀದಿಸಲಾಗಿದೆ. ಏಶ್ಯಾದಲ್ಲಿ 6 ಹೊಸ ಪ್ರಚಾರ ಕೇಂದ್ರಗಳನ್ನು ತೆರೆಯಲಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ, ಅಹ್ಮದಿಯಾ ಜಮಾಅತ್ ಲೋಕದೆಲ್ಲೆಡೆ ಇಸ್ಲಾಂ ಧರ್ಮದ ಶಾಂತಿಯ ಸಂದೇಶವನ್ನು ಸಾರುತ್ತಾ ಮುಂದೆ ಮುಂದೆ ಸಾಗುತ್ತಿದೆ.

ಸರ್ವಸ್ತುತಿಗಳು ಸರ್ವಲೋಕಾಧಿಪತಿಯಾದ ಅಲ್ಲಾಹನಿಗೆ. ★

## Statement about Ownership and other particulars about the Newspaper YUGARASHMI Quarterly

**[FORM IV See Rule 8]**

| | | |
|---|---|---|
| 1 | Place of publication | Mangalore |
| 2 | Period of its publication | Quarterly |
| 3 | Printer's name | Muhammad Yusuf |
| | Whether citizen of India? | Yes |
| | Address | Jubilee Printing Press<br>10-23-1008/1 Ansari Road, Bunder,<br>Mangalore-575001 |
| 4 | Publisher's name | Muhammad Yusuf |
| | Whether citizen of India? | Yes |
| | Address | 10-23-1008/1 Ansari Road, Bunder,<br>Mangalore–575001 |
| 5 | Editor's name | Muhammad Yusuf |
| | Whether citizen of India? | Yes |
| | Address | 10-23-1008/1 Ansari Road, Bunder,<br>Mangalore–575001 |
| 6 | Name and addresses of individuals who own the newspaper and partner or shareholder holding more than one percent of the capital | Jamath Ahmadiyya,<br>10-23-1008/1 Ansari Road, Bunder,<br>Mangalore–575001 |

I, Muhammad Yusuf hereby declare that the particulars given above are true to the best of my knowledge and belief.

Date: 1-3-1990

Sd/-**Muhammad Yusuf**
*Publisher*

With
best compliments
from

# Jubilee Printing Press

ಜೂಬಿಲಿ ಪ್ರಿಂಟಿಂಗ್ ಪ್ರೆಸ್

ജൂബിലി പ്രിൻറിംഗ് പ്രസ്സ്

جوبلی پرنٹنگ پریس

*Quality Printers in:*
*KANNADA, ENGLISH, MALAYALAM, ARABIC, URDU and PERSIAN*

**Ansari Road,**
**Bunder, Mangalore-575 001**
Phone : 32039

# ಮನುಷ್ಯ ರಾಶಿಗೆ ಒಂದು ಆಧ್ಯಾತ್ಮಿಕ ಸಂದೇಶ

★ **ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್**
ಜಾಗತಿಕ ಅಹ್ಮದಿಯಾ ಸಂಘಟನೆಯ ಚತುರ್ಥ ಖಲೀಫ

ಭಾರತದ ಪಂಜಾಬಿನ ಒಂದು ಕುಗ್ರಾಮದಲ್ಲಿ ಇಂದಿಗೆ ಒಂದು ನೂರು ವರ್ಷಗಳ ಹಿಂದೆ ಅದ್ಭುತಕರವಾದ ಒಂದು ಘಟನೆ ನಡೆಯಿತು. ಅದು, ಮನುಷ್ಯ ಸಮುದಾಯದ ಚರಿತ್ರೆಯ ಗತಿಯನ್ನು ಮಾರ್ಪಡಿಸಲು ಸಮರ್ಥವಾದ ಒಂದು ಮಹಾ ಸಂಭವವಾಗಿತ್ತು.

ಅಂತ್ಯಕಾಲದ ವಾಗ್ದಾನ ಮಾಡಲ್ಪಟ್ಟ ಓರ್ವ ಧರ್ಮ ಸುಧಾರಕ ಎಂಬ ನೆಲೆಯಲ್ಲಿ ಮನುಷ್ಯ ವಂಶವನ್ನು ಸತ್ಪಥದಲ್ಲಿ ನಡೆಸಲು ದೇವರಿಂದ ವಿಶೇಷ ತರದಲ್ಲಿ ನಿಯೋಜಿಸಲ್ಪಟ್ಟ ಒಬ್ಬ ಆಧ್ಯಾತ್ಮಿಕ ಗುರು ಅಲ್ಲಿ ಜನ್ಮತಾಳಿದರು. ಅವರ ಹೆಸರು **ಮಿರ್ಝಾ ಗುಲಾಂ ಅಹ್ಮದ್** (1835–1908) ಎಂದಾಗಿತ್ತು. ಲೋಕವ್ಯಾಪಕವಾದ ಅಹ್ಮದಿಯಾ ಸಂಘಟನೆಯ ಸ್ಥಾಪಕರು ಅವರಾಗಿದ್ದಾರೆ. ಅವರಿಗಿಂತ ಮುಂಚೆ ಅಂತಹ ನೂರಾರು ದೇವನಿಯುಕ್ತವಾದಿಗಳು ಲೋಕದಲ್ಲಿ ಆಗಮಿಸಿದ್ದಾರೆ; ಇನ್ನು ಮುಂದೆಯೂ ಆಗಮಿಸುವರು. ಆದರೆ ಆ ಮಹಾಪುರುಷರ ವಾದಕ್ಕೆ ಒಂದು ವಿಶೇಷತೆ ಇತ್ತು. ಮನುಷ್ಯ ರಾಶಿಯ ಐಕ್ಯಕ್ಕಾಗಿ ಅವರು ವಿಶೇಷ ರೀತಿಯಲ್ಲಿ ಅಡಿಪಾಯ ಹಾಕಿ, ಓರ್ವ ಸಾರ್ವಲೌಕಿಕ ಧರ್ಮ ಸುಧಾರಕನ ಆಗಮನದ ಕುರಿತು ಹೊಂದಿದ್ದ ವ್ಯತ್ಯಸ್ತ ಅಭಿಪ್ರಾಯಗಳನ್ನು ಒಂದುಗೂಡಿಸಿ ಏಕದೇವ ತತ್ವಕ್ಕೆ ಒಂದು ಹೊಸ ರೂಪವನ್ನು ನೀಡಿದರು.

ಅವರು ಒಂದು ಧಾರ್ಮಿಕ ಮಹಾಕ್ರಾಂತಿಯ ಕಹಳೆಯನ್ನು ಮೊಳಗಿಸಿದರು. ಈ ಯುಗದಲ್ಲಿ ಧರ್ಮ ಲೋಕದಲ್ಲಿ ಅದೊಂದು ಬೃಹತ್ತಾದ ಕೋಲಾಹಲವನ್ನೇ ಸೃಷ್ಟಿಸಿತು. ಅದರ ಅಲೆಗಳು ಲೋಕದ ಮೂಲೆ ಮೂಲೆಗಳಿಗೂ ತಲಪಿದವು. ಆ ಕಾಲಘಟ್ಟವು ಸಾಮಾನ್ಯವಾಗಿ ನಿರೀಕ್ಷೆಯ ಕಾಲಘಟ್ಟವಾಗಿತ್ತೆಂದು ಹೇಳಬಹುದು. ಜಗತ್ತಿನ ಮಹಾಧರ್ಮಗಳ ಅನುಯಾಯಿಗಳು, ಎಂದರೆ ಯಹೂದಿಯರೂ ಕ್ರೈಸ್ತರೂ ಮುಸ್ಲಿಮರೂ ಹಿಂದೂಗಳೂ ಬೌದ್ಧರೂ ಝೊರಾಸ್ಟ್ರಿಯನ್ನರೂ ಕನ್‌ಫ್ಯೂಷಸ್ ಮತದವರೂ ಎಲ್ಲರೂ ತಮ್ಮ ತಮ್ಮ ಧರ್ಮದ ಮಾರ್ಗಗಳಲ್ಲಿ ಒಬ್ಬ ವಾಗ್ದತ್ತ ಪುರುಷನ ಆಗಮನವಾಗುವುದೆಂದು ನಂಬಿಕೊಂಡು ಆ ಮಹಾಪುರುಷನನ್ನು ಕಾಯುತ್ತಾ ಇದ್ದರು. ಯಹೂದಿಯರು ಮಸೀಹಾರನ್ನೂ ಕ್ರೈಸ್ತರು ಯೇಸುಕ್ರಿಸ್ತರ ಪುನರಾಗಮನವನ್ನೂ ಮುಸ್ಲಿಮರು ವಾಗ್ದತ್ತ ಮಹ್‌ದಿ-ಮಸೀಹರ ಆಗಮನವನ್ನೂ ನಿರೀಕ್ಷಿಸುತ್ತಿದ್ದರು. ಹಿಂದೂಗಳು ಶ್ರೀಕೃಷ್ಣರ ಪುನರಾವತಾರವನ್ನೂ ಬೌದ್ಧರು ಬುದ್ಧರ ಪುನರಾಗಮನವನ್ನೂ ಎದುರು ನೋಡುತ್ತಿದ್ದರು. ಈ ಅಂತ್ಯಕಾಲಘಟ್ಟದಲ್ಲಿ ಸತ್ಯದ ವಿಜಯಕ್ಕಾಗಿ ದೇವರು ಒಬ್ಬ ಧರ್ಮ ಸುಧಾರಕನನ್ನು ಖಂಡಿತವಾಗಿಯೂ ನಿಯೋಜಿಸುವನೆಂಬ ಸ್ಪಷ್ಟವಾದ ಭವಿಷ್ಯವಾಣಿಗಳು ಈ ಎಲ್ಲಾ ಧರ್ಮಗಳ ಪವಿತ್ರ ಗ್ರಂಥಗಳಲ್ಲಿ ಉಲ್ಲೇಖಿತವಾಗಿವೆ. ಆದರೆ, ಆ ಧಾರ್ಮಿಕ ಸುಧಾರಕನನ್ನು ವಿವಿಧ ಮತಸ್ಥರು ವ್ಯತ್ಯಸ್ತ ಹೆಸರುಗಳಿಂದ ಸ್ಮರಿಸುತ್ತಿದ್ದರು ಎಂಬುದು ಒಂದು ಸಮಸ್ಯೆಯೇ ಆಗಿತ್ತು.

ಅಂತ್ಯಕಾಲದ ವಾಗ್ದತ್ತ ಲೋಕಗುರುವಿನ ಕುರಿತು ವಿವಿಧ ಧರ್ಮಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಭವಿಷ್ಯ ನುಡಿಗಳು ಇವೆಯಾದರೂ ಮೂಲಭೂತವಾಗಿ ಅವೆಲ್ಲವೂ ಸರಿಯೇ. ಆದರೆ ಏಕನಾದ ಸತ್ಯದೇವನು ಪ್ರತಿಯೊಂದು ಮತಸ್ಥರಿಗೂ ಅವರವರ ಸಾಂಪ್ರದಾಯಿಕ ನಿರೀಕ್ಷೆಯ ಪ್ರಕಾರ ಬೇರೆ ಬೇರೆ ಲೋಕ ಗುರುಗಳನ್ನು ನಿಯೋಜಿಸಿ ಕಳುಹಿಸುವನೆಂಬ ಕಲ್ಪನೆಯು ಸರಿಯಾಗುದಲ್ಲ. ದೇವರು ಅವನ ಏಕತ್ವಭಾವವನ್ನು ಪ್ರಕಟಪಡಿಸಲು ಈ ಎಲ್ಲ

ಪ್ರತಿಯೊಂದು ಧರ್ಮದ ವಾಗ್ದತ್ತ ಸುಧಾರಕರನ್ನು ಪ್ರತಿನಿಧೀಕರಿಸುವ ರೀತಿಯಲ್ಲಿ ಇಡೀ ಮನುಷ್ಯ ವಂಶವನ್ನು ಏಕದಾರದಲ್ಲಿ ಪೋಣಿಸಿಕೊಂಡು, ಸೃಷ್ಟಿಕರ್ತನ ಏಕತ್ವದ ಆಪ್ಯೋದ್ಧಾರಕವಾದ ದೃಶ್ಯವನ್ನು ಸೃಷ್ಟಿಗಳ ಏಕತ್ವದ ದರ್ಪಣದಲ್ಲಿ ಪ್ರತಿಫಲಿಸುವಂತೆ ಮಾಡಲು ಓರ್ವ ಆಧ್ಯಾತ್ಮಿಕ ಲೋಕಗುರುವನ್ನು ನಿಯೋಜಿಸುವಸೆಂಬುದೇ ಅದರ ಅರ್ಥವೆಂಬ ರಹಸ್ಯವನ್ನು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್‌ರವರಿಗೆ ದೇವರು ತಿಳಿಸಿಕೊಟ್ಟನು.

ತನ್ನ ಏಕತ್ವವನ್ನು ಭೂಲೋಕದಲ್ಲಿ ಸಾರ್ವತ್ರಿಕವಾಗಿ ಪ್ರಕಾಶಪಡಿಸಲಿಕ್ಕೆ ಇಸ್ಲಾಂ ಧರ್ಮವನ್ನು ದೇವರು ಇಷ್ಟಪಟ್ಟಿದ್ದಾನೆಂದೂ ಸರ್ವಲೋಕಕ್ಕೂ ಅನುಗ್ರಹವಾಗಿ ಅವತರಿಸಿದ ಮುಹಮ್ಮದ್ ಪೈಗಂಬರ್ (ಸ) ಕೊನೆಯ ಧರ್ಮಶಾಸ್ತ್ರವಾಹಿಯಾದ ಪ್ರವಾದಿಯೆಂದೂ ಆ ಪುಣ್ಯಪುರುಷನ ದಾಸನಾಗಿ ಈ ಲೋಕೋದ್ಧಾರಕ ಆಗಮಿಸ ಬೇಕಾಗಿತ್ತೆಂದೂ ಈ ವಾಗ್ದತ್ತ ಪುರುಷನ ಕುರಿತೇ ವಿವಿಧ ಧರ್ಮಗಳಲ್ಲಿ ಬೇರೆ ಬೇರೆ ನಾಮಗಳಿಂದ ವಿವರಿಸಲಾಗಿ ತ್ತೆಂದೂ ದೇವಾಜ್ಞೆಯ ಪ್ರಕಾರ ಹಝ್ರತ್ ಅಹ್ಮದ್ ಅವರು ಘೋಷಿಸಿದರು.

ಇದು ಅತ್ಯಂತ ವಿಸ್ಮಯಕರವಾದ ಒಂದು ಘೋಷಣೆಯಾಗಿತ್ತು. ಭಾರತದ ಅಜ್ಞಾತವಾದೊಂದು ಕುಗ್ರಾಮ ದಿಂದ ಹೊರಟ ಈ ಒಂಟಿಯಾದ ದುರ್ಬಲ ಶಬ್ದಕ್ಕೆ ಯಾವುದೇ ಮಹತ್ವವೂ ಪ್ರಾಧಾನ್ಯವೂ ದೊರೆಯುತ್ತಿರಲಿಲ್ಲ ವಾದರೂ ಅದು ಗಮನಾರ್ಹವಾಗಿ ಪರಿಗಣಿಸಲ್ಪಡುತ್ತಿರಲಿಲ್ಲವಾದರೂ ಆ ಕರೆಗೆ ಲೋಕವು ಅತಿ ಗಂಭೀರವಾಗಿಯೇ ಪ್ರತಿಕ್ರಿಯಿಸಿತು ಎಂಬುದು ಅತ್ಯಂತ ಆಶ್ಚರ್ಯಕರವಾದ ಒಂದು ಸಂಗತಿಯಾಗಿದೆ. ಅವರ ಬೆಂಬಲಕ್ಕೆ ಜಗತ್ತಿನ ವಿವಿಧ ರಾಜ್ಯಗಳಿಂದ ಶಬ್ದಗಳು ಮೊಳಗತೊಡಗಿದವು. ಅದರೊಂದಿಗೆ ಅವರಿಗೆದುರಾದ ವಿರೋಧದ ಬಿರುಗಾಳಿಗಳು ಸಹ ಬೀಸತೊಡಗಿದವು. ಅವು ಮಾನವ ಚರಿತ್ರೆಯಲ್ಲಿ ದೇವದೂತರು ,ಆಗಮಿಸಿದ ಕಾಲಗಳಲ್ಲುಂಟಾದ ವಿರೋಧಗಳಿಗೆ ಸಮವಾದುದಾಗಿದ್ದವು. ದೇವರು ತನ್ನ ಸಂದೇಶವನ್ನು ಹರಡಿಸಲು ಅತಿ ದುರ್ಬಲರಾದ ಕೆಲವರನ್ನು ನಿಯೋಜಿಸಿ ದಾಗ, ಲೋಕದಲ್ಲಿರುವ ಎಲ್ಲಾ ಶಕ್ತಿಗಳೂ ಒಂದುಗೂಡಿ ವಿರೋಧಿಸಿದರೂ ಕೊನೆಗೆ ಅವರೇ ಜಯಹೊಂದುತ್ತಾರೆ. ಅವರ ರಕ್ಷಣೆಯ ಏರ್ಪಾಡುಗಳು ಅದ್ಭುತಕರವಾಗಿ ಸಿದ್ಧಗೊಳಿಸಲ್ಪಡುತ್ತವೆ. ದೇವರು ಅವರ ದೌರ್ಬಲ್ಯಗಳನ್ನು ಶಕ್ತಿಯನ್ನಾಗಿ ಮಾರ್ಪಡಿಸುತ್ತಾನೆ. ಈ ಯುಗದ ವಾಗ್ದತ್ತ ಪುರುಷನ ಬಗ್ಗೆ ಸಹ ಹೀಗೆಯೇ ಸಂಭವಿಸಿತು.

ಲೋಕವು ಆ ಮಹಾತ್ಮರನ್ನು ಬಹಳವಾಗಿ ವಿರೋಧಿಸಿತು. ಅವರ ವಿರುದ್ಧ 'ಕುಫ್ರ್ ಫತ್ವಾ' (ಅವಿಶ್ವಾಸಿಯೆಂಬ ವಿಧಿ) ಹೊರಡಿಸಲಾಯಿತು. ಅವರನ್ನು ಸುಳ್ಳು ಮೊಕದ್ದಮೆಗಳಲ್ಲಿ ಸಿಲುಕಿಸಲಿಕ್ಕೆ ಪ್ರಯತ್ನಿಸಲಾಯಿತು. ಅವರನ್ನು ವಧಿಸಲಿಕ್ಕೆ ಗೂಢಾಲೋಚನೆಗಳನ್ನು ಮಾಡಲಾಯಿತು. ಅವರ ಶಿಷ್ಯರನ್ನೂ ಅನುಚರರನ್ನೂ ಎಲ್ಲಾ ವಿಧದಲ್ಲೂ ಪೀಡಿಸಲಾಯಿತು. ಅವರ ಧಾರ್ಮಿಕ ಹಕ್ಕುಗಳನ್ನು ಕಸಿಯಲಾಯಿತು, ಅವರಿಗೆ ಮೂಲಭೂತ ಮಾನವೀಯ ಹಕ್ಕುಗಳನ್ನು ಸಹ ನಿರಾಕರಿಸಲಾಯಿತು, ಅವರ ಸಂಪತ್ತನ್ನು ಕೊಳ್ಳೆಹೊಡೆಯಲಾಯಿತು. ಅವರನ್ನು ವಧಾರ್ಹರೆಂದು ಘೋಷಿಸಿ, ಕ್ರೂರವಾಗಿ ಮರ್ದಿಸಿ, ಕೆಲವರನ್ನು ಹುತಾತ್ಮರನ್ನಾಗಿ ಮಾಡಲಾಯಿತು. ಅತ್ಯಂತ ನಿಂದನೀಯ ಶಿಕ್ಷೆಗಳಿಗೆ ಅವರನ್ನು ಗುರಿಪಡಿಸಲಾಯಿತು. ಅವರ ಅಂಗಡಿಗಳನ್ನೂ ವ್ಯಾಪಾರ ಸಂಸ್ಥೆಗಳನ್ನೂ ಸೂರೆ ಮಾಡಲಾಯಿತು. ಅವರ ಮನೆಗಳನ್ನು ಸುಟ್ಟುಹಾಕಲಾಯಿತು. ಅವರ ಮಸೀದಿಗಳನ್ನು ಸಹ ನಾಶಪಡಿಸಲಾಯಿತು. ಆ ಮಹಾಪುರುಷನ ಸಂದೇಶ ಮತ್ತು ಅವರ ಸಂಘಟನೆ ಈ ಭೂಲೋಕದಿಂದ ನಿರ್ನಾಮವಾಗಬೇಕೆಂಬ ಉದ್ದೇಶದಿಂದ ಎಲ್ಲಾ ರೀತಿಯ ವಿರುದ್ಧ ಪ್ರವರ್ತನೆಗಳು ನಡೆದುವು. ಆದರೆ, ಈ ವಿರೋಧಗಳ ಮತ್ತು ಶತ್ರುತ್ವದ ಬಿರುಗಾಳಿಗಳಿಗೆ ಆ ಶಬ್ದವನ್ನು ದಮನಿಸಲು ಸಾಧ್ಯವಾಗಲಿಲ್ಲ. ತದ್ವಿರುದ್ಧವಾಗಿ, ಈ ಎಲ್ಲಾ ವಿರೋಧಗಳು ಅಹ್ಮದಿಯಾ ಸಂಘಟನೆಯನ್ನು ಹೆಚ್ಚು ಹೆಚ್ಚು ಶಕ್ತಿಯುತವನ್ನಾಗಿ ಮಾಡಿದವು.

ಸಂಕ್ಷಿಪ್ತದಲ್ಲಿ, ಅಹ್ಮದಿಯಾ ಜಮಾಅತಿನ ಸ್ಥಾಪನೆ ಮೊದಲ್ಗೊಂಡು ಒಂದು ನೂರು ವರ್ಷ ಕಾಲ ದುರ್ಬಲವೂ ಅಶಕ್ತವೂ ಆದ ಈ ಸಂಘಟನೆಗೆ ಸರ್ವಶಕ್ತನಾದ ದೇವನು ಸಹಾಯವನ್ನೀಯುತ್ತಿದ್ದಾನೆ ಎಂಬುದು

ಪ್ರತ್ಯಕ್ಷವಾದ ಒಂದು ಸತ್ಯವಾಗಿದೆ. ಅದ್ಭುತಕರವಾದ ಸಂರಕ್ಷಣೆಯಿಂದ ಅವನು ಅದನ್ನು ಕಾಪಾಡಿಕೊಂಡು ಬಂದಿರುವನು.

ಈ ಅಸಂಖ್ಯ ಅನುಗ್ರಹಗಳನ್ನೂ ಅನುಸೂತ್ಯವಾದ ಸಹಾಯ ಸಂರಕ್ಷಣೆಗಳನ್ನೂ ನೀಡುತ್ತಿರುವ ಆ ಸರ್ವ ಶಕ್ತನಾದ ದೇವನನ್ನು ಸ್ತುತಿಸಲಿಕ್ಕೂ ಅವನಿಗೆ ಕೃತಜ್ಞತೆಗಳನ್ನು ಸಲ್ಲಿಸಲಿಕ್ಕೂ ಬೇಕಾಗಿ ಅಹ್ಮದಿಯಾ ಜಮಾಅತ್ 1989ನ್ನು ಶತವಾರ್ಷಿಕ ಜೂಬಿಲಿ – ಕೃತಜ್ಞತಾ ಸೂಚನೆ – ವರ್ಷವನ್ನಾಗಿ ಆಚರಿಸುತ್ತದೆ.

ಪಾವನವಾದ ಈ ಸಂದರ್ಭದಲ್ಲಿ ಅತ್ಯಂತ ಹಾರ್ದಿಕವಾಗಿಯೂ ವಿನೀತವಾಗಿಯೂ ನಾನು ನನ್ನ ಸಕಲ ಮನುಷ್ಯ ಸಹೋದರರನ್ನೂ ಅಹ್ಮದಿಯಾ ಮುಸ್ಲಿಂ ಸಮೂಹಕ್ಕೆ ಆಮಂತ್ರಿಸಿಕೊಳ್ಳುತ್ತೇನೆ. ಸೂಕ್ಷ್ಮಜ್ಞನೂ ಸರ್ವಸಾಕ್ಷಿಯೂ ಆದ ಆ ಸರ್ವಾಧಿನಾಥನಾದ ದೇವರನ್ನು ಸಾಕ್ಷಿಯಾಗಿರಿಸಿಕೊಂಡು ನಾನಿದೋ ಘೋಷಿಸುತ್ತೇನೆ: ಅಹ್ಮದಿಯಾ ಸಂಘಟನೆ ಸಂಪೂರ್ಣ ಸತ್ಯವಾಗಿದೆ. ಅದು ಪವಿತ್ರ ಇಸ್ಲಾಂ ಧರ್ಮವನ್ನು ಸತ್ಯಧರ್ಮವೆಂದು ಸರ್ವಾತ್ಮನಾ ನಂಬಿ ಆ ಶಾಂತಿಯ ಧರ್ಮದ ಮೂಲಕ ಮಾತ್ರವೇ ಮನುಷ್ಯ ರಾಶಿಯ ರಕ್ಷೆ ಇದೆ ಎಂದು ವಿಶ್ವಾಸ ವಿಡುವ ಒಂದು ಸಂಘಟನೆಯಾಗಿದೆ. ಇಸ್ಲಾಂ ಧರ್ಮವು ಮಾನವ ಜಾತಿಗೆಲ್ಲ ಐಕ್ಯದ ಮತ್ತು ಶಾಂತಿಯ ಸಂದೇಶವನ್ನು ನೀಡುತ್ತದೆ. ಮನುಷ್ಯರೆಡೆಯಲ್ಲಿರುವ ಭೇದಭಾವವನ್ನು ಅದು ತಳ್ಳಿಹಾಕುತ್ತದೆ. ಅದರ ಪ್ರಚಾರಕ್ಕಾಗಿ ಯಾವುದೇ ರೀತಿಯ ಒತ್ತಾಯ ಅಥವಾ ಬಲಾತ್ಕಾರದ ಮಾರ್ಗಗಳನ್ನು ಕೈಗೊಳ್ಳುವುದಕ್ಕೆ ಅದು ಸಮ್ಮತಿಸುವುದಿಲ್ಲ. ಅದು ಮನುಷ್ಯನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿಯುತ್ತದೆ. ಇಸ್ಲಾಂ ಧರ್ಮವು ದೇಹೇಚ್ಛೆಯ ದಾಸ್ಯದಿಂದ ಮನುಷ್ಯನನ್ನು ಸ್ವತಂತ್ರಗೊಳಿಸಿ ಸರಳವೂ ಅತ್ಯಂತ ಪ್ರಗತಿಪರವೂ ಆದ ಒಂದು ಜೀವನ ವ್ಯವಸ್ಥೆಯನ್ನು ಪ್ರದಾನ ಮಾಡುತ್ತದೆ. ಮನುಷ್ಯನ ಆರ್ಥಿಕವೂ ಸಾಂಸ್ಕೃತಿಕವೂ ಸಾಮೂಹಿಕವೂ ಆದ ಸಮಸ್ಯೆಗಳಿಗೆ ಫಲಪ್ರದವಾದ ಪರಿಹಾರ ವನ್ನು ಅದು ಒಳಗೊಂಡಿದೆ. ಸುಳ್ಳು ಮತ್ತು ಮೋಸಕ್ಕೆ ಸ್ಥಾನವಿಲ್ಲದ ಒಂದು ರಾಜತಂತ್ರ ದರ್ಶನವನ್ನೂ ಇಸ್ಲಾಂ ಧರ್ಮವು ಲೋಕದ ಮುಂದಿರಿಸುತ್ತದೆ. ಅದರೊಂದಿಗೆ ವ್ಯಕ್ತಿ ಪ್ರತಿಷ್ಠೆಯ, ಕೋಮು ಆಧಾರಿತ ಅಥವಾ ದೇಶಾಧಾ ರಿತವಾದ ಭೇದ ಭಾವನೆಗಳಿಂದೆಲ್ಲಾ ಸಂಪೂರ್ಣ ಮುಕ್ತವಾಗಿರುವ ಒಂದು ಪರಿಪೂರ್ಣ ನ್ಯಾಯಾಂಗ ವ್ಯವಸ್ಥೆಯನ್ನು ಅದು ಬೋಧಿಸುತ್ತದೆ. ಶತ್ರು ಮತ್ತು ಮಿತ್ರನ ಹಕ್ಕುಗಳನ್ನು ಒಂದೇ ನೀತಿಯ ತಕ್ಕಡಿಯಲ್ಲಿ ಅದು ತುಲನಮಾಡಿ ಕ್ರಮೀಕರಿಸುತ್ತದೆ.

ಲೋಕದಲ್ಲಿರುವ ಸಕಲ ಜನರಿಗೂ ಒಳಿತನ್ನುಂಟುಮಾಡಬಲ್ಲ ಹಾಗೂ ಸಕಲ ಜನತೆಗಳನ್ನೂ ಏಕಹಸ್ತದ ಕೆಳಗೆ ಒಂದುಗೂಡಿಸಲಿಕ್ಕೂ ಏಕದೇವ ತತ್ವದ ದಾರದಲ್ಲಿ ಪೋಣಿಸಲಿಕ್ಕೂ ಬೇಕಾಗಿ ಸಹಾಯಕವಾಗಬಲ್ಲ ಒಂದೇ ಒಂದು ಧರ್ಮವು ಅದಾಗಿದೆಯೆಂದು ಅಹ್ಮದಿಯಾ ಜಮಾಅತ್ ದೃಢವಾಗಿ ನಂಬುತ್ತದೆ. ಆದುದರಿಂದ, ಅತ್ಯಂತ ಪಾವನವಾದ ಈ ಸುವರ್ಣ ಸಂದರ್ಭದಲ್ಲಿ ಅಹ್ಮದಿಯಾ ಜಮಾಅತಿನ ಇಮಾಂ ಎಂಬ ನೆಲೆಯಲ್ಲಿ, ಭೂಲೋಕದಲ್ಲಿ ವಾಸಿಸುವ ಸಕಲ ಮನುಷ್ಯ ಸಹೋದರರನ್ನೂ ಈ ಸಮಾಧಾನದ ಧರ್ಮಕ್ಕೆ, ಏಕತ್ವ ದರ್ಶನದ ಧರ್ಮಕ್ಕೆ ಹೃದಯಾಂತ ರಾಳದ ಪ್ರಾಮಾಣಿಕ ಸಾಹೋದರ್ಯ ಭಾವದಿಂದಲೂ ಆದರದಿಂದಲೂ ನಾನಿದೋ ಆಮಂತ್ರಿಸುತ್ತೇನೆ.

ಬಾಹ್ಯ ದೃಷ್ಟಿಯಲ್ಲಿ ಅಹ್ಮದಿಯಾ ಸಂಘಟನೆಯು ಆ ಸಾರ್ವಲೌಕಿಕ ಕ್ರಾಂತಿಯನ್ನುಂಟುಮಾಡಲು ಶಕ್ತವೆಂದು ಭಾವಿಸುವ ತರದಲ್ಲಿ ಪ್ರತ್ಯಕ್ಷಗೊಂಡಿಲ್ಲವೆಂಬ ವಸ್ತುಸ್ಥಿತಿಯನ್ನು ನಾನು ಸಹ ಅಂಗೀಕರಿಸುತ್ತೇನೆ. ಆದರೆ, ಕಳೆದ ನೂರು ವರ್ಷಕಾಲ ಕಠಿಣ ವಿರೋಧವಿದ್ದರೂ ಅಹ್ಮದಿಯಾ ಜಮಾಅತ್ ಅದ್ಭುತಕರವಾದ ಸಾರ್ವತ್ರಿಕ ವಿಜಯ ವನ್ನು ಪಡೆದಿದೆಯೆಂಬ ವಾಸ್ತವಾಂಶದ ಮುಂದೆ ಅದನ್ನು ಅವಗಣಿಸಿ ತಳ್ಳಿ ಹಾಕಲಿಕ್ಕೆ ಸಾಧ್ಯವಿಲ್ಲವೆಂಬುದನ್ನು ವಿಚಾರವಂತರಾದ ಪ್ರತಿಯೊಬ್ಬರೂ ಸಮ್ಮತಿಸಲು ನಿರ್ಬಂಧಿತರಾಗುತ್ತಾರೆ.

ಈ ಕಾಲಾವಧಿಯೊಳಗೆ ಅಹ್ಮದಿಯಾ ಜಮಾಅತ್ 120 ರಾಷ್ಟ್ರಗಳಲ್ಲಿ ಬೇರೂರಿದೆ. ಅದರ ಅಭಿವೃದ್ಧಿಯ ವೇಗವು ಶೀಘ್ರಗತಿಯನ್ನು ಪಡೆಯುತ್ತಿರುವುದಾಗಿಯೂ ಸ್ಥಿತಿಗತಿಗಳು ಅದಕ್ಕೆ ಅನುಕೂಲಕರವಾಗಿ ಮಾರ್ಪಡುತ್ತಿವೆ

ಯೆಂದೂ ಕಾಣಬಹುದಾಗಿದೆ. ನೂರು ವರ್ಷಗಳ ಮೊದಲು ಯಾರಿಗೂ ಇದನ್ನು ಊಹಿಸಲು ಸಾಧ್ಯವಿರಲಿಲ್ಲ. ಈ ಸಂಘಟನೆಯ ಭವಿಷ್ಯತ್ತಿನ ಕುರಿತು ಆದರ ಸ್ಥಾಪಕರ ಮೂಲಕ ಈ ಮಾತುಗಳನ್ನು ಅರುಹಿದ್ದು ನಿಶ್ಚಯವಾಗಿಯೂ ದೇವನೇ ಆಗಿದ್ದನೆಂದೂ ಅದು ದೇವರ ಶಬ್ದವೇ ಆಗಿತ್ತೆಂದೂ ನಾವು ನಂಬಲು ನಿರ್ಬಂಧಿತರಾಗುತ್ತೇವೆ:

"ನಾನು ನನ್ನ ಥಳಕನ್ನು ತೋರಿಸುವೆನು. ನನ್ನ ಅದ್ಭುತ ಶಕ್ತಿ ಪ್ರದರ್ಶನದಿಂದ ನಾನು ನಿನ್ನನ್ನು ಉನ್ನತಕ್ಕೇರಿಸುವೆನು. ಲೋಕಕ್ಕೆ ಒಬ್ಬ ಮುನ್ನೆಚ್ಚರಿಕೆಗಾರನು ಬಂದನು; ಲೋಕವು ಆತನನ್ನು ಸ್ವೀಕರಿಸಲಿಲ್ಲ. ಆದರೆ ದೇವರು ಆತನನ್ನು ಸ್ವೀಕರಿಸಿ ಶಕ್ತಿಯುತವಾದ ಅಭಿಕ್ರಮಗಳಿಂದ ಆತನ ಸತ್ಯತೆಯನ್ನು ಸಾಬೀತು ಪಡಿಸಿ ತೋರಿಸುವನು...............

"ನಾನು ನಿನ್ನ ಸಂದೇಶವನ್ನು ಭೂಮಿಯ ಎಲ್ಲೆಗಳ ವರೆಗೆ ತಲಪಿಸುವೆನು."

ಇದೇ ದೈವಿಕ ಸುವಾರ್ತೆಗಳ ಮೂಲಕ ಪ್ರಕಾಶವನ್ನೂ ಸ್ಫೂರ್ತಿಯನ್ನೂ ಪಡೆದುಕೊಂಡು ಅಹ್ಮದಿಯಾ ಸಂಘಟನೆಯ ಸ್ಥಾಪಕರು ಮನುಷ್ಯ ವಂಶದೊಡನೆ ಹೀಗೆ ಹೇಳಿದರು:

"ನಾನು ಒಂದು ಅತಿ ಮಹತ್ತಾದ ವಿಜಯವನ್ನು ಗಳಿಸುವ ಕಾಲವು ಸಮೀಪವಾಗಿದೆ. ನನ್ನ ನಾಲಗೆಗೆ ಬೆಂಬಲವಾಗಿ ಬೇರೊಂದು ನಾಲಗೆ ಮಾತನಾಡುತ್ತಿದೆ. ನನ್ನ ಕೈಯನ್ನು ಬಲಪಡಿಸಲು ಬೇರೊಂದು ಕೈ ಪ್ರವರ್ತಿಸುತ್ತಿದೆ. ಲೋಕವು ಅದನ್ನು ಕಾಣುವುದಿಲ್ಲವಾದರೂ ನಾನದನ್ನು ಕಾಣುತ್ತಿದ್ದೇನೆ. ನನ್ನ ಅಂತರಂಗದಿಂದ ಸ್ವರ್ಗೀಯವಾದೊಂದು ಆತ್ಮ ಮಾತನಾಡುತ್ತಿದೆ. ಅದು ನನ್ನ ಪ್ರತಿಯೊಂದು ಮಾತಿಗೂ ಪ್ರತಿಯೊಂದು ಅಕ್ಷರಕ್ಕೂ ಜೀವನೀಡುತ್ತಿದೆ. ಆಕಾಶದ ಅನಂತಗಳಲ್ಲಿ ದೊಡ್ಡ ಕೋಲಾಹಲವೂ ಅಲ್ಲೋಲ ಕಲ್ಲೋಲವೂ ಸಂಭವಿಸುತ್ತಿದೆ. ಅವನು ಈ ವಿನೀತನನ್ನು ಒಂದು ಸೂತ್ರದ ಬೊಂಬೆಯ ರೀತಿಯಲ್ಲಿ ಎದ್ದು ನಿಲ್ಲಿಸಿರುತ್ತಾನೆ. 'ತೌಬ' (ಪಶ್ಚಾತ್ತಾಪ)ದ ಬಾಗಿಲು ಇನ್ನೂ ಮುಚ್ಚಲ್ಪಟ್ಟಿಲ್ಲದ ಪ್ರತಿಯೊಬ್ಬನೂ ಬೇಗನೇ ತಿಳಿಯುವನು – ನಾನು ಸ್ವಯಂ ಬಂದವನಲ್ಲವೆಂದು. ಒಬ್ಬ ಸತ್ಯಾತ್ಮನನ್ನು ಗುರುತಿಸಲಿಕ್ಕೆ ಅಸಾಧ್ಯವಾದ ಕಣ್ಣುಗಳು ದೃಷ್ಟಿಶಕ್ತಿಯುಳ್ಳವುಗಳೇ ? ಏನು, ಈ ಸ್ವರ್ಗೀಯ ಕರೆಗೆ ಪ್ರತಿಕ್ರಿಯಿಸದವನು ಜೀವವಿದ್ದವನೇ ?" ("ಇಝಾಲ ಔಹಾಂ" – ರೂಹಾನೀ ಖಝಾಇನ್, ಸಂಪುಟ 3, ಪುಟ 403)

ನಾನು ಹೇಳುತ್ತಿರುವುದನ್ನು ಸಂಶಯದಿಂದ ಶ್ರವಿಸುವ ಅನೇಕರಿರಬಹುದು. ಅಹ್ಮದಿಯಾ ಸಂಘಟನೆಯ ಜಾಜ್ವಲ್ಯಮಾನವಾದ ಭವಿಷ್ಯತ್ತಿನ ಕುರಿತು ನನ್ನ ದೃಢವೂ ಅಚಂಚಲವೂ ಆದ ನಂಬಿಕೆಯಲ್ಲಿ ಅವರು ಆಶ್ಚರ್ಯಚಕಿತರಾಗುತ್ತಿರಬಹುದು. ಕ್ರಿಸ್ತಶಕ ಒಂದನೇ ಶತಮಾನದ ಅಂತ್ಯದಲ್ಲಿ ದುರ್ಬಲರೂ ಮರ್ದಿತರೂ ಆದ ಕ್ರೈಸ್ತರಿಗೆ ನನಗಿಂದು ತೋಚುವಂತೆ ತೋಚಿರಬಹುದು. ಅವರು ಅವಹೇಳನಕ್ಕೆ ಗುರಿಯಾಗಿದ್ದರು. ಆ ಕಾಲದ ಜನರಿಂದ ಅವರು ನಿಂದಿಸಲ್ಪಟ್ಟಿದ್ದರು. ಮುಂದಿನ ಶತಮಾನವು ಅಂತ್ಯಗೊಳ್ಳುವ ಮೊದಲು ಖಂಡಿತವಾಗಿಯೂ ಆದೊಂದು ದಿನ ಬರಲಿದೆ – ಆ ದಿನದಂದು ಅಂದಿನ ಜನರು ಅಷ್ಟೇ ಆಶ್ಚರ್ಯದಿಂದ ಇಂದಿನ ಜನರ ಅವಿಶ್ವಾಸ ಮತ್ತು ಚಂಚಲತೆಯ ಕಡೆಗೆ ತಿರುಗಿ ನೋಡುವರು !

ಕೊನೆಯದಾಗಿ, ನಾನು ಇನ್ನೊಮ್ಮೆ ಅತ್ಯಂತ ಪ್ರಾಮಾಣಿಕವಾಗಿ ಈ ಅಂತ್ಯಯುಗದ ವಾಗ್ದತ್ತ ಧರ್ಮ ಸುಧಾರಕನ ಕರೆಗೆ ಓಗೊಡಲು ಲೋಕದ ಜನರನ್ನು ಆದರದಿಂದ ಆಮಂತ್ರಿಸುತ್ತೇನೆ. ಇಲ್ಲಿ ನಿಮಗೆ ಶಾಂತಿಯನ್ನೂ ಪೂರ್ಣ ಸಂತೃಪ್ತಿಯನ್ನೂ ಪಡೆಯಬಹುದು. ದೇವರಿಗೆ ನಿಮ್ಮನ್ನು ಪೂರ್ಣವಾಗಿ ಸಮರ್ಪಿಸುವುದರ ಮೂಲಕ ಅದು ಸಾಧ್ಯವಾಗುವುದು. ದೇವರು ನಿಮ್ಮನ್ನು ಅನುಗ್ರಹಿಸಲಿ, ಆಮೀನ್.

ಅನುವಾದ : **ಮುಹಮ್ಮದ್ ಯೂಸುಫ್**



Choudhri Allah Bux Sadiq,
Nazir Khidmate Darveshan, Rabwah



**Hazrath Sahibzada Mirza Wasim Ahmad Sahib**
Nazir Aala Sadr Anjuman Ahmadiyya Qadian

# ಸಂದೇಶ

بسم الله الرحمن الرحيم

"ಯುಗರಶ್ಮಿ" ಪತ್ರಿಕೆಯ ಸಂಪಾದಕರಾದ ಸನ್ಮಾನ್ಯ ಮುಹಮ್ಮದ್ ಯೂಸುಫ್ ಸಾಹೇಬರೆ,

ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತುಹು.

ನಿಮ್ಮ ಅಪೇಕ್ಷೆಯ ಮೇರೆಗೆ "ಯುಗರಶ್ಮಿ"ಯ ವಿಶೇಷಾಂಕಕ್ಕೆ ಸಂದೇಶವನ್ನು ಕಳುಹಿಸುತ್ತಿದ್ದೇನೆ. ಈ ವಿಶೇಷಾಂಕವನ್ನು ಅಲ್ಲಾಹನು ಮಾದರಿಯನ್ನಾಗಿಯೂ ಜನರು ಮೆಚ್ಚುವಂತೆಯೂ ಮಾಡಲಿ. ನೀವು ಕಳೆದ 15 ವರ್ಷಗಳಿಂದ ಈ ಪತ್ರಿಕೆಯ ಗೌರವ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದೀರೆಂದು ತಿಳಿದು ನನಗೆ ಅತೀವ ಸಂತೋಷವಾಯಿತು. ಅಲ್ಲಾಹನು ನಿಮಗೆ ಅಧಿಕಾಧಿಕ ಪ್ರತಿಫಲಗಳನ್ನು ದಯಪಾಲಿಸಲಿ. ಇನ್ನೂ ದೀರ್ಘಕಾಲ ಅದರ ಸೇವೆಗೈಯ್ಯುವರೆ ಅಲ್ಲಾಹನು ನಿಮಗೆ ಸೌಭಾಗ್ಯವನ್ನು ನೀಡಲಿ. ಈ ಪತ್ರಿಕೆ ಹೆಚ್ಚಿನ ಜನರಿಗೆ ಮಾರ್ಗದರ್ಶಕವಾಗಲಿ.

ಈ ವಿಶೇಷಾಂಕಕ್ಕೆ ಎಲ್ಲ ಶುಭಾಶಯಗಳನ್ನೂ ಹಾರೈಸುತ್ತೇನೆ. ಅಲ್ಲಾಹನು ಇದನ್ನು ಎಲ್ಲ ವಿಧದಲ್ಲಿ ಜನರಿಗೆ ಪ್ರಯೋಜನದಾಯಕ ಮಾಡಲಿ; ನಿಮಗೆ ಅನುಗ್ರಹಗಳನ್ನು ನೀಡಲಿ ಹಾಗೂ ಧಾರ್ಮಿಕ ಮತ್ತು ಲೌಕಿಕ ಏಳಿಗೆಗಳನ್ನು ಕರುಣಿಸಲಿ – ಆಮೀನ್.

ಅಹ್ಮದಿಯಾ ಜಮಾಅತಿನ ತೃತೀಯ ಖಲೀಫರಾದ ಹಝ್ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು ನೀಡಿದ "LOVE FOR ALL HATRED FOR NONE" (ಎಲ್ಲರೊಡನೆಯೂ ಪ್ರೀತಿ, ಯಾರೊಡನೆಯೂ ದ್ವೇಷವಿಲ್ಲ) ಎಂಬ ಸಂದೇಶವೇ "ಯುಗರಶ್ಮಿ"ಯ ಓದುಗರಿಗೆ ನನ್ನ ಸಂದೇಶವಾಗಿದೆ.

ಯಥಾರ್ಥವಾಗಿ ಇದು, ಇಸ್ಲಾಂ ಎಲ್ಲ ಮನುಷ್ಯರಿಗೂ ನೀಡುವ ಅದೇ ಮೂಲ ಸಂದೇಶವಾಗಿದೆ. ಅದೇನೆಂದರೆ, ಒಂದನೆಯದಾಗಿ ದೇವರನ್ನು ಪ್ರೀತಿಸಬೇಕು ಮತ್ತು ಎರಡನೆಯದಾಗಿ ಅವನ ಸೃಷ್ಟಿಗಳನ್ನು ಪ್ರೀತಿಸಬೇಕು. ದೇವರನ್ನು ಪ್ರೀತಿಸಿ ಅವನ ಸೃಷ್ಟಿಗಳನ್ನು ಪ್ರೀತಿಸದಿದ್ದರೆ ಅವರು ತಮ್ಮ ಮಾತಿನಲ್ಲಿ ಸತ್ಯವಂತರಾಗಲು ಸಾಧ್ಯವಿಲ್ಲ. ಸೃಷ್ಟಿಗಳ ಮೇಲೆ ಪ್ರೀತಿ ಇದ್ದು ಸೃಷ್ಟಿಕರ್ತನ ಮೇಲೆ ಪ್ರೀತಿ ಇಲ್ಲವಾದರೆ ಅವನ ಪ್ರೀತಿ ಸಹ ಅಪೂರ್ಣ ಮತ್ತು ನಿಷ್ಪ್ರಯೋಜಕ. ಒಬ್ಬ ಮನುಷ್ಯನಿಗೆ ತನ್ನ ಸೃಷ್ಟಿಕರ್ತನಲ್ಲಿ ಹಾಗೂ ಜೊತೆಗೆ ಸೃಷ್ಟಿಗಳಲ್ಲಿ ಸಹ ಪ್ರೀತಿ ಇದ್ದರೆ ಮಾತ್ರ ಅದು ಸಾಚಾ ಹಾಗೂ ಫಲದಾಯಕ ಪ್ರೀತಿಯೆಂದು ಪರಿಗಣಿಸಲ್ಪಡುವುದು.

ಜಗತ್ತಿಗೆ ಬಂದ ಪ್ರವಾದಿ, ಋಷಿ, ಮುನಿ, ಅವತಾರ ಪುರುಷರೆಲ್ಲರೂ ಈ ರೀತಿಯ ಪ್ರೀತಿಯ ಪಾಠವನ್ನು ಕಲಿಸಿದರು. ಕೊನೆಯದಾಗಿ, ನಮ್ಮ ನಾಯಕ ಹಾಗೂ ಆದರ್ಶಪ್ರಾಯ ಪ್ರವಾದಿಯಾದ

ಹಜ಼್ರತ್ ಮುಹಮ್ಮದ್ ಪೈಗಂಬರ್ (ಸ) ಒಂದು ಮಹತ್ತಾದ ಮಾದರಿಯನ್ನು ಈ ಜಗತ್ತಿಗೋಸ್ಕರ ಬಿಟ್ಟುಹೋದರು. ಒಂದು ಕಡೆಯಲ್ಲಿ, ಅವರ ವೈರಿಗಳು ಸಹ ಪೈಗಂಬರರಿಗೆ ದೇವರೊಡನಿದ್ದ ಪ್ರೀತಿಯನ್ನು ಕಂಡು ಹೀಗೆ ಉದ್ಗರಿಸಿದರು : قد عشق محمد ربه (ಮುಹಮ್ಮದ್ ತನ್ನ ಪ್ರಭುವಿನ ಮೇಲಿನ ಪ್ರೀತಿಯಲ್ಲಿ ಲೀನನಾಗಿದ್ದಾನೆ). ಇನ್ನೊಂದು ಕಡೆಯಲ್ಲಿ, ಅವರು ಸಮಸೃಷ್ಟಿಗಳೊಡನೆ ಆದರ್ಶನೀಯ ಪ್ರೀತಿಯನ್ನು ತೋರ್ಪಡಿಸಿದರು. ಹಜ಼್ರತ್ ಝೈದ್, ಪೈಗಂಬರರು ವಿಮುಕ್ತಿ ಗೊಳಿಸಿದ ಗುಲಾಮ ಆಗಿದ್ದರು. ಅವರನ್ನು ಮನೆಗೆ ಕರಕೊಂಡು ಹೋಗಲಿಕ್ಕೆ ಅವರ ಸ್ವಂತ ತಂದೆ ಬಂದಾಗ, ಅವರೊಂದಿಗೆ ಹೋಗಲು ಝೈದ್ ನಿರಾಕರಿಸಿದರು. ಹಜ಼್ರತ್ ಮುಹಮ್ಮದ್ ಪೈಗಂಬರರ ಸೇವೆಗೈಯ್ಯುವುದಕ್ಕೆ ಅವರು ಹೆಚ್ಚಿನ ಪ್ರಾಶಸ್ತ್ಯ ನೀಡಿದರು. ಚರಿತ್ರೆಯಲ್ಲಿ ಮತ್ತೊಂದು ಘಟನೆ ಹೀಗೆ ಉಲ್ಲೇಖಿಸಲ್ಪಟ್ಟಿದೆ: ಒಬ್ಬ ಪುತ್ರ ತನ್ನ ಸ್ವಂತ ಪಿತನ ಬಾಯಿಯಿಂದ ಹಜ಼್ರತ್ ಪೈಗಂಬರರ ವಿರುದ್ಧ ದುರಂಹಕಾರದ ಮಾತುಗಳನ್ನು ಕೇಳಿದಾಗ, ಆವೇಶ ಭರಿತನಾಗಿ ಖಡ್ಗವನ್ನು ಹಿರಿದು ತನ್ನ ತಂದೆಯ ವಿರುದ್ಧ ಸೆಟೆದು ನಿಂತುಕೊಂಡು "ಆ ಅಸಭ್ಯ ಮಾತುಗಳನ್ನು ಹಿಂತೆಗೆದುಕೋ, ಇಲ್ಲವಾದರೆ ಈಗಲೇ ನಾನು ನಿನ್ನ ರುಂಡವನ್ನು ಕತ್ತರಿಸಿ ಹಾಕುತ್ತೇನೆ" ಎಂದು ಹೇಳುತ್ತಾನೆ.

ಇದು ಹಜ಼್ರತ್ ಮುಹಮ್ಮದ್ ಪೈಗಂಬರರಿಂದ ಜನರು ಪಡೆದ ಪ್ರೀತಿಯ ಉದಾಹರಣೆಯ ಒಂದು ಮಿನುಗು ಮಾತ್ರವಾಗಿದೆ.

ಇಂದು ಲೋಕವು ವರ್ಗ, ವರ್ಣ, ಭಾಷೆ, ರಾಜ್ಯ, ರಾಷ್ಟ್ರ ಎಂಬೀ ವಿಭಿನ್ನತೆ ಮತ್ತು ವಿದ್ವೇಷಗಳಿಂದ ತೊಳಲಾಡುತ್ತಿದೆ. ಎಲ್ಲೆಲ್ಲೂ ಅಶಾಂತಿ – ಅಸಮಾಧಾನ ವ್ಯಾಪಿಸಿಕೊಂಡಿದೆ. ಆದುದರಿಂದ ಇಂದು ಪರಸ್ಪರ ಪ್ರೀತಿಯನ್ನು ಹುಟ್ಟಿಸುವಂತಹ, ಅನ್ಯೋನ್ಯ ಸೌಹಾರ್ದ ಹಾಗೂ ಸಾಮರಸ್ಯವನ್ನು ವೃದ್ಧಿಗೊಳಿಸುವಂತಹ ಸಾಹಿತ್ಯಗಳು ಸಿದ್ಧಗೊಂಡು ಹೆಚ್ಚು ಹೆಚ್ಚಾಗಿ ಪ್ರಚಾರಗೊಳ್ಳಬೇಕಾದ ಅಗತ್ಯವಿದೆ. ಮುಖ್ಯವಾಗಿ ನಮ್ಮ ಭಾರತದಲ್ಲಿ ವಿದ್ವೇಷ ಮತ್ತು ಪಕ್ಷಪಾತದ ಎಲ್ಲ ಧ್ವನಿಗಳನ್ನೂ ಎಲ್ಲ ಪ್ರಯತ್ನಗಳನ್ನೂ ವಿಫಲಗೊಳಿಸಲು ಭಾರತದ ಎಲ್ಲ ಮತಸ್ಥರೂ ತಂತಮ್ಮ ಮತಾಚಾರ್ಯರ ಮತ್ತು ಧರ್ಮ ಸಂಸ್ಥಾಪಕರ ಪಾವನ ವಾದ ಬೋಧನೆಗಳ ಮತ್ತು ಉತ್ತಮ ಮಾದರಿಗಳ ಬಗ್ಗೆ ಚಿಂತನ ಮಾಡಬೇಕಾದುದು ಹಾಗೂ ಅನ್ಯ ಧರ್ಮ ಗಳ ಸಂಸ್ಥಾಪಕರನ್ನೂ ಮತಾಚಾರ್ಯರುಗಳನ್ನೂ ಆದರಿಸಬೇಕಾದುದು ಅತ್ಯಾವಶ್ಯಕವಾಗಿದೆ. ಹಾಗೆಯೇ ಅವರ ಅನುಯಾಯಿಗಳ ಭಾವನೆಗಳನ್ನು ಮತ್ತು ಆರಾಧನಾಲಯಗಳನ್ನು ಗೌರವಿಸಬೇಕಾಗಿದೆ. ಹೀಗೆ ಮಾಡುವುದರಿಂದ ಪ್ರೀತಿ, ಸ್ನೇಹ, ಶಾಂತಿ, ಸಮಾಧಾನಗಳಿಂದ ಕೂಡಿದ ವಾತಾವರಣವು ಸೃಷ್ಟಿಸಲ್ಪಡುವುದು.

ಅಹ್ಮದಿಯಾ ಸಂಘಟನೆಯು ಪರಿಶುದ್ಧ ಅಧ್ಯಾಪನಗಳಿಂದ ಕೂಡಿದ ಹಾಗೂ ಶಾಂತಿ ಸಮಾಧಾನದ ಬೋಧನೆಗಳಿಂದ ಜಗತ್ತನ್ನು ಪ್ರಕಾಶಮಾನಗೊಳಿಸುವಂತಹ ಸಾಹಿತ್ಯಗಳನ್ನು ಸದಾ ಪ್ರಕಟಿಸುತ್ತಿದೆ. ಅಹ್ಮದಿಯಾ ಜಮಾಅತಿನ ನೂರು ವರ್ಷಗಳ ಚರಿತ್ರೆ ಲೋಕದ ಮುಂದೆ ಇದೆ. ಸರ್ವ ಮತಾಚಾರ್ಯರುಗಳ ಗೌರವಾರ್ಥ ಪ್ರತಿ ವರ್ಷ "ಸರ್ವ ಧರ್ಮ ಸಂಸ್ಥಾಪಕರ ದಿನ" (All Religious Founder's Day)ವನ್ನು ಅದು ಆಚರಿಸುತ್ತದೆ. ಎಲ್ಲ ಧರ್ಮಗಳ ಗುರುಗಳು ಅಥವಾ ವಿದ್ವಾಂಸರು ಒಂದೇ ವೇದಿಕೆಯ ಮೇಲೆ ಜಮಾಯಿಸಿ ಅನ್ಯಮತದವರ ಬಾಯಿಯಿಂದ ತಮ್ಮ ಮತದ ಋಷಿ, ಮುನಿ, ಪ್ರವಾದಿ ಗಳ ಸುಂದರ ಅಧ್ಯಾಪನಗಳ ಬಗ್ಗೆ ಶ್ರವಿಸುವಂತಹ ಸಂದರ್ಭವನ್ನು ಅದು ಒದಗಿಸಿಕೊಡುತ್ತದೆ. ಅಹ್ಮದಿಯಾ ಶತಾಬ್ದ ಕೃತಜ್ಞತಾ ಸೂಚಕ ಆಚರಣೆಯ ಅಂಗವಾಗಿ ಭಾರತದ ಎಲ್ಲ ರಾಜ್ಯಗಳಲ್ಲಿ ಆ ರೀತಿಯ ಸಭೆಗಳು ಜರಗಿವೆ. ಭಾರತದ ಜಾತ್ಯಾತೀತ ಧೋರಣೆಯ ಪ್ರಕಾರ, ವಾರ್ತಾ ಮಾಧ್ಯಮಗಳೂ ರೇಡಿಯೋ ಟಿ. ವಿ. ಎಲ್ಲವೂ ಈ ಬಗ್ಗೆ ಅಹ್ಮದಿಯಾ ಜಮಾಅತಿಗೆ ಸಹಕಾರ ನೀಡಿವೆ. ನಾವು ಅದಕ್ಕೆ ಕೃತಜ್ಞರಾಗಿದ್ದೇವೆ.

ಅಹ್ಮದಿಯಾ ಜಮಾಅತಿನ ಈಗಿನ ಇಮಾಂ (ಸರ್ವೋನ್ನತ ನಾಯಕ) ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು (ಚತುರ್ಥ ಖಲೀಫ) "ನೀವು ಪ್ರೀತಿ ಮತ್ತು ಪ್ರಾಮಾಣಿಕ ಅನುಕಂಪದ ಮೂಲಕ ಭಾರತದಿಂದ ದ್ವೇಷ, ಕ್ಷೋಭೆ, ಶತ್ರುತ್ವಗಳನ್ನು ದೂರಮಾಡಿ ನಿಮ್ಮ ದೇಶದ ಜನರ ಹೃದಯುವನ್ನು ಗೆಲ್ಲಿರಿ" ಎಂದು ಭಾರತದ ಎಲ್ಲ ಸದಸ್ಯರಿಗೆ ಆದೇಶವಿತ್ತಿದ್ದಾರೆ. ಆದ್ದರಿಂದ ವಿದ್ವೇಷವನ್ನು ಹೋಗಲಾಡಿಸಿ ಅದರ ಸ್ಥಾನದಲ್ಲಿ ಪ್ರೀತಿ, ಶಾಂತಿ, ಸಮಾಧಾನಗಳನ್ನು ಸ್ಥಾಪಿಸಲು ಶಕ್ಯರಾಗುವಂತಾಗಲು ನಾವು ಇನ್ನು ಮುಂದೆಯೂ ಸರಕಾರ ಮತ್ತು ಜನತೆಯ ಸಹಕಾರವನ್ನು ಕೋರುತ್ತೇವೆ. ಏಕೆಂದರೆ, ದೇವರು ಅಹ್ಮದಿಯಾ ಸಂಘಟನೆಯನ್ನು ಸ್ಥಾಪಿಸಿರುವುದು ಇದೇ ಉದ್ದೇಶಾರ್ಥವೆಂಬುದು ನಮ್ಮ ನಂಬಿಕೆಯಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರು ಹೀಗೆ ಹೇಳುತ್ತಾರೆ:

"ದೇವರು ಮತ್ತು ಅವನ ಸೃಷ್ಟಿಗಳ ಸಂಬಂಧದಲ್ಲಿ ಇರುವ ತೊಡಕನ್ನು ನೀಗಿಸಿ ಪ್ರೀತಿ ಮತ್ತು ಪ್ರಾಮಾಣಿಕತೆಯನ್ನು ಪುನಃಸ್ಥಾಪಿಸಲಿಕ್ಕಾಗಿಯೂ ಸತ್ಯತೆಯನ್ನು ಬಹಿರಂಗಪಡಿಸುವುದರ ಮೂಲಕ ಧರ್ಮ ಯುದ್ಧಗಳನ್ನು ನಿಲುಗಡೆಗೊಳಿಸಿ ಮೈತ್ರಿಯ ಬುನಾದಿ ಹಾಕಲಿಕ್ಕಾಗಿಯೂ ದೇವರು ನನ್ನನ್ನು ನಿಯೋಜಿಸಿದ್ದಾನೆ." (ಲೆಕ್ಚರ್ ಲಾಹೋರ್)

ದೇವರು ನಮ್ಮ ಸದುದ್ದೇಶಗಳನ್ನು ಈಡೇರಿಸಿಕೊಡಲಿ ಹಾಗೂ ಲೋಕವು ಬೇಗನೇ ತನ್ನ ಯಥಾರ್ಥ ಸೃಷ್ಟಿಕರ್ತನೊಡನೆ ಪ್ರೀತಿಯ ಸಂಬಂಧವನ್ನು ಸ್ಥಾಪಿಸಲಿ ಎಂದು ದೇವರೊಡನೆ ಪ್ರಾರ್ಥಿಸುತ್ತೇನೆ.

**ಮಿರ್ಝಾ ವಸೀಂ ಅಹ್ಮದ್**
(ನಾಝಿರ್ ಆಅ್‌ಲಾ, ಸದರ್ ಅಂಜುಮನ್ ಅಹ್ಮದಿಯಾ)
ಅಹ್ಮದಿಯಾ ಸಂಘಟನೆಯ ಭಾರತದ ಸರ್ವೋನ್ನತ ನಿರ್ದೇಶಕ
ಅಹ್ಮದಿಯಾ ಕೇಂದ್ರ ಸಂಸ್ಥೆ, ಖಾದಿಯಾನ್.

# ಬೈಅತ್ ನಿಬಂಧನೆಗಳು

**ಅಹ್ಮದಿಯಾ ಜಮಾಅತಿಗೆ ಸೇರಲಿಚ್ಛಿಸುವವರು ಈ ನಿಬಂಧನೆಗಳಿಗೆ ಪ್ರಾಮಾಣಿಕವಾಗಿ ಬದ್ಧರಾಗಿರಬೇಕಾಗಿದೆ :**

1. ಜೀವಾಂತ್ಯದ ವರೆಗೆ ಆತನು/ಆಕೆ ಬಹುದೇವಾರಾಧನೆ (ಶಿರ್ಕ್)ಯಿಂದ ದೂರವಿರಬೇಕು.
2. ಸುಳ್ಳು, ವ್ಯಭಿಚಾರ, ದುರ್ನೋಟ, ಮೋಸ, ಪರಪೀಡನೆ, ಕ್ರೌರ್ಯ, ವಿಶ್ವಾಸಘಾತಕತೆ, ಶಾಂತಿಭಂಗ, ದೇಶದ್ರೋಹ ಮುಂತಾದ ದುರ್ಮಾರ್ಗಗಳಿಂದ ದೂರವಿರಲು ಶ್ರಮಿಸಬೇಕು ಹಾಗೂ ಶರೀರೇಚ್ಛೆಯ ದಾಸ್ಯಕ್ಕೆ ಎಂದಿಗೂ ಒಳಗಾಗಬಾರದು.
3. ಅಲ್ಲಾಹನ ಮತ್ತು ಪ್ರವಾದಿಯ ಆಜ್ಞಾನುಸಾರ ಐದು ಹೊತ್ತು ನಮಾಝನ್ನು ತಪ್ಪದೆ ನಿರ್ವಹಿಸಬೇಕಲ್ಲದೆ ಸಾಧ್ಯವಾಗುವಷ್ಟರ ಮಟ್ಟಿಗೆ ತಹಜ್ಜುದ್ ನಮಾಝ್ ಅನುಷ್ಠಿಸಬೇಕು. ದಿನಾಲೂ ಪ್ರವಾದಿ (ಸ) ಅವರ ಮೇಲೆ ಸಲಾತ್ ಹೇಳುವುದನ್ನೂ ತನ್ನ ತಪ್ಪಿಗಾಗಿ ದೇವರೊಡನೆ ಕ್ಷಮೆಯಾಚಿಸುವುದನ್ನೂ ನಿಯತಕ್ರಮ ಮಾಡಬೇಕು. ದೇವಾನುಗ್ರಹಗಳ ಕುರಿತು ಸದಾ ಹೃತ್ಪೂರ್ವಕವಾಗಿ ಸ್ಮರಿಸಬೇಕಲ್ಲದೆ, ದೇವ ಸ್ಮರಣೆ ಮತ್ತು ದೇವ ಸ್ತೋತ್ರವನ್ನು ನಿತ್ಯವೂ ಮಾಡುತ್ತಲಿರಬೇಕು.
4. ಭಾವೋದ್ರೇಕಕ್ಕೆ ಗುರಿಯಾಗಿ ದೇವಸೃಷ್ಟಿಗಳಲ್ಲಿ ಯಾರಿಗೂ – ವಿಶೇಷವಾಗಿ ಮುಸ್ಲಿಮರಿಗೆ – ನಾಲಗೆಯಿಂದಾಗಲಿ, ಕೈಯಿಂದಾಗಲಿ, ಬೇರಾವುದೇ ರೀತಿಯಲ್ಲಾಗಲಿ ಅನ್ಯಾಯವಾಗಿ ಯಾವುದೇ ಕ್ಲೇಶವನ್ನುಂಟು ಮಾಡಬಾರದು.
5. ಸಂತಾಪ ಮತ್ತು ಸಂತೋಷ ವೇಳೆಗಳಲ್ಲಿ, ಸುಖ – ದುಃಖಗಳಲ್ಲಿ, ಅನುಗ್ರಹ ಲಬ್ಧಿಯ ಸಂದರ್ಭದಲ್ಲಿ ಮತ್ತು ಆಪತ್ಕಾಲದಲ್ಲಿ – ಎಲ್ಲ ಅವಸ್ಥೆಗಳಲ್ಲೂ ಅಲ್ಲಾಹನೊಡನೆ ನಿಷ್ಠೆಯಿಂದಿದ್ದುಕೊಂಡು ದೇವೇಚ್ಛೆಗೆ ಶಿರಬಾಗಿ ಸಮಾಧಾನ ಪಟ್ಟುಕೊಳ್ಳಬೇಕು. ದೇವಮಾರ್ಗದಲ್ಲಿ ಎಲ್ಲ ತರದ ಮಾನಹಾನಿ ಮತ್ತು ಕ್ಲೇಶಗಳನ್ನು ಸಹಿಸುವರೆ ಸಿದ್ಧನಿರಬೇಕು. ವಿಪತ್ತುಗಳು ಎದುರಾಗುವಾಗ ಮುಖ ತಿರುಗಿಸದೆ ಮುಂದಕ್ಕೆ ಹೆಜ್ಜೆ ಇಡಬೇಕು.
6. ಎಲ್ಲ ವಿಧ ದುರಾಚಾರಗಳಿಂದಲೂ ದುರಾಗ್ರಹಗಳಿಂದಲೂ ಸ್ವಯಂ ದೂರವಿದ್ದುಕೊಂಡು ಪವಿತ್ರ ಖುರ್ಆನಿನ ಆಜ್ಞೆಗೆ ಪೂರ್ಣರೀತಿಯಲ್ಲಿ ವಿಧೇಯನಾಗಿರಬೇಕಲ್ಲದೆ ಎಲ್ಲ ಚಲನವಲನಗಳು ದೇವವಚನಗಳಿಗೂ ಪೈಗಂಬರರ ನುಡಿಗಳಿಗೂ ಅನುಸಾರವಾಗಿರಬೇಕು.
7. ಅಹಂಭಾವ ಮತ್ತು ದುರಭಿಮಾನಗಳನ್ನು ಪೂರ್ಣವಾಗಿ ತ್ಯಜಿಸಿ ವಿನಯ, ಸರಳ, ಪ್ರಸನ್ನ, ಶಾಂತ, ನಿರಾಢಂಬರ ಜೀವನವನ್ನು ನಡೆಸಬೇಕು.
8. ಧರ್ಮವನ್ನೂ ಧರ್ಮದ ಪ್ರತಿಷ್ಠೆಯನ್ನೂ ಇಸ್ಲಾಮಿನ ಹಿತವನ್ನೂ ಸ್ವಂತ ಜೀವಕ್ಕಿಂತಲೂ ಸಂಪತ್ತಿಗಿಂತಲೂ ಮಾನಕ್ಕಿಂತಲೂ ಸಂತಾನಕ್ಕಿಂತಲೂ ಪ್ರಿಯವಾದ ಎಲ್ಲಕ್ಕಿಂತಲೂ ಹೆಚ್ಚು ಪ್ರೀತಿಯುಳ್ಳದ್ದಾಗಿ ಗಣಿಸಬೇಕು.
9. ಅಲ್ಲಾಹನ ಎಲ್ಲ ಸೃಷ್ಟಿಗಳೊಡನೆ ಪ್ರಾಮಾಣಿಕವಾದ ಸಹಾನುಭೂತಿಯನ್ನು ತೋರಿಸಬೇಕಲ್ಲದೆ ದೇವರು ನೀಡಿದ ಸಾಮರ್ಥ್ಯಗಳ ಮತ್ತು ಅನುಗ್ರಹಗಳ ಮೂಲಕ ಮನುಷ್ಯಕುಲಕ್ಕೆ ಉಪಕಾರಗಳನ್ನು ಮಾಡುತ್ತಲಿರಬೇಕು.
10. ಒಳ್ಳೆಯ ಕಾರ್ಯಗಳಲ್ಲಿ ಅನುಸರಣೆ ಮಾಡುವುದಾಗಿ ಒಪ್ಪುವುದರೊಂದಿಗೆ ಕುಟುಂಬ ಸಂಬಂಧಗಳಲ್ಲಾಗಲಿ ಭೌತಿಕವಾದ ಇತರ ಸಂಬಂಧಗಳಲ್ಲಾಗಲಿ, ಸೇವಕಭಾವಗಳಲ್ಲಾಗಲಿ ಕಾಣಸಲ್ಪಡದ ರೀತಿಯ ಒಂದು ಸುದೃಢ ಸಾಹೋದರ್ಯ ಸಂಬಂಧವನ್ನು ದೇವಮಾರ್ಗದಲ್ಲಿ ಈ ವಿನೀತನೊಂದಿಗೆ (ಹಝ್ರತ್ ಅಹ್ಮದ್‌ರೊಂದಿಗೆ) ಸ್ಥಾಪಿಸಬೇಕಲ್ಲದೆ ಅದನ್ನು ಮರಣದ ವರೆಗೆ ನೆಲೆನಿಲ್ಲಿಸಬೇಕಾಗಿದೆ.

**(“ಇಸ್ತಿಹಾರ್ ತಕ್ಮೀಲೆ ತಬ್ಲೀಗ್” ಜನವರಿ 12, 1889 — ಹಝ್ರತ್ ಮಿರ್ಝಾ ಗುಲಾಂ ಅಹ್ಮದ್)**

# ಪವಿತ್ರ ಖುರ್‌ಆನ್‌ನಿಂದ

ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ (ಆರಂಭಿಸುತ್ತೇನೆ). ಎಲ್ಲ ಸ್ತುತಿಗಳು ಸರ್ವ ಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ. (ಅವನು) ಪರಮ ದಯಾವಂತನೂ ಕಾರುಣ್ಯನಿಧಿಯೂ ನ್ಯಾಯತೀರ್ಮಾನ ದಿನದ ಅಧಿಪತಿಯೂ (ಆಗಿದ್ದಾನೆ). (ಓ ದೇವಾ) ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ. ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು – ನೀನು ಅನುಗ್ರಹಿಸಿದವರ, ನಿನ್ನ ಕ್ರೋಧಕ್ಕೆ ಪಾತ್ರರಾಗದವರ ಮತ್ತು ದಾರಿ ತಪ್ಪದವರ ಮಾರ್ಗದಲ್ಲಿ. (1:1–7)

بِسْمِ اللّٰهِ الرَّحْمٰنِ الرَّحِيْمِ ۝١
اَلْحَمْدُ لِلّٰهِ رَبِّ الْعٰلَمِيْنَ ۝٢
الرَّحْمٰنِ الرَّحِيْمِ ۝٣
مٰلِكِ يَوْمِ الدِّيْنِ ۝٤
اِيَّاكَ نَعْبُدُ وَاِيَّاكَ نَسْتَعِيْنُ ۝٥
اِهْدِنَا الصِّرَاطَ الْمُسْتَقِيْمَ ۝٦
صِرَاطَ الَّذِيْنَ اَنْعَمْتَ عَلَيْهِمْ ۙ غَيْرِ الْمَغْضُوْبِ
عَلَيْهِمْ وَلَا الضَّآلِّيْنَ ۝٧

ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲ ಅಲ್ಲಾಹನನ್ನು ಸ್ತುತಿಸುತ್ತವೆ. ಅವನು ಪ್ರತಾಪಶಾಲಿಯೂ ಜಾಣ್ಮೆಯುಳ್ಳವನೂ ಆಗಿರುವನು. ಆಕಾಶಗಳ ಮತ್ತು ಭೂಮಿಯ ಪ್ರಭುತ್ವ ಅವನಿಗೆಯೇ ಸೇರಿವೆ. ಅವನೇ ಜೀವನೀಡುವವನೂ ಮೃತಪಡಿಸುವವನೂ ಆಗಿದ್ದಾನೆ. ಅವನು ಎಲ್ಲ ವಸ್ತುಗಳ ಮೇಲೆ ಸರ್ವಾಧಿಕಾರ ಹೊಂದಿದ್ದಾನೆ. ಅವನೇ ಆದಿ, ಅವನೇ ಅಂತ್ಯ. ಅವನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಇದ್ದಾನೆ. ಅವನು ಎಲ್ಲ ಸಂಗತಿಗಳನ್ನೂ ಚೆನ್ನಾಗಿ ತಿಳಿಯುತ್ತಾನೆ. (57 : 2-4)

سَبَّحَ لِلّٰهِ مَا فِي السَّمٰوٰتِ وَالْاَرْضِ ۚ وَهُوَ
الْعَزِيْزُ الْحَكِيْمُ ۝٢
لَهٗ مُلْكُ السَّمٰوٰتِ وَالْاَرْضِ ۚ يُحْيٖ وَيُمِيْتُ ۚ
وَهُوَ عَلٰى كُلِّ شَيْءٍ قَدِيْرٌ ۝٣
هُوَ الْاَوَّلُ وَالْاٰخِرُ وَالظَّاهِرُ وَالْبَاطِنُ ۚ وَهُوَ
بِكُلِّ شَيْءٍ عَلِيْمٌ ۝٤

ಅವನು ರಾತ್ರೆಯನ್ನು ಹಗಲಿನಲ್ಲಿಯೂ ಹಗಲನ್ನು ರಾತ್ರೆಯಲ್ಲಿಯೂ ಲೀನಗೊಳಿಸುತ್ತಾನೆ. ಅವನು ಹೃದಯಗಳಲ್ಲಿರುವ ವಿಷಯಗಳನ್ನೆಲ್ಲ ಚೆನ್ನಾಗಿ ಬಲ್ಲವನಾಗಿದ್ದಾನೆ. ನೀವು ಅಲ್ಲಾಹನಲ್ಲೂ ಅವನ ಪ್ರವಾದಿಯಲ್ಲೂ ವಿಶ್ವಾಸ ಹೊಂದಿರಿ ಹಾಗೂ ಯಾವುದಕ್ಕೆ ನಿಮ್ಮನ್ನು ಉತ್ತರಾಧಿಕಾರಿಗಳನ್ನಾಗಿ ಮಾಡಲಾಗಿದೆಯೋ ಅದರಿಂದ ಖರ್ಚು ಮಾಡಿರಿ. ನಿಮ್ಮ ಪೈಕಿ ವಿಶ್ವಾಸಿಗಳಾದವರಿಗೆ ಮತ್ತು (ಅಲ್ಲಾಹನ ಮಾರ್ಗದಲ್ಲಿ) ಖರ್ಚುಮಾಡುವವರಿಗೆ ಮಹತ್ತಾದ ಪ್ರತಿಫಲ ದೊರೆಯುವುದು. (57 : 7, 8)

يُوْلِجُ الَّيْلَ فِي النَّهَارِ وَيُوْلِجُ النَّهَارَ فِي
الَّيْلِ ۚ وَهُوَ عَلِيْمٌ ۢ بِذَاتِ الصُّدُوْرِ ۝
اٰمِنُوْا بِاللّٰهِ وَرَسُوْلِهٖ وَاَنْفِقُوْا مِمَّا جَعَلَكُمْ
مُّسْتَخْلَفِيْنَ فِيْهِ ۚ فَالَّذِيْنَ اٰمَنُوْا مِنْكُمْ وَاَنْفَقُوْا
لَهُمْ اَجْرٌ كَبِيْرٌ ۝

يايها الذين امنو امنو بالله و رسوله و الكتب الذى نزل على رسوله و الكتب الذى انزل من قبل و من يكفر بالله و ملئكته و كتبه و رسله و اليوم الآخر فقد ضل ضللا بعيدا ۞

ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಲ್ಲೂ ಅವನ ಪ್ರವಾದಿಯಲ್ಲೂ ಪ್ರವಾದಿಗೆ ಅವತೀರ್ಣವಾದ ಗ್ರಂಥದಲ್ಲೂ (ಇದಕ್ಕಿಂತ) ಮುಂಚೆ ಅವತೀರ್ಣವಾದ ಗ್ರಂಥದಲ್ಲೂ ವಿಶ್ವಾಸವಿಡಿರಿ. ಯಾರು ಅಲ್ಲಾಹನನ್ನೂ ಅವನ ದಿವ್ಯದೂತರನ್ನೂ ಅವನ ಗ್ರಂಥಗಳನ್ನೂ ಅವನ ಪ್ರವಾದಿಗಳನ್ನೂ ಅಂತಿಮ ದಿನವನ್ನೂ ನಂಬುವುದಿಲ್ಲವೋ ಅವರು ಖಂಡಿತವಾಗಿಯೂ ದಾರಿ ತಪ್ಪಿ ಬಹಳ ದೂರ ಹೋದವರಾಗಿದ್ದಾರೆ. (4 : 137)

ليس البر ان تولوا وجوهكم قبل المشرق و المغرب و لكن البر من امن بالله و اليوم الآخر و الملئكة والكتب والنبين و اتى المال على حبه ذوى القربى واليتمى و المسكين وابن السبيل و السائلين و فى الرقاب و اقام الصلوة و اتى الزكوة والموفون بعهدهم اذا عهدوا و الصبرين فى الباساء و الضراء و حين الباس اولئك الذين صدقوا و اولئك هم المتقون.

ನೀವು ಪೂರ್ವಕ್ಕಾಗಲಿ ಪಶ್ಚಿಮಕ್ಕಾಗಲಿ ಮುಖವನ್ನು ತಿರುಗಿಸುವುದರಲ್ಲಿ ಧರ್ಮಶೀಲತೆ ಇಲ್ಲ. ಆದರೆ, ಅಲ್ಲಾಹನಲ್ಲೂ ಕೊನೆಯ ದಿನದಲ್ಲೂ ದಿವ್ಯದೂತರಲ್ಲೂ (ದೈವಿಕ) ಗ್ರಂಥಗಳಲ್ಲೂ ಪ್ರವಾದಿಗಳಲ್ಲೂ ವಿಶ್ವಾಸಹೊಂದಿ ಅವನ (ಅಲ್ಲಾಹನ) ಸಂಪ್ರೀತಿಗಾಗಿ ತಮ್ಮ ಧನವನ್ನು ಸಂಬಂಧಿಕರಿಗೆ, ಅನಾಥರಿಗೆ, ಬಡವರಿಗೆ, ಪ್ರಯಾಣಿಕರಿಗೆ, ಸಹಾಯಾರ್ಥಿಗಳಿಗೆ ಮತ್ತು ಗುಲಾಮರ ವಿಮೋಚನೆಗಾಗಿ ಖರ್ಚು ಮಾಡುವವರೂ ಪ್ರಾರ್ಥನೆಯನ್ನು ಸರಿಯಾಗಿ ಅನುಷ್ಠಿಸುವವರೂ ಝಕಾತ್ ಕೊಡುವವರೂ ತಾವು ಮಾಡಿದ ಒಪ್ಪಂದಗಳನ್ನು ಪೂರ್ಣಗೊಳಿಸುವವರೂ ಕಷ್ಟಕಾಲದಲ್ಲಿ ಮತ್ತು ದುಃಖಾವಸ್ಥೆಯಲ್ಲಿ ಸಹನೆ ಕೈಗೊಳ್ಳುವವರೂ ಯುದ್ಧಕಾಲದಲ್ಲಿ ಸ್ಥೈರ್ಯದಿಂದಿರುವವರೂ ಯಥಾರ್ಥ ಧರ್ಮಶೀಲರು. ಇವರೇ ಸತ್ಯವಂತರು. ಇವರೇ ಭಯಭಕ್ತಿ ತೋರಿಸುವವರು. (2 : 178)

قل ان كنتم تحبون الله فاتبعونى يحببكم الله و يغفر لكم ذنوبكم و الله غفور رحيم ۞

(ಓ ಪ್ರವಾದಿ) ಹೇಳು: 'ನೀವು ಅಲ್ಲಾಹನನ್ನು ಪ್ರೀತಿಸುತ್ತೀರಾದರೆ ನನ್ನನ್ನು ಅನುಸರಿಸಿರಿ. (ಆಗ) ಅಲ್ಲಾಹನೂ ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು. ಅಲ್ಲಾಹನು ಬಹಳ ಕ್ಷಮೆ ನೀಡುವವನೂ ಕಾರುಣ್ಯನಿಧಿಯೂ ಆಗಿದ್ದಾನೆ'. (3 : 32)

ولا تاكلوا اموالكم بينكم بالباطل و تدلوا بها الى الحكام لتاكلو فريقا من اموال الناس بالاثم و انتم تعلمون ۞

ನೀವು ನಿಮ್ಮ ಧನವನ್ನು ಪರಸ್ಪರ ಅನ್ಯಾಯವಾಗಿ ತಿನ್ನಬೇಡಿರಿ. ಹಾಗೂ ನೀವು ಜನರ ಸ್ವತ್ತಿನ ಒಂದು ಭಾಗವನ್ನು, ಪೂರ್ಣವಾದ ತಿಳುವಳಿಕೆಯಿಂದ ಪಾಪಕರವಾಗಿ ವಶಪಡಿಸಿ ಅನ್ಯಾಯದಿಂದ ತಿನ್ನಲಿಕ್ಕಾಗಿ ಅದನ್ನು ಅಧಿಕಾರಿಗಳ ಬಳಿಗೆ (ಲಂಚವಾಗಿ) ಕೊಂಡೊಯ್ಯಬೇಡಿರಿ. (2 : 189)

من عمل سيئة فلا يجزا الا مثلها و من عمل صالحا من ذكر او انثى و هو مؤمن فاولئك يدخلون الجنة يرزقون فيها بغير حساب ۞

ಯಾರಾದರೂ ಕೆಟ್ಟ ಕೆಲಸ ಮಾಡಿದರೆ ಅವನಿಗೆ ಅಷ್ಟೇ ಕೆಟ್ಟ ಪ್ರತಿಫಲ ದೊರೆಯುವುದು. ಯಾರಾದರೂ ಸ್ತ್ರೀ ಅಥವಾ ಪುರುಷ ಸತ್ಯವಿಶ್ವಾಸಿಯಾಗಿ ಒಳ್ಳೆಯ ಕೆಲಸಗಳನ್ನು ಮಾಡಿದರೆ ಅವರು ಸ್ವರ್ಗವನ್ನು ಪ್ರವೇಶಿಸುವರು ಮತ್ತು ಅವರಿಗೆ ಅಗಣಿತ ಪ್ರತಿಫಲ ನೀಡಲ್ಪಡುವುದು. (40 : 41)

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

- ಅಲ್ಲಾಹನ ಮಾರ್ಗದಲ್ಲಿ ಏನನ್ನಾದರೂ ಖರ್ಚುಮಾಡುವವರಿಗೆ ಪ್ರತಿಫಲವಾಗಿ ಅದರ ಏಳು ನೂರರಷ್ಟು ಪಾಲು ದೊರಕುವುದು. (ತಿರ್ಮಿದೀ)
- ಒಂದು ಖರ್ಜೂರದ ತುಂಡನ್ನು ದಾನ ಮಾಡಿಯಾದರೂ ನೀವು ನಿಮ್ಮನ್ನು ನರಕಾಗ್ನಿಯಿಂದ ರಕ್ಷಿಸಿಕೊಳ್ಳಿರಿ. (ಬುಖಾರಿ)
- ಒಬ್ಬ ಉದಾರ ಹೃದಯಿ ಮನುಷ್ಯನು ಅಲ್ಲಾಹನಿಗೆ ಸಮೀಪವಾಗಿರುತ್ತಾನೆ; ಆತನು ಜನರಿಗೂ ಸಮೀಪವಾಗಿರುತ್ತಾನೆ; ಸ್ವರ್ಗಕ್ಕೂ ಸಮೀಪವಾಗಿರುತ್ತಾನೆ; ನರಕದಿಂದ ಬಹು ದೂರವಿರುತ್ತಾನೆ. ತದ್ವಿರುದ್ಧವಾಗಿ ಜಿಪುಣನು ಅಲ್ಲಾಹನಿಂದ ದೂರವಿರುತ್ತಾನೆ; ಆತನು ಎಲ್ಲ ಜನರಿಂದಲೂ ದೂರವಿರುತ್ತಾನೆ; ಸ್ವರ್ಗದಿಂದಲೂ ದೂರವಿರುತ್ತಾನೆ ಮತ್ತು ಅವನು ನರಕಕ್ಕೆ ಸಮೀಪವಾಗಿರುತ್ತಾನೆ. ಅಜ್ಞನಾದ ಉದಾರಿ ಮನುಷ್ಯನು ಪ್ರಾರ್ಥಿಸುವ ಜಿಪುಣನಿಗಿಂತ ಹೆಚ್ಚಾಗಿ ಅಲ್ಲಾಹನ ಪ್ರೀತಿಗೆ ಪಾತ್ರನಾಗಿರುತ್ತಾನೆ. (ರಿಸಾಲ ಖುಶೀರಿಯ್ಯ)
- ಧರ್ಮಾಚರಣೆಯನ್ನು ಸುಲಭಗೊಳಿಸಿರಿ; ಕಷ್ಟಕರವನ್ನಾಗಿ ಮಾಡಬೇಡಿರಿ. ಆಸಕ್ತಿ ಹುಟ್ಟಿಸುವ ರೀತಿಯಲ್ಲಿ ಧರ್ಮವನ್ನು ಇತರರ ಮುಂದಿರಿಸಿರಿ; ಅದನ್ನು ಇತರರಿಗೆ ಅಸಹ್ಯಕರವನ್ನಾಗಿ ಮಾಡಬೇಡಿರಿ. (ಮುಸ್ಲಿಂ)
- ಅತ್ಯಂತ ಸುಸ್ವಭಾವ ಹೊಂದಿದವನು ಅಂತಿಮ ವಿಚಾರಣೆಯ ದಿನ ನನಗೆ ಅತ್ಯಂತ ಸಮೀಪವಾಗುವನು. ನಿಮ್ಮ ಪೈಕಿ ಜಂಬಕೊಚ್ಚುವವರು, ಬಡಾಯಿಕೋರರು ಮತ್ತು ದುರಹಂಕಾರಿಗಳು (ಅಲ್‌ಮುತಫೈಹಿಖ್) ಅಂತಿಮ ವಿಚಾರಣೆಯ ದಿನ ಅತ್ಯಂತ ತಿರಸ್ಕಾರಕ್ಕೆ ಪಾತ್ರರೂ ನನ್ನಿಂದ ಅತ್ಯಂತ ದೂರ ಸರಿಸಲ್ಪಟ್ಟವರೂ ಆಗುವರು. (ತಿರ್ಮಿದೀ)
- ನೀವು ಜನರನ್ನು ಕೇವಲ ನಿಮ್ಮ ಧನದಿಂದ ಐಶ್ವರ್ಯವಂತರನ್ನಾಗಿ ಮಾಡಲಾರಿರಿ. ನೀವು ಪ್ರಸನ್ನ ವದನರಾಗಿ ಮತ್ತು ಉತ್ತಮ ಸ್ವಭಾವದಿಂದ ವರ್ತಿಸಿ ಜನರಿಗೆ ಸಹಾಯ ಮಾಡಿರಿ. (ರಿಸಾಲ ಖುಶೀರಿಯ್ಯ)
- ನೀವು ಅಸೂಯೆಯೆಂಬ ಬೆಂಕಿಯ ಬಗ್ಗೆ ಎಚ್ಚರಿಕೆಯಿಂದಿರಿ. ಅದು ಒಳ್ಳೆಯ ಕೃತ್ಯಗಳನ್ನು ಸುಟ್ಟುಹಾಕುತ್ತದೆ – ಬೆಂಕಿ ಸೌದೆಯನ್ನು ಅಥವಾ ಹುಲ್ಲನ್ನು ಸುಟ್ಟುಹಾಕುವಂತೆ. (ಅಬೂ ದಾವೂದ್)

- ಯಾರ ಹೃದಯದಲ್ಲಿ ಅತ್ಯಲ್ಪವಾದರೂ ದುರಹಂಕಾರವಿದೆಯೋ ಅವನು ಸ್ವರ್ಗವನ್ನು ಪ್ರವೇಶಿಸಲಾರ............ಸತ್ಯವನ್ನು ತಿರಸ್ಕರಿಸುವುದು ಮತ್ತು ಜನರನ್ನು ಕೀಳಾಗಿ ಕಾಣುವುದೇ ದುರಹಂಕಾರವಾಗಿದೆ. (ಮುಸ್ಲಿಂ)

- ಒಂದು ಕಾಲ ಬರಲಿದೆ. ಆಗ ಇಸ್ಲಾಮಿನಲ್ಲಿ ಅದರ ಹೆಸರು ಹೊರತು ಬೇರೇನೂ ಉಳಿಯಲಾರದು; ಖುರ್‌ಆನಿನಲ್ಲಿ ಅದರ ಲಿಪಿಗಳಲ್ಲದೆ ಬೇರೇನೂ ಉಳಿಯಲಾರದು. ಅವರ ಮಸ್ಜಿದ್‌ಗಳು ಜನರಿಂದ ತುಂಬುವುವು; ಆದರೆ ಅವು ಸತ್ಯ ಮಾರ್ಗ ದರ್ಶನದಿಂದ ಶೂನ್ಯವಾಗುವುವು. ಅವರ ಉಲಮಾಗಳು (ಧರ್ಮ ಪಂಡಿತರು) ಆಕಾಶದ ಕೆಳಗೆ ಅತ್ಯಂತ ನೀಚರಾಗುವರು. ಎಲ್ಲ ವಿಧ ಷಡ್ಯಂತ್ರಗಳು ಅವರಿಂದಲೇ ಆರಂಭಗೊಳ್ಳುವುವು ಮತ್ತು ಅವರ ಕಡೆಗೆಯೇ ಮರಳುವುವು. (ಮಿಶ್ಕಾತ್)

- ನಿಶ್ಚಯವಾಗಿಯೂ ನನ್ನ ಸಮುದಾಯಕ್ಕೆ ಇಸ್ರಾಈಲ್ ಸಂತತಿಗಳಿಗೆ ಸಂಭವಿಸಿದಂತೆ ಸಂಭವಿಸುವುದು. ಒಂದು ಜೊತೆ ಪಾದರಕ್ಷೆಗಳು ಒಂದು ಇನ್ನೊಂದನ್ನು ಹೋಲುವಂತೆ ಅವರು ಪರಸ್ಪರ ಹೋಲುವರು. ಎಲ್ಲಿಯ ವರೆಗೆ ಈ ಹೋಲಿಕೆ ಇರುವುದೆಂದರೆ ಬನೀ ಇಸ್ರಾಈಲರಲ್ಲಿ ಯಾರಾದರೂ ತನ್ನ ತಾಯಿಯೊಂದಿಗೆ ಬಹಿರಂಗವಾಗಿ ವ್ಯಭಿಚರಿಸಿದ್ದರೆ ನನ್ನ ಸಮುದಾಯದಲ್ಲೂ ಅಂತಹವರು ಉಂಟಾಗುವರು. ಇಸ್ರಾಈಲರು 72 ಪಂಗಡಗಳಾಗಿ ಒಡೆದು ಹೋಗಿದ್ದರು; ನನ್ನ ಸಮುದಾಯದವರು 73 ಪಂಗಡಗಳಾಗಿ ಒಡೆದು ಹೋಗುವರು. ಅವರ ಪೈಕಿ ಒಂದು ಪಂಗಡದ ಹೊರತು ಉಳಿದ ಪಂಗಡಗಳೆಲ್ಲ ನರಕಕ್ಕೆ ಹೋಗುವುವು.........ಆ ಪಂಗಡದವರು ನಾನು ಮತ್ತು ನನ್ನ ಶಿಷ್ಯರು ಯಾವ ರೀತಿಯಲ್ಲಿ ಇರುವೆವೋ ಆ ರೀತಿಯಲ್ಲಿ ಇರುವವರು. (ತಿರ್ಮಿದೀ)

- ನೀವು ಮಹ್‌ದಿಯನ್ನು ಕಂಡರೆ ಅವರ ಕೈಯಲ್ಲಿ ಬೈಅತ್ (ಅನುಸರಣೆಯ ಪ್ರತಿಜ್ಞೆ) ಮಾಡಿರಿ. ನಿಮಗೆ ಮೊಣಕಾಲುಗಳನ್ನೂರಿಕೊಂಡು ಹಿಮಾವೃತವಾದ ಪರ್ವತಗಳನ್ನು ದಾಟಬೇಕಾಗಿ ಬಂದರೂ ಸಹ ನೀವು ಅವರ ಬಳಿಗೆ ಹೋಗಲೇ ಬೇಕು. ಅವರು ಮಹ್‌ದಿ ಮತ್ತು ಅಲ್ಲಾಹನ ಖಲೀಫರಾಗಿರುವರು. (ಇಬ್ನುಮಾಜ)

- ನಮ್ಮ ಮಹ್‌ದಿಗೆ ಎರಡು ದೃಷ್ಟಾಂತಗಳುಂಟಾಗುವುವು. ಅವು ಆಕಾಶ ಮತ್ತು ಭೂಮಿಯ ಸೃಷ್ಟಿಯ ನಂತರ (ದೃಷ್ಟಾಂತವಾಗಿ ಬೇರೆ ಯಾರಿಗೂ) ಈ ಮೊದಲು ಕಾಣಿಸಿಕೊಳ್ಳಲಿಲ್ಲ. ರಮಝಾನ್ ತಿಂಗಳಲ್ಲಿ ಚಂದ್ರನಿಗೆ (ಅದರ ಗ್ರಹಣ ರಾತ್ರಿಗಳಲ್ಲಿ) ಮೊದಲನೆಯ ರಾತ್ರಿ ಮತ್ತು ಸೂರ್ಯನಿಗೆ (ಅದರ ಗ್ರಹಣ ದಿನಗಳಲ್ಲಿ) ಮಧ್ಯದ ದಿನ ಗ್ರಹಣ ಉಂಟಾಗುವುದು. ಈ ಗ್ರಹಣಗಳು ಒಂದೇ ರಮಝಾನ್ ತಿಂಗಳಲ್ಲಿ ಸಂಭವಿಸುವುವು. (ಸುನನ್ ದಾರ್‌ಖುಥ್ನಿ)



Hazrath Muslih Mauood (R) with an African
Ahmady Leader.



*Hazrat Khalifatul Masih IV with Dr. Hary F. Momba, Vice President of Liberia.*



*Hazrat Khalifatul Masih IV with Mr. Dauda K. Jawara, President of Gambia.*




"KINGS SHALL SEEK BLESSING FROM THY GARMENTS."
*The prophecy of the promised Messiah*




*Two traditional Kings (above and below) from Nigeria receiving pieces of the Promised Messiah's garments from Hazrat Khalifatul Masih IVat 22nd Annual Convention of Ahmadiyya Association U.K.*



Four Ahmadi Obas (Traditional Rulers) with Hazrat Khalifatul Masih IV.



Members of the Ojokoro Jama'at welcoming Hazrat Khalifatul Masih IV. Several Obas (Traditional Rulers) are seen on horses.



*Hazrat Khalifatul Masih IV with Mr. Otumtuo Opoku Ware II, the Asantehene and President of the National House of Chiefs.*



*Hazrat Khalifatul Masih IV with Paramount Chief Kibi.*



*Hazrat Khalifatul Masih IV conversing with the Soviet Ambassador at a reception in Lagos.*



*Five Nigerians embracing Ahmadiyyat at the hand of Hazrat Khalifatul Masih IV.*



*Hazrat Khalifatul Masih IV conversing with Chinese Ambassador in Sierra Leone.*



*Hazrat Khalifatul Masih IV answering questions at a dinner. Right to left : Charge d' Affaires of Peoples Republic of China, the Gambian Minister of Works and Communications, and the Vicar General of the Catholic Mission.*



*Hazrat Khalifatul Masih IV alighting from Presidential Helicopter at Free Town. The helicopter remained at the disposal of Hazrat Khalifatul Masih IV throughout his stay in Sierra Leone.*



*Hazrat Khalifatul Masih IV meeting President of Ivory Coast Mr. Felix Hovphoyet Boigny.*



*Dr. Samuel Kanyon Doe, President of Liberia receiving Hazrat Khalifatul Masih IV at the State House.*



*Hazrat Khalifatul Masih IV with H.E. Josuf Saedo Momoh, President of Sierra Leone.*



Late SIR MOHAMMED ZAFARULLA KHAN



Late Alhaj F.M. SINGHATE,
Governor General GAMBIA.



Dr. ABDUSSALAM, NOBEL LAURATE,

▼ MASJID MAHMOOD ZURICH (SWITZERLAND)








MASJID NOOR FRANKFURT (WEST GERMANY) ▲



▲ MASJID BASHARAT PEDROABAD SPAIN

▼ **MASJID MAHMOOD ZURICH (SWITZERLAND)**








**MASJID NOOR** **FRANKFURT (WEST GERMANY)** ▲



▲ **MASJID BASHARAT PEDROABAD SPAIN**




◄ **MASJID NASIR SWEDEN**



**JAMA MASJID CALICUT (KERALA)**



◄ **JAMA MASJID**
Payangadi.



◄ MINARATUL MASIH

# FEW ATTRACTIVE SCENES OF AHMADIYYA CENTRE QADIAN



MASJID AQSA



◀ MASJID MUBARAK



▶ TOMB OF FOUNDER
OF
AHMADIYYA JAMAAT
AND
HAZRAT MAULANA HAKIM NOORUDDIN SAHIB
KHALIFATUL MASIH I



◀ PLACE OF
SECOND MANIFESTATION
OF
KHILAFAT



Moulavi Mohd. Abulwafa Sahib, Chief Missionary
Kerala, Performing Mubahala Prayer which was
held at Kodiyathur on 28-5-89



Seene of the Audience



**HAZRATH MOULANA ABDULLA SAHIB H.A. (Late)**

First Raisuthabligh South India & Sri Lanka,
Sadr Anjuman Ahmadiyya Member, Renowned Scholar and Orator.



**Alhaj Dr. Mansoor Ahmad.**
Amir Jamaath Ahmadiyya, Kerala.



## Late Siddeeq Amir Ali Sahib

First Amir, Jamath Ahmadiyya, Kerala.
Sadr Anjuman Ahmadiyya Member



**Moulana Mohd Abulwafa**
Chief Missionary Kerala.

ಅಹ್ಮದಿಯಾ ಇತಿಹಾಸದ ಪುಟಗಳಿಂದ

# ಮಂಗಳೂರು – ಮಂಜೇಶ್ವರ – ಮೊಗ್ರಾಲ್



**ಜನಾಬ್ ಎಂ. ಕೆ. ಯೂಸುಫ್ ಹುಸೈನ್ ಸಾಹೇಬ್**



**ಜನಾಬ್ ಎಂ. ಅಬ್ದುಲ್ ರಶೀದ್ ಸಾಹೇಬ್**



**ಜನಾಬ್ ಸಿದ್ದೀಖ್ ಅಮೀರಲಿ ಸಾಹೇಬ್**

ಸುಮಾರು 60 ವರ್ಷಗಳಿಗೆ ಮುಂಚೆ ಮಂಗಳೂರಿನ ಜನಾಬ್ ಎಂ. ಕೆ. ಯೂಸುಫ್ ಹುಸೈನ್ ಸಾಹೇಬರು ಅಹ್ಮದಿಯತ್ ಸ್ವೀಕರಿಸಿದರು. ಮಂಗಳೂರಿನ ಪ್ರಪ್ರಥಮ ಅಹ್ಮದಿ ಅವರಾಗಿದ್ದಾರೆ. ಕೆಲವು ವರ್ಷಗಳ ನಂತರ ಅವರ ಕಿರಿಯ ಸಹೋದರ ಜನಾಬ್ ಎಂ. ಕೆ. ಹಮ್ಮಬ್ಬ ಹುಸೈನ್ ಸಾಹೇಬರು ಅಹ್ಮದಿಯಾ ಜಮಾಅತಿಗೆ ಸೇರಿದರು. ಜ। ಯೂಸುಫ್ ಹುಸೈನ್ ಸಾಹೇಬರು ಓರ್ವ ಗಣ್ಯ ಸಮಾಜ ಸೇವಕರಾಗಿದ್ದರು. 1928ರಲ್ಲಿ ಸ್ಥಾಪಿತವಾದ ಮಂಗಳೂರಿನ ಮುಸ್ಲಿಂ ಎಜುಕೇಶನಲ್ ಅಸೋಸಿಯೇಶನ್‌ನ ಆಡಳಿತ ಸಮಿತಿಯ ಸದಸ್ಯರಾಗಿ ಅವರು ಸೇವೆಗೈಯ್ದಿದ್ದಾರೆ. ಅವರು ಅನೇಕ ವರ್ಷಗಳ ಕಾಲ ಅಹ್ಮದಿಯಾ ಜಮಾಅತಿನ ಸ್ಥಳೀಯ ಘಟಕದ ಸೆಕ್ರೆಟರಿಯಾಗಿಯೂ ಕೆಲವು ವರ್ಷಗಳ ಕಾಲ ಪ್ರೆಸಿಡೆಂಟ್ ಆಗಿಯೂ ಸೇವೆ ಸಲ್ಲಿಸಿದ್ದಾರೆ.

1935ರಲ್ಲಿ ಮಂಜೇಶ್ವರದ ನಿವಾಸಿ ಜನಾಬ್ ಎಂ. ಅಬ್ದುಲ್ ರಶೀದ್ ಸಾಹೇಬರು ಅಹ್ಮದಿಯತ್ ಸ್ವೀಕರಿಸಿದರು. ಅಹ್ಮದಿಯಾ ಜಮಾಅತಿನ ಮಂಗಳೂರು ಘಟಕದ ಪ್ರಥಮ ಪ್ರೆಸಿಡೆಂಟ್ ಅವರೇ ಆಗಿದ್ದರು. ಮೂಲತಃ ಉಳ್ಳಾಲದವರಾದ ಅವರು ಹಿಂದೂ ಧರ್ಮದಿಂದ 1930ರಲ್ಲಿ ಇಸ್ಲಾಂ ಧರ್ಮಕ್ಕೆ ಮತಾಂತರವಾದರು. ಅವರು ಮಂಜೇಶ್ವರದ ಮೊತ್ತ ಮೊದಲ ಅಹ್ಮದಿಯೂ ಆಗಿದ್ದಾರೆ. 1941ರಿಂದ 1983ರ ಮಧ್ಯೆ ಸುಮಾರು 40 ವರ್ಷಗಳ ದೀರ್ಘಕಾಲ ಅವರು ಮಂಗಳೂರು – ಮಂಜೇಶ್ವರ – ಮೊಗ್ರಾಲ್ ಸಂಯುಕ್ತ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸಿದ್ಧ ಆಯುರ್ವೇದ ವೈದ್ಯರಾಗಿದ್ದ ಅವರು ಊರಿನಲ್ಲಿ ಓರ್ವ ಗಣ್ಯ ವ್ಯಕ್ತಿಯಾಗಿದ್ದರು.

1946ರಲ್ಲಿ ಮೊಗ್ರಾಲ್ ನಿವಾಸಿ ಜನಾಬ್ ಸಿದ್ದೀಖ್ ಅಮೀರಲಿ ಸಾಹೇಬರು ಅಹ್ಮದಿಯಾ ಜಮಾಅತಿಗೆ ಸೇರಿದರು. ಅವರು ಹಲವು ವರ್ಷಗಳ ಕಾಲ ಸೆಕ್ರೆಟರಿಯಾಗಿಯೂ ಕೆಲವು ವರ್ಷ ಪ್ರೆಸಿಡೆಂಟ್ ಆಗಿಯೂ ಸೇವೆಸಲ್ಲಿಸಿದ್ದಾರೆ. ಕೇರಳ ಅಹ್ಮದಿಯಾ ಕೇಂದ್ರ ಸಮಿತಿಯ ಪ್ರಥಮ ಅಧ್ಯಕ್ಷರಾಗಿಯೂ ಕೇರಳ ರಾಜ್ಯ ಪ್ರಥಮ ಅಮೀರ್ ಆಗಿಯೂ ಅವರು ಚುನಾ




**ಅಲ್‌ಹಾಜ್ ಮೌಲಾನಾ ಮುಹಮ್ಮದ್ ಸಲೀಂ ಸಾಹೇಬ್ H. A., ಮೌಲಾನಾ ಶರೀಫ್ ಅಹ್ಮದ್ ಸಾಹೇಬ್ ಅಮೀನಿ H. A., ಅಲ್‌ಹಾಜ್ ಮೌಲಾನಾ ಮುಹಮ್ಮದ್ ಇಸ್ಮಾಈಲ್ ಸಾಹೇಬ್ H. A. (ಪ್ಲೀಡರ್, ಹೈಕೋರ್ಟ್, ಹೈದರಾಬಾದ್), ಅಲ್‌ಹಾಜ್ ಸೇಟ್ ಅಲಿ ಮುಹಮ್ಮದ್ ಅಲಾ ಉದ್ದೀನ್ ಸಾಹೇಬ್ M. A. (ಎಡಿನ್‌ಬರೋ), ಸಿಕಂದರಾಬಾದ್, ಮೌಲಾನಾ ಬಿ. ಅಬ್ದುಲ್ಲಾ ಸಾಹೇಬ್ H. A. ಮೊದಲಾದವರು ಮಂಗಳೂರಿಗೆ ಆಗಮಿಸಿದಾಗ ತೆಗೆದ ಛಾಯಚಿತ್ರ. 1952 ಎಪ್ರಿಲ್ 12 ಮತ್ತು 13ರಂದು ಅಹ್ಮದಿಯಾ ಜಮಾಅತಿನ ಮಂಗಳೂರು ಘಟಕದ ವತಿಯಿಂದ ಗಣಪತಿ ಹೈಸ್ಕೂಲಿನ ಸಭಾಂಗಣದಲ್ಲಿ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಲಾಗಿತ್ತು.**

ಯಿಸಲ್ಪಟ್ಟಿದ್ದರು. ಅವರು ಅನೇಕ ವರ್ಷಗಳ ಕಾಲ ಖಾದಿಯಾನದ ಅಹ್ಮದಿಯಾ ಕೇಂದ್ರ ಸಂಸ್ಥೆಯ (ಸದರ್ ಅಂಜುಮನ್ ಅಹ್ಮದಿಯಾ) ಸದಸ್ಯರೂ ಆಗಿದ್ದರು.

ಮಂಗಳೂರಿನಲ್ಲಿ ಜ। ಯೂಸುಫ್ ಹುಸೈನ್ ಸಾಹೇಬರ ಸಹೋದರ ಹಮ್ಮಬ್ಬ ಹುಸೈನ್ ಸಾಹೇಬರ ನಂತರ ಜಮಾಅತಿಗೆ ಸೇರಿದವರು ಜ। ಬಿ. ಶೇಖ್ ಅಲಿ ಸಾಹೇಬ್, ಜ। ಯಾಹೂ ಸಾಹೇಬ್, ಜ। ಜಮೇದಾರ್ ಸಾಹೇಬ್, ಜ। ಪಿ. ಎ. ಮುಹಮ್ಮದ್ ಮೌಲವಿ ಸಾಹೇಬ್ ಮೊದಲಾದವರಾಗಿದ್ದಾರೆ.

ಅಹ್ಮದಿಯಾ ಜಮಾಅತಿಗೆ ಸೇರಿದ ಕಾರಣದಿಂದ ಅಹ್ಮದಿಯೇತರ ಮುಸ್ಲಿಮರಿಂದ ವಿಧಿಸಲ್ಪಟ್ಟ ಸಾಮಾಜಿಕ ಬಹಿಷ್ಕಾರ ನಿಮಿತ್ತ ಜ। ಯೂಸುಫ್ ಹುಸೈನ್ ಸಾಹೇಬರಿಗೆ ತನ್ನ ಹೋಟೆಲ್ ಉದ್ಯಮವನ್ನು ನಿಲ್ಲಿಸಬೇಕಾಯಿತು. ಆದರೆ ಬಹಳ ಧೈರ್ಯ ಹಾಗೂ ಸಹನೆಯಿಂದ ಅವರು ಎಲ್ಲ ಪರೀಕ್ಷೆಗಳನ್ನು ಜಯಿಸಿದರು. ಅವರು 1970ರಲ್ಲಿ ನಿಧನರಾದರು.

1941ರಲ್ಲಿ ಮತ್ತು 1952ರಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ಮಂಗಳೂರಿನಲ್ಲಿ ಏರ್ಪಡಿಸಲಾದ ಸಾರ್ವಜನಿಕ ಸಭೆಗಳು ಜಮಾಅತಿನ ಮಂಗಳೂರು ಘಟಕದ ಚರಿತ್ರೆಯಲ್ಲಿ ಸ್ಮರಣೀಯವಾಗಿವೆ.

1975ರಿಂದ ಮಂಗಳೂರಿನಿಂದ ಅಹ್ಮದಿಯಾ ಸಂಘಟನೆಯ ವತಿಯಿಂದ ಜ। ಎಂ. ಅಬ್ದುಲ್



**ಹಝ್ರತ್ ಅಹ್ಮದ್ (ಅ)ರವರ ಪೌತ್ರ ಮಿರ್ಝಾ ವಸೀಂ ಅಹ್ಮದ್ ಸಾಹೇಬರು (ಮಧ್ಯದಲ್ಲಿ ಕುಳಿತವರು) 1957 ಮಾರ್ಚ್ 22ರಂದು ಪ್ರಥಮ ಬಾರಿ ಮಂಗಳೂರಿಗೆ ಆಗಮಿಸಿದಾಗ.**

ರಶೀದ್ ಸಾಹೇಬರ ಕಿರಿಯ ಪುತ್ರ ಜನಾಬ್ ಮುಹಮ್ಮದ್ ಯೂಸುಫ್ ಸಾಹೇಬರ ಸಂಪಾದಕತ್ವದಲ್ಲಿ "ಯುಗರಶ್ಮಿ" ತ್ರೈಮಾಸ ಪತ್ರಿಕೆಯು ಪ್ರಕಟಗೊಳ್ಳುತ್ತಿದೆ. ಹೆಚ್ಚಿನ ಎಲ್ಲ ಅಹ್ಮದಿಯಾ ಕನ್ನಡ ಸಾಹಿತ್ಯಗಳು ಮಂಗಳೂರಿನಿಂದ ಪ್ರಕಾಶಗೊಳ್ಳುತ್ತಿವೆ.

1935ರಿಂದ 1942ರ ವರೆಗೆ ಜ। ಅಬ್ದುಲ್ ರಶೀದ್ ಸಾಹೇಬ್ ಮತ್ತು ಅವರ ಪತ್ನಿ ಮಾತ್ರ ಮಂಜೇಶ್ವರದಲ್ಲಿ ಅಹ್ಮದಿಗಳಾಗಿದ್ದರು. 1942ರ ನಂತರ ಯು. ಎಂ. ಎ. ಮೊಯ್ದೀನ್ ಸಾಹೇಬ್, ಅವರ ಹಿರಿಯ ಸಹೋದರ ಯು. ಅಹ್ಮದ್ ಕುಞ್ಞಿ ಸಾಹೇಬ್, ಯು. ಸೈದಾಲಿ ಸಾಹೇಬ್, ಎಂ. ಅಬ್ದುಲ್ ರಝಾಕ್ ಸಾಹೇಬ್, ಯು. ಕೆ. ಅಬ್ದುಲ್ ಶಾಫೀ ಸಾಹೇಬ್ ಮೊದಲಾದವರು ಜಮಾಅತಿಗೆ ಸೇರಿದರು. 1944ರಲ್ಲಿ ಮಂಜೇಶ್ವರದಲ್ಲಿ ಬಹು ಸಂಖ್ಯಾತ ಅಹ್ಮದಿಯೇತರ ಮುಸ್ಲಿಮರಿಂದ ಅಹ್ಮದೀಯರಿಗೆ ವಿರುದ್ಧವಾಗಿ ಕಠಿಣವಾದ ಸಾಮಾಜಿಕ ಬಹಿಷ್ಕಾರ ವಿಧಿಸಲ್ಪಟ್ಟಿತು. ಬಹಿಷ್ಕಾರದ ಕಾರಣದಿಂದ ಅಹ್ಮದೀಯರಿಗೆ ಬಹಳ ಕಷ್ಟ – ನಷ್ಟ ಸಹಿಸಬೇಕಾಗಿ ಬಂತು. ಮೃತಶರೀರವನ್ನು ದಫನ ಮಾಡಲು ಸಹ ತೊಂದರೆ ಪಡಬೇಕಾಯಿತು. ಜ। ಅಬ್ದುಲ್ ರಶೀದ್ ಸಾಹೇಬರು ತನ್ನ ಹಿತ್ತಿಲಿನ ಒಂದು ಭಾಗವನ್ನು ಕಬರ್‌ಸ್ಥಾನವನ್ನಾಗಿ ಪರಿವರ್ತಿಸಿದರು. ತನ್ನ ಮನೆಯ ಒಂದು ಭಾಗವನ್ನು ಪ್ರಾರ್ಥನೆಗೆ ಮೀಸಲಿಟ್ಟರು.

1962ರಲ್ಲಿ ಸಯ್ಯದ್ ಕುಟುಂಬಕ್ಕೆ ಸೇರಿದ ಜ। ಸಯ್ಯದ್ ಇಸ್ಮಾಈಲ್ ಸಾಹೇಬರೂ ಅವರ ಪತ್ನಿಯೂ ಅಹ್ಮದಿಯತ್ ಸ್ವೀಕರಿಸಿದರು. ಈಗ ಮಂಜೇಶ್ವರದಲ್ಲಿ ಜಮಾಅತಿನ ವತಿಯಿಂದ ಕಬರ್‌ಸ್ಥಾನವಿದೆ. ಜ। ಅಬ್ದುಲ್ ರಶೀದ್ ಸಾಹೇಬರು ಜಮಾಅತಿಗೆ ವಕ್ಫ್ ಮಾಡಿದ ನಿವೇಶನದಲ್ಲಿ ಒಂದು ಹೊಸ ಮಸೀದಿಯ ನಿರ್ಮಾಣ ಕಾರ್ಯ ನಡೆಯುತ್ತಿದೆ. ಈ ಮಸೀದಿ ನಿರ್ಮಾಣದ ಎಲ್ಲ ಖರ್ಚನ್ನು 1973ರಲ್ಲಿ ಜಮಾಅತಿಗೆ ಸೇರಿದ ಜ। ಎಂ. ಪಿ. ಇಬ್ರಾಹೀಂ ಸಾಹೇಬರು ವಹಿಸಿಕೊಂಡಿದ್ದಾರೆ.

ಲಂಡನಿನಲ್ಲಿ ಅಹ್ಮದಿಯಾ ಮಿಷನರಿಯಾಗಿದ್ದ ಜ। ಬಶೀರ್ ಅಹ್ಮದ್ ಓರ್ಚರ್ಡ್ ಸಾಹೇಬ್ ಮತ್ತು ಸಿರಿಯಾ ಮಿಷನರಿ ಜ। ಅಸ್ಸಯ್ಯದ್ ಸಲೀಂ ಹಸನುಲ್ ಜಾಬಿ ಸಾಹೇಬ್ ಭಾಗವಹಿಸಿದ್ದ, 1958 ಮಾರ್ಚ್

2ರಂದು ಮಂಜೇಶ್ವರದ ಎಸ್. ಎ. ಟಿ. ಹೈಸ್ಕೂಲ್‌ನಲ್ಲಿ ಏರ್ಪಡಿಸಲಾಗಿದ್ದ ಸಾರ್ವಜನಿಕ ಸಭೆ ಅವಿಸ್ಮರಣೀಯವಾಗಿದೆ.

ಅತಿ ಧೈರ್ಯಶಾಲಿಯೂ ತ್ಯಾಗಶೀಲರೂ ಆಗಿದ್ದ ಮಂಜೇಶ್ವರದ ಪ್ರಥಮ ಅಹ್ಮದಿ ಜ। ಅಬ್ದುಲ್ ರಶೀದ್ ಸಾಹೇಬರು 1986 ನವೆಂಬರ್ 30ರಂದು ನಿಧನರಾದರು.

ಜನಾಬ್ ಸಿದ್ದೀಖ್ ಅಮೀರಲಿ ಸಾಹೇಬರು ಮೊಗ್ರಾಲ್ ಕುಂಬಳೆ ಪ್ರದೇಶದ ಪ್ರಥಮ ಅಹ್ಮದಿ. ಅವರು ಊರಿನಲ್ಲಿ ಓರ್ವ ಗಣ್ಯ ವ್ಯಕ್ತಿಯೂ ಜಮೀನ್ದಾರನೂ ಆಗಿದ್ದರು. ಅವರ ಜೊತೆಯಲ್ಲಿ ಅವರ ಸಹಧರ್ಮಿಣಿ ಸಹ ಅಹ್ಮದಿಯತ್ ಸ್ವೀಕರಿಸಿದರು. ಅವರು ಮಂಗಳೂರಿನ ಕುಲೀನ ಕುಟುಂಬವೊಂದಕ್ಕೆ ಸೇರಿದವರಾಗಿದ್ದರು. ಧನಿಕೆಯಾಗಿದ್ದ ಅವರು ತನ್ನ ಸಂಪತ್ತಿನ ದೊಡ್ಡ ಒಂದು ಪಾಲನ್ನು ಜಮಾಅತಿಗೆ ವಕ್ಫ್ ಮಾಡಿದರು. ಜ। ಸಿದ್ದೀಖ್ ಅಮೀರಲಿ ಸಾಹೇಬರು ಮೊಗ್ರಾಲ್‌ನಲ್ಲಿ ಒಂದು ಮಸೀದಿಯನ್ನೂ ನಿವೇಶನವನ್ನೂ ಜಮಾಅತಿಗೆ ವಕ್ಫ್ ಮಾಡಿದ್ದಾರೆ. ದೊಡ್ಡ ತ್ಯಾಗಶೀಲರೂ ಉದಾರಮತಿಯೂ ಸರಳ ಸ್ವಭಾವಿಯೂ ಧರ್ಮನಿಷ್ಠರೂ ಆಗಿದ್ದ ಅವರು 1989 ಜನವರಿ 10ರಂದು ನಿಧನರಾದರು.

ಜ। ಅಮೀರಲಿ ಸಾಹೇಬರು ಅಹ್ಮದಿಯತ್ ಸ್ವೀಕರಿಸಿ ಕೆಲವು ವರ್ಷಗಳು ಕಳೆದಾಗ ಮೊಗ್ರಾಲಿನ ಟಿ. ಎ. ಅಬ್ದುಲ್ ಖಾದಿರ್ ಸಾಹೇಬ್, ಕುಂಬಳೆಯ ಮಮ್ಮು ಮಾಸ್ಟರ್ ಸಾಹೇಬ್, ಅವರ ಸಹೋದರರಾದ ಮೂಸ ಮಾಸ್ಟರ್ ಸಾಹೇಬ್ ಮತ್ತು ಕುಞ್ಞಹ್ಮದ್ ಸಾಹೇಬ್, ಕೋಟಿಕುಳಮಿನ ಕೆ. ಎ. ಸಾಲಿಹ್ ಸಾಹೇಬ್ ಮೊದಲಾದವರು ಜಮಾಅತಿಗೆ ಸೇರಿದರು.

ಅಹ್ಮದಿಯತ್ ಸ್ವೀಕರಿಸಿದ ಕಾರಣದಿಂದ ಜ। ಮಮ್ಮು ಮಾಸ್ಟರ್ ಸಾಹೇಬ್ ಮತ್ತು ಮೂಸ



**ಜನಾಬ್ ಬಶೀರ್ ಅಹ್ಮದ್ ಸಿದ್ದೀಖ್ ಸಾಹೇಬ್**

ಮಾಸ್ಟರ್ ಸಾಹೇಬರಿಗೆ ತಮ್ಮ ಉದ್ಯೋಗ ತೊರೆಯಬೇಕಾದ ಪರಿಸ್ಥಿತಿ ಉಂಟಾಯಿತು. ಅಹ್ಮದೀಯರಿಗೆ ಮೊಗ್ರಾಲ್ ಮತ್ತು ಕುಂಬಳೆಯಲ್ಲಿ ಕಠಿಣವಾದ ಸಾಮಾಜಿಕ ಬಹಿಷ್ಕಾರ, ಮರ್ದನೆ ಮತ್ತು ಇತರ ಹಲವು ರೀತಿಯ ಕಷ್ಟ–ನಷ್ಟಗಳನ್ನು ಸಹಿಸಬೇಕಾಗಿ ಬಂದಿತ್ತು. ಅಹ್ಮದಿ ಆದ ಕಾರಣಕ್ಕೆ ಜ। ಮಮ್ಮು ಮಾಸ್ಟರ್ ಸಾಹೇಬರಿಗೆ ಕುಂಬಳೆ ಪೇಟೆಯಲ್ಲಿ ವಿರೋಧಿಗಳು ಚಪ್ಪಲಿ ಮಾಲೆಯನ್ನು ಹಾಕಿದ್ದರು.

1972ರಲ್ಲಿ ಕೇರಳ ರಾಜ್ಯ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಮೊಗ್ರಾಲಿನಲ್ಲಿ ಸಮಾವೇಶಗೊಂಡಿತ್ತು.

ಅಹ್ಮದಿಯಾ ಜಮಾಅತಿನ ಮಂಗಳೂರು–ಮಂಜೇಶ್ವರ–ಮೊಗ್ರಾಲ್ ಸಂಯುಕ್ತ ಘಟಕದ ಈಗಿನ ಪ್ರೆಸಿಡೆಂಟ್ ಜ। ಬಶೀರ್ ಅಹ್ಮದ್ ಸಿದ್ದೀಖ್ ಸಾಹೇಬರಾಗಿದ್ದಾರೆ.

ವಿವಿಧ ಧರ್ಮಗಳ ಅಧ್ಯಯನಕ್ಕಾಗಿ
ಯುಗರಶ್ಮಿ ಓದಿರಿ



ನೊಬೆಲ್ ಪ್ರಶಸ್ತಿ ವಿಜೇತ ಪ್ರಪ್ರಥಮ ಮುಸ್ಲಿಂ ವಿಜ್ಞಾನಿ ಡಾ। ಅಬ್ದುಸ್ಸಲಾಂ ಸಾಹೇಬರು 1981 ಜನವರಿ 12ರಂದು ಮದರಾಸಿನ ಅಹ್ಮದಿಯಾ ಕೇಂದ್ರವನ್ನು ಸಂದರ್ಶಿಸಿದಾಗ, ಯುಗರಶ್ಮಿ ಸಂಪಾದಕರು ಅವರನ್ನು ಭೇಟಿಯಾಗಿದ್ದರು.



ಮಂಗಳೂರಿನ ನೆಹರೂ ಮೈದಾನದಲ್ಲಿ ನಡೆದ 9ನೇ ಅಖಿಲ ಭಾರತ ಕೈಗಾರಿಕಾ ಮತ್ತು ಕೃಷಿ ಪ್ರದರ್ಶನವನ್ನು 1979 ಮಾರ್ಚ್ 4ರಂದು ಉದ್ಘಾಟಿಸಿದ ಕೃಷಿ ಸಚಿವ ಶ್ರೀ ಕೆ. ಎಚ್. ರಂಗನಾಥರವರು 'ಬುಕ್ ಸೆಂಟರ್ ಅಹ್ಮದಿಯಾ' ವನ್ನು ಸಂದರ್ಶಿಸಿದಾಗ, ಸಚಿವರಿಗೆ ಖುರ್‌ಆನಿನ ಇಂಗ್ಲಿಷ್ ಭಾಷಾಂತರ ಮತ್ತು ಇತರ ಅಹ್ಮದಿಯಾ ಸಾಹಿತ್ಯಗಳನ್ನು ಉಡುಗೊರೆಯಾಗಿ ನೀಡಲಾಯಿತು.

WITH BEST COMPLIMENTS FROM :



**K. K. BADRUDDIN**

**KARAMBAR**

**BAJPE**

*With Best Compliments From :*

**BASHEER AHMAD K.**
**MUTHIULLAH C.**

**ABDURRAHIM P.**
**AYESHA C.**

**JUBILEE MOTORS**
**MANGALORE-575 001.**

ಅಹ್ಮದಿಯಾ ಇತಿಹಾಸದ ಪುಟಗಳಿಂದ – 2

# ಮಡಿಕೇರಿ



ಜ। ಜಿ. ಎಸ್. ಅಹ್ಮದ್ ಸಾಹೇಬ್



ಜ। ಪಿ. ಅಹ್ಮದ್ ಅಲೀ ಸಾಹೇಬ್



ಜ। ಬಿ. ಎಚ್. ಇಸ್ಮಾಈಲ್ ಸಾಹೇಬ್

ಪ್ರಕೃತಿ ರಮಣೀಯವಾದ ಕೊಡಗು ಜಿಲ್ಲೆಯ ಮಡಿಕೇರಿಗೆ ಅಹ್ಮದಿಯಾ ಸಂದೇಶವು ತಲಪಿದ್ದು 1950ರಲ್ಲಿ. ಮಂಜೇಶ್ವರ ನಿವಾಸಿ ಜನಾಬ್ ಯು. ಎಂ. ಎ. ಮುಹ್ಯಿದ್ದೀನ್ ಸಾಹೇಬರ ಮೂಲಕ ಅದು ತಲಪಿತು. ಒಂದು ದಿನ ಅವರು ಮಡಿಕೇರಿಯಲ್ಲಿ ತನ್ನೊಬ್ಬ ಊರಿನ ಪರಿಚಯದ ವ್ಯಕ್ತಿಯೊಂದಿಗೆ ಈಸಾ ನಬಿ(ಅ) ಮನುಷ್ಯ ಸಹಜವಾಗಿ ಮೃತಪಟ್ಟಿರುವರೆಂದೂ ಅವರು ಆಕಾಶದಿಂದ ಇಳಿದು ಬರುವರೆಂಬ ನಂಬಿಕೆ ಕ್ರೈಸ್ತರಿಂದ ಮುಸ್ಲಿಮರಿಗೆ ಸಂಕ್ರಮಿಸಿದ್ದೆಂದೂ ಹೇಳುತ್ತಿದ್ದರು. ಈ ಮಾತುಕತೆಯನ್ನು ಆಲಿಸಿ ಆಕರ್ಷಿಸಲ್ಪಟ್ಟ ಮಡಿಕೇರಿಯ ಜನಾಬ್ ಜಿ. ಎಸ್. ಅಹ್ಮದ್ ಸಾಹೇಬರು ಮುಹ್ಯಿದ್ದೀನ್ ಸಾಹೇಬರ ಪರಿಚಯ ಮಾಡಿಕೊಂಡು ಅಹ್ಮದಿಯತ್‌ನ ಬಗ್ಗೆ ಚರ್ಚೆ ಮಾಡಿದರು. ಜಿ. ಎಸ್. ಅಹ್ಮದ್ ಸಾಹೇಬರ ಮಿತ್ರರಾದ ಪಿ. ಅಹ್ಮದ್ ಅಲೀ ಸಾಹೇಬ್ ಮತ್ತು ಬಿ. ಎಚ್. ಇಸ್ಮಾಈಲ್ ಸಾಹೇಬರು ಸಹ ಮುಂದುವರಿದ ಚರ್ಚೆಯಲ್ಲಿ ಪಾಲ್ಗೊಂಡರು. ಕ್ರಮೇಣ ಅವರಿಗೆ ಅಹ್ಮದಿಯತ್ ಸತ್ಯವೆಂದು ಮನವರಿಕೆಯಾಯಿತು.

1951ರಲ್ಲಿ ಕೇರಳ ಅಹ್ಮದಿಯಾ ಸಮ್ಮೇಳನದಲ್ಲಿ ಭಾಗವಹಿಸಲು ಕಲ್ಲಿಕೋಟೆಗೆ ಈ ಮೂವರೂ ಹೋಗಿದ್ದಾಗ ಜನಾಬ್ ಮೌಲಾನಾ ಬಿ. ಅಬ್ದುಲ್ಲಾಹ್ ಸಾಹೇಬ್ ಎಚ್. ಎ. ಅವರ ಸಾನ್ನಿಧ್ಯದಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದರು.

ಕಲ್ಲಿಕೋಟೆಯಿಂದ ಊರಿಗೆ ಮರಳಿದ ಇವರು ಅಹ್ಮದಿಯಾ ಪ್ರಚಾರಕ್ಕೆ ಇಳಿದಾಗ ಮಡಿಕೇರಿಯಲ್ಲಿ ಅಹ್ಮದಿಯತ್‌ನ ಬಗ್ಗೆ ಚರ್ಚೆ ಬಿಸಿಯೇರಿತು. ಕೊನೆಗೆ, ಅಹ್ಮದೀ ಮತ್ತು ಅಹ್ಮದಿಯೇತರ ಮತ ಪಂಡಿತರೊಳಗೆ ಒಂದು ವಾದ-ಪ್ರತಿವಾದವನ್ನು ನಡೆಸಲು ತೀರ್ಮಾನವಾಯಿತು. ಕೇರಳದ ಪ್ರಸಿದ್ಧ ಮತಪಂಡಿತರುಗಳಾದ ಪದಿ ಅಬ್ದುಲ್ ಖಾದಿರ್ ಮುಸ್ಲಿಯಾರ್ ಮತ್ತು ಇ. ಕೆ. ಅಬೂಬಕರ್ ಮುಸ್ಲಿಯಾರ್ ಕಿತಾಬ್‌ಗಳಿಂದ ತುಂಬಿದ ವ್ಯಾನ್ ಸಹಿತ ಅಹ್ಮದಿಯಾ ವಿರುದ್ಧವಾಗಿ ವಾದಿಸಲು ಮಡಿಕೇರಿಗೆ ಬಂದು ತಲುಪಿದರು. ಅಹ್ಮದಿಯಾ ಜಮಾಅತಿನ ಪರವಾಗಿ ವಾದಿಸಲು ಮೌಲಾನಾ ಬಿ. ಅಬ್ದುಲ್ಲಾಹ್ ಸಾಹೇಬ್ ಎಚ್. ಎ. ಅವರು ಆಗಮಿಸಿದರು. ಮೌಲ್ವಿ ಅಬುಲ್ ವಫಾ ಸಾಹೇಬ್ ಮತ್ತು ಮೌಲ್ವಿ ಅಹ್ಮದ್ ರಶೀದ್ ಸಾಹೇಬರು ಅವರ ಜೊತೆಗಿದ್ದರು.

1951 ಮೇ 28 ಮತ್ತು 29ರಂದು ಮಡಿಕೇರಿಯ ಸುನ್ನಿ ಮಸೀದಿಯೊಳಗೆ ವಾದ-ಪ್ರತಿವಾದ

ಆರಂಭವಾಯಿತು. ಈಸಾನಬಿ (ಅ) ಆಕಾಶದಲ್ಲಿ ಜೀವಂತವಾಗಿದ್ದಾರೆಂದು ಇ. ಕೆ. ಅಬೂಬಕರ್ ಮುಸ್ಲಿಯಾರ್ ಮತ್ತು ಪದಿ ಅಬ್ದುಲ್ ಖಾದಿರ್ ಮುಸ್ಲಿಯಾರ್ ವಾದಿಸಿದಾಗ, ಮೌಲಾನಾ ಅಬ್ದುಲ್ಲಾಹ್ ಸಾಹೇಬರು ಅದನ್ನು ಖಂಡಿಸಿ, ಈಸಾನಬಿ (ಅ) ಮೃತಪಟ್ಟಿರುವರೆಂದು ಖುರ್‌ಆನಿನ ಆಧಾರದಲ್ಲಿ ಸಮರ್ಥಿಸಿದರು. ಮಡಿಕೇರಿಯ ಗಣ್ಯ ವ್ಯಕ್ತಿಯಾದ ಖಾನ್ ಬಹದೂರ್ ಅಬ್ದುಲ್ ರಹ್ಮಾನ್ ಖಾನ್ ಸಾಹೇಬರು ವಾದ-ಪ್ರತಿವಾದದ ನಿಯಂತ್ರಕರಾಗಿದ್ದರು. ಅಹ್ಮದಿಯಾ ವಿರೋಧಿಗಳೇ ಬಹು ಸಂಖ್ಯೆಯಲ್ಲಿ ನೆರೆದಿದ್ದ ಈ ಸಭೆಯಲ್ಲಿ ಅಸಾಮಾನ್ಯ ಧೀರತೆಯಿಂದ ಮಾತಾನಾಡುತ್ತಿದ್ದ ಮೌಲಾನಾ ಅಬ್ದುಲ್ಲಾಹ್ ಸಾಹೇಬರ ಮೇಲೆ ಹಲ್ಲೆ ಮಾಡಲು ಪ್ರಯತ್ನ ನಡೆದಾಗ ಜನಾಬ್ ಪಿ. ಅಹ್ಮದ್ ಅಲೀ ಸಾಹೇಬರು ತೋರಿಸಿದ ಅಸಾಧಾರಣ ಶೌರ್ಯ ಸ್ಮರಣೀಯ. ಆ ಸಂದರ್ಭದಲ್ಲಿ ಖಾನ್ ಬಹದೂರ್ ಸಾಹೇಬರು ತನ್ನ ಕಾರಿನಲ್ಲಿ ಮೌಲಾನಾ ಅಬ್ದುಲ್ಲಾಹ್ ಸಾಹೇಬರನ್ನು ಸುರಕ್ಷಿತ ಸ್ಥಳಕ್ಕೆ ತಲಪಿಸಬೇಕಾಯಿತು. ಎರಡು ದಿನಗಳ ಕಾರ್ಯಕ್ರಮದ ಬಳಿಕ ಖಾನ್ ಬಹದೂರ್ ಸಾಹೇಬರಿಗೆ ಪರವೂರಿಗೆ ಹೋಗಲಿಕ್ಕಿದ್ದ ಕಾರಣ ವಾದ-ಪ್ರತಿವಾದವನ್ನು ಮತ್ತೂ ಮುಂದುವರಿಸಲು ಸಾಧ್ಯವಾಗಲಿಲ್ಲ.

ವಾದ-ಪ್ರತಿವಾದ ಮುಗಿದಂದೇ ರಾತ್ರಿ ಜಿ. ಕೆ. ಫಕ್ರುದ್ದೀನ್ ಸಾಹೇಬ್, ಜಿ. ಕೋಯ ಹಸನ್ ಸಾಹೇಬ್, ಜಿ. ಹಸನ್ ಅಬ್ಬಾಸ್ ಸಾಹೇಬ್, ಬಿ. ಫಕ್ರುದ್ದೀನ್ ಸಾಹೇಬ್, ಬಿ. ಎಚ್. ಮುಹಮ್ಮದ್ ಸಾಹೇಬ್ ಮೊದಲಾದವರು ಅಹ್ಮದಿಯಾ ಜಮಾಅತಿಗೆ ಸೇರಿದರು. ಮಡಿಕೇರಿಯಲ್ಲಿ ಹೊಸ ಜಮಾಅತ್ ರೂಪುಗೊಂಡಿತು. ಜನಾಬ್ ಜಿ. ಕೆ. ಫಕ್ರುದ್ದೀನ್ ಸಾಹೇಬರು ಪ್ರೆಸಿಡೆಂಟಾಗಿ ಆಯ್ಕೆಯಾದರು. ಸ್ವಲ್ಪ ಕಾಲದ ನಂತರ ಮಿಶನ್ ಹೌಸ್ ಸಹ ಸ್ಥಾಪಿತವಾಯಿತು.

1955ರಲ್ಲಿ ದಫನ ಭೂಮಿಯ ಸಮಸ್ಯೆ ಎದುರಾಯಿತು. ಜಿ. ಹಸನ್ ಅಬ್ಬಾಸ್ ಸಾಹೇಬರು ಮರಣ ಶಯ್ಯೆಯಲ್ಲಿದ್ದಾರೆಂದು ತಿಳಿದ ಅಹ್ಮದಿಯೇತರ ಮುಸ್ಲಿಮರು, ತಾವು ಅಹ್ಮದೀಯರಿಗೆ ಕಬರಸ್ಥಾನವನ್ನು ನೀಡಲಾರೆವೆಂದು ಪೋಲಿಸ್ ಅಧಿಕಾರಿಗಳಿಗೆ ತಿಳಿಸಿದರು. ಈ ಬಗ್ಗೆ ಸಂಭಾಷಣೆ ನಡೆಸಲು ಜಿಲ್ಲಾಧಿಕಾರಿ ಐ. ಸಿ. ಸುಬ್ಬಯ್ಯನವರು ಅಹ್ಮದಿ-ಅಹ್ಮದಿಯೇತರ ಪ್ರತಿನಿಧಿಗಳನ್ನು ಕರೆದರು. ಅಹ್ಮದೀಯರ ಕೇಳಿಕೆಯ ಮೇರೆಗೆ ಪ್ರತ್ಯೇಕ ದಫನ ಭೂಮಿಯನ್ನು ನೀಡಲು ಜಿಲ್ಲಾಧಿಕಾರಿಯವರು ಒಪ್ಪಿದರು. ಅಹ್ಮದೀಯರಿಗೆ ಯಾವ ರೀತಿಯಲ್ಲೂ ಕಬರಸ್ಥಾನ ಸಿಗದಂತಾಗಲು ಅಹ್ಮದಿಯೇತರ ಮುಸ್ಲಿಮರು ಬಹಳವಾಗಿ ಶ್ರಮಿಸಿದ್ದರು. ಅಹ್ಮದಿಯಾ ಪ್ರತಿನಿಧಿಯಾಗಿ ಜಿಲ್ಲಾಧಿಕಾರಿಯವರೊಡನೆ ಮಾತನಾಡಿ ಅಹ್ಮದೀಯರಿಗೆ ದಫನ ಭೂಮಿಯನ್ನು ದೊರಕಿಸಿಕೊಟ್ಟ ಜನಾಬ್ ಜಿ. ಎಸ್. ಅಹ್ಮದ್ ಸಾಹೇಬರ ಸಾಧನೆ ಶ್ಲಾಘನೀಯ.



ಜ| ಯು. ಎಂ. ಎ. ಮುಹ್ಯಿದ್ದೀನ್ ಸಾಹೇಬ್

1973ರಲ್ಲಿ ಮಡಿಕೇರಿಯಲ್ಲಿ ಕೇರಳ-ಕರ್ನಾಟಕ ಅಂತಾರ್‍ರಾಜ್ಯ ಸಮ್ಮೇಳನ ಜರಗಿತು. ಅದರ ಅಂಗವಾಗಿ "ಎಕ್ಸಿಬಿಷನ್ ಅಹ್ಮದಿಯಾ ಇಂಟರ್ ನ್ಯಾಶನಲ್" ಅನ್ನು ಸಹ ಏರ್ಪಡಿಸಲಾಗಿತ್ತು.

ಜನಾಬ್ ಪಿ. ಅಹ್ಮದ್ ಅಲೀ ಸಾಹೇಬರು ಮಡಿಕೇರಿ ಜಮಾಅತಿನ ವೈಸ್ ಪ್ರೆಸಿಡೆಂಟ್ ಮತ್ತು ಸೆಕ್ರೆಟರಿ ಮಾಲ್ ಆಗಿ ಸೇವೆ ಸಲ್ಲಿಸಿದ್ದಾರೆ. ಜನಾಬ್ ಬಿ. ಎಚ್. ಇಸ್ಮಾಈಲ್ ಸಾಹೇಬರು ಪ್ರೆಸಿಡೆಂಟಾಗಿ ದೀರ್ಘ ಕಾಲ ಸೇವೆ ಮಾಡಿದ್ದರು. ಜ| ಜಿ. ಎಸ್. ಅಹ್ಮದ್ ಸಾಹೇಬ್, ಜ| ಪಿ. ಕೆ. ಉಮರ್ ಸಾಹೇಬ್ ಮತ್ತು ಜ| ಬಿ. ಶೇಕಾಲಿ ಸಾಹೇಬ್ ವಿವಿಧ ಕಾಲಗಳಲ್ಲಿ ಪ್ರೆಸಿಡೆಂಟರಾಗಿ ಸೇವೆಗೈಯ್ದಿದ್ದಾರೆ. ಜ| ತಮೀಮ್ ಅಬ್ಬಾಸ್ ಸಾಹೇಬ್ ಈಗಿನ ಪ್ರೆಸಿಡೆಂಟ್ ಆಗಿದ್ದಾರೆ.

—ಬಶೀರ್ ಅಹ್ಮದ್ ಸಿದ್ದೀಖ್
ಪ್ರೆಸಿಡೆಂಟ್, ಜಮಾಅತ್ ಅಹ್ಮದಿಯಾ ಮೊಗ್ರಾಲ್

## ಶತವಾರ್ಷಿಕ ಜ್ಯೂಬಿಲಿ ಆಚರಿಸುತ್ತಿರುವ

# ಅಹ್ಮದಿಯಾ ಮುಸ್ಲಿಂ ಸಂಘಟನೆ



ಎಂ. ಪಿ. ಇಬ್ರಾಹಿಂ ಮಂಗಳೂರು.

ಒಂದು ಶತಮಾನದಿಂದೀಚೆಗೆ ಮುಸ್ಲಿಂ ವಿಚಾರ ಧಾರೆಯಲ್ಲಿ ಸರ್ವಾಂಗೀಣವಾದ ಒಂದು ಉತ್ಥಾನವು ಗೋಚರವಾಗತೊಡಗಿದೆ. ಭಾರತದ ಖಾದಿಯಾನ್ ಎಂಬ ಒಂದು ಗ್ರಾಮದಿಂದ ಹೊರಟ ಈ ಧಾರ್ಮಿಕ ಕಹಳೆಯು ಕಾಲಕ್ರಮೇಣ ಲೋಕದಲ್ಲೆಲ್ಲಾ ಪಸರಿಸಿ ಇದೀಗ ಒಂದು ಶತಮಾನ ಪೂರ್ಣಗೊಳ್ಳುತ್ತಿರುವ ವೇಳೆಯಲ್ಲಿ ತನ್ನ ಮೇಲೆ ಸೂರ್ಯನು ಅಸ್ತಮಿಸುವುದಿಲ್ಲವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅದೇ ಇಸ್ಲಾಂ ಧರ್ಮದ ಒಂದು ಪುನರುತ್ಥಾನ ಚಳವಳಿಯಾದ ಅಹ್ಮದಿಯಾ ಮುಸ್ಲಿಂ ಜಮಾಅತ್ ಆಗಿದೆ. ಭಾರತದ ಪಂಜಾಬ್ ಪ್ರಾಂತ್ಯದ ಒಂದು ಗ್ರಾಮವಾಗಿದ್ದ ಖಾದಿಯಾನ್ ಎಂಬಲ್ಲಿ ಜನ್ಮವೆತ್ತಿದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಎಂಬವರಿಂದ ಒಂದು ನೂರು ವರ್ಷಗಳ ಹಿಂದೆ ಅಂದರೆ 1889ನೇ ಇಸವಿ ಮಾರ್ಚ್ 23ರಂದು ಈ ಸಂಘಟನೆಯ ಸ್ಥಾಪನೆಯಾಯಿತು.

ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಅವರು ಅರಬ್ ಜನಸಮುದಾಯದೆಡೆಯಲ್ಲಿ ಜನ್ಮವೆತ್ತಿದ ಪ್ರಕಾರವೇ "ಇನ್ನೂ ಅವರೊಂದಿಗೆ ಸೇರಿಲ್ಲದ ಮತ್ತೊಂದು ಜನರೆಡೆಯಲ್ಲಿ ಸಹ" ಅವರು ಅವತೀರ್ಣರಾಗಲಿರುವರು ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ (62 : 3-4). ಧಾರ್ಮಿಕ ಸಾಂಕೇತಿಕ ಪ್ರಯೋಗ ಶೈಲಿಯಂತೆ ಒಬ್ಬರೇ ಮಹಾತ್ಮರು ಮತ್ತೊಮ್ಮೆ ಈ ಲೋಕಕ್ಕೆ ಬರಲಿರುವರೆಂಬುದರ ತಾತ್ಪರ್ಯವು, ಅವರಂತೆ ಆಧ್ಯಾತ್ಮಿಕ ಚೈತನ್ಯವನ್ನು ಹೊಂದಿದ ಮತ್ತೊಬ್ಬ ಮಹಾಪುರುಷನ ಆಗಮನವಾಗಿದೆ. ತನ್ನ ನಂತರ ಧಾರ್ಮಿಕ ಪುನರುತ್ಥಾನಕ್ಕಾಗಿ ಆಗಮಿಸಲಿರುವ ಈ ಮಹಾತ್ಮರನ್ನು "ಮಹ್‌ದಿ" ಎಂದೂ "ಮಸೀಹ್" ಎಂದೂ "ಇಬ್ನು ಮರ್‌ಯಂ" ಎಂದೂ ಹಲವಾರು ಗುಣನಾಮಗಳಿಂದ ಹ। ಪೈಗಂಬರರು ಹೆಸರಿಸಿದ್ದಾರೆ. ಬರಲಿರುವ ಈ ಮಹಾಪುರುಷನ ಆಗಮನವು ಪೈಗಂಬರರ ನಂತರ ಹಿಜರಿ ಶಕ 14ನೇ ಶತಮಾನದಲ್ಲುಂಟಾಗುವುದು ಎಂದು ಸಹ ಪವಿತ್ರ ಖುರ್‌ಆನ್ ಹಾಗೂ ಪೈಗಂಬರರ ವಚನಗಳಿಂದ ಸಾಬೀತಾಗುತ್ತದೆ.

ಹಝ್ರತ್ ಮುಹಮ್ಮದ್ ಪೈಗಂಬರರು ಮತ್ತೊಮ್ಮೆ ಈ ಲೋಕದಲ್ಲಿ ಜನ್ಮವೆತ್ತಲಿರುವರು ಎಂದು ಖುರ್‌ಆನ್ ಹೇಳುವಂತೆ ಮಹಾತ್ಮ ಯೇಸು ಕ್ರಿಸ್ತರು ಸಹ ಈ ಲೋಕಕ್ಕೆ ಮತ್ತೊಮ್ಮೆ ಬರಲಿರುವರೆಂಬ ವಿಶ್ವಾಸವು ಕ್ರೈಸ್ತ ಧರ್ಮದವರೆಡೆಯಲ್ಲಿ ಪ್ರಚಲಿತವಾಗಿದೆ. ಅಂತೆಯೇ "ಧರ್ಮದ ಸಂಸ್ಥಾಪನೆಗಾಗಿ ನಾನು ಪ್ರತಿಯುಗದಲ್ಲಿಯೂ ಅವತರಿಸುತ್ತೇನೆ" ಎಂದು ಭಗವದ್ಗೀತೆಯಲ್ಲಿ ಮಹಾತ್ಮ ಶ್ರೀಕೃಷ್ಣ ವಾಗ್ದಾನ ಮಾಡಿರುವುದನ್ನು ಸಹ ನಾವು ಕಾಣುತ್ತೇವೆ (ಅ 4 : ಶ್ಲೋ 7-8). ಇದೇ ರೀತಿಯಲ್ಲಿ ಪ್ರತಿಯೊಂದು ಮತಗ್ರಂಥದಲ್ಲಿಯೂ ಓರ್ವ ಮತ ಸುಧಾರಕನ ಆಗಮನದ ಕುರಿತು ಪ್ರಸ್ತಾಪವಿರುವುದನ್ನು ಕಾಣಬಹುದು. ಎಲ್ಲಾ ಧರ್ಮಗಳೂ ಧರ್ಮಗ್ರಂಥಗಳೂ ಈ ಸಂಗತಿಯನ್ನು ಏಕರೀತಿಯಲ್ಲಿ ಪ್ರತಿಪಾದಿಸುತ್ತವೆ.

### ಯುಗ ಪುರುಷನ ಅವತಾರ

ಸಮಸ್ತ ಧರ್ಮಗ್ರಂಥಗಳಲ್ಲೂ ಭವಿಷ್ಯ ನುಡಿಯಲ್ಪಟ್ಟ ಮತ ಸುಧಾರಕನಾಗಿ ಹ। ಮಿರ್ಝಾ ಗುಲಾಂ ಅಹ್ಮದ್ ಅವರು 1835ರಲ್ಲಿ ಖಾದಿಯಾನ್‌ನಲ್ಲಿ ಜನ್ಮವೆತ್ತಿದರು. ಅವರು ಪರ್ಶಿಯನ್ ಪಾರಂಪರ್ಯದ

ಮೊಗಲ ವಂಶಕ್ಕೆ ಸೇರಿದವರಾಗಿದ್ದರು. ಜನನ ಮೊದಲ್ಗೊಂಡು ಮರಣದ ವರೆಗೂ ಅವರ ಜೀವನವು ದೇವರ ವಿಶೇಷ ಗುಣಗಳನ್ನು ಪ್ರತಿಬಿಂಬಿಸುವಂಥದ್ದೂ ದೇವರ ಮಹಿಮೆಯನ್ನೂ ಪ್ರತಾಪವನ್ನೂ ಪ್ರಕಟಿಸುವಂಥದ್ದೂ ಆಗಿತ್ತು. ಭೌತಿಕ ವಿಷಯಗಳಲ್ಲಿ ತೀರಾ ವಿರಕ್ತನಾಗಿದ್ದ ಅವರು ಯಾವಾಗಲೂ ಪಾರಮಾರ್ಥಿಕ ಕಾರ್ಯಗಳ ಕುರಿತು ಚಿಂತಾಮಗ್ನರೂ ದೇವರ ಧ್ಯಾನದಲ್ಲೂ ಪ್ರಾರ್ಥನೆಯಲ್ಲೂ ತಲ್ಲೀನರೂ ಆಗಿರುತ್ತಿದ್ದರು. 40 ವರ್ಷ ಪ್ರಾಯವಾದಾಗ ಅವರಿಗೆ ದೇವರಿಂದ ದಿವ್ಯವಾಣಿ ಲಭಿಸಲಾರಂಭವಾಯಿತು. ಅದರೊಂದಿಗೆ ಅವರ ಆಧ್ಯಾತ್ಮಿಕ ಅಂತಸ್ತು ಪೂರ್ವೋಪರ ಅಭಿವೃದ್ಧಿಗೊಂಡಿತು. ಬ್ರಹ್ಮಾಂಡದ ಅನೇಕ ರಹಸ್ಯಗಳನ್ನು ದೇವನು ಅವರಿಗೆ ಪ್ರಕಟಗೊಳಿಸಿದನು. 1880ರಲ್ಲಿ 'ಬರಾಹಿನೆ ಅಹ್ಮದಿಯಾ' ಎಂಬ ವಿಖ್ಯಾತ ಗ್ರಂಥವನ್ನು ರಚಿಸುವುದರೊಂದಿಗೆ ಅವರು ಹೊರಜಗತ್ತಿಗೆ ತಿಳಿಯಲ್ಪಟ್ಟರು. 1889ರಲ್ಲಿ ಅವರು ದೇವ ನಿರ್ದೇಶ ಪ್ರಕಾರ "ಅಹ್ಮದಿಯಾ ಜಮಾಅತ್" ಎಂಬ ಸಂಘಟನೆಯನ್ನು ಸ್ಥಾಪಿಸಿ ತನ್ನ ಅನುಯಾಯಿಗಳಿಂದ ಅನುಸರಣೆಯ ವಾಗ್ದಾನ (ಬೈಅತ್) ಪಡೆಯಲು ತೊಡಗಿದರು. ಈ ಸಂಘಟನೆಗೆ ಸೇರಿದವರನ್ನು ಅಹ್ಮದೀ ಮುಸ್ಲಿಮರು ಎಂದು ಕರೆಯಲಾಗುತ್ತದೆ. ಈ ಸಂಘಟನೆಯ ಬಗ್ಗೆ ಅರಿವಿಲ್ಲದ ಕೆಲವರು ಇದನ್ನು "ಖಾದಿಯಾನಿಸಂ" ಎಂಬುದಾಗಿಯೂ ಅಹ್ಮದೀ ಮುಸ್ಲಿಮರನ್ನು "ಖಾದಿಯಾನಿಗಳು" ಎಂಬುದಾಗಿಯೂ ಅಡ್ಡ ಹೆಸರಿನಿಂದ ಕರೆಯುವುದಿದೆ. ಆದರೆ ನಿಜವಾದ ಹೆಸರು "ಅಹ್ಮದಿಯಾ ಜಮಾಅತ್" ಮತ್ತು "ಅಹ್ಮದೀ ಮುಸ್ಲಿಮರು" ಎಂದಾಗಿದೆ.

ದೇವರಿಂದ ತನಗೆ ದಿವ್ಯವಾಣಿ ಲಭಿಸುತ್ತಿದೆಯೆಂದೂ ಧಾರ್ಮಿಕ ಅಂಧಕಾರದಲ್ಲಿ ಮುಳುಗಿರುವ ಲೋಕದ ಜನರ ಆಧ್ಯಾತ್ಮಿಕ ಪುನರುತ್ಥಾನಕ್ಕಾಗಿ ತಾನು ದೇವರಿಂದ ನಿಯೋಜಿಸಲ್ಪಟ್ಟಿರುವೆನೆಂದೂ ಅವರು ವಾದಿಸಿದರು. ತಾನು ಮುಸ್ಲಿಮರಿಗೆ "ಇಮಾಂ ಮಹ್‌ದಿ" ಕ್ರೈಸ್ತರಿಗೆ "ಮಸೀಹಾ", ಹಿಂದೂಗಳಿಗೆ "ಕಲ್ಕಿ", ಝೊರಾಸ್ಟರ್ ಮತದವರಿಗೆ "ಮಿಸಿಯೋ ದರ್ಬಮಿ", ಬೌದ್ಧ ಮತದವರಿಗೆ "ಮೈತ್ರೇಯಾ" ಆಗಿ ಅವತರಿಸಿರುವನೆಂದು ಹ। ಮಿರ್ಝಾ ಗುಲಾಂ ಅಹ್ಮದ್ ಅವರು ಸಾಕ್ಷ್ಯಾಧಾರಗಳ ಸಮೇತ ವಾದಿಸಿದರು. ಧಾರ್ಮಿಕವಾಗಿಯೂ ನೈತಿಕವಾಗಿಯೂ ಅತ್ಯಂತ ಅಧಃಪತನಗೊಳ್ಳುವ ಒಂದು ಕಾಲದ ಕುರಿತು ಪ್ರಪಂಚದ ಎಲ್ಲಾ ಧರ್ಮಗ್ರಂಥಗಳಲ್ಲೂ ಉಲ್ಲೇಖವಿದ್ದು ಆ ಕಾಲದಲ್ಲಿ ಓರ್ವ ಧರ್ಮೋದ್ಧಾರಕನ ಆಗಮನದ ಕುರಿತು ಸಹ ಎಲ್ಲಾ ಧರ್ಮಗ್ರಂಥಗಳಲ್ಲೂ ಪ್ರತಿಪಾದಿಸಲಾಗಿದೆ. ಧಾರ್ಮಿಕ ಅಂಧಕಾರದ ಆ ಕಾಲವು ಇದೇ ಆಗಿದ್ದು ಎಲ್ಲಾ ಧರ್ಮಗ್ರಂಥಗಳಲ್ಲೂ ಭವಿಷ್ಯ ನುಡಿಯಲಾದ ಧರ್ಮೋದ್ಧಾರಕನಾಗಿ ತಾನು ಅವತರಿಸಿರುವೆನೆಂದೂ ಅವರು ಘೋಷಿಸಿದರು. ಅವರು ತನ್ನ ಆಗಮನೋದ್ದೇಶವನ್ನು ಈ ರೀತಿ ವಿವರಿಸುತ್ತಾರೆ:

"ಮಾನವ ಮತ್ತು ಅವನ ಸೃಷ್ಟಿಕರ್ತನ ಮಧ್ಯೆ ತಲೆಯೆತ್ತಿರುವ ಪ್ರತಿಬಂಧಗಳನ್ನು ತೊಡೆದು ಹಾಕಿ ಮನುಷ್ಯಹೃದಯಗಳಲ್ಲಿ ದೈವಾನುರಾಗವನ್ನೂ ದೇವಭಕ್ತಿಯನ್ನೂ ಪುನಸ್ಥಾಪಿಸಲು ಹಾಗೂ ಪಾರಮಾರ್ಥಿಕ ಸತ್ಯದ ಮುಖವನ್ನು ಅನಾವರಣಗೊಳಿಸುವುದರ ಮೂಲಕ ಧರ್ಮಯುದ್ಧಗಳನ್ನೂ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಕಲಹಗಳನ್ನೂ ಸಮಾಪ್ತಿಗೊಳಿಸಿ ಆ ಮೂಲಕ ಲೋಕದಲ್ಲಿ ಶಾಶ್ವತ ಶಾಂತಿಯನ್ನು ಸ್ಥಾಪನೆ ಮಾಡಲು ಪರಮಾತ್ಮನು ನನ್ನನ್ನು ಕಳುಹಿಸಿರುತ್ತಾನೆ. ಲೋಕದ ದೃಷ್ಟಿಯಿಂದ ಸಂಪೂರ್ಣ ಅದೃಶ್ಯವಾಗಿ ಹೋಗಿರುವ ಆಧ್ಯಾತ್ಮಿಕ ಸತ್ಯಗಳನ್ನು ಪುನರ್ ಪ್ರತಿಷ್ಠಾಪನೆ ಮಾಡಿ ಜನರಲ್ಲಿ ಲೌಕಿಕ ವ್ಯಾಮೋಹಗಳ ಬದಲು ಪಾರಮಾರ್ಥಿಕ ಜೀವಿತದ ಬಗ್ಗೆ ಆಸಕ್ತಿ ಹುಟ್ಟಿಸಲಿಕ್ಕೂ ನಾನು ಬಂದಿರುವೆನು. ದೇವಭಕ್ತಿಯ ಮೂಲಕ ಮಾತ್ರ ಪ್ರಕಟಗೊಳ್ಳುವ ದಿವ್ಯ ಅದ್ಭುತಗಳನ್ನು ದೇವನು ಮನುಷ್ಯನಿಗೆ ಕರುಣಿಸಿದ್ದನು. ಆದರೆ, ಕಾಲಾಂತರದಲ್ಲಿ ಮನುಷ್ಯನು ದೇವನನ್ನು ಮರೆತು ತನ್ನ ದೇಹೇಚ್ಛೆಗಳನ್ನು ಮಾತ್ರ ಅನುಗಮಿಸಲು ತೊಡಗಿದಾಗ ಆ ದಿವ್ಯ ಚೇತನವೇ ಲೋಕದಲ್ಲಿ ಇಲ್ಲದಾಯಿತು. ಇದೀಗ ನನ್ನ ಮೂಲಕ ದೇವನು ತನ್ನ ದಿವ್ಯ ಅದ್ಭುತ ದೃಷ್ಟಾಂತಗಳನ್ನು ಲೋಕದಲ್ಲಿ ಪ್ರಕಟಪಡಿಸಲಿದ್ದಾನೆ. ಏಕದೇವನ ಆರಾಧನೆಯನ್ನು ಪ್ರಬೋಧಿಸಲಿಕ್ಕೂ ಇತರ ಎಲ್ಲಾ ತರಹದ ಬಹುದೇವಾರಾಧನೆಯಿಂದ ಮನುಷ್ಯನನ್ನು ತಡೆಯಲಿಕ್ಕೂ ನನ್ನನ್ನು ದೇವರು ಕಳುಹಿಸಿರುವನು."

ಮುಸಲ್ಮಾನರಿಗೆ ವಾಗ್ದಾನ ಮಾಡಲ್ಪಟ್ಟಿರುವ ವಾಗ್ದತ್ತ ಮಸೀಹಾ ಮತ್ತು ಮಹ್‌ದಿ ತಾನಾಗಿರುವೆನೆಂದು ವಾದಿಸಿದ ಅವರು ಮುಸ್ಲಿಮರೆಡೆಯಲ್ಲಿ ಪ್ರಚಲಿತವಾಗಿರುವ ಅಂಧವಿಶ್ವಾಸಗಳನ್ನೂ ಅನಾಚಾರಗಳನ್ನೂ

ತೊಡೆದು ನೀಗಿಸಿ ಯಥಾರ್ಥ ಇಸ್ಲಾಂ ಧರ್ಮದ ಬೋಧನೆಗಳ ಕಡೆಗೆ ಜನರನ್ನು ಆಮಂತ್ರಿಸುವುದು ತನ್ನ ಪೌತ್ಯೋದ್ದೇಶವೆಂದು ಹೇಳಿದರು. ಸುಮಾರು 2000 ವರ್ಷಗಳ ಮೊದಲು ಇಸ್ರಾಯೇಲ್ ಸಂತತಿಗಳೆಡೆಗೆ ದಿವ್ಯ ಸಂದೇಶವಾಹಕರಾಗಿ ನಿಯೋಜಿಸಲ್ಪಟ್ಟಿದ್ದ ಪ್ರವಾದಿ ಈಸಾ (ಅ) ಮೃತರಾಗದೆ ಇಂದಿಗೂ ಆಕಾಶದಲ್ಲಿ ಜೀವಂತ ಇರುವರೆಂದೂ ಅಂತ್ಯಕಾಲದಲ್ಲಿ (ಅಂದರೆ ಈ ಕಾಲದಲ್ಲಿ) ಲೋಕದ ಉದ್ಧಾರಕ್ಕಾಗಿ ಅದೇ ಈಸಾ ಪ್ರವಾದಿ ಆಕಾಶದಿಂದ ಇಳಿದು ಬರುವರೆಂದೂ ಮುಸ್ಲಿಮರೆಡೆಯಲ್ಲಿ ಪ್ರಚಲಿತವಾಗಿರುವ ತಪ್ಪು ವಿಶ್ವಾಸವನ್ನು ಪವಿತ್ರ ಖುರ್‌ಆನಿನ ಸಾಕ್ಷ್ಯಾಧಾರಗಳ ಮೂಲಕ ಅವರು ಖಂಡಿಸಿದರು. ಇತರ ಎಲ್ಲಾ ಪ್ರವಾದಿಗಳಂತೆಯೇ ಹ। ಈಸಾ ಪ್ರವಾದಿಯವರು ಸಹ ತನ್ನ ಕರ್ತವ್ಯ ನಿರ್ವಹಣೆಯ ನಂತರ ಮರಣ ಹೊಂದಿರುವರೆಂದೂ ಅವರು ಇನ್ನು ಎಂದೂ ಈ ಲೋಕಕ್ಕೆ ಬರಲಾರರೆಂದೂ ಧರ್ಮಗ್ರಂಥಗಳ ಆಧಾರದಿಂದ ಅವರು ನಿರೂಪಿಸಿದರು. ಮುಸ್ಲಿಮರಿಗೆ ವಾಗ್ದಾನ ಮಾಡಲ್ಪಟ್ಟಿರುವ "ವಾಗ್ದತ್ತ ಮಸೀಹಾ" ತಾನೇ ಆಗಿರುವೆನೆಂದು ಅವರು ಹೇಳಿದರು. ತನ್ನ ವಾದದ ಸತ್ಯತೆಗೆ ಧಾರ್ಮಿಕ ಗ್ರಂಥಗಳಿಂದ ಪುರಾವೆಗಳನ್ನೂ ದೇವರ ಅದ್ಭುತ ದೃಷ್ಟಾಂತಗಳನ್ನೂ ಅವರು ತೋರ್ಪಡಿಸಿದರು.

ಹ। ಮಿರ್ಝಾ ಗುಲಾಂ ಅಹ್ಮದ್ ಈ ರೀತಿ ವಾದಿಸುತ್ತಲೇ ಅವರ ವಿರುದ್ಧ ಸಾಂಪ್ರದಾಯಿಕ ಮತ ಪಂಡಿತರುಗಳಿಂದ ವಿರೋಧದ ಅಲೆಗಳು ಭುಗಿಲೆದ್ದವು. ಅವರನ್ನೂ ಅವರ ಅನುಚರರನ್ನೂ ಸಂಪ್ರದಾಯವಾದಿ ಮುಸ್ಲಿಮರು ಹಾಗೂ ಇತರ ಧಾರ್ಮಿಕ ಮೂಲಭೂತವಾದಿಗಳು ಬಹಳವಾಗಿ ವಿರೋಧಿಸಿದರು. ಆದರೆ, ಎದುರಾಳಿಗಳ ಎಲ್ಲಾ ತರದ ವಿರೋಧಗಳನ್ನೂ ಅವರು ದೇವ ಸಹಾಯದಿಂದ ಜಯಿಸಿ ತನ್ನ ಸಂಘಟನೆಯನ್ನು ಸುಶಕ್ತಗೊಳಿಸುವಲ್ಲಿ ಯಶಸ್ವಿಯಾದರು. ಅದೇ ವೇಳೆ ಮಾನವ ಸಾಹೋದರ್ಯ, ಕೋಮು ಸೌಹಾರ್ದ, ಧರ್ಮ ಸಾಮರಸ್ಯ, ಪರಮತ ಸಹಿಷ್ಣುತೆ ಮೊದಲಾದ ಉತ್ತಮ ಧಾರ್ಮಿಕ ಗುಣಗಳ ಬಗ್ಗೆ ಅವರು ಜನರಿಗೆ ಬಹಳವಾಗಿ ಉಪದೇಶಿಸಿದ್ದಾರೆ. ಆಧ್ಯಾತ್ಮಿಕ ಜ್ಞಾನ ಭಂಡಾರವಾಗಿರುವ 90 ಅನರ್ಘ್ಯ ಗ್ರಂಥಗಳನ್ನು ಅವರು ರಚಿಸಿದ್ದಾರೆ. ತಾನು ಪ್ರಬೋಧಿಸುವ ಈ ತತ್ವಗಳು ಶೀಘ್ರದಲ್ಲೇ ಲೋಕದಲ್ಲೆಲ್ಲಾ ಪಸರಿಸಿ ಜನಮನ್ನಣೆ ಗಳಿಸಲಿವೆಯೆಂದೂ ಭೂಲೋಕದ ಎಲ್ಲಾ ದೇಶದವರೂ-ಪಾಶ್ಚಾತ್ಯರೂ ಪೌರ್ವಾತ್ಯರೂ ಎಲ್ಲರೂ ಈ ಸಂದೇಶದ ಕಡೆಗೆ ಆಕರ್ಷಿತರಾಗುವರೆಂದು ಸಹ ಅವರು ಭವಿಷ್ಯ ನುಡಿದಿದ್ದಾರೆ.

ಪವಿತ್ರ ಖುರ್‌ಆನಿನ ಪ್ರಬೋಧನೆಗಳನ್ನು ಈ ಕಾಲದ ಆವಶ್ಯಕತೆಗನುಸಾರವಾಗಿ ವಿವರಿಸುತ್ತಾ ಅವರು ಸಮಾಜ ಸುಧಾರಣೆಯ ಅನೇಕ ಮೂಲಭೂತ ತತ್ವಗಳನ್ನು ಲೋಕದ ಮುಂದಿಟ್ಟಿದ್ದಾರೆ. ಕೋಮು ಸೌಹಾರ್ದಕ್ಕಾಗಿ ಭಾರತೀಯರಿಗೆ ವಿಶಿಷ್ಟವಾಗಿ ನೀಡಿದ "ಪೈಗಾಮೆ ಸುಲ್ಹ್" ಎಂಬ ಸಂದೇಶವು (ಕನ್ನಡದಲ್ಲಿ ಈ ಗ್ರಂಥ "ಮೈತ್ರಿ ಸಂದೇಶ"ವೆಂಬ ಹೆಸರಿನಲ್ಲಿ ಪ್ರಕಟವಾಗಿದೆ) ಅತ್ಯಂತ ಮಹತ್ವದ್ದೂ ಆಧುನಿಕ ಭಾರತಕ್ಕೆ ಅತ್ಯಂತ ಉಪಯುಕ್ತವೂ ಆದ ಒಂದು ಕೃತಿಯಾಗಿದೆ. ಪವಿತ್ರ ಖುರ್‌ಆನಿನ ಆಧಾರದಲ್ಲಿ ಅವರು ಬೋಧಿಸಿದ ದಾರ್ಶನಿಕ ಚಿಂತನೆಗಳಲ್ಲಿ ಕೆಲವು ಇವಾಗಿವೆ:

## ಎಲ್ಲಾ ಧರ್ಮಗಳಲ್ಲೂ ಪ್ರವಾದಿ

ಸರ್ವ ಲೋಕಗಳ ಸೃಷ್ಟಿಕರ್ತನೂ ಪಾಲಕ-ಪೋಷಕನೂ ಆಗಿರುವ ದೇವನು ಏಕನೇ ದೇವನೆಂದು ಇಸ್ಲಾಂ ಧರ್ಮವು ಅಸಂದಿಗ್ಧವಾಗಿ ಘೋಷಿಸುತ್ತದೆ. ಅವನ ಸೃಷ್ಟಿಗಳಾಗಿರುವ ಸಮಸ್ತ ಮಾನವ ಜನಾಂಗವು ಅವನ ಸಂಸಾರವಾಗಿರುತ್ತದೆ. ಎಲ್ಲಾ ದೇಶದವರಿಗೂ ಎಲ್ಲಾ ಜನಾಂಗದವರಿಗೂ ಎಲ್ಲಾ ಕಾಲದವರಿಗೂ ಭೌತಿಕವಾದ ಆವಶ್ಯಕತೆಗಳನ್ನು ಪರಮಾತ್ಮನು ಏನೂ ಭೇದ ಭಾವ ತೋರಿಸದೆ ಕರುಣಿಸಿರುತ್ತಾನೆ. ಅದೇ ರೀತಿ ಮಾನವರ ಆಧ್ಯಾತ್ಮಿಕ ಸುಧಾರಣೆಗೆ ಬೇಕಾದ ಏರ್ಪಾಡುಗಳನ್ನು ಸಹ ಆ ದೇವನು ಪ್ರತಿಯೊಂದು ಜನಾಂಗದವರೆಡೆಯಲ್ಲೂ ಉಂಟುಮಾಡಿದ್ದಾನೆಂದು ಹ। ಮಿರ್ಝಾ ಗುಲಾಂ ಅಹ್ಮದ್ ಘೋಷಿಸಿದರು. ಲೋಕದ ವಿವಿಧ ಕಡೆಗಳಲ್ಲಿ ಜನ್ಮತಾಳಿದ ಆಧ್ಯಾತ್ಮಿಕ ಸುಧಾರಕರನ್ನೂ ಋಷಿ, ಮುನಿ, ಅವತಾರ ಪುರುಷರನ್ನೂ ಪ್ರವಾದಿಗಳನ್ನೂ ಸೃಷ್ಟಿಕರ್ತನಾದ ದೇವನ ಸತ್ಯ ಸಂದೇಶವಾಹಕರೆಂದು ನಂಬುವಂತೆ ಅವರು ಬೋಧಿಸಿದರು. ಈ ಉಪದೇಶಗಳ ಆಧಾರದಲ್ಲಿ ಅಹ್ಮದೀ ಮುಸ್ಲಿಮರು ಆರ್ಷ ಭಾರತದಲ್ಲಿ ಜನ್ಮತಾಳಿದ ಮಹಾತ್ಮರುಗಳಾದ ಶ್ರೀಕೃಷ್ಣ, ಶ್ರೀರಾಮಚಂದ್ರ, ಶ್ರೀಬುದ್ಧ ಮೊದಲಾದವರನ್ನೂ, ಮಹಾತ್ಮ ಯೇಸು ಕ್ರಿಸ್ತರು, ಮೋಶೆ, ಝೊರಾಸ್ಟರ್, ಕನ್‌ಫ್ಯೂಷಿಯಸ್

ಮೊದಲಾದವರನ್ನೂ ದೇವರ ಕಡೆಯಿಂದ ಆಗತರಾದ ದಿವ್ಯ ಸಂದೇಶವಾಹಕರೆಂದು ನಂಬಿ ಗೌರವಿಸುತ್ತಾರೆ.

## ಇಸ್ಲಾಂ ಮತ್ತು ಜಿಹಾದ್

ಹ। ಅಹ್ಮದ್ ಅವರು ಬೋಧಿಸಿದ ಮತ್ತೊಂದು ಮಹತ್ತರ ಬೋಧನೆಯೂ ಮತ ಸ್ವಾತಂತ್ರ್ಯದ ಕುರಿತಾಗಿತ್ತು. ಮೂಲಭೂತವಾಗಿ ಹೇಳುವುದಾದರೆ, ಪ್ರತಿಯೊಂದು ಧರ್ಮವೂ ಮಿಶನರಿ ಸ್ವಭಾವದಿಂದ ಕೂಡಿದ್ದಾಗಿದೆ. ಧರ್ಮವು ಓರ್ವ ವ್ಯಕ್ತಿಯಿಂದ ಉದ್ಭವಗೊಂಡು ಅದರ ಸತ್ಯವನ್ನೂ ಅದು ಪ್ರತಿಪಾದಿಸುವ ಮೌಲ್ಯಗಳ ಒಳಿತಿನ ಬಗ್ಗೆಯೂ ಇತರರಿಗೆ ಪ್ರಬೋಧಿಸುತ್ತದೆ. ಪಾರಮಾರ್ಥಿಕ ಸತ್ಯಗಳ ಕಡೆಗೆ ಜನರನ್ನು ಆಮಂತ್ರಿಸುತ್ತದೆ. ಆದುದರಿಂದ, ಧರ್ಮ ಬದಲಾವಣೆಯ ಅಥವಾ ಮತಾಂತರದ ಸ್ವಾತಂತ್ರ್ಯವೂ ಅಭಿವ್ಯಕ್ತಿ ಸ್ವಾತಂತ್ರ್ಯವೂ ಧರ್ಮಗಳು ಪ್ರತಿಪಾದಿಸುವ ನಿರಾಕರಿಸಲಾಗದ ಒಂದು ಮಾನವೀಯ ಹಕ್ಕು ಎಂಬುದಾಗಿ ಹ। ಅಹ್ಮದ್ ಹೇಳಿದರು. ಮನುಷ್ಯನ ಚಿಂತನೆಗಳ ಮೇಲೆ ಪರಮಾತ್ಮನಿಗೆ ಮಾತ್ರ ನಿಯಂತ್ರಣವಿರುತ್ತದೆ. ಅಂತಹ ಸರ್ವಶಕ್ತನಾದ ದೇವನೇ "ಧರ್ಮದಲ್ಲಿ ಬಲಾತ್ಕಾರ ಸಲ್ಲದು" (ಖುರ್‌ಆನ್ 2 : 257) ಎಂದು ಘೋಷಿಸುತ್ತಾ ಮತ ಸ್ವಾತಂತ್ರ್ಯವನ್ನು ಎತ್ತಿಹಿಡಿದಿದ್ದಾನೆ. ಆದುದರಿಂದ ಬಲಾತ್ಕಾರವಾಗಿ ಮತ ಪರಿವರ್ತನೆ ಮಾಡುವ ಅಥವಾ ತನಗಿಷ್ಟವಿರುವ ಧರ್ಮವನ್ನು ಅನುಸರಿಸುವುದರಿಂದ ಜನರನ್ನು ತಡೆಯುವ ಹಾಗೂ ಮತ ಪ್ರಚಾರಕ್ಕಾಗಿ ಆಯುಧಗಳನ್ನು ಬಳಸುವ ಅರ್ಥದ 'ಜಿಹಾದ್' ಎಂಬ ಸಶಸ್ತ್ರ ಸಮರವನ್ನು ಧರ್ಮಬಾಹಿರವೆಂದು ಅವರು ಘೋಷಿಸಿದರು. 'ಜಿಹಾದ್' ಎಂಬುದು ಬಲಪ್ರಯೋಗದಿಂದ ಇತರರನ್ನು ಬಗ್ಗುಬಡಿಯುವ ಸಶಸ್ತ್ರ ಸಮರ ಎಂಬ ತಪ್ಪು ತಿಳುವಳಿಕೆ ಇಂದಿನ ಮುಸ್ಲಿಂ ಸಮಾಜದಲ್ಲಿ ಪ್ರಚಾರದಲ್ಲಿದೆ. ಆದರೆ ಪವಿತ್ರ ಖುರ್‌ಆನಿನ ಪ್ರಬೋಧನೆಯ ಪ್ರಕಾರ ಹಾಗೂ ಹ। ಮುಹಮ್ಮದ್ ಪೈಗಂಬರರ ಬೋಧನೆಗಳ ಪ್ರಕಾರ ಜಿಹಾದ್ ಎಂಬ ಪದಕ್ಕೆ ಅತಿ ವಿಶಾಲವಾದ ಅರ್ಥಗಳಿವೆ. ವಿಚಾರಪೂರ್ಣವಾದ ತತ್ತ್ವೋಪದೇಶಗಳ ಮೂಲಕ ಮಾನವರನ್ನು ಸನ್ಮಾರ್ಗದ ಕಡೆಗೆ ಆಹ್ವಾನಿಸುವುದು, ಅದಕ್ಕಾಗಿ ಶಕ್ತಿ ಮೀರಿ ಶ್ರಮಿಸುವುದು ಯಥಾರ್ಥ ಜಿಹಾದ್ ಆಗಿದೆ. ಅಲ್ಲಾಹನ ಮಾರ್ಗದಲ್ಲಿ ಆತ್ಮ ಸಮರ್ಪಣೆ ಮಾಡಿಕೊಂಡು ಉತ್ತಮ ಧಾರ್ಮಿಕ ಮನುಷ್ಯನಾಗಿ ಬಾಳುವಂತೆ ತನ್ನ ಜೀವಿತವನ್ನು ಕ್ರಮಬದ್ಧಗೊಳಿಸುವುದು ಕೂಡ ಜಿಹಾದ್ ಆಗಿದೆ. ಈ ಯಥಾರ್ಥ ಜಿಹಾದ್‌ನ ಕಡೆಗೆ ಹ। ಅಹ್ಮದ್ ಲೋಕದ ಜನರನ್ನು ಆಹ್ವಾನಿಸಿದರು. ಇತರರನ್ನು ಬಲಾತ್ಕಾರವಾಗಿ ಮತಪರಿವರ್ತನೆ ಮಾಡುವುದು, ಅಂತೆಯೇ ತನಗಿಷ್ಟವಿರುವ ಧಾರ್ಮಿಕ ನಂಬಿಕೆಗಳನ್ನು ಸ್ವೀಕರಿಸುವುದರಿಂದ ಯಾವನೇ ವ್ಯಕ್ತಿಯನ್ನು ತಡೆಯುವುದು, ಧರ್ಮ ಪ್ರಚಾರಕ್ಕಾಗಿ ಆಯುಧಗಳನ್ನು ಬಳಸುವುದು ಜಿಹಾದ್ ಅಲ್ಲ. ಮಾತ್ರವಲ್ಲ ಇಸ್ಲಾಂ ಧರ್ಮದ ದೃಷ್ಟಿಯಲ್ಲಿ ಅದು ನಿಷಿದ್ಧ ಕೂಡ. ಇಸ್ಲಾಂ ಧರ್ಮವು ಮತ ಸ್ವಾತಂತ್ರ್ಯಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ ಒಂದು ಧರ್ಮವಾಗಿದೆ. ಜಿಹಾದ್‌ನ ಕುರಿತು ಜನರೆಡೆಯಲ್ಲಿ ಪ್ರಚಲಿತವಾಗಿದ್ದ ತಪ್ಪು ತಿಳುವಳಿಕೆಗಳನ್ನು ನೀಗಿಸಿ ಹ। ಅಹ್ಮದ್ ಅವರು ಅದರ ಯಥಾರ್ಥ ರೂಪವನ್ನು ವಿವರಿಸಿ ಕೊಟ್ಟಿದ್ದಾರೆ. ಇಸ್ಲಾಂ ಧರ್ಮದ ಪ್ರಚಾರಕ್ಕಾಗಿ ಯಾವುದೇ ರೀತಿಯ ಬಲಾತ್ಕಾರ ಪ್ರಯೋಗದ ಆವಶ್ಯಕತೆಯಿಲ್ಲವೆಂಬುದು ಅಹ್ಮದೀ ಮುಸ್ಲಿಮರ ನಂಬಿಕೆಯಾಗಿದೆ.

## ಯೇಸು ಕ್ರಿಸ್ತರು ಭಾರತದಲ್ಲಿ

ಹ। ಮಿರ್ಝಾ ಗುಲಾಂ ಅಹ್ಮದ್ ಅವರು ಬೋಧಿಸಿದ ಮತ್ತೊಂದು ಮುಖ್ಯ ಸಂಗತಿಯು ಪ್ರವಾದಿ ಈಸಾರ (ಯೇಸು ಕ್ರಿಸ್ತರ) ಮರಣ ಮತ್ತು ಪುನರಾಗಮನದ ಕುರಿತಾಗಿತ್ತು. 33ನೇ ವಯಸ್ಸಿನಲ್ಲಿ ಯೇಸು ಅಥವಾ ಈಸಾ ಪ್ರವಾದಿಯು ಆಕಾಶಕ್ಕೇರಿದರೆಂದೂ ಈಗಲೂ ಆಕಾಶದಲ್ಲೇ ಜೀವಿಸುತ್ತಿರುವರೆಂದೂ ಕ್ರೈಸ್ತರು ಮತ್ತು ಮುಸ್ಲಿಮರು ನಂಬುತ್ತಾರೆ. ಆದರೆ, ಶಾಪಗ್ರಸ್ತವಾದ ಶಿಲುಬೆಯ ಮೇಲಿನ ಮರಣದಿಂದ ಪರಮಾತ್ಮನು ಆ ಪುಣ್ಯಾತ್ಮರನ್ನು ಸಂರಕ್ಷಿಸಿದನೆಂದೂ ನಂತರ ಅವರು "ಚದರಿ ಹೋದ ಕುರಿಗಳಂತಿರುವ" ಇಸ್ರಾಯೇಲ್ ಮನೆತನದ ಜನರನ್ನು ಅರಸುತ್ತಾ ಪಲೆಸ್ತೀನಿನಿಂದ ಪೂರ್ವದ ಕಡೆಗೆ ಪ್ರಯಾಣಮಾಡಿ ಅಫಘಾನಿಸ್ತಾನ, ಪಂಜಾಬ್, ಬನಾರಸ್, ನೇಪಾಳ, ಟಿಬೆಟ್ ಮೊದಲಾದ ಕಡೆ ಸಂಚರಿಸಿ ಇಸ್ರಾಯೇಲ್ ಸಂತತಿಗಳೆಡೆಯಲ್ಲಿ ಧರ್ಮ ಪ್ರಬೋಧನೆ ಮಾಡುತ್ತಾ ಕೊನೆಗೆ ಭಾರತದ ಕಾಶ್ಮೀರದಲ್ಲಿ ನೆಲೆಯೂರಿದರೆಂದೂ ಅಲ್ಲಿಯೇ ತನ್ನ 120ರ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದೂ ಹಝ್ರತ್ ಅಹ್ಮದ್ ತನ್ನ ಪ್ರಖ್ಯಾತವಾದ



ಶ್ರೀನಗರದ ಖಾನ್‌ಯಾರ್ ಬೀದಿಯಲ್ಲಿರುವ ಯೇಸು ಕ್ರಿಸ್ತರ ಸಮಾಧಿ

"ಮಸೀಹ್ ಹಿಂದೂಸ್ಥಾನ್ ಮೇಂ" (Jesus in India) ಎಂಬ ಗ್ರಂಥದಲ್ಲಿ ಅನೇಕ ಪುರಾವೆಗಳನ್ನು ನೀಡಿ ಪ್ರತಿಪಾದಿಸಿದ್ದಾರೆ. ಶ್ರೀನಗರದ ಖಾನ್ಯಾರ್ ಬೀದಿಯಲ್ಲಿರುವ "ಯೂಸ್ ಆಸಫ್" ಎಂಬ ಓರ್ವ ಪ್ರವಾದಿಯ ಗೋರಿಯೆಂದು ನಂಬಲಾಗುತ್ತಿರುವ ಸಮಾಧಿಯೇ ಯೇಸುಕ್ರಿಸ್ತರ ಅಂತ್ಯವಿಶ್ರಮ ಸ್ಥಳವೆಂದು ಅವರು ಘೋಷಿಸಿದರು. ಯೇಸುಕ್ರಿಸ್ತರು ಭಾರತಕ್ಕೆ ಬಂದಿರುವ ಕುರಿತು ಅನೇಕ ವಿಶ್ವವಿಖ್ಯಾತ ಚರಿತ್ರೆಗಾರರು ಸಹ ಪ್ರತಿಪಾದಿಸಿದ್ದಾರೆ,

ಇಂತಹ ವಿಚಾರಪೂರ್ಣವೂ ವಿವೇಕಯುತವೂ ಆದ ಅನೇಕ ಸುಧಾರಣೆಗಳನ್ನು ಅವರು ತಂದರು. ಮುಸ್ಲಿಮರೆಡೆಯಲ್ಲೂ ಇತರ ಮತಸ್ಥರಲ್ಲೂ ಬೇರೂರಿದ್ದ ಅಂಧವಿಶ್ವಾಸಗಳನ್ನೂ ಅನಾಚಾರಗಳನ್ನೂ ಹೋಗಲಾಡಿಸಲು ಅವರು ಶಕ್ತಿಮೀರಿ ಶ್ರಮಿಸಿದರು. ಅವರು ಬೋಧಿಸಿದ ತತ್ವಗಳನ್ನು ಅನುಸರಿಸಿಕೊಂಡು ಅಹ್ಮದಿಯಾ ಮುಸ್ಲಿಂ ಸಂಘಟನೆಯು ಈ ಕರ್ತವ್ಯಗಳನ್ನು ನಿರ್ವಹಿಸುತ್ತಾ ಬರುತ್ತಿದೆ.

## ಖಿಲಾಫತ್ ಮರುಸ್ಥಾಪನೆ

ಹಝ್ರತ್ ಮುಹಮ್ಮದ್ ಪೈಗಂಬರರು ಭವಿಷ್ಯ ನುಡಿದಿರುವ ಪ್ರಕಾರ ಇಮಾಂ ಮಹ್‌ದಿಯವರ ಕಾಲದಲ್ಲಿ ಖಿಲಾಫತ್ ಸಂಘಟನೆ ಮರುಸ್ಥಾಪನೆಗೊಂಡಿದೆ. ಹ। ಮಿರ್ಝಾ ಗುಲಾಂ ಅಹ್ಮದ್ ಸಾಹೇಬರು 1908 ರಲ್ಲಿ ತನ್ನ 73ನೇ ವಯಸ್ಸಿನಲ್ಲಿ ನಿಧನರಾದಾಗ ಅವರ ಅತ್ಯಂತ ನಿಕಟ ಶಿಷ್ಯರೂ ಮತ ಪಂಡಿತರೂ ಮೇಧಾವಿಯೂ ಆಗಿದ್ದ ಅಲ್‌ಹಾಜ್ ಹಕೀಮ್ ನೂರುದ್ದೀನ್ ಸಾಹೇಬರು ಸಂಘಟನೆಯ ಪ್ರಥಮ ಖಲೀಫರಾಗಿ ಆರಿಸಲ್ಪಟ್ಟರು. ಇಸ್ಲಾಂ ಧರ್ಮದ ಸರ್ವೋನ್ನತ ಜಾಗತಿಕ ನೇತಾರರನ್ನು ಖಲೀಫ ಎಂದು ಕರೆಯಲಾಗುತ್ತದೆ. ಇಂದು ಮುಸ್ಲಿಮರೆಡೆಯಲ್ಲಿ ಹಲವಾರು ಪಂಗಡಗಳೂ ವಿಭಾಗಗಳೂ ಇವೆಯಾದರೂ ಪವಿತ್ರ ಖುರ್‌ಆನ್ ಮತ್ತು ಹ। ಮುಹಮ್ಮದ್ ಪೈಗಂಬರರ ಭವಿಷ್ಯವಾಣಿಗಳ ಪ್ರಕಾರ ಖಲೀಫ (ಸರ್ವೋಚ್ಚ ಧಾರ್ಮಿಕ ನೇತಾರ) ಇರುವುದು ಅಹ್ಮದಿಯಾ ಸಂಘಟನೆಗೆ ಮಾತ್ರ. ಪ್ರಥಮ ಖಲೀಫರ ನಿಧನದ ಬಳಿಕ ಹ। ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಅವರು ಎರಡನೆಯ ಖಲೀಫರಾಗಿ ಆರಿಸಲ್ಪಟ್ಟರು. 52 ವರ್ಷಗಳ ಅವರ ಸುದೀರ್ಘ ಖಿಲಾಫತ್ ಕಾಲದಲ್ಲಿ ಅಹ್ಮದಿಯಾ ಸಂಘಟನೆ ಲೋಕದ ನಾನಾ ಕಡೆಗಳಿಗೂ ಹಬ್ಬಿತು. ಯುರೋಪ್, ಆಫ್ರಿಕಾ ಖಂಡಗಳ ಹಲವಾರು ರಾಷ್ಟ್ರಗಳಲ್ಲಿ ಮಿಶನರಿ ಕೇಂದ್ರಗಳು ಸ್ಥಾಪನೆಗೊಂಡವು. ಜಮಾಅತ್ ವತಿಯಿಂದ ಅನೇಕಾನೇಕ ವಿದ್ಯಾಲಯಗಳೂ ಆಸ್ಪತ್ರೆಗಳೂ ತೆರೆಯಲ್ಪಟ್ಟವು. 1965ರಲ್ಲಿ ಅವರು ನಿಧನರಾದಾಗ ಹ। ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು ಮೂರನೇ ಖಲೀಫರಾಗಿಯೂ 1982ರಲ್ಲಿ ಅವರ ನಿಧನದ ಬಳಿಕ ಹ। ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು 4ನೇ ಖಲೀಫರಾಗಿಯೂ ಆಯ್ಕೆಯಾದರು. ಇವರೇ ಈಗ ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನೇತಾರರಾಗಿರುವರು.

ಅಹ್ಮದಿಯಾ ಖಲೀಫರ ಆಸ್ಥಾನವು ಪಾಕಿಸ್ತಾನದ ರಬ್ವಾ ಎಂಬ ನಗರದಲ್ಲಿದೆ. ಆದರೂ ಸಂಘಟನೆಯ ಸ್ಥಾಯೀ ಕೇಂದ್ರವು ಭಾರತದ ಪಂಜಾಬ್ ರಾಜ್ಯದಲ್ಲಿರುವ ಖಾದಿಯಾನ್ ಆಗಿದೆ. ಇಮಾಂ ಮಹ್‌ದಿ ಹ। ಮಿರ್ಝಾ ಗುಲಾಂ ಅಹ್ಮದ್ ಅವರು ಜನಿಸಿರುವುದು

ಹಾಗೂ ಸಮಾಧಿ ಹೊಂದಿರುವುದು ಖಾದಿಯಾನ್‌ನಲ್ಲೇ ಆಗಿರುವುದರಿಂದ ಅದಕ್ಕೆ ವಿಶಿಷ್ಟವಾದ ಪ್ರಾಧಾನ್ಯ ಇದೆ.

## ಪಾಕಿಸ್ತಾನದಲ್ಲಿ ವಿರೋಧ

ಧಾರ್ಮಿಕ ಭಿನ್ನಾಭಿಪ್ರಾಯಗಳ ಹೆಸರಿನಲ್ಲಿ ಅಹ್ಮದೀ ಮುಸ್ಲಿಮರು ಅತಿ ಹೆಚ್ಚು ಹಿಂಸೆಗೆ ಗುರಿಯಾಗುತ್ತಿರುವ ರಾಷ್ಟ್ರವೆಂದರೆ ಪಾಕಿಸ್ತಾನ. ಮೊದಲಿನಿಂದಲೂ ಅಲ್ಲಿನ ಮತ ಮೂಲಭೂತವಾದಿ ಮುಲ್ಲಾಗಳು ಅಹ್ಮದೀಯರನ್ನು ಕೆಂಗಣ್ಣಿನಿಂದಲೇ ನೋಡುತ್ತಾ ಬಂದಿದ್ದಾರೆ. ಭುಟ್ಟೋ ಆಡಳಿತ ಕಾಲದಲ್ಲಿ ಅಹ್ಮದಿಯಾ ವಿರೋಧಿ ಅಲೆಯು ತೀಕ್ಷ್ಣವಾಗತೊಡಗಿತು. ಕೊನೆಗೆ ಭುಟ್ಟೋ ಸರಕಾರವು ಸಂಪ್ರದಾಯವಾದಿಗಳ ಒತ್ತಡಕ್ಕೆ ಮಣಿದು ಅಹ್ಮದೀಯರನ್ನು ಮುಸ್ಲಿಮೇತರರು ಎಂದು ಘೋಷಿಸಿತು. ಪಾಕ್ ಸಂವಿಧಾನದಲ್ಲಿ ಅಹ್ಮದೀಯರು ಮುಸ್ಲಿಮರಲ್ಲವೆಂಬ ತಿದ್ದುಪಡಿಯನ್ನು ತರಲಾಯಿತು. ಸರಕಾರದ ಪರೋಕ್ಷ ಸಹಾಯದಿಂದಲೇ ಪೋಲೀಸರೂ ತೀವ್ರವಾದಿ ಮುಸ್ಲಿಮರೂ ಅಹ್ಮದೀಯರ ಮಸೀದಿಗಳ ಮೇಲೂ ವ್ಯಾಪಾರ ಸಂಸ್ಥೆಗಳ ಮೇಲೂ ಮನೆಗಳ ಮೇಲೂ ಧಾಳಿ ಮಾಡಿ ಅವರ ಜೀವ ಮತ್ತು ಸೊತ್ತುಗಳನ್ನು ಹಾನಿಗೆ ಗುರಿಪಡಿಸಿದರು. ನಂತರ ಭುಟ್ಟೋ ಸರಕಾರವು ಪತನಗೊಂಡು ಭುಟ್ಟೋ ನೇಣುಗಂಬವನ್ನೇರಿದರೂ ಆ ನಂತರ ಆಡಳಿತ ಸೂತ್ರವನ್ನು ವಹಿಸಿಕೊಂಡ ಸರ್ವಾಧಿಕಾರಿ ಜನರಲ್ ಜಿಯಾ ಕೂಡಾ ಅಹ್ಮದೀಯರ ಬಗ್ಗೆ ಅದೇ ನಿಲುವನ್ನು ಮುಂದುವರಿಸಿದರು. ಮಾತ್ರವಲ್ಲ, ಜಿಯಾ ಕಾಲದಲ್ಲಿ ಅಹ್ಮದೀಯರ ವಿರುದ್ಧ ಅತ್ಯಾಚಾರ, ಹಿಂಸೆ, ದಬ್ಬಾಳಿಕೆ ಮತ್ತಷ್ಟು ಊರ್ಜಿತಗೊಂಡವು. ಅಹ್ಮದೀಯರು ತಾವು ಮುಸ್ಲಿಮರೆಂದು ಹೇಳಿಕೊಳ್ಳುವುದು ಅಥವಾ ಮುಸ್ಲಿಮರಂತೆ ಸ್ವಯಂ ತೋರ್ಪಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವೆಂದು 1984ರಲ್ಲಿ ಜಿಯಾ ಹೊರಡಿಸಿದ ಅಧ್ಯಾದೇಶವು ಅತ್ಯಂತ ಕುಪ್ರಸಿದ್ಧವಾಗಿದೆ. ಅನಂತರ ಅಲ್ಲಿ ಅಹ್ಮದೀಯರಿಗೆ ಜೀವನವೇ ದುರ್ಭರವಾಯಿತು. ಪಾಕಿಸ್ತಾನದಲ್ಲಿ ಅಹ್ಮದೀ ಮುಸ್ಲಿಮರ ಮೇಲೆ ನಡೆಯುತ್ತಿದ್ದ ಹಿಂಸಾಚಾರವನ್ನು ನಿಲ್ಲಿಸುವಂತೆ ಅಂತಾರಾಷ್ಟ್ರೀಯ ಸಂಘಟನೆಗಳಾದ ವಿಶ್ವಸಂಸ್ಥೆಯ ಹಕ್ಕುಬಾಧ್ಯತಾ ಸಮಿತಿ, ಆ್ಯಮ್ನೆಸ್ಟಿ ಇಂಟರ್‌ನ್ಯಾಷನಲ್, ಅಂತಾರಾಷ್ಟ್ರೀಯ ಜ್ಯೂರಿಸ್ಟ್ ಕಮಿಷನ್ ಮೊದಲಾದವು ಪಾಕ್ ಸರಕಾರವನ್ನು ಒತ್ತಾಯಿಸಬೇಕಾದ ಪರಿಸ್ಥಿತಿ ಉಂಟಾಯಿತು.

ಹಿಂಸಾಚಾರವೂ ದಬ್ಬಾಳಿಕೆಯೂ ಸಹಿಸಲಸಾಧ್ಯವಾದ ಹಂತವನ್ನು ತಲಪಿದಾಗ ಅಹ್ಮದಿಯಾ ಖಲೀಫರು (ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್) 1988ನೇ ಜೂನ್ 10ರಂದು ಜನರಲ್ ಜಿಯಾರನ್ನು ಪ್ರಥಮ ಸಂಬೋಧಿತನಾಗಿಟ್ಟುಕೊಂಡು ಲೋಕದ ಮುಂದೆ ಒಂದು "ಮುಬಾಹಲ" ಪಂಥಾಹ್ವಾನವನ್ನು ಘೋಷಿಸಿದರು. ಸತ್ಯಾಸತ್ಯ ವಿವೇಚನೆಗಾಗಿ ಅಲ್ಲಾಹನೊಡನೆ ಬೇಡಿಕೊಂಡು ಅಸತ್ಯ ಪಕ್ಷದ ಮೇಲೆ ಅಲ್ಲಾಹನ ಶಾಪ ಶಿಕ್ಷೆ ಬಂದೆರಗುವಂತೆ ಪ್ರಾರ್ಥಿಸುವುದನ್ನು "ಮುಬಾಹಲ" ಎನ್ನಲಾಗುತ್ತದೆ. ಅಹ್ಮದಿಯಾ ನೇತಾರರು ಘೋಷಿಸಿದ ಮುಬಾಹಲ ಪಂಥಾಹ್ವಾನದ ಪರಿಣಾಮವಾಗಿಯೇ ಜ। ಜಿಯಾ ಅತಿ ದಾರುಣವಾದ ರೀತಿಯಲ್ಲಿ ಅಕಾಲ ಮೃತ್ಯುಗೀಡಾದರೆಂದು ಜಾಗತಿಕ ಅಹ್ಮದಿಯಾ ಸಂಘಟನೆ ಹೇಳುತ್ತದೆ. ಅಲ್ಲದೆ ಪಾಕಿಸ್ತಾನದಲ್ಲಿ ಈಗ ಆಡಳಿತ ಸೂತ್ರವನ್ನು ವಹಿಸಿಕೊಂಡಿರುವ ಬೇನಜೀರ್ ಭುಟ್ಟೋ ಸರಕಾರದೊಡನೆಯೂ ಚರಿತ್ರೆಯಿಂದ ಪಾಠಕಲಿಯುವಂತೆ ಅಹ್ಮದಿಯಾ ನೇತಾರರು ಉಪದೇಶಿಸಿದ್ದಾರೆ. ಹಿಂಸಾತ್ಮಕ ನಿಲುವನ್ನು ತಳೆಯದೆ ದೇವಭಯವಿರಿಸಿಕೊಂಡು ನ್ಯಾಯನೀತಿಯ ತಳಹದಿಯ ಮೇಲೆ ಆಡಳಿತ ನಡೆಸುವಂತೆಯೂ ಇಲ್ಲವಾದರೆ ದೇವರ ಕೋಪಾಗ್ನಿಗೆ ತುತ್ತಾಗುವುದಾಗಿಯೂ ಅವರು ಪಾಕ್ ಸರಕಾರವನ್ನು ಪುನಃ ಎಚ್ಚರಿಸಿದ್ದಾರೆ.

## ಜಾಗತಿಕ ಸಂಘಟನೆ

ಅಹ್ಮದಿಯಾ ಜಮಾಅತ್ ಒಂದು ಅಂತಾರಾಷ್ಟ್ರೀಯ ಸಂಘಟನೆಯಾಗಿದ್ದು ಪ್ರಪಂಚದ 120 ರಾಷ್ಟ್ರಗಳಲ್ಲಿ ಇದರ ಸದಸ್ಯರಿದ್ದಾರೆ. ಅಹ್ಮದೀಯರು ಯಾವ ರಾಷ್ಟ್ರದಲ್ಲಿ ವಾಸಿಸುತ್ತಾರೋ ಆ ರಾಷ್ಟ್ರದ ನಿಷ್ಠಾವಂತ ಪ್ರಜೆಗಳಾಗಿ ಬಾಳುತ್ತಾರೆ. ಸ್ನೇಹ ಸೌಹಾರ್ದ, ಶಾಂತಿಯುತ ಜೀವನ, ದೇವಭಕ್ತಿ, ಮಾನವ ಸ್ನೇಹ, ದೇಶಪ್ರೇಮ ಮೊದಲಾದ ಉತ್ತಮ ಧಾರ್ಮಿಕ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಶಾಂತಿಯುತ ಸಹಬಾಳ್ವೆ ನಡೆಸಬೇಕಾದುದು ಧಾರ್ಮಿಕವಾದ ಕಡ್ಡಾಯ ವಿಧಿಯೆಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಲೋಕದಲ್ಲಿ ಒಂದು ಕೋಟಿಗಿಂತಲೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ

ಅಹ್ಮದಿಯಾ ಸಂಘಟನೆಯ ಸದಸ್ಯರು ಸುಶಿಕ್ಷಿತರೂ ಧರ್ಮನಿಷ್ಠರೂ ಆಗಿರುವರು. ಅಂತಾರಾಷ್ಟ್ರೀಯ ನ್ಯಾಯಾಲಯದ (International Court of Justice) ಅಧ್ಯಕ್ಷರೂ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ 17ನೇ ಅಧಿವೇಶನದ ಅಧ್ಯಕ್ಷರೂ ಆಗಿದ್ದ ಜಸ್ಟಿಸ್ ಸರ್ ಮುಹಮ್ಮದ್ ಝಫರುಲ್ಲಾ ಖಾನ್, ಭೌತಶಾಸ್ತ್ರದಲ್ಲಿ ನೋಬೆಲ್ ಪ್ರಶಸ್ತಿಯನ್ನು ಗಳಿಸಿದ ಪ್ರಥಮ ಮುಸ್ಲಿಂ ವಿಜ್ಞಾನಿ ಪ್ರೊ। ಅಬ್ದುಸ್ಸಲಾಂ ಮೊದಲಾದವರು ಈ ಸಂಘಟನೆಗೆ ಸೇರಿದವರಾಗಿದ್ದಾರೆ. ಈ ಸಂಘಟನೆಗೆ ಲೋಕದ ವಿವಿಧ ಕಡೆಗಳಲ್ಲಿ ಮಿಶನರಿ ಕೇಂದ್ರಗಳೂ ವಿವಿಧ ಭಾಷೆಗಳ ಪತ್ರಿಕೆಗಳೂ ಇವೆ.

ಅಹ್ಮದಿಯಾ ಸಂಘಟನೆಯ ಪ್ರಥಮ ಶತಾಬ್ದವು 1989ನೇ ಮಾರ್ಚ್ 22ರಂದು ಕೊನೆಗೊಂಡು 23ನೇ ದಿನಾಂಕದಿಂದ ಅದು ಎರಡನೇ ಶತಾಬ್ದಕ್ಕೆ ಪದಾರ್ಪಣೆ ಮಾಡಿದೆ. ತಮ್ಮ ಸಂಘಟನೆಗೆ ಒಂದು ನೂರು ವರ್ಷಗಳು ತುಂಬುತ್ತಿರುವ ಹರ್ಷದಲ್ಲಿ ಅದರ ಜಾಗತಿಕ ನೇತಾರ (ಖಲೀಫ) ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಅವರ ನಿರ್ದೇಶದಂತೆ ಈ ಸಂಘಟನೆಯು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಒಂದು ಕೋಟಿಗಿಂತಲೂ ಅಧಿಕ ಜನಸಂಖ್ಯೆಯಲ್ಲಿರುವ ಜಗತ್ತಿನ ಎಲ್ಲಾ ಅಹ್ಮದೀಯರೂ ಈ ವೇಳೆಯಲ್ಲಿ ಹೆಚ್ಚಿನ ಪ್ರಾರ್ಥನೆ, ದೇವಧ್ಯಾನ, ಉಪವಾಸವ್ರತ ಮೊದಲಾದ ಆಧ್ಯಾತ್ಮಿಕ ಕಾರ್ಯಗಳಲ್ಲಿ ಮುಳುಗಿರಬೇಕೆಂದೂ ಬಡ ಬಗ್ಗರಿಗೂ ಅನಾಥರಿಗೂ ವಿಧವೆಯರಿಗೂ ರೋಗಿಗಳಿಗೂ ಧಾನ ಧರ್ಮಗಳನ್ನು ನೀಡಬೇಕೆಂದೂ ಜಗತ್ತಿನ ಎಲ್ಲಾ ಅಹ್ಮದೀಯರಿಗೂ ಅವರು ಆದೇಶ ನೀಡಿದ್ದಾರೆ. ಶತಮಾನೋತ್ಸವವು ಒಂದು ವರ್ಷಕಾಲ ಆಚರಿಸಲ್ಪಡುವುದು.

ಭಾರತದ ಖಾದಿಯಾನ್ ಗ್ರಾಮದಿಂದ ಹೊರಟ ಈ ಯುಗಶಬ್ದವು ಸಮಸ್ತ ಲೋಕದಲ್ಲಿ ಪಸರಿಸಿ ಅದರ ಮೊದಲ ಶತಾಬ್ದವು ವಿಜಯದೊಂದಿಗೆ ಸಮಾಪ್ತಿಗೊಳ್ಳುವ ಸಂತೋಷದಲ್ಲಿ ಪ್ರಪಂಚದ ಎಲ್ಲಾ ಅಹ್ಮದೀ ಮುಸ್ಲಿಮರೂ ಜಗತ್ಪಾಲಕನಾದ ದೇವನಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಾರೆ. ★


ಓದಿರಿ–

# ಯೇಸು ಎಲ್ಲಿ ಮಡಿದರು?

**ಬೈಬಲ್, ಖುರ್ಆನ್ ಮತ್ತು ಇತರ ಐತಿಹಾಸಿಕ ಸಾಕ್ಷ್ಯಗಳ ಆಧಾರದಲ್ಲಿ ಬರೆದ ಸಂಶೋಧನಾತ್ಮಕ ಗ್ರಂಥ**

ಗ್ರಂಥ ಕರ್ತ: **ಜಲಾಲುದ್ದೀನ್ ಶಮ್ಸ್**
(ಮಾಜಿ ಇಮಾಂ, ಲಂಡನ್ ಮಸೀದಿ, ಲಂಡನ್)

ಕನ್ನಡಾನುವಾದ: **ಎಂ. ಉಬೈದುಲ್ಲಾ**

ಬೆಲೆ: **ರೂ. 15**    ಅಂಚೆ ವೆಚ್ಚ: **ರೂ. 1**

ವ್ಯವಹರಿಸಿರಿ:

ಅಹ್ಮದಿಯಾ ಮುಸ್ಲಿಂ ಮಿಶನ್
ಅನ್ಸಾರಿ ರೋಡ್, ಮಂಗಳೂರು – 575 001.

*With best compliments from :*

# ROSHAN ENTERPRISES

**Authorised Dealers for Kodagu District**

## HILTON LPC

**COOKING UNIT**

**No. 24, Market Shopping Complex**
**MAHADEVPET, MADIKERI-571 201**

ಅಶೋಕ, ನೂತನ್, ಪರ್ಫೆಕ್ಟ್, ಉವ್ರಾ ಹಾಗೂ ಇನ್ನಿತರ ಪ್ರಖ್ಯಾತ ಬತ್ತಿ ಸ್ಟೌಗಳು ರಖಂ ಮತ್ತು ಚಿಲ್ಲರೆಯಾಗಿ ದೊರೆಯುತ್ತವೆ.

ಸಂಪರ್ಕಿಸಿರಿ :

# ರೋಶನ್ ಎಂಟರ್‌ಪ್ರೈಸಸ್

ನಂ. 24, ಮಾರ್ಕೆಟ್ ಶೋಪಿಂಗ್ ಕಾಂಪ್ಲೆಕ್ಸ್
ಮಹದೇವ ಪೇಟೆ, ಮಡಿಕೇರಿ – 571 201

# 120 ರಾಷ್ಟ್ರಗಳಲ್ಲಿ ಅಹ್ಮದಿಯಾ ಸಂಘಟನೆ

« میں تیری تبلیغ کو زمین کے کناروں تک پہنچاؤں گا »

**"ನಾನು ನಿನ್ನ ಸಂದೇಶವನ್ನು ಭೂಮಿಯ ಎಲ್ಲೆಗಳ ವರೆಗೂ ತಲಪಿಸುವೆನು"**

(ಹಝ್ರತ್ ಅಹ್ಮದ್‌ರವರಿಗೆ ಅರುಹಿಸಲ್ಪಟ್ಟ ಒಂದು ದೈವಿಕ ಪ್ರಕಟನೆ)

1. ಆಸ್ಟ್ರೇಲಿಯಾ
2. ಬಂಗ್ಲಾದೇಶ
3. ಬೆಲ್ಜಿಯಂ
4. ಭೂತಾನ್
5. ಬ್ರೆಝಿಲ್
6. ಬರ್ಮಾ
7. ಕೆನಡಾ
8. ಡೆನ್ಮಾರ್ಕ್
9. ಈಜಿಪ್ಟ್
10. ಫಿಜಿಸ್
11. ಫ್ರಾನ್ಸ್
12. ಗಾಂಬಿಯಾ
13. ಘಾನಾ
14. ಹೋಲೇಂಡ್
15. ಇಂಡಿಯಾ (ಭಾರತ)
16. ಇಂಡೋನೇಶ್ಯಾ
17. ಐವರಿಕೋಸ್ಟ್
18. ಜಪಾನ್
19. ಕೆನ್ಯಾ
20. ಲೈಬೀರಿಯಾ
21. ಮೊರಿಷ್ಯಸ್
22. ನೇಪಾಲ
23. ನೈಜೀರಿಯಾ
24. ನೋರ್ವೆ
25. ಪಾಕಿಸ್ಥಾನ
26. ಪಾಲೆಸ್ತೀನ್
27. ರೋಡೆರಿಕ್ ಐಲೇಂಡ್
28. ಸೆನೆಗಲ್
29. ಸಿರ್ರಾಲಿಯೋನ್
30. ಸ್ಪೈನ್
31. ಸೂರಿನಾಂ
32. ಸ್ವೀಡನ್
33. ಸ್ವಿಝರ್‌ಲೇಂಡ್
34. ಟಾಂಝಾನಿಯಾ
35. ಥಾಯ್‌ಲೇಂಡ್
36. ಟ್ರಿನಿಡಾಡ್
37. ಯು. ಕೆ. (ಬ್ರಿಟನ್)
38. ಯು.ಎಸ್.ಎ. (ಅಮೇರಿಕಾ)
39. ಉಗಾಂಡಾ
40. ಪಶ್ಚಿಮ ಜರ್ಮನಿ
41. ಝೈರೆ
42. ಝಾಂಬಿಯಾ
43. ನ್ಯೂಝಿಲೇಂಡ್
44. ಪಾಪುಅ ನ್ಯೂಗಿನಿಯಾ
45. ಪೋಲೇಂಡ್
46. ಸಿರಿಯಾ
47. ತುವಾಲು
48. ಯುಗೋಸ್ಲಾವಿಯಾ
49. ಅಬೂಧಾಬಿ
50. ಅಂಗೋಲಾ
51. ಆಸ್ಟ್ರೇಲಿಯಾ
52. ಬಹರೈನ್
53. ಬೆನಿನ್
54. ಬ್ರೂಕಿನಫಾಸ್ಸೊ
55. ಬುರುಂಡಿ
56. ಕ್ಯಾಮೆರೊನ್
57. ದೋಹಾ
58. ದುಬೈ
59. ಗ್ರೀಸ್
60. ಗಿನಿಯಾ
61. ಗುಯಾನಾ
62. ಇರಾನ್
63. ಇರಾಕ್
64. ಐಯರ್ಲೇಂಡ್
65. ಜೋರ್ಡಾನ್
66. ಕುವೈಟ್
67. ಲಿಬಿಯಾ
68. ಮಾಲವಿ
69. ಮಲೇಶ್ಯಾ
70. ಮಾಲಿ
71. ಮೌರಿಟಾನಿಯಾ
72. ಮೊರೊಕ್ಕೋ
73. ಮೊಝಾಂಬಿಕ್
74. ಓಮನ್
75. ಫಿಲಿಪೈನ್ಸ್
76. ಕತಾರ್
77. ರಾಸಲ್‌ಖೈಮ
78. ರ್ವಾಂಡಾ
79. ಸಮೊಅ
80. ಸೌದಿ ಅರೇಬಿಯಾ
81. ಶಾರ್ಜಾ
82. ಸಿಂಗಾಪುರ್
83. ದಕ್ಷಿಣ ಆಫ್ರಿಕ
84. ಶ್ರೀಲಂಕಾ
85. ಟೋಗೋ
86. ತುರ್ಕಿ
87. ಉಮರ್‌ಖುರಾನ್

88. ದಕ್ಷಿಣ ಯೆಮೆನ್
89. ಝನ್‌ಝಿಬಾರ್
90. ಝಿಂಬಾಬ್ವೆ
91. ಅಲ್ಜೀರಿಯಾ
92. ಅಂಟಿಗ್ವಾ
93. ಅರ್ಜೆಂಟಿನಾ
94. ಬ್ರೂನಿ
95. ಕೋಂಗೋ
96. ಕೊಮೊರೊಸ್
97. ಡೊಮಿನಿಕನ್ ರಿಪಬ್ಲಿಕ್
98. ಪೂರ್ವ ಜರ್ಮನಿ
99. ಇಥಿಯೋಪಿಯಾ
100. ಫಿನ್‌ಲೇಂಡ್
101. ಹಂಗರಿ
102. ಹಾಂಗ್‌ಕಾಂಗ್
103. ಐಸ್‌ಲೇಂಡ್
104. ಇಟೆಲಿ
105. ಕಿರ್ರಿಬಟಿ
106. ಚೀನಾ
107. ಮಡಗಾಸ್ಕರ್
108. ನೌರು
109. ನೈಜೀರಿಯಾ
110. ಉತ್ತರ ಯೆಮೆನ್
111. ಸರವಾಕ್
112. ಸೋಮಾಲಿಯಾ
113. ಸುಡಾನ್
114. ಟುನಿಶಿಯಾ
115. ಯು.ಎಸ್.ಎಸ್.ಆರ್. (ರಶ್ಯಾ)
116. ಟಾನ್‌ಗೋ
117. ದಕ್ಷಿಣ ಕೊರಿಯಾ
118. ಗಾಬೊನ್
119. ಮಾಲ್ದೀವ್
120. ಸೊಲೊಮನ್‌ಐಲೇಂಡ್

**" ಇನ್ಸಾನಿಯತ್ ಝಿಂದಾಬಾದ್ "**
**( ಮಾನವೀಯತೆ ಚಿರಕಾಲ ಬಾಳಲಿ )**

— ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್
ಅಹ್ಮದಿಯಾ ಸಂಘಟನೆಯ ತೃತೀಯ ಖಲೀಫ

With best Compliments of

ABDUL HAMEED AHMADI

**Azad Road, II Cross**
**SAGAR – 577 401**
*(Shimoga District)*

# ವಿವಿಧ ಭಾಷೆಗಳಲ್ಲಿ ಪವಿತ್ರ ಖುರ್ಆನಿನ ಭಾಷಾಂತರ

ಅಹ್ಮದಿಯಾ ಸಂಘಟನೆಯ ಶತಾಬ್ದದ ಅಂಗವಾಗಿ ಜಗತ್ತಿನ ವಿವಿಧ ಪ್ರಧಾನ ಭಾಷೆಗಳಲ್ಲಿ ಪವಿತ್ರ ಖುರ್ಆನಿನ ಭಾಷಾಂತರಗಳನ್ನು ಪ್ರಕಟಿಸಲು ಅಹ್ಮದಿಯಾ ಜಮಾಅತ್ ಹಮ್ಮಿಕೊಂಡಿದೆ. ಆ ಬಗ್ಗೆ ವಿವರಗಳನ್ನು ಇಲ್ಲಿ ಕಾಣಬಹುದು.

## ಈಗಾಗಲೇ ಪ್ರಕಟಗೊಂಡವು

| ಭಾಷೆ | ದೇಶ | ಭಾಷೆ | ದೇಶ |
|---|---|---|---|
| ಇಂಗ್ಲಿಷ್ | | ಸ್ವಾಹಿಲಿ | ಕೆನ್ಯಾ |
| ಉರ್ದು | | ಎಸ್ಪರಾಂಟೋ | ಹೋಲೇಂಡ್ |
| ಫ್ರೆಂಚ್ | ಫ್ರಾನ್ಸ್ | ಇಟೆಲಿಯನ್ | ಇಟೆಲಿ |
| ಜರ್ಮನ್ | ಜರ್ಮನಿ | ಫಿಜಿಯನ್ | ಫಿಜಿ |
| ಉಗಾಂಡಾ | ಉಗಾಂಡಾ | ಹಿಂದಿ | ಭಾರತ |
| ಡಚ್ | ಹೋಲೇಂಡ್ | ರಶ್ಯನ್ | ರಶ್ಯಾ |
| ಗುರುಮುಖಿ | ಭಾರತ | ಸ್ವೀಡಿಶ್ | ಸ್ವೀಡನ್ |
| ಯೊರುಬ | ನೈಜೀರಿಯಾ | ಕೊರಿಯನ್ | ಕೊರಿಯ |
| ಡ್ಯಾನಿಷ್ | ಡೆನ್ಮಾರ್ಕ್ | ಕಿಕುಯು | ಕೆನ್ಯಾ |
| ಇಂಡೋನೇಶ್ಯನ್ | ಇಂಡೋನೇಶ್ಯಾ | ಪೋರ್ಚುಗೀಸ್ | ಬ್ರೆಝಿಲ್ |

## ಮುದ್ರಣ ಹಂತದಲ್ಲಿರುವಂಥವು

| ಭಾಷೆ | ದೇಶ | ಭಾಷೆ | ದೇಶ |
|---|---|---|---|
| ಜಪಾನೀಸ್ | ಜಪಾನ್ | ಪರ್ಶಿಯನ್ | ಇರಾನ್ |
| ಸ್ಪಾನಿಷ್ | ಸ್ಪೈನ್ | ಸಿಂಧಿ | ಪಾಕಿಸ್ಥಾನ |
| ಬಂಗಾಳಿ | ಬಂಗ್ಲಾದೇಶ | ಗುಜರಾಥಿ | ಭಾರತ |
| ಮೆಂಡೆ | ಸಿರ್‍ರಾಲಿಯೋನ್ | ಮಲಯಾಳಂ | ಭಾರತ |
| ಫಾಂಟೆ | ಘಾನ | ತಮಿಳು | ಭಾರತ |
| ಮಲಯ್ | ಮಲೇಶ್ಯಾ | ಹೌಸ | ನೈಜೀರಿಯಾ |

## ಭಾಷಾಂತರ ಪೂರ್ಣಗೊಂಡವು

| ಭಾಷೆ | ದೇಶ | ಭಾಷೆ | ದೇಶ |
|---|---|---|---|
| ಒರಿಯಾ | ಭಾರತ | ಟೆಗಲೊಗ್ | ಫಿಲಿಪೈನ್ಸ್ |
| ಕನ್ನಡ | ಭಾರತ | ಪೋಲಿಶ್ | ಪೋಲೇಂಡ್ |
| ತುವಾಲು | ತುವಾಲು | ಸರೈಕಿ | ಪಾಕಿಸ್ಥಾನ |
| ಅಲ್ಬೇನಿಯನ್ | ಅಲ್ಬೇನಿಯಾ | ಬಲ್ಗೇರಿಯನ್ | ಬಲ್ಗೇರಿಯಾ |
| ಟರ್ಕಿಶ್ | ಟರ್ಕಿ | ಪಂಜಾಬಿ | ಪಾಕಿಸ್ಥಾನ |
| ಝೆಕ್ | ಝೆಕೊಸ್ಲೋವಾಕಿಯಾ | ಹಂಗೇರಿಯನ್ | ಹಂಗರಿ |
| ಚೈನೀಸ್ | ಚೀನಾ | ಪಶ್ತು | ಪಾಕಿಸ್ಥಾನ |

## ಭಾಷಾಂತರದ ಹಂತದಲ್ಲಿರುವಂಥವು

| ಭಾಷೆ | ದೇಶ | ಭಾಷೆ | ದೇಶ |
|---|---|---|---|
| ಅಸ್ಸಾಮಿಸ್ | ಭಾರತ | ತೆಲುಗು | ಭಾರತ |
| ವಿಯೆಟ್ನಾಮಿಸ್ | ವಿಯೆಟ್ನಾಂ | ಕುರ್ಡಿಶ್ | ಇರಾನ್ |
| ಒಯುಂಗುರ್ | | ಮರಾಥಿ | ಭಾರತ |
| ಗ್ರೀಕ್ | ಗ್ರೀಸ್ | ಬರ್ಮಿಸ್ | ಬರ್ಮಾ |
| ನೋರ್ವೆಜಿಯನ್ | ನೋರ್ವೆ | | |

*With Best Compliments from :*

**KARNATAKA AGARBATHI INDUSTRIES**

**CHIKPET, SORAB-577 429.**

*Phone: 81 Resi*

Contact for:

★ SHANDAR AGARBATHIES
★ ALISHAN AGARBATHIES

*With best compliments from :*

PHONE: Off. 6699
Res. 6739

**SAFA ENTERPRISES**

**OPP. Corporation Bank**

**BOLWAR, PUTTUR-574 201.**

**Stockist for Toilet Soaps, Toiletries, Shaving Range, Detergents, Laundry Soaps, Scourers of**

Godrej **Soaps Ltd.**
**And ColdDrinks**
**GREAT SHAKE of NOBLE SOYA**

# ವಿವಿಧ ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಆಯ್ದ ವಚನಗಳ ಭಾಷಾಂತರ

ಅಹ್ಮದಿಯಾ ಶತಾಬ್ದ ಆಚರಣೆಯ ಅಂಗವಾಗಿ ನೂರಕ್ಕೂ ಮಿಕ್ಕಿದ ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಆಯ್ದ ವಚನಗಳನ್ನು ಅಹ್ಮದಿಯಾ ಜಮಾಅತಿನ ವತಿಯಿಂದ ಪ್ರಕಟಿಸಲಾಗಿದೆ.

| ಭಾಷೆ | ದೇಶ | ಭಾಷೆ | ದೇಶ |
|---|---|---|---|
| ಇಂಗ್ಲಿಷ್ | | ಫಾಂಟಿ | ಘಾನಾ |
| ತುವಾಲು | ತುವಾಲು | ಪೋರ್ಚುಗೀಸ್ | ಬ್ರೆಝಿಲ್ |
| ಕೊರಿಯನ್ | ಕೊರಿಯ | ಸ್ಪಾನಿಶ್ | ಸ್ಪೈನ್ |
| ಕನ್ನಡ | ಭಾರತ | ಫ್ರೆಂಚ್ | ಫ್ರಾನ್ಸ್ |
| ಜಪಾನೀಸ್ | ಜಪಾನ್ | ಇವೆ | ಘಾನಾ |
| ಸ್ವಾಹಿಲಿ | ಕೆನ್ಯಾ | ಸ್ವೀಡಿಶ್ | ಸ್ವೀಡನ್ |
| ಬಾಲಿ | ಇಂಡೋನೇಶ್ಯಾ | ನೋರ್ವೆಜಿಯನ್ | ನೋರ್ವೆ |
| ತಮಿಳು | ಭಾರತ | ಇಂಡೋನೇಶ್ಯನ್ | ಇಂಡೋನೇಶ್ಯಾ |
| ಕಿಕುಯು | ಕೆನ್ಯಾ | ಜಾವನೀಸ್ | ಇಂಡೋನೇಶ್ಯಾ |
| ಡಚ್ | ಹೋಲೇಂಡ್ | ಯೊರುಬ | ನೈಜೀರಿಯಾ |
| ಡೋಗ್ರಿ | ಭಾರತ | ಭೂತಾನಿ | ಭಾರತ |
| ಜರ್ಮನ್ | ಜರ್ಮನಿ | ಕಾಶ್ಮೀರಿ | ಕಾಶ್ಮೀರ |
| ಸಿಂಹಳಿ | ಶ್ರೀಲಂಕಾ | ದಗ್ಬಾನಿ | ಘಾನಾ |
| ಮೆಂಡೆ | ಸಿರ್‍ರಾಲಿಯೋನ್ | ಝುಮ | ಘಾನಾ |
| ವಾಲಿ | ಘಾನಾ | ಜುಲ | ಐವರಿಕೋಸ್ಟ್ |
| ಬಂಗಾಳಿ | ಬಂಗ್ಲಾದೇಶ | ಬೌಲೆ | ಐವರಿಕೋಸ್ಟ್ |
| ಗುರುಮುಖಿ | ಭಾರತ | ಬಟೆ | ಐವರಿಕೋಸ್ಟ್ |
| ಮಲಯ್ | ಮಲೇಶ್ಯಾ | ಥಾಯ್ | ಥಾಯ್‌ಲೇಂಡ್ |
| ಫಿಜಿಯನ್ | ಫಿಜಿ | ಕ್ಪೆಲ್ಲೆ | ಲೈಬೀರಿಯಾ |
| ಹಿಂದಿ | ಭಾರತ | ಚಿಯಾಂಬ | ಝಾಂಬಿಯಾ |
| ಕುರ್ಡಿಶ್ | ಇರಾನ್ | ಗ್ರೀಕ್ | ಗ್ರೀಸ್ |
| ಸಮೋಅನ್ | ಸಮೊಅ | ಟರ್ಕಿಶ್ | ಟರ್ಕಿ |
| ಕಿಕಾಂಬ | ಕೆನ್ಯಾ | ಬಟ್ಕಿ | ಇಂಡೋನೇಶ್ಯಾ |
| ಎಸ್ಪೆರಾಂಟೋ | ಹೋಲೇಂಡ್ | ಆಫ್ರಿಕಾನ್ಸ್ | ದಕ್ಷಿಣ ಆಫ್ರಿಕ |
| ನೇಪಾಳಿ | ನೇಪಾಳ | ಐರಿಶ್ | ಐಯರ್ಲೇಂಡ್ |
| ಒರೊಮೊ | ಕೆನ್ಯಾ | ವೆಲ್ಶ್ | ವೇಲ್ಸ್ |
| ಇಗ್ಬೋ | ನೈಜೀರಿಯಾ | ಇಂಹಾರಿಕ್ | ಇಥಿಯೋಪಿಯಾ |
| ಅಸಂತಿ | ಘಾನಾ | ಹೌಸಾ | ನೈಜೀರಿಯಾ |

ವಿವಿಧ ಭಾಷೆಗಳಲ್ಲಿ ಪವಿತ್ರ ಖುರ್ಆನಿನ ಆಯ್ದ ವಚನಗಳ ಭಾಷಾಂತರ

| ಭಾಷೆ | ದೇಶ | ಭಾಷೆ | ದೇಶ |
|---|---|---|---|
| ಟಿಮ್ನಿ | ಸಿರ್ರ್ರಾಲಿಯೋನ್ | ಮರಾಠಿ | ಭಾರತ |
| ಚೈನೀಸ್ | ಚೀನಾ | ಅಸ್ಸಾಮೀಸ್ | ಭಾರತ |
| ಟಗಲೊಗ್ | ಮಲೇಶ್ಯಾ | ಗುಜರಾಥಿ | ಭಾರತ |
| ಡುಸುನ್ | ಮಲೇಶ್ಯಾ | ಸಿಂಧಿ | ಪಾಕಿಸ್ಥಾನ |
| ಲಿಂಗಲ | ಝ್ಯೈರೆ | ಪಂಜಾಬಿ | ಪಾಕಿಸ್ಥಾನ |
| ಕಿಕೊಂಗೊ | ಝ್ಯೈರೆ | ಸರೈಕಿ | ಪಾಕಿಸ್ಥಾನ |
| ಚಿಲುಬ | ಝ್ಯೈರೆ | ವಿಯೆಟ್ನಾಮೀಸ್ | ವಿಯೆಟ್ನಾಂ |
| ಕ್ನೋಸ | ದಕ್ಷಿಣ ಆಫ್ರಿಕ | ಪರ್ಶಿಯನ್ | ಇರಾನ್ |
| ಉರ್ದು | ಪಾಕಿಸ್ಥಾನ | ಹಂಗೇರಿಯನ್ | ಹಂಗರಿ |
| ಪುಶ್ತು | ಪಾಕಿಸ್ಥಾನ | ಬಲ್ಗೇರಿಯನ್ | ಬಲ್ಗೇರಿಯಾ |
| ಫುಲನಿ | ಗಾಂಬಿಯಾ | ರುಮಾನಿಯನ್ | ರುಮಾನಿಯಾ |
| ವೊಲೊಫ್ | ಗಾಂಬಿಯಾ | ಇಸ್ಟೋನಿಯನ್ | ಯು. ಎಸ್. ಎಸ್. ಆರ್. |
| ಮಂಡಿಂಕ | ಗಾಂಬಿಯಾ | ಲಿತುಅನಿಯನ್ | ,, ,, |
| ಟೋಂಗ | ಟೋಂಗ | ಲತ್ವಿಯನ್ | ,, ,, |
| ಕಿರಿಬತಿ | ಕಿರಿಬತಿ | ಜೊರ್ಜಿಯನ್ | ,, ,, |
| ಬರ್ಮೀಸ್ | ಬರ್ಮಾ | ಕಝಖ್ | ,, ,, |
| ಮೌರಿ | ಆಸ್ಟ್ರೇಲಿಯಾ | ಝೆಕ್ | ಝೆಕೋಸ್ಲೋವಾಕಿಯಾ |
| ವ್ಯಾ | ಲೈಬೀರಿಯಾ | ಪೋಲಿಶ್ | ಪೋಲೇಂಡ್ |
| ಬಸ್ಸ | ಲೈಬೀರಿಯಾ | ಓಯುಗುರ್ | ಯು. ಎಸ್. ಎಸ್. ಆರ್. |
| ಕ್ರೋಲ್ | ಮೊರಿಷ್ಯಸ್ | ಉಕ್ರೇನಿಯನ್ | ,, ,, |
| ಬೆಂಬಾ | ಝಾಂಬಿಯಾ | ಅರ್ಮೇನಿಯನ್ | ಅರ್ಮೇನಿಯಾ |
| ಗಾ | ಘಾನಾ | ಸೆರ್ಬೋ-ಕ್ರೋಟಿಯನ್ | ಯುಗೋಸ್ಲಾವಿಯಾ |

*With Best Compliments From :*

# ROYAL AGENCY

PRINTERS, BOOK SELLERS & EDUCATIONAL SUPPLIERS

**CANNANORE - 670 001**

*PHONE No. 64498*

*Head Office : P. O. PAYANGADI - 670 303. (Kerala)*

*PHONE No.* **12**

# ವಿವಿಧ ಭಾಷೆಗಳಲ್ಲಿ ಪ್ರವಾದಿ ವಚನಗಳ ಅನುವಾದ

**ಅಹ್ಮದಿಯಾ ಶತಾಬ್ದ ಆಚರಣೆಯ ಅಂಗವಾಗಿ ಜಗತ್ತಿನ ಅನೇಕ ಭಾಷೆಗಳಲ್ಲಿ ಮುಹಮ್ಮದ್ ಪೈಗಂಬರರ ಆಯ್ದ ವಚನಗಳನ್ನು ಅಹ್ಮದಿಯಾ ಜಮಾಅತ್ ಪ್ರಕಟಿಸಿದೆ.**

| ಭಾಷೆ | ದೇಶ | ಭಾಷೆ | ದೇಶ |
|---|---|---|---|
| ಸ್ವಾಹಿಲಿ | ಕೆನ್ಯಾ | ನೋರ್ವೆಜಿಯನ್ | ನೋರ್ವೆ |
| ಕಿಕಾಂಬ | ,, | ಬಾಲಿ | ಇಂಡೋನೇಶ್ಯಾ |
| ಕಿಕುಯು | ,, | ಮಲಯ್ | ಮಲೇಶ್ಯಾ |
| ಪೋರ್ಚುಗೀಸ್ | ಬ್ರೆಝಿಲ್ | ಯೊರುಬಾ | ನೈಜೀರಿಯಾ |
| ಹಿಂದಿ | ಭಾರತ | ಉಗಾಂಡಾ | ಉಗಾಂಡಾ |
| ಸಿಂಹಳಿ | ಶ್ರೀಲಂಕಾ | ಕ್ರಿಯೊಲೆ | ಮೊರಿಷ್ಯಸ್ |
| ಇಂಡೋನೇಶ್ಯನ್ | ಇಂಡೋನೇಶ್ಯಾ | ಯಿದ್ದಿಶ್ | ಇಸ್ರೇಲ್ |
| ಇಂಗ್ಲಿಷ್ | ಯು. ಕೆ. | ಇಂಹಾರಿಕ್ | ಇಥಿಯೋಪಿಯಾ |
| ತಮಿಳು | ಭಾರತ | ದಗ್‌ಬಾನಿ | ಘಾನಾ |
| ನೇಪಾಳಿ | ನೇಪಾಳ | ಜುಲಾ | ಐವರಿಕೋಸ್ಟ್ |
| ಡೋಗ್ರಿ | ಭಾರತ | ಬಾಟೆ | ,, |
| ಒರೊಮೊ | ಕೆನ್ಯಾ | ಐರಿಶ್ | ಐಯರ್ಲೆಂಡ್ |
| ಜಪಾನೀಸ್ | ಜಪಾನ್ | ಚಿಚಿವಾ | ಝಾಂಬಿಯಾ |
| ಜರ್ಮನ್ | ಜರ್ಮನಿ | ಕಟ್ಲಾನ್ | ಸ್ಪೈನ್ |
| ಬೆಂಬಾ | ಝಾಂಬಿಯಾ | ಫುಲಾನಿ | ಗಾಂಬಿಯಾ |
| ಇವೆ | ಘಾನಾ | ಮಾಂದಿಂಕ | ,, |
| ಫ್ರೆಂಚ್ | ಫ್ರಾನ್ಸ್ | ವಿಯೆಟ್ನಾಮಿ | ವಿಯೆಟ್ನಾಂ |
| ಫಿಜಿಯನ್ | ಫಿಜಿ | ಮರಾಠಿ | ಭಾರತ |
| ಕಾಶ್ಮೀರಿ | ಕಾಶ್ಮೀರ್ | ಗುಜರಾತಿ | ,, |
| ಎಸ್ಪರಾಂಟೋ | ಹೋಲೆಂಡ್ | ಝುಮ | ಘಾನಾ |
| ಕೊರಿಯನ್ | ಕೊರಿಯಾ | ಪರ್ಶಿಯನ್ | ಇರಾನ್ |
| ಡಚ್ | ಹೋಲೆಂಡ್ | ಸಿಂಧಿ | ಪಾಕಿಸ್ಥಾನ |
| ತೆಲುಗು | ಭಾರತ | ಪಂಜಾಬಿ | ,, |
| ಮೆಂಡೆ | ಸಿರ್‍ರಾಲಿಯೋನ್ | ಇಟೆಲಿಯನ್ | ಇಟಲಿ |
| ಟರ್ಕಿಶ್ | ಟರ್ಕಿ | ಆಫ್ರಿಕಾನ್ಸ್ | ದ. ಆಫ್ರಿಕ |
| ಸ್ಪಾನಿಶ್ | ಸ್ಪೈನ್ | ಬಸ್ಸ | ಲೈಬೀರಿಯಾ |
| ಉರ್ದು | ಪಾಕಿಸ್ಥಾನ | ಲಿಂಗಾಲ | ಝೈರೆ |
| ಸಮೋಅನ್ | ಸಮೊಅ | ಚಿಲುಬ | ,, |
| ಟೋಂಗನ್ | ಟೋಂಗಾ | ಹಂಗೇರಿಯನ್ | ಹಂಗೆರಿ |
| ಡ್ಯಾನಿಶ್ | ಡೆನ್ಮಾರ್ಕ್ | ರುಮಾನಿಯನ್ | ರುಮಾನಿಯಾ |
| ಸ್ವೀಡಿಶ್ | ಸ್ವೀಡನ್ | ಲಟ್ವಿಯನ್ | ಯು. ಎಸ್. ಎಸ್. ಆರ್. |

| ಭಾಷೆ | ದೇಶ | ಭಾಷೆ | ದೇಶ |
|---|---|---|---|
| ಜಾರ್ಜಿಯನ್ | ಯು. ಎಸ್. ಎಸ್. ಆರ್. | ಚಿಯಾಓ | ಝಾಂಬಿಯಾ |
| ಕಝಾಖ್ | ,, | ಪುಶ್ತು | ಪಾಕಿಸ್ಥಾನ |
| ಓಯುಗುರ್ | ,, | ವೊಲೊಫ್ | ಗಾಂಬಿಯಾ |
| ಸೆರ್ಬೊ–ಕ್ರೋಟಿಯನ್ | ಯುಗೋಸ್ಲಾವಿಯಾ | ಕಿರಿಬತಿ | ಕಿರಿಬತಿ |
| ಗುರುಮುಖಿ | ಭಾರತ | ಚಿಮ್ನಿ | ಸಿರ್‍ರಾಲಿಯೋನ್ |
| ಒರಿಯಾ | ,, | ಅಸ್ಸಾಮಿ | ಭಾರತ |
| ಕನ್ನಡ | ,, | ಚೈನೀಸ್ | ಚೀನಾ |
| ಮಲಯಾಳಂ | ,, | ಡುಸುನ್ | ಮಲೇಶ್ಯಾ |
| ಫಾಂಟಿ | ಘಾನಾ | ಕುರ್ಡಿಶ್ | ಇರಾನ್ |
| ಗಾ | ,, | ಗ್ರೀಕ್ | ಗ್ರೀಸ್ |
| ವಾಲಿ | ,, | ವ್ಯಾ | ಲೈಬೀರಿಯಾ |
| ಜಾವನೀಸ್ | ಇಂಡೋನೇಶ್ಯಾ | ಪೆಲ್ಲೆ | ,, |
| ಮೌರಿ | ಆಸ್ಟ್ರೇಲಿಯಾ | ಕ್ಸೋಸಾ | ದ. ಆಫ್ರಿಕ |
| ಹೌಸ | ನೈಜೀರಿಯಾ | ಯಓ | ಟಾಂಝಾನಿಯಾ |
| ಇಗ್ಬೋ | ,, | ಕಿಕೊಂಗೊ | ಝೈರೆ |
| ಹಿಬ್ರೂ | ಇಸ್ರೇಲ್ | ರಶ್ಯನ್ | ರಶ್ಯಾ |
| ಬಾಟ್ಕಿ | ಇಂಡೋನೇಶ್ಯಾ | ಬಲ್ಗೇರಿಯನ್ | ಬಲ್ಗೇರಿಯಾ |
| ಅಶಂತಿ | ಘಾನಾ | ಇಸ್ಟೋನಿಯನ್ | ಯು. ಎಸ್. ಎಸ್. ಆರ್. |
| ಅರ್ಮೇನಿಯನ್ | ಅರ್ಮೇನಿಯಾ | ಲಿತುನಿಯನ್ | ,, |
| ಬೌಲೆ | ಐವರಿಕೋಸ್ಟ್ | ಝೆಕ್ | ಝೆಕೋಸ್ಲೋವಾಕಿಯಾ |
| ಥಾಯ್ | ಥ್ಯಾಲೇಂಡ್ | ಪೋಲಿಶ್ | ಪೋಲೇಂಡ್ |
| ವೆಲ್ಶ್ | ವೇಲ್ಸ್ | ಉಕ್ರೇನಿಯನ್ | ಯು. ಎಸ್. ಎಸ್. ಆರ್. |

**LOVE FOR ALL HATRED FOR NONE**

**ಎಲ್ಲರೊಡನೆಯೂ ಪ್ರೀತಿ, ಯಾರೊಡನೆಯೂ ದ್ವೇಷವಿಲ್ಲ**

— ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್
ಅಹ್ಮದಿಯಾ ಸಂಘಟನೆಯ ತೃತೀಯ ಖಲೀಫ

# ಅಹ್ಮದಿಯಾ ಚರಿತ್ರೆ–
# ಕೆಲವು ಮುಖ್ಯ ಘಟನೆಗಳು

**ಅಹ್ಮದಿಯಾ ಜಮಾಅತಿನ ಸ್ಥಾಪಕರ ಬಗ್ಗೆ**

**1835 :** 13ನೇ ಫೆಬ್ರವರಿ (ಹಿಜರಿ ಶಕ 14ನೇ ಶವ್ವಾಲ್ 1250)ಶುಕ್ರವಾರದಂದು ಸೂರ್ಯೋದಯದ ಬಳಿಕ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರ ಜನನ.

**1842 :** ಪ್ರಾಥಮಿಕ ವಿದ್ಯಾಭ್ಯಾಸ – ಮುನ್ಶಿ ಫಝ್ಲ್ ಇಲಾಹಿ ಸಾಹೇಬರಿಂದ.

**1846 :** ಮೌಲ್ವಿ ಫಝ್ಲ್ ಅಹ್ಮದ್ ಸಾಹೇಬರಿಂದ ಅರಬಿ ವ್ಯಾಕರಣ (ಸರಫ್–ನಹವ್) ಶಿಕ್ಷಣ.

**1852 :** ಹುರ್ಮತ್ ಬೀಬಿ ಅವರೊಂದಿಗೆ ವಿವಾಹ.

**1853 :** ಮೌಲ್ವಿ ಗುಲ್ ಅಲೀ ಶಾಹ್ ಸಾಹೇಬರಿಂದ ನಹವ್, ಮಂತಿಖ್ ಶಿಕ್ಷಣ.

**1864 :** ಕ್ರೈಸ್ತ ಪಾದರಿಗಳೊಡನೆ ವಾದ–ಪ್ರತಿವಾದಕ್ಕೆ ಆರಂಭ.

**1868 :** "ಬಾದ್‌ಶಾಹ್ ತೇರೆ ಕಪ್ಡೋಂಸೆ ಬರ್ಕತ್ ಡೂಡೇಂಗೆ" (ರಾಜರುಗಳು ನಿನ್ನ ವಸ್ತ್ರಗಳಿಂದ ಅನುಗ್ರಹವನ್ನು ಆಶಿಸುವರು) ಎಂಬ ದೈವಿಕ ವಚನದ ಪ್ರಕಟಣೆ (ಇಲ್ಹಾಂ)

**1875 :** ಖಾದಿಯಾನದಲ್ಲಿ ಮಸ್ಜಿದ್ ಅಖ್ಸಾಕ್ಕೆ ತಂದೆ ಮಿರ್ಝಾ ಗುಲಾಂ ಮುರ್ತಝಾ ಸಾಹೇಬ್‌ರಿಂದ ಶಿಲಾನ್ಯಾಸ. 1876ರಲ್ಲಿ ಮಸೀದಿ ನಿರ್ಮಾಣ ಪೂರ್ಣಗೊಂಡಿತು.

**1876 :** ಜೂನ್ 6ರಂದು ಪಿತೃ ವಿಯೋಗ.
"ಅಲಯ್‌ಸಲ್ಲಾಹು ಬಿಕಾಫಿನ್ ಅಬ್ದಹು" (ತನ್ನ ದಾಸನಿಗೆ ಅಲ್ಲಾಹನು ಸಾಕಾಗನೇ?) ಎಂಬ ದೈವಿಕ ವಚನದ ಪ್ರಕಟನೆ (ಇಲ್ಹಾಂ)

**1878 :** ಆರ್ಯ ಸಮಾಜದವರೊಂದಿಗೆ ವಾದ–ವಿವಾದ.

**1879 :** ಬ್ರಹ್ಮ ಸಮಾಜದವರೊಂದಿಗೆ ಸಂವಾದ.

**1880 :** ಬರಾಹೀನೆ ಅಹ್ಮದಿಯಾ ಎಂಬ ವಿಖ್ಯಾತ ಗ್ರಂಥದ 1ನೇ ಮತ್ತು 2ನೇ ಸಂಪುಟಗಳ ಪ್ರಕಾಶನ. 10 ಸಾವಿರ ರೂಪಾಯಿಗಳ ಬಹುಮಾನದ ಪಂಥಾಹ್ವಾನ.

**1883 :** ಮಸ್ಜಿದ್ ಮುಬಾರಕ್‌ನ ನಿರ್ಮಾಣ.
ಪಂಡಿತ್ ಲೇಖ್‌ರಾಮ್‌ರೊಂದಿಗೆ ವಾಗ್ವಾದ.

**1884 :** ನವೆಂಬರ್ 17ರಂದು ಹಝ್ರತ್ ಸಯ್ಯಿದ ನುಸ್ರತ್ ಜಹಾನ್ ಬೇಗಮ್‌ರೊಂದಿಗೆ ವಿವಾಹ.

**1885 :** ಮಾರ್ಚ್ ತಿಂಗಳಲ್ಲಿ ಒಂದು ಕರಪತ್ರ ಮೂಲಕ ತಾನು "ಮುಜದ್ದಿದ್" (ಧರ್ಮ ಸುಧಾರಕ) ಎಂದು ಘೋಷಿಸಿದರು. ಉರ್ದು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಈ ಕರಪತ್ರದ 20 ಸಾವಿರ ಪ್ರತಿಗಳನ್ನು ಮುದ್ರಿಸಿ ಏಷ್ಯಾ, ಯುರೋಪ್ ಮತ್ತು ಅಮೇರಿಕದ ಎಲ್ಲಾ ಪ್ರಮುಖ ಮತ ಪಂಡಿತರಿಗೂ ರಾಜಕೀಯ ನೇತಾರರಿಗೂ ಇತರ ಗಣ್ಯ ವ್ಯಕ್ತಿಗಳಿಗೂ ಕಳುಹಿಸಲಾಯಿತು. ಆ ಕಾಲದ ಯಾವನೇ ಗಣ್ಯ ವ್ಯಕ್ತಿಗೆ ಈ ಸಂದೇಶ ತಲಪದಿರಲಿಲ್ಲ.

ಸಪ್ಟೆಂಬರ್ 19ರಂದು, ಹಜ್ ವೇಳೆಯಲ್ಲಿ ಅರಫಾತ್ ಮೈದಾನದಲ್ಲಿ ಹಝ್ರತ್ ಅಹ್ಮದ್‌ರವರ ಪ್ರಾರ್ಥನೆಯು ಹಝ್ರತ್ ಸೂಫೀ ಅಹ್ಮದ್ ಜಾನ್ ಸಾಹೇಬರಿಂದ ಪಠಿಸಲ್ಪಟ್ಟಿತು. ಕಅಬ ಮತ್ತು ಇತರ ಪವಿತ್ರ ಸ್ಥಳಗಳಲ್ಲಿ ಸಹ ಈ ಪ್ರಾರ್ಥನೆಯನ್ನು ಪಠಿಸಲಾಯಿತು.

ಡಿಸೆಂಬರ್ ತಿಂಗಳಲ್ಲಿ ಹಝ್ರತ್ ಅಹ್ಮದ್‌ರೊಂದಿಗೆ ಹಝ್ರತ್ ಮೌಲಾನಾ ನೂರುದ್ದೀನ್ ಸಾಹೇಬ್ (ನಂತರ ಇವರು ಅಹ್ಮದಿಯಾ ಜಮಾಅತಿನ ಪ್ರಥಮ ಖಲೀಫರಾದರು.) ಅವರ ಭೇಟಿ.

1886 : ಫೆಬ್ರವರಿ 20– "ಮುಸ್ಲಿಹ್ ಮೌಊದ್" ರವರ ಬಗ್ಗೆ ಭವಿಷ್ಯ ನುಡಿಯನ್ನು ಕರ ಪತ್ರ ಮೂಲಕ ಹಝ್ರತ್ ಅಹ್ಮದ್‌ರವರು ಪ್ರಕಟಿಸಿದರು.

ಎಪ್ರಿಲ್ 15 - ಆರ್ಯ ಸಮಾಜದ ಪ್ರಸಿದ್ಧ ನೇತಾರನ್ನು "ಮುಬಾಹಲ" (ಪ್ರಾರ್ಥನಾ ಸಮರ)ಕ್ಕೆ ಆಹ್ವಾನಿಸಿದರು.

1888 : ಜೂನ್ ತಿಂಗಳಲ್ಲಿ "ಬೈಅತ್" ಪಡೆಯಲಿಕ್ಕೆ ಅಲ್ಲಾಹನ ನಿರ್ದೇಶ.

ಡಿಸೆಂಬರ್ 1ರಂದು " ಬೈಅತ್ " ಬಗ್ಗೆ ಘೋಷಣೆ.

1889 : ಜನವರಿ 12– "ಬೈಅತ್" (ಅಹ್ಮದಿಯಾ ಜಮಾಅತಿಗೆ ಸೇರುವಾಗ ಮಾಡುವ ಪ್ರತಿಜ್ಞೆ) ಬಗ್ಗೆ ಹಸ್ತಪತ್ರ ಮೂಲಕ 10 ನಿಬಂಧನೆ ಗಳ ಪ್ರಕಟಣೆ.

ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ (ಮುಸ್ಲಿಹ್ ಮೌಊದ್) ಅವರ ಜನನ.

ಮಾರ್ಚ್ 23 - ಲುಧಿಯಾನದಲ್ಲಿ ಹಝ್ರತ್ ಸೂಫೀ ಅಹ್ಮದ್ ಜಾನ್ ಸಾಹೇಬರ ಮನೆಯಲ್ಲಿ ಪ್ರಥಮ "ಬೈಅತ್" ಸ್ವೀಕಾರ ಮತ್ತು ಅಹ್ಮದಿಯಾ ಜಮಾಅತಿನ ಸ್ಥಾಪನೆ. ಪ್ರಥಮವಾಗಿ ಹಝ್ರತ್ ಮೌಲಾನಾ ನೂರುದ್ದೀನ್ ಸಾಹೇಬ್, ಮತ್ತೆ ಹಝ್ರತ್ ಹಾಫಿಝ್ ಹಾಮಿದ್ ಅಲಿ ಸಾಹೇಬ್, ಹಝ್ರತ್ ಮುನ್ಶಿ ಅಬ್ದುಲ್ಲಾ ಸುನೊರಿ ಸಾಹೇಬ್, ಹಝ್ರತ್ ಮುನ್ಶಿ ಅರೂಡಾ ಖಾನ್ ಸಾಹೇಬ್ ಬೈಅತ್ ಪ್ರತಿಜ್ಞೆ ಮಾಡಿ ಶಿಷ್ಯತ್ವವನ್ನು ಪಡೆದರು. ಕೆಲವೇ ದಿನಗಳಲ್ಲಿ ಹಝ್ರತ್ ಮುನ್ಶೀ ಝಫರ್ ಅಹ್ಮದ್ ಸಾಹೇಬ್, ಹಝ್ರತ್ ಪೀರ್ ಸಿರಾಜುಲ್ ಹಕ್ ನುಅ್‌ಮಾನಿ ಸಾಹೇಬ್, ಹಝ್ರತ್ ಮೌಲ್ವೀ ಅಬ್ದುಲ್ ಕರೀಂ ಸಾಹೇಬ್ ಸಿಯಾಲ್ ಕೋಟಿ ಮತ್ತು ಹಝ್ರತ್ ಶೈಖ್ ಯಾಕೂಬ್ ಅಲೀ ಸಾಹೇಬ್ ತರಾಬ್ "ಬೈಅತ್" ಪ್ರತಿಜ್ಞೆ ಮಾಡಿದರು.

1890 : ಮಸೀಹ್ ವಾದವನ್ನು ಘೋಷಿಸಿದರು.

1891 : ಮೇ 20 – ಯೇಸು ಕ್ರಿಸ್ತರ ಮರಣದ ಬಗ್ಗೆ ಚರ್ಚೆ ನಡೆಸಲು ಪಾದರಿಗಳಿಗೆ ಆಮಂತ್ರಣ.

ಮಹ್‌ದಿ ವಾದದ ಘೋಷಣೆ.

ಡಿಸೆಂಬರ್ 27 – ಅಹ್ಮದಿಯಾ ಜಮಾಅತಿನ ಮೊತ್ತಮೊದಲ ವಾರ್ಷಿಕ ಸಮ್ಮೇಳನ (ಜಲ ಸಾ ಸಾಲಾನ) ಖಾದಿಯಾನಿನ "ಮಸ್ಜಿದ್ ಅಖ್ಸಾ" ದಲ್ಲಿ ಸಮಾವೇಶಗೊಂಡಿತು. ಅದರಲ್ಲಿ 75 ಮಂದಿ ಪಾಲುಗೊಂಡಿದ್ದರು.

1892 : ಡಿಸೆಂಬರ್ 10 – ಮುಸ್ಲಿಂ ಮತ ಪಂಡಿತ ರಿಗೆ ಮೊತ್ತಮೊದಲ "ಮುಬಾಹಲ" ಆಹ್ವಾನ.

1893 : ಜನವರಿ – ಒಂದೇ ರಾತ್ರಿಯಲ್ಲಿ ಅರಬಿ ಭಾಷೆಯ ನಲ್ವತ್ತು ಸಾವಿರ ಮೂಲ ಪದಗ ಳನ್ನು ಅಲ್ಲಾಹನು ಹಝ್ರತ್ ಅಹ್ಮದ್‌ರಿಗೆ ಕಲಿಸಿದನು.

1894 : ಮಾರ್ಚ್ 20 – ಹಝ್ರತ್ ಮುಹಮ್ಮದ್ ಪೈಗಂಬರ್ (ಸ.) ರವರ ಭವಿಷ್ಯ ನುಡಿಯ ಪ್ರಕಾರ ರಮಝಾನ್ ತಿಂಗಳ 13ರಂದು (ಹಿಜರಿ 1311) ಚಂದ್ರಗ್ರಹಣವಾಯಿತು.

ಏಪ್ರಿಲ್ 6 -- ಹಝ್ರತ್ ಮುಹಮ್ಮದ್ ಪೈಗಂಬರ (ಸ.) ರವರ ಭವಿಷ್ಯೋಕ್ತಿಯಂತೆ (ಹಿಜರಿ 1311) ಸೂರ್ಯಗ್ರಹಣವಾಯಿತು.

1895 : ಖಾದಿಯಾನ್‌ನಲ್ಲಿ ಝಿಯಾಉಲ್ ಇಸ್ಲಾಂ ಪ್ರೆಸ್ ಮತ್ತು ಪುಸ್ತಕ ಭಂಡಾರ ಸ್ಥಾಪನೆ.

ಮೇ 24 – ಪುತ್ರ ಹಝ್ರತ್ ಮಿರ್ಝಾ ಶರೀಫ್ ಅಹ್ಮದ್ ಸಾಹೇಬರ ಜನನ.

ಜೂನ್ 15 - ಅರಬಿ ಭಾಷೆ ಎಲ್ಲಾ ಭಾಷೆ ಗಳ ಮಾತೆ ಎಂದು ಸಮರ್ಥಿಸುವ "ಮಿನನುರ್ರಹ್ಮಾನ್" ಎಂಬ ಗ್ರಂಥದ ಪ್ರಕಟಣೆ.

1896 : ಜನವರಿ–1 ಶುಕ್ರವಾರ ರಜಾದಿನವಾಗಿ ಸಾರಬೇಕೆಂದು ಹಝ್ರತ್ ಅಹ್ಮದ್‌ರವರು ಕರ ಪತ್ರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು.

ಮಾರ್ಚ್ – ಅಲ್ಲಾಹನ ಆದೇಶಾನುಸಾರ ಭಾರತದ ಎಲ್ಲಾ ಪ್ರಮುಖ ಅಹ್ಮದೀ ವಿರೋಧಿ ನೇತಾರರಿಗೆ "ಮುಬಾಹಲ" ಪಂಥಾಹ್ವಾನದ ಕರೆ.

ಜುಲ್ಯಾ 27 – ಹಝ್ರತ್ ಅಹ್ಮದ್‌ರೊಂದಿಗೆ ಪ್ರಾರ್ಥನಾ ಸಮರ ಮಾಡಿದ ಅಬ್ದುಲ್ಲಾ ಅಥಮ್‌ರ ಮರಣ.

ಡಿಸೆಂಬರ್ 26ರಿಂದ 29ರ ವರೆಗೆ ಲಾಹೋರ್‌ನಲ್ಲಿ ಸಮಾವೇಶಗೊಂಡ ಸರ್ವ ಧರ್ಮ ಮಹಾಸಮ್ಮೇಳನದಲ್ಲಿ 28 ಮತ್ತು 29 ರಂದು ಹಝ್ರತ್ ಅಹ್ಮದ್‌ರವರು ಬರೆದ "ಇಸ್ಲಾಮಿ ಉಸೂಲ್ ಕಿ ಫಿಲಾಸಫಿ" (ಇಸ್ಲಾಂ ಮತ ತತ್ವಜ್ಞಾನ) ಎಂಬ ಪ್ರಬಂಧವನ್ನು ಓದಲಾಯಿತು. ಆ ಪ್ರಬಂಧವು ಸರ್ವೋತ್ತಮವೆಂದು ಸಮ್ಮೇಳನದಲ್ಲಿ ಘೋಷಿಸಲ್ಪಟ್ಟಿತು.

1897 : ಮಾರ್ಚ್ – 6 ಹಝ್ರತ್ ಅಹ್ಮದ್‌ರವರ ಭವಿಷ್ಯ ನುಡಿಯಂತೆ ಪಂಡಿತ್ ಲೇಖ್‌ರಾಮ್‌ರ ಮರಣ.

ಅಕ್ಟೋಬರ್ 8 – ಜಮಾಅತಿನ ಮೊತ್ತಮೊದಲ ಪತ್ರಿಕೆಯಾದ "ಅಲ್ ಹಕಮ್"ನ ಆರಂಭ.

1898 : ಜನವರಿ 3 – ಹಝ್ರತ್ ಅಹ್ಮದ್‌ರಿಂದ "ತಅ್‌ಲೀಮುಲ್ ಇಸ್ಲಾಂ" ವಿದ್ಯಾಲಯದ ಉದ್ಘಾಟನೆ.

ಫೆಬ್ರವರಿ 6 – ಪಂಜಾಬಿನಲ್ಲಿ ಪ್ಲೇಗ್ ರೋಗ ಹರಡುವುದೆಂದು ಕರಪತ್ರ ಮೂಲಕ ಭವಿಷ್ಯ ನುಡಿ.

ಎಪ್ರಿಲ್ 1 – ಜಗತ್ತಿನ ಪ್ರಮುಖ ಭಾಷೆಗಳಲ್ಲಿ ಅಹ್ಮದಿಯಾ ಸಾಹಿತ್ಯ ಪ್ರಕಟನಾ ಯೋಜನೆಯ ಘೋಷಣೆ.

1900 : ನವೆಂಬರ್ 4 – ಜಮಾಅತಿಗೆ "ಮುಸಲ್ಮಾನ್ ಫಿರ್ಕಃ ಅಹ್ಮದಿಯಾ" ಎಂದು ನಾಮಕರಣ ಮಾಡಲಾಗಿದೆಯೆಂದು ಕರಪತ್ರ ಮೂಲಕ ಘೋಷಣೆ.

1901 : ಜನವರಿ 15 – ಹಝ್ರತ್ ಅಹ್ಮದ್‌ರವರು "ರಿವ್ಯೂ ಆಫ್ ರಿಲಿಜಿಯನ್ಸ್" ಎಂಬ ಪತ್ರಿಕೆಯನ್ನು ಆರಂಭಿಸಿದರು.

1902 : ಮಾರ್ಚ್ 5 – ಜಮಾಅತಿಗಾಗಿ ಅಹ್ಮದೀ ಮುಸ್ಲಿಮರ ಮಾಸಿಕ ದೇಣಿಗೆ ನೀಡಿಕೆ ಯೋಜನೆಯ ಆರಂಭ.

ಸೆಪ್ಟೆಂಬರ್ – ಡಾಕ್ಟರ್ ಡೂಯಿಗೆ ಪ್ರಾರ್ಥನಾ ಸಮರದ ಪಂಥಾಹ್ವಾನ. ಅವರ ಅಂತ್ಯದ ಬಗ್ಗೆ ಭವಿಷ್ಯ ನುಡಿ.

ಅಕ್ಟೋಬರ್ 13 – "ಅಲ್ ಬದ್ರ್" ಸಾಪ್ತಾಹಿಕದ ಆರಂಭ.

ನವೆಂಬರ್ 15 – "ಇಅ್‌ಜಾಝೆ ಅಹ್ಮದೀ" ಗ್ರಂಥದ ಪ್ರಕಟನೆ ಮತ್ತು 10,000 ರೂಪಾಯಿಗಳ ಬಹುಮಾನದ ಪಂಥಾಹ್ವಾನ.

1903 : ಮಾರ್ಚ್ 13 – "ಮಿನಾರತುಲ್ ಮಸೀಹ್" ಮತ್ತು "ಬೈತುದ್ದುಆ"ಕ್ಕೆ ಶಿಲಾನ್ಯಾಸ.

ಮೇ 28 - ಹಝ್ರತ್ ಅಹ್ಮದ್‌ರವರ ನಿರ್ದೇಶದಂತೆ ಹಝ್ರತ್ ಮೌಲಾನಾ ನೂರುದ್ದೀನ್ ಸಾಹೇಬರಿಂದ "ತಅ್‌ಲೀಮುಲ್ ಇಸ್ಲಾಂ" ಕಾಲೇಜಿನ ಉದ್ಘಾಟನೆ. ಅದರ ಮೊತ್ತ ಮೊದಲ ಪ್ರಿನ್ಸಿಪಾಲ್ ಮೌಲಾನಾ ಶೇರ್ ಅಲಿ ಸಾಹೇಬ್.

ಜುಲ್ಯಾ 14 – ಅಹ್ಮದಿಯತ್ ಸ್ವೀಕರಿಸಿದ ಕಾರಣ ಅಫಘಾನಿಸ್ತಾನದಲ್ಲಿ ಸಾಹಿಬ್ ಝಾದಾ ಅಬ್ದುಲ್ಲತೀಫ್ ಸಾಹೇಬರನ್ನು ಕಲ್ಲೆಸೆದು ವಧಿಸಲಾಯಿತು.

ಡಿಸೆಂಬರ್ – ಹಝ್ರತ್ ಅಹ್ಮದ್‌ರವರು ಭವಿಷ್ಯ ನುಡಿದಂತೆ ಪಂಜಾಬಿನಲ್ಲಿ ಪ್ಲೇಗ್ ರೋಗ ತೀವ್ರಗತಿಯಲ್ಲಿ ಹರಡಿಕೊಂಡಿತು. ಅಸಂಖ್ಯಾತ ಜನರು ಅಹ್ಮದಿಯಾ ಜಮಾಅತಿಗೆ ಸೇರಿದರು.

1904 : ಆಗಸ್ಟ್ 20 ಮತ್ತು ಸಪ್ಟೆಂಬರ್ 3ರ ಮಧ್ಯೆ ಲಾಹೋರ್‌ನಲ್ಲಿ ಇಸ್ಲಾಂ ಮತ್ತು ಇತರ ಧರ್ಮಗಳ ಬಗ್ಗೆ ಹಝ್ರತ್ ಅಹ್ಮದ್‌ರವರು ನಾಲ್ಕು ಪ್ರಧಾನ ಭಾಷಣಗಳನ್ನು ಮಾಡಿದರು.

ನವೆಂಬರ್ 2 – "ಲೆಕ್ಚರ್ ಸಿಯಾಲ್‌ಕೋಟ್" ಗ್ರಂಥದ ಪ್ರಕಟನೆ. "ಕಲ್ಕಿ ಅವತಾರ" ತನ್ನ ಮೂಲಕ ನೆರವೇರಿದೆಯೆಂದು ಹಝ್ರತ್ ಅಹ್ಮದ್‌ರವರ ವಾದ.

1905 : ಮೇ 6 – ಅಬುಲ್ ಕಲಾಂ ಆಝಾದ್‌ರವರ ಹಿರಿಯ ಸಹೋದರ ಅಬೂನ್ನಸರ್‌ರವರು ಖಾದಿಯಾನಕ್ಕೆ ಭೇಟಿಕೊಟ್ಟು ಅಹ್ಮದಿಯತ್ ಸ್ವೀಕರಿಸಿದರು.

ಮೇ 25 - ಅಬುಲ್ ಕಲಾಂ ಆಝಾದ್‌ರವರು ಖಾದಿಯಾನಕ್ಕೆ ಆಗಮಿಸಿ ಹಝ್ರತ್ ಅಹ್ಮದ್‌ರವರನ್ನು ಭೇಟಿಯಾದರು.

ಡಿಸೆಂಬರ್ 20 – "ಅಲ್‌ವಸಿಯ್ಯತ್" ಗ್ರಂಥದ ಪ್ರಕಟನೆ. "ಬಿಹಿಸ್ತಿ ಮಖ್‌ಬರ"ದ ಸ್ಥಾಪನೆ.

1906 : ಜನವರಿ 29 – "ಸದರ್ ಅಂಜುಮನ್ ಅಹ್ಮದಿಯಾ" (ಅಹ್ಮದಿಯಾ ಕೇಂದ್ರ ಸಂಸ್ಥೆ) ಸ್ಥಾಪನೆ.

ಮಾರ್ಚ್ 1 – ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹೇಬರು ಸಂಪಾದಕರಾಗಿ "ತಶ್‌ಹೀಝುಲ್ ಅಝ್‌ಹಾನ್" ಎಂಬ ಉರ್ದು ತ್ರೈಮಾಸಿಕ ಪತ್ರಿಕೆಯ ಆರಂಭ.

ಎಪ್ರಿಲ್ 4 – ಹಝ್ರತ್ ಅಹ್ಮದ್‌ರವರ ಭವಿಷ್ಯನುಡಿಯ ಪ್ರಕಾರ ಚಿರಾಗುದ್ದೀನ್ ಜಮ್ಮೂನಿಯ ಮರಣ.

ಜುಲೈ – "ತಅ್‌ಲೀಮುಲ್ ಇಸ್ಲಾಂ" ಪತ್ರಿಕೆಯ ಆರಂಭ. ಮೊದಲ ಸಂಪಾದಕರು ಹಝ್ರತ್ ಸಯ್ಯದ್ ಸರ್‌ವರ್‌ಶಾಹ್ ಸಾಹೇಬ್.

1907 : ಜನವರಿ – ಹಝ್ರತ್ ಅಹ್ಮದ್‌ರವರ ವಿರೋಧಿ ಸಅದುಲ್ಲಾ ಲುಧಿಯಾನವಿ ಪ್ಲೇಗ್ ರೋಗಕ್ಕೆ ಬಲಿ.

ಮಾರ್ಚ್ 9 – ಡಾಕ್ಟರ್ ಡೂಯಿಯ ಅಂತ್ಯ.
ಮೇ 15 – "ಹಕೀಕತುಲ್ ವಹೀ" ಗ್ರಂಥದ ಪ್ರಕಟನೆ.

ಸೆಪ್ಟೆಂಬರ್ 16 – ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್‌ರಿಂದ ಅಹ್ಮದಿಯತ್ ಸ್ವೀಕಾರ.
ಸಪ್ಟೆಂಬರ್ – "ವಕ್ಫೆ ಝಿಂದಗಿ" (ಅಹ್ಮದಿಯಾ ಜಮಾಅತಿನ ಸೇವೆಗಾಗಿ ಜೀವನಾರ್ಪಣೆ) ಯೋಜನೆಯ ಆರಂಭ.

ಡಿಸೆಂಬರ್ 27 ರಿಂದ 29 – ಹಝ್ರತ್ ಅಹ್ಮದ್‌ರವರ ಜೀವಿತದಲ್ಲಿ ಕೊನೆಯ "ಜಲಸಾ ಸಾಲಾನ" (ವಾರ್ಷಿಕ ಮಹಾ ಸಮ್ಮೇಳನ). ಆ ಸಮ್ಮೇಳನದಲ್ಲಿ 3000 ಮಂದಿ ಪಾಲ್ಗೊಂಡಿದ್ದರು. ಹಝ್ರತ್ ಸಾಹೇಬರು ಎರಡು ಭಾಷಣಗಳನ್ನು ಮಾಡಿದರು.

ಇದೇ ವರ್ಷದಲ್ಲಿ ಖಾದಿಯಾನಿನಲ್ಲಿ ಕಲಿಯುತ್ತಿದ್ದ ಅಬ್ದುಲ್ ಕರೀಂ ಎಂಬ ವಿದ್ಯಾರ್ಥಿ ಹುಚ್ಚುನಾಯಿ ಕಡಿತ ರೋಗ (ಹೈಡ್ರೋಫೋಬಿಯಾ) ಕ್ಕೆ ಗುರಿಯಾದಾಗ ಹಝ್ರತ್ ಅಹ್ಮದ್‌ರವರ ಪ್ರಾರ್ಥನೆಯಿಂದಾಗಿ ಅದ್ಭುತಕರವಾಗಿ ಗುಣ ಹೊಂದಿದರು.

1908 : ಮೇ 20 – ಹಝ್ರತ್ ಅಹ್ಮದ್‌ರವರಿಗೆ ಮರಣ ಸಮೀಪಿಸುತ್ತಿರುವುದಾಗಿ ಅಲ್ಲಾಹನ ಕಡೆಯಿಂದ ದೈವಿಕ ಪ್ರಕಟನೆ. (ಇಲ್ಹಾಂ)

ಮೇ 25 – ತನ್ನ ಅನುಯಾಯಿಗಳಿಗೆ ಹಝ್ರತ್ ಅಹ್ಮದ್‌ರವರ ಕೊನೆಯ ಬೋಧನೆ.

ತನ್ನ ಕೊನೆಯ ಗ್ರಂಥ "ಪೈಗಾಮೆ ಸುಲ್ಹ್" (ಮೈತ್ರಿ ಸಂದೇಶದ) ರಚನೆ.

ಮೇ 26 – ಬೆಳಿಗ್ಗೆ 10–30ಕ್ಕೆ ಲಾಹೋರ್‌ನಲ್ಲಿ ಹಝ್ರತ್ ಅಹ್ಮದ್‌ರವರ ನಿಧನ.

ಮೇ 27 – ಹಝ್ರತ್ ಮೌಲಾನಾ ನೂರುದ್ದೀನ್ ಸಾಹೇಬರು ಪ್ರಥಮ ಖಲೀಫರಾಗಿ ಚುನಾಯಿಸಲ್ಪಟ್ಟರು. ಸಂಜೆ 6 ಗಂಟೆಗೆ ಹಝ್ರತ್ ಅಹ್ಮದ್‌ರವರ ಮೃತದೇಹವನ್ನು ಖಾದಿಯಾನದ "ಬಿಹಿಸ್ತಿ ಮಖ್‌ಬರ" ದಲ್ಲಿ ದಫನ ಮಾಡಲಾಯಿತು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

(ಸಶೇಷ)

# ಇಸ್ಲಾಮ್ ಧರ್ಮದ ವೈಶಿಷ್ಟ್ಯಗಳು

**ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ (ಜಾಗತಿಕ ನೇತಾರ)ರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಅವರು ಆಸ್ಟ್ರೇಲಿಯಾದ ರಾಜಧಾನಿ ಕ್ಯಾನ್‌ಬರದಲ್ಲಿ ನೇಶನಲ್ ಯುನಿವರ್ಸಿಟಿಯ ಫ್ಯಾಕಲ್ಟಿ ಓಫ್ ಆರ್ಟ್ಸ್ ಲೆಕ್ಚರ್ ಹಾಲ್‌ನಲ್ಲಿ ಅಕ್ಟೋಬರ್ 5, 1983ರಲ್ಲಿ ಮಾಡಿದ ಭಾಷಣದ ಕನ್ನಡಾನುವಾದ.**

## ಸತ್ಯ ಯಾರ ಏಕಸ್ವಾಮಿತ್ವಕ್ಕೂ ಒಳಪಟ್ಟಿಲ್ಲ

ಇಸ್ಲಾಮ್ ಧರ್ಮ ಸತ್ಯವನ್ನು ತನ್ನ ಏಕಸ್ವಾಮಿತ್ವಕ್ಕೊಳಪಡಿಸಿಲ್ಲ. ಸತ್ಯಧರ್ಮ ಇಸ್ಲಾಮ್ ಮಾತ್ರವೆಂದೂ ಇಸ್ಲಾಮಿಗಿಂತ ಮೊದಲು ಯಾವುದೇ ಸತ್ಯವಾದ ಧರ್ಮ ಪ್ರಪಂಚದಲ್ಲಿ ಇರಲಿಲ್ಲವೆಂದೂ ಇಸ್ಲಾಮ್ ವಾದಿಸುವುದಿಲ್ಲ. ಅಲ್ಲಾಹನು ಅರಬಿ ಜನಾಂಗದ ಹೊರತು ಬೇರೆ ಯಾವುದೇ ಜನಾಂಗವನ್ನು ತನ್ನ ಪ್ರೀತಿಯಿಂದ ಅನುಗ್ರಹಿಸಲಿಲ್ಲವೆಂದೂ ಅದು ಹೇಳುವುದಿಲ್ಲ. ಸತ್ಯವು ತಮ್ಮದು ಮಾತ್ರ; ಬೇರೆ ಯಾರಿಗೂ ಅದರಲ್ಲಿ ಪಾಲು ಸಿಗಲಿಲ್ಲ ಎಂದು ಸ್ವಯಂ ಘೋಷಿಸುತ್ತಿರುವ ಎಲ್ಲಾ ಮತ, ವರ್ಣ, ವಂಶಜರ ವಾದಗಳನ್ನು ಸಂಪೂರ್ಣವಾಗಿ ರದ್ದುಪಡಿಸುತ್ತಿರುವ ಏಕಮಾತ್ರ ಧರ್ಮ ಅದಾಗಿದೆ. ದೇವನಿಂದ ಜಾರಿಯಾಗುತ್ತಿದ್ದ ಮಾರ್ಗದರ್ಶನದ ಪರಂಪರೆಯು ಸರ್ವರಿಗೂ ಅನುಗ್ರಹದಾಯಕವಾಗಿದ್ದು ಅದು ಎಲ್ಲಾ ಕಾಲಗಳಲ್ಲಿಯೂ ಸೃಷ್ಟಿಗಳಿಗೆ ಅನುಗ್ರಹದಾಯಕವಾಗಿತ್ತು ಮತ್ತು ಪ್ರತಿಯೊಂದು ಕೋಮಿನ ಪ್ರತಿಯೊಂದು ವಂಶದ ಮನುಷ್ಯರನ್ನು ಅದು ತನ್ನ ಮಾರ್ಗದರ್ಶನದ ಪ್ರಕಾಶದಿಂದ ಅನುಗ್ರಹಿಸಿತ್ತು ಹಾಗೂ ಪ್ರಪಂಚದ ಯಾವುದೇ ಭೂಭಾಗ ಅಥವಾ ಕೋಮು ದೇವನಿಂದ ಪ್ರವಾದಿಗಳು ನಿಯೋಜಿಸಲ್ಪಡದೆ ಬಾಕಿ ಉಳಿಯಲಿಲ್ಲ ಎಂದು ಇಸ್ಲಾಮ್ ವಾದಿಸುತ್ತದೆ. ಇವರ ಕುರಿತು ಪವಿತ್ರ ಖುರ್‌ಆನ್ ಹೀಗೆಂದಿದೆ:

> "ನೀನು (ಮುಹಮ್ಮದ್ ಪೈಗಂಬರ್) ಕೇವಲ ಒಬ್ಬ ಮುನ್ನೆಚ್ಚರಿಕೆ ನೀಡುವವನಾಗಿರುವೆ. ಪ್ರತಿಯೊಂದು ಕೋಮಿಗೆ (ದೇವನಿಂದ) ಒಬ್ಬ ಮಾರ್ಗದರ್ಶಕನು ಕಳುಹಿಸಲ್ಪಟ್ಟಿರುವನು." (13:8)

ಆಶ್ಚರ್ಯದ ಸಂಗತಿಯೇನೆಂದರೆ ಪವಿತ್ರ ಖುರ್‌ಆನಿನಲ್ಲಿ ಹೊರತು ಬೇರೆ ಯಾವುದೇ ಧರ್ಮದ ದೈವಿಕ ಗ್ರಂಥಗಳಲ್ಲಿ ಬೇರೆ ಯಾವುದಾದರೂ ಕೋಮಿನಲ್ಲಿ ಅಥವಾ ಭೂಭಾಗದಲ್ಲಿ ಪ್ರತ್ಯಕ್ಷವಾದ ಮತದ ಸತ್ಯತೆಯನ್ನು ಪ್ರಕಟಿಸಿದುದಾಗಿ ಕಾಣಲಾರೆವು. ಇದಕ್ಕೆ ವಿರುದ್ಧವಾಗಿ, ಒಂದು ಪರಿಮಿತಿಗೊಳಪಟ್ಟ ವಲಯದಲ್ಲಿ ಪ್ರತ್ಯಕ್ಷವಾದ ಮತದ ಸತ್ಯತೆಯ ಬಗ್ಗೆ ಆ ಗ್ರಂಥಗಳಲ್ಲಿ ಎಷ್ಟು ಒತ್ತಿಹೇಳಲಾಗುತ್ತಿದೆಯೆಂದರೆ ಮತ್ತು ಬೇರೆ ಕೋಮುಗಳನ್ನೂ ಮನುಷ್ಯರನ್ನೂ ಎಷ್ಟು ನಿರ್ಲಕ್ಷಿಸಲಾಗುತ್ತಿದೆಯೆಂದರೆ, ದೇವನು ಸಹ ಒಂದೇ ಕೋಮಿನ, ಒಂದೇ ವಂಶದ, ಒಂದೇ ಮತದ ಪಾರಂಪರ್ಯವನ್ನು ಗಳಿಸಿದವರ ದೇವನಾಗಿದ್ದನೆಂದೂ ಭೂಲೋಕದಲ್ಲಿ ವಾಸಿಸುತ್ತಿದ್ದ ಬೇರೆ ಮನುಷ್ಯರೊಂದಿಗೆ ಅವನಿಗೆ ಯಾವುದೇ ಸಂಬಂಧವಿರಲಿಲ್ಲವೆಂಬಂತೆಯೂ ಅವುಗಳಲ್ಲಿ ನಿರೂಪಿಸಲಾಗಿದೆ. ಉದಾಹರಣೆಗಾಗಿ, ಬೈಬಲ್ ಇಸ್ರಾಯೇಲ್ ಸಂತತಿಗಳ ದೇವನ ಬಗ್ಗೆ ಹೀಗೆ ನಿರೂಪಿಸುತ್ತದೆ:

> "ಇಸ್ರಾಯೇಲ್ ದೇವರಾದ ಯಹೋವನಿಗೆ ಯುಗಯುಗಾಂತರಗಳ ವರೆಗೂ ಕೊಂಡಾಟವಾಗಲಿ" (೧ ಪೂರ್ವಕಾಲ ವೃತ್ತಾಂತ 16 : 36)

೧ ಸಮುವೇಲ 25 : 32ರಲ್ಲೂ; ೧ ಅರಸುಗಳು 1 : 48ರಲ್ಲೂ; ೨ ಪೂರ್ವಕಾಲ ವೃತ್ತಾಂತ 6 : 4 ರಲ್ಲೂ : ಕೀರ್ತನೆಗಳು 72 : 18 ರಲ್ಲೂ ಇದೇ ರೀತಿಯ ವಚನಗಳನ್ನು ಕಾಣಬಹುದು.

ಆದರೆ ಆ ಗ್ರಂಥದಲ್ಲಿ ಬೇರೆ ಯಾವುದೇ ಕೋಮಿನಲ್ಲಿ ಅಥವಾ ಭೂಭಾಗದಲ್ಲಿ ಹುಟ್ಟಿದ ಧಾರ್ಮಿಕ ಸುಧಾರಕರ ಸತ್ಯತೆಯ ಬಗ್ಗೆ ಯಾವುದೇ

ಸೂಚನೆಯೂ ದೊರಕುವುದಿಲ್ಲ. ಇಸ್ರಾಯೇಲ್ ಸಂತತಿಗಳ ಎಲ್ಲಾ ಪ್ರವಾದಿಗಳು ಕೇವಲ ಇಸ್ರಾಯೇಲ್ ಗೋತ್ರಗಳಿಗೆ ಮಾತ್ರ ಕಳುಹಿಸಲ್ಪಟ್ಟವರೆಂದು ಯಹೂದಿಯರು ನಂಬಿಕೆಯನ್ನು ಹೊಂದಿರುವುದು ಬೈಬಲಿನ ಉಪದೇಶಗಳಿಗೂ ಅದರ ಆಶಯಗಳಿಗೂ ಅನುಸಾರವಾಗಿದೆ.

ಹಝ್ರತ್ ಈಸಾ (ಯೇಸು ಕ್ರಿಸ್ತ)ರು ಸಹ ತಾನು ಇಸ್ರಾಯೇಲ್ ಸಂತತಿಗಳಿಗಾಗಿ ಕಳುಹಿಸಲ್ಪಟ್ಟವನೆಂದು ಹೇಳಿದ್ದರು. ಅವರು ಹೇಳಿದುದನ್ನು ನೋಡಿರಿ:

"ಅದಕ್ಕಾತನು – ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲಿನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ಕಳುಹಿಸಲ್ಪಟ್ಟವನಲ್ಲ ಅಂದನು." (ಮತ್ತಾಯ 15 : 24)

"ದೇವರ ವಸ್ತುವನ್ನು ನಾಯಿಗಳಿಗೆ ಹಾಕಬೇಡಿರಿ: ನಿಮ್ಮ ಮುತ್ತುಗಳನ್ನು ಹಂದಿಗಳ ಮುಂದೆ ಚೆಲ್ಲಬೇಡಿರಿ." (ಮತ್ತಾಯ 7 : 6)

ಇದೇ ರೀತಿ ಹಿಂದೂ ಮತದಲ್ಲಿ ವೇದವನ್ನು ಕಲಿಯುವುದು ಮೇಲ್ಜಾತಿಯವರಿಗೆ ಮಾತ್ರ ಮೀಸಲಾಗಿಡಲಾಗಿದೆ. ನೋಡಿರಿ:

ವೇದವನ್ನು ಶೂದ್ರರು ಆಲಿಸಿದರೆ ರಾಜನು ಸೀಸವನ್ನೂ ಅರಗನ್ನೂ ಕರಗಿಸಿ ಆತನ ಕಿವಿಗೆ ಸುರಿಯಬೇಕು. ವೇದ ಮಂತ್ರವನ್ನು ಉಚ್ಚಾರಣೆ ಮಾಡಿದರೆ ಆತನ ನಾಲಗೆಯನ್ನು ತುಂಡರಿಸಬೇಕು. ವೇದವನ್ನು ಓದಿದರೆ ಆತನ ಶರೀರವನ್ನೇ ತುಂಡರಿಸಬೇಕು. (ಗೌತಮ ಸ್ಮೃತಿ ಅಧ್ಯಾಯ 12)

ಇಂತಹ ನಿಷೇಧಾತ್ಮಕ ಉಪದೇಶಗಳನ್ನು ಕಡೆಗಣಿಸಿದರೂ ಅಥವಾ ಅವುಗಳಿಗೆ ಯಾವುದಾದರೂ ನ್ಯಾಯೀಕರಣ ನೀಡಿದರೂ ಒಂದು ವಾಸ್ತವಿಕ ಸಂಗತಿಯಂತೂ ಸ್ಪಷ್ಟವಾಗುತ್ತದೆ. ಹಿಂದೂ ಧರ್ಮದ ಧಾರ್ಮಿಕ ಗ್ರಂಥಗಳಲ್ಲಿ ಬೇರೆ ಯಾವುದಾದರೂ ಕೋಮಿನ ಅಥವಾ ಪ್ರದೇಶದ ಮತದ ಸತ್ಯತೆಯ ಬಗ್ಗೆ ಯಾವುದೇ ಸೂಚನೆ ಸಹ ಕಂಡು ಬರುವುದಿಲ್ಲ. ಬೇರೆ ಧಾರ್ಮಿಕ ಗ್ರಂಥಗಳ ಸ್ಥಿತಿಯೂ ಇದೇ ರೀತಿಯಾಗಿದೆ. ಕನ್‌ಫ್ಯೂಶಿಯಸ್ ಧರ್ಮದ, ಬುದ್ಧ ಧರ್ಮದ, ಅಥವಾ ಝರತುಷ್ಟ ಧರ್ಮದ ಗ್ರಂಥಗಳಲ್ಲಿ ಬೇರೆ ಯಾವುದೇ ಕೋಮಿನಲ್ಲಿ ಅಥವಾ ರಾಜ್ಯದಲ್ಲಿ ಬಂದ ಧಾರ್ಮಿಕ ಮಾರ್ಗದರ್ಶಕರ ಸತ್ಯತೆಯನ್ನು ಪ್ರಕಟಿಸುವುದಾಗಿ ಕಾಣಲಾರೆವು. ಪ್ರತಿಯೊಂದು ಧರ್ಮದವರೂ ತಮ್ಮ ಕೋಮಿನ ಬಗ್ಗೆಯೇ ಕಾಳಜಿ ಹೊಂದಿರುವವರು. ಪ್ರತಿಯೊಂದು ಜನಾಂಗದ ದೇವನು ಅದೇ ಜನಾಂಗದ ದೇವನಾಗಿರುವನು. ಅವನಿಗೆ ಬೇರೆ ಸೃಷ್ಟಿಗಳೊಂದಿಗೆ ಯಾವುದೇ ಸಂಬಂಧವಿರುವುದಾಗಿ ಕಾಣುವುದಿಲ್ಲ.

ಇಲ್ಲಿ ಒಂದು ಮುಖ್ಯ ಪ್ರಶ್ನೆಯುದಿಸುತ್ತದೆ– ಎಲ್ಲಾ ಧರ್ಮಗಳೂ ಸತ್ಯವಾಗಿದ್ದರೆ, ದೇವನ ಕಲ್ಪನೆಯನ್ನು ಈ ರೀತಿ ಸೀಮಿತಗೊಳಿಸಿ ಮುಂದಿಡುವುದರಲ್ಲಿ ಜಾಣತನವಾದರೂ ಏನು? ಈ ಧಾರ್ಮಿಕ ಗ್ರಂಥಗಳೆಲ್ಲಾ ಸೀಮಿತ ಜ್ಞಾನದ ಸೃಷ್ಟಿಗಳೆಂದು ತೀರ್ಮಾನ ಕೈಗೊಳ್ಳುವುದು ಸರಿಯಾಗಲಾರದೇ? ಮನುಷ್ಯ ಸೃಷ್ಟಿಗಳೊಂದಿಗೆ ಅವುಗಳ ಸಂಬಂಧವಿಲ್ಲದಿರುವಿಕೆ ಅಜ್ಞಾನವನ್ನು ಸೂಚಿಸುವುದಿಲ್ಲವೇ?

ಏನು ಆ ದೇವನು ಅಂತಹ ದೇವನಾಗಿರುವನೇ- ಅವನು ಒಂದೇ ಕೋಮನ್ನು ಮಾರ್ಗದರ್ಶನಕ್ಕಾಗಿ ಆಯ್ದುಕೊಳ್ಳುತ್ತಾನೋ ಮತ್ತು ಬೇರೆ ಎಲ್ಲಾ ಜನರೊಂದಿಗೆ ನಿರ್ಲಕ್ಷ್ಯದಿಂದ ನಡೆದುಕೊಳ್ಳುವವನಾಗಿರುವನೋ?

ಇದರ ಬಗ್ಗೆ ಪವಿತ್ರ ಖುರ್‌ಆನ್ ಏನು ಹೇಳುತ್ತಿದೆಯೆಂದು ಅಧ್ಯಯನ ಮಾಡಿದರೆ, ಅದು ಈ ಸಮಸ್ಯೆಯನ್ನು ಈ ರೀತಿಯಾಗಿ ವಿವರಣೆ ನೀಡಿ ಪರಿಹರಿಸುತ್ತದೆ: ಪವಿತ್ರ ಖುರ್‌ಆನ್ ಅವತೀರ್ಣವಾಗುವ ವರೆಗೆ ಎಂದರೆ ಹಝ್ರತ್ ಮುಹಮ್ಮದ್ ಪೈಗಂಬರರ ಆಗಮನದ ವರೆಗೆ ಪ್ರಪಂಚದಲ್ಲಿ ಪ್ರತಿಯೊಂದು ಕೋಮಿನಲ್ಲೂ ಪ್ರತಿಯೊಂದು ಪ್ರದೇಶದಲ್ಲೂ ದೇವನಿಂದ ನಿಯುಕ್ತರಾದ ಪ್ರವಾದಿಗಳು ಬಂದಿದ್ದರೂ ಅವರೆಲ್ಲರೂ ಪ್ರತ್ಯೇಕ ಕೋಮಿಗೂ ಪ್ರತ್ಯೇಕ ಪ್ರದೇಶಕ್ಕೂ ಬಂದವರಾಗಿದ್ದರು. ಒಬ್ಬ ವಿಶ್ವಪ್ರವಾದಿ ಒಂದು ವಿಶ್ವ ಸಂದೇಶವನ್ನು ಅವರ ಬಳಿಗೆ ತರುವ ಹಾಗೆ ಮಾನವರು ನಾಗರಿಕತೆಯಲ್ಲಿ ಅಲ್ಲಿಯವರೆಗೆ ಅಷ್ಟರಮಟ್ಟಿನ ಉನ್ನತಿಯನ್ನು ಪಡೆದಿರಲಿಲ್ಲ. ಪವಿತ್ರ ಖುರ್‌ಆನ್ ನಿರ್ದಿಷ್ಟ ಕೋಮು ಮತ್ತು ನಿರ್ದಿಷ್ಟ ಪ್ರದೇಶಗಳಿಗೆ ಮಾತ್ರ ಕಳುಹಿಸಲ್ಪಟ್ಟ ಪ್ರವಾದಿಗಳ ಬಗ್ಗೆ ಹೇಳುತ್ತಿದೆ. ಹಝ್ರತ್ ಮುಹಮ್ಮದ್ ಪೈಗಂಬರರ ಆಗಮನಕ್ಕೆ ಮೊದಲು ಸರ್ವಲೋಕದ ಮಾರ್ಗ

ದರ್ಶನಕ್ಕೆ ಯಾವುದೇ ಪ್ರವಾದಿ ಕಳುಹಿಸಲ್ಪಟ್ಟುದಾಗಿ ಅದು ಹೇಳುವುದಿಲ್ಲ.

### ಇಸ್ಲಾಂ ಧರ್ಮದ ಸಂದೇಶ ಇಡೀ ವಿಶ್ವಕ್ಕೆ

ಮೇಲೆ ವಿವರಿಸಲಾದ ಅಂಶವನ್ನು ಮನವರಿಕೆ ಮಾಡಿಕೊಳ್ಳುವುದರಿಂದ ಬುದ್ಧಿಪರವಾದ ಒಂದು ಸಮಸ್ಯೆಗೆ ಪರಿಹಾರ ದೊರಕುವುದರೊಂದಿಗೆ ಇಸ್ಲಾಮಿನ ಇನ್ನೊಂದು ವೈಶಿಷ್ಟ್ಯದ ಕುರಿತು ಜ್ಞಾನವೂ ಲಭಿಸುತ್ತದೆ. ಇಸ್ಲಾಮ್ ಧರ್ಮ ಮಾತ್ರ ಪ್ರಪಂಚದಾದ್ಯಂತವಿರುವ ಎಲ್ಲಾ ಜನರನ್ನು ಸಂಬೋಧಿಸುತ್ತದೆ. ಅದು ಮನುಷ್ಯನನ್ನು ಒಂದು ಕೋಮಿಗೆ ಸೀಮಿತವಾದ ಮತ್ತು ಪ್ರಾದೇಶಿಕವಾದ ಮತಗಳ ಹದ್ದುಬಸ್ತುಗಳಿಂದ ಹೊರತಂದು ಇಸ್ಲಾಮ್ ಎಂಬ ಒಂದು **ವಿಶ್ವಧರ್ಮ**ವನ್ನು ನೀಡಿ ಆತನನ್ನು ಅಭಿವೃದ್ಧಿಯ ಶಿಖರಕ್ಕೆ ತಲಪಿಸುತ್ತದೆ.

ಇಸ್ಲಾಮ್ ಧರ್ಮದ ಗ್ರಂಥವಾದ ಪವಿತ್ರ ಖುರ್‌ಆನ್ ತನ್ನ ಪ್ರಾರಂಭದ ಪುಟದಲ್ಲಿಯೇ "ಎಲ್ಲಾ ಹೊಗಳಿಕೆಗಳು ಸಕಲ ಲೋಕಗಳ ಪಾಲಕ ಪೋಷಕನಾದ ಅಲ್ಲಾಹನಿಗೆ ಮಾತ್ರ ಅರ್ಹವಾಗಿವೆ" ಎಂದು ಹೇಳುತ್ತದೆ. ಅದರ ಕೊನೆಯ ಪುಟದಲ್ಲಿ "ಎಲ್ಲಾ ಜನರ ಪಾಲಕ ಪೋಷಕ" ಎಂಬ ಶಬ್ದಗಳಿವೆ. ಹೀಗೆ ಗ್ರಂಥದ ಆದಿಯಲ್ಲೂ ಅಂತ್ಯದಲ್ಲೂ ಮನುಷ್ಯ ವರ್ಗದ ಸೃಷ್ಟಿಕರ್ತನೊಡನೆ ಪ್ರಾರ್ಥಿಸಲು ಉಪದೇಶಿಸಲಾಗಿದೆ. ಹೀಗೆ ಈ ಗ್ರಂಥದ ಆದಿಭಾಗವೂ ಅಂತಿಮ ಭಾಗವೂ ಸಕಲ ಲೋಕಗಳ ದೇವನ ಕಲ್ಪನೆಯನ್ನು ಸಾದರಪಡಿಸುತ್ತದೆ. ಅದು ಕೇವಲ ಅರಬಿಗಳ ಅಥವಾ ಮುಸ್ಲಿಮರ ದೇವರ ಕಲ್ಪನೆಯನ್ನು ಮುಂದಿಡುವುದಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರಿಗಿಂತ ಮುಂಚಿತವಾಗಿ ಯಾರೂ ಸಂಪೂರ್ಣ ಲೋಕವನ್ನು ಧರ್ಮದ ಕಡೆಗೆ ಆಹ್ವಾನಿಸಿರಲಿಲ್ಲ. ಮತ್ತು ಪವಿತ್ರ ಖುರ್‌ಆನಿಗಿಂತ ಮೊದಲು ಯಾವುದೇ ಗ್ರಂಥ ಇಡೀ ವಿಶ್ವವನ್ನು ಸಂಬೋಧಿಸಿಯೂ ಇರಲಿಲ್ಲ. ಪ್ರಪಂಚದಲ್ಲಿ ಪ್ರಥಮ ಬಾರಿ ಹಝ್ರತ್ ಮುಹಮ್ಮದ್ ಪೈಗಂಬರರನ್ನು ಸಂಬೋಧಿಸಿ ಅವರಲ್ಲಿ ಈ ರೀತಿ ಪ್ರಕಟಿಸಲಾಯಿತು:

"ನಿನ್ನನ್ನು ನಾವು ಎಲ್ಲಾ ಮಾನವರಿಗೆ (ಅವರಲ್ಲಿ ಯಾರೂ ನಿನ್ನ ಪ್ರವಾದಿತ್ವದ ವಲಯದಿಂದ ಹೊರಗಿರದಂತೆ) ಕಳುಹಿಸಿದ್ದೇವೆ. ನಿನ್ನನ್ನು (ಸತ್ಯ ವಿಶ್ವಾಸಿಗಳಿಗೆ) ಶುಭವಾರ್ತೆ ನೀಡುವವನ್ನಾಗಿಯೂ (ಅವಿಶ್ವಾಸಿಗಳಿಗೆ) ಮುನ್ನೆಚ್ಚರಿಕೆ ಕೊಡುವವನ್ನಾಗಿಯೂ ಮಾಡಿ ಕಳುಹಿಸಿರುವೆವು." (34 : 29)

"(ನೀನು) ಹೇಳು : ಓ ಜನರೇ ನಾನು ನಿಮಗೆಲ್ಲರಿಗೂ ಆಕಾಶ ಮತ್ತು ಭೂಮಿಯ ಒಡೆಯನಾದ ಅಲ್ಲಾಹನಿಂದ ಪ್ರವಾದಿಯಾಗಿ ಬಂದಿರುವೆನು." (7 : 159)

ಮತ್ತು ಪವಿತ್ರ ಖುರ್‌ಆನಿನ ಕುರಿತು "ನಿಶ್ಚಯವಾಗಿಯೂ ಅದು ಸಕಲ ಲೋಕಗಳಿಗಾಗಿರುವ ಒಂದು ಉಪದೇಶವಾಗಿದೆ" (81 : 28) ಎಂದು ಹೇಳಿ ಮಾನವ ವರ್ಗಕ್ಕೆ ಗೌರವ ಪ್ರದವಾಗಿರುವ ಗ್ರಂಥವೆಂದು ಘೋಷಿಸಿದೆ.

ಪವಿತ್ರ ಖುರ್‌ಆನಿನಲ್ಲಿ ಹೊರತು ಬೇರೆ ಯಾವುದೇ ಧರ್ಮದ ದೈವಿಕ ಗ್ರಂಥಗಳಲ್ಲಿ ಅದು ಲೋಕದಲ್ಲಿರುವ ಸರ್ವರನ್ನೂ ಉದ್ದೇಶಿಸಿ ಅವತೀರ್ಣವಾದುದೆಂಬ ವಾದವನ್ನು ಕಾಣಲಾರೆವು. ಸಂತ ಪೌಲ ಮೊದಲಾದವರು ಕ್ರೈಸ್ತ ಧರ್ಮವನ್ನು ಸರ್ವರಿಗೂ ಉಪದೇಶಿಸಲು ತೊಡಗಿದರೂ ಆ ತತ್ವ ಕ್ರೈಸ್ತಧರ್ಮದ ಒಂದು ಭಾಗವೆಂದು ಹೇಳಲು ಸಾಧ್ಯವಿಲ್ಲ. ಅದು ಯೇಸು ಕ್ರಿಸ್ತರ ಉಪದೇಶಗಳಿಗೆ ವಿರುದ್ಧವಾದ ನಡವಳಿಕೆಯಾಗಿತ್ತು. ಕ್ರೈಸ್ತಧರ್ಮ ಸರ್ವಲೋಕಕ್ಕೂ ಅನ್ವಯಿಸುತ್ತದೆಯೆಂಬ ವಾದವನ್ನು ಪುಷ್ಟೀಕರಿಸುವ ಯಾವುದೇ ಸಾಕ್ಷ್ಯಾಧಾರ ಸಹ ಅವರ ಬಳಿಯಿಲ್ಲ.

ಇಸ್ಲಾಮ್ ಧರ್ಮ ತನ್ನದು ವಿಶ್ವವನ್ನುದ್ದೇಶಿಸಿದ ಸಂದೇಶ ಎಂದು ವಾದ ಮಾಡಿ ಅದಕ್ಕೆ ಸಾಕ್ಷ್ಯಾಧಾರಗಳನ್ನು ನೀಡುತ್ತದೆ. ಅದು ಇತರ ಧರ್ಮಗಳು ವಿಶ್ವಧರ್ಮಗಳೆಂಬ ವಾದವನ್ನು ಅಲ್ಲಗಳೆಯುವುದರೊಂದಿಗೆ ಇಸ್ಲಾಮ್ ಧರ್ಮದ ವಿಶಿಷ್ಟ ಮಹತ್ವವನ್ನು ಪ್ರಕಟಪಡಿಸುತ್ತದೆ.

ಮೂಸಾ ಪ್ರವಾದಿಯ ಗ್ರಂಥ (ತೌರಾತ್) ದಲ್ಲಾಗಲೀ ಈಸಾ ಪ್ರವಾದಿಯ ಗ್ರಂಥ (ಇಂಜೀಲ್) ದಲ್ಲಾಗಲೀ ಬೇರೆ ಕೋಮುಗಳಲ್ಲಿ ಪ್ರವಾದಿಗಳು ಬಂದುದರ ಬಗ್ಗೆ ಅಥವಾ ಅವರಿಗೆ ದೇವ ಸಂದೇಶ ಲಭಿಸಿದ ಬಗ್ಗೆ ಯಾವುದೇ ಉಲ್ಲೇಖಗಳಿಲ್ಲ. ಇಸ್ಲಾಮ್

ಧರ್ಮದ ಹೊರತು ಬೇರೆಯಾವುದೇ ಧರ್ಮದ ಗ್ರಂಥ ಗಳಲ್ಲಿ ಆಯಾ ಧರ್ಮದ ಅನುಯಾಯಿಗಳ ಹೊರತು ಬೇರೆ ಸೃಷ್ಟಿಗಳೊಂದಿಗೆ ದೇವನ ಸಂಬಂಧದ ಕುರಿತು ವಿವರ ದೊರಕಲಾರದು. ಯಾವುದೇ ಧರ್ಮ ಯಾವುದೇ ಬೇರೆ ಪ್ರದೇಶದ ಜನರಿಗೆ ದೇವನ ಸಂದೇಶ ದೊರಕಿ ದುದರ ಬಗ್ಗೆ ಒಪ್ಪುವುದಿಲ್ಲವೋ ಅದು ವಿಶ್ವ ಧರ್ಮ ವೆಂದು ಪರಿಗಣಿಸಲು ಹೇಗೆ ತಾನೆ ಸಾಧ್ಯ. ಅಂತಹ ಧರ್ಮ ವಿಶ್ವಧರ್ಮದ ಕಲ್ಪನೆಯನ್ನೇ ನಿರಾಕರಿಸು ತ್ತದೆ.

ಪ್ರತಿಯೊಂದು ಕಾಲದಲ್ಲೂ ಪ್ರತಿಯೊಂದು ಕೋಮಿನೊಂದಿಗೆ ದೇವನು ಸಂಬಂಧವೇರ್ಪಡಿಸಿದ್ದ ನೆಂದು ವಾದಿಸುವ ಏಕಮಾತ್ರ ಧರ್ಮ ಇಸ್ಲಾಮ್ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"(ದೇವನಿಂದ) ಒಬ್ಬ ಮುನ್ನೆಚ್ಚರಿಕೆ ನೀಡುವವ ನು ಬಾರದ ಜನಾಂಗ ಯಾವುದೂ ಇಲ್ಲ."
(35 : 25)

"ಪ್ರತಿಯೊಂದು ಕೋಮಿಗೆ (ದೇವನಿಂದ) ಒಬ್ಬ ಮಾರ್ಗದರ್ಶಕನು ಕಳುಹಿಸಲ್ಪಟ್ಟಿರುವನು."
(13 : 8)

ಈ ಮಹತ್ವಾದ ಪ್ರಕಟಣೆಯಿಂದ ಧರ್ಮವು ಲೋಕವ್ಯಾಪಕವಾದುದೆಂಬ ಸತ್ಯವು ಸ್ಪಷ್ಟವಾಗುತ್ತದೆ. ಇಸ್ಲಾಮ್ ಧರ್ಮ ಮಾತ್ರ ಮನುಷ್ಯನ ಮತ್ತು ಧರ್ಮದ ವಿಶ್ವವಾಪಿ ಸ್ಥಾನವನ್ನು ಒಪ್ಪಿಕೊಳ್ಳುತ್ತದೆ. ಇದು ಇಸ್ಲಾಮ್ ಸಾರ್ವಲೌಕಿಕ ಧರ್ಮವೆಂಬುದರ ಬಗ್ಗೆ ಸಾಕ್ಷ್ಯಾಧಾರವಾಗುವುದರ ಜೊತೆಗೆ ಅದು ಇತರ ಮತಗಳ ಎದುರಿಗೆ ಇಸ್ಲಾಮಿನ ಮಹತ್ವಾದ ಶ್ರೇಷ್ಠತೆ ಯನ್ನು ಸ್ಪಷ್ಟಪಡಿಸುತ್ತದೆ.

## ದೇವನಿಯುಕ್ತರಾದ ಎಲ್ಲಾ ಪ್ರವಾದಿಗಳು ಸತ್ಯವಂತರು

ಈ ವಿಶ್ವಾಸದ ಇನ್ನೊಂದು ಮುಖ ಇಸ್ಲಾಮಿನ ಇನ್ನೊಂದು ವೈಶಿಷ್ಟ್ಯವನ್ನು ಪ್ರಕಟಿಸುವುದರೊಂದಿಗೆ ಅದು ವಿಶ್ವಧರ್ಮ ಎಂಬುದನ್ನು ಸಾಬೀತುಗೊಳಿಸು ತ್ತದೆ. ಬೇರೆ ಧರ್ಮಗಳಲ್ಲಿ ಬಂದ ಯಾವುದಾದರೂ ಪ್ರವಾದಿ ಅಥವಾ ಮಾರ್ಗದರ್ಶಕನನ್ನು ಒಪ್ಪಿಕೊಂಡರೆ ಮಾತ್ರ ಸಾಲದು. ಆ ಪ್ರವಾದಿಗಳನ್ನು ನಂಬುವುದು ಸಹ, ಒಂದು ಧರ್ಮವು ವಿಶ್ವಧರ್ಮ ಎಂಬುದಕ್ಕೆ ಸಾಕ್ಷ್ಯವಾಗಿದೆ. ಈ ವೈಶಿಷ್ಟ್ಯ ಇಸ್ಲಾಮ್ ಧರ್ಮದ ಹೊರತು ಬೇರೆ ಯಾವುದೇ ಧರ್ಮದಲ್ಲಿ ಕಾಣುವುದಿಲ್ಲ. ಇಸ್ಲಾಮ್ ಧರ್ಮ ಮಾತ್ರ ಈ ಬಗ್ಗೆ ಅಭಿಮಾನ ಪಡಬಹುದಾಗಿದೆ. ಅದು ಆಯಾ ಕಾಲದಲ್ಲಿ ದೇವ ನಿಯುಕ್ತರಾಗಿದ್ದ ಬೇರೆ ಧರ್ಮಗಳ ಸ್ಥಾಪಕರನ್ನೂ ಪ್ರವಾದಿಗಳನ್ನೂ ನಂಬುತ್ತದೆ ಮತ್ತು ಅಂಗೀಕರಿ ಸುತ್ತದೆ.

ಪವಿತ್ರ ಖುರ್‌ಆನ್ ಬೇರೆ ಗ್ರಂಥಗಳನ್ನು ದೃಢೀ ಕರಿಸುವುದೆಂದು ಹೇಳಲಾಗಿದೆ. ಮುಸಲ್ಮಾನರಿಗೆ ಹೀಗೆ ಉಪದೇಶಿಸಲಾಗಿದೆ: ಅವರ ಪ್ರವಾದಿಯನ್ನು ಅವರು ನಂಬುವುದು ಕಡ್ಡಾಯಗೊಳಿಸಲಾದಂತೆ ಬೇರೆ ಕೋಮುಗಳ ಪ್ರವಾದಿಯನ್ನು ಸಹ ನಂಬುವುದು ಅವ ರಿಗೆ ಕಡ್ಡಾಯಗೊಳಿಸಲಾಗಿದೆ; ಮತ್ತು ನಂಬುವುದರ ಸಂಗತಿಯಲ್ಲಿ ಪ್ರವಾದಿಗಳ ಮಧ್ಯೆ ಯಾವುದೇ ವ್ಯತ್ಯಾಸ ಕಲ್ಪಿಸಬಾರದು. ಕೆಲವರನ್ನು ನಂಬುವುದು, ಕೆಲವ ರನ್ನು ನಂಬದೆಯಿರುವುದು ಇಸ್ಲಾಮ್ ಧರ್ಮದ ತತ್ವ ಗಳಿಗೆ ವಿರುದ್ಧವಾಗಿದೆ. ಪವಿತ್ರ ಖುರ್‌ಆನ್ ಹೀಗೆನ್ನು ತ್ತದೆ:

"ಈ ಪ್ರವಾದಿಗೆ ಆತನ ಒಡೆಯನಿಂದ ಅವತೀ ರ್ಣವಾದುದನ್ನು ಆತನೂ ಸತ್ಯವಿಶ್ವಾಸಿಗಳೂ ನಂಬುತ್ತಾರೆ. ಇವರೆಲ್ಲರೂ ಅಲ್ಲಾಹುವಿನಲ್ಲಿಯೂ ಅವನ ದಿವ್ಯದೂತರಲ್ಲಿಯೂ ಅವನ ಗ್ರಂಥಗಳ ಲ್ಲಿಯೂ ಅವನ ಪ್ರವಾದಿಗಳಲ್ಲಿಯೂ ವಿಶ್ವಾಸ ಹೊಂದಿರುತ್ತಾರೆ. (ಮತ್ತು ಅವರು ಹೇಳು ತ್ತಾರೆ) – ನಾವು ಅವನ ಪ್ರವಾದಿಗಳ ಮಧ್ಯೆ ಯಾವುದೇ ವ್ಯತ್ಯಾಸವನ್ನು ಬಗೆಯುವುದಿಲ್ಲ."
(2 : 286)

"ಅವರು ನಿನಗೆ ಅವತೀರ್ಣಗೊಂಡುದರಲ್ಲಿಯೂ ನಿನಗಿಂತ ಮುಂಚಿತವಾಗಿ ಅವತೀರ್ಣಗೊಂಡು ದರಲ್ಲಿಯೂ ವಿಶ್ವಾಸವಿಡುತ್ತಾರೆ." (2 : 5)

ಇದೇ ಕಾರಣದಿಂದ ಹೆಚ್ಚುಕಮ್ಮಿ ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರ ಮಂದಿ ಪ್ರವಾದಿಗಳು ಲೋಕ ಕ್ಕೆ ಬಂದಿರುವುದಾಗಿ ಮುಸ್ಲಿಮರು ನಂಬುತ್ತಾರೆ.

ಯಾವುದೇ ಜಾತಿ ಅಥವಾ ವಂಶದ ವ್ಯತ್ಯಾಸ

ವನ್ನು ಮಾಡದೆ ಕಾಲ ಅಥವಾ ಕೋಮಿನ ವ್ಯತ್ಯಾಸವನ್ನು ಪರಿಗಣಿಸದೆ ಎಲ್ಲಾ ಜನಾಂಗಗಳ ಪ್ರವಾದಿಗಳನ್ನು ಸತ್ಯವಂತರೆಂದು ಒಪ್ಪಿ ಅವರನ್ನು ಆದರಿಸುವ ತತ್ವವೇ ಕೋಮುಗಳ ಮಧ್ಯೆ ಸೌಹಾರ್ದದ ಸರಿಯಾದ ಅಸ್ತಿವಾರ ಹಾಕುವ ಮತ್ತು ಧರ್ಮಗಳ ಐಕ್ಯತೆಯನ್ನು ಸ್ಥಾಪಿಸುವ ಏಕಮಾತ್ರ ದಾರಿಯಾಗಿದೆ. ಇದು ಒಂದು ಧರ್ಮವು ವಿಶ್ವಧರ್ಮ ಎಂಬ ವಾದಕ್ಕೆ ದೊಡ್ಡ ಆವಶ್ಯಕತೆಯಾಗಿದ್ದು ಅದು ಇಸ್ಲಾಮ್ ವಿಶ್ವಧರ್ಮ ಎಂಬುದಕ್ಕೆ ಒಂದು ಸ್ಪಷ್ಟವಾದ ಸಾಕ್ಷ್ಯವೂ ಆಗಿದೆ.

ಇಲ್ಲಿ ಒಂದು ಪ್ರಶ್ನೆ ಮತ್ತು ಅದರ ಉತ್ತರ ಆಸಕ್ತಿಯನ್ನುಂಟುಮಾಡಬಹುದು. ಒಂದು ಧರ್ಮ ವಿಶ್ವಧರ್ಮವಾಗುವುದರಿಂದ ಉಂಟಾಗುವ ಒಳಿತಾದರೂ ಏನು ? ಇಸ್ಲಾಮ್ ಅದರ ಬಗ್ಗೆ ಏಕೆ ಒತ್ತಿ ಹೇಳುತ್ತಿದೆ ? ನಾವು ಇಲ್ಲಿ ಒಂದು ಸಂಗತಿ ನೆನಪಿಡಬೇಕಾಗಿದೆ. – ಇಸ್ಲಾಮ್ ಧರ್ಮ ಎಲ್ಲಾ ಕೋಮುಗಳ ಐಕ್ಯತೆಯ ಸಂದೇಶದೊಂದಿಗೆ ಬಂದ ನಂತರ ಜನಾಂಗಗಳ ಏಕೀಕರಣಕ್ಕಾಗಿ ಪ್ರಪಂಚದ ಪ್ರಯಾಣ ಹೆಚ್ಚು ಹೆಚ್ಚು ವೇಗತೆಗಳಿಸುತ್ತಾ ಹೋಗುತ್ತಿದೆ. ಈ ಕಾಲದಲ್ಲಿ ವಿವಿಧ ರಾಷ್ಟ್ರಗಳ ಫೆಡರೇಶನ್‌ಗಳು, ಲೀಗ್ ಆಫ್ ನೇಶನ್ಸ್ ಹಾಗೂ ಸಂಯುಕ್ತ ರಾಷ್ಟ್ರ ಸಂಘದ ಸ್ಥಾಪನೆ ಮತ್ತು ಧಾರ್ಮಿಕ ವಲಯದಲ್ಲಿ ವರ್ಲ್ಡ್ ಕಾನ್‌ಫರೆನ್ಸ್ ಆಫ್ ರಿಲೀಜಿಯನ್ಸ್ ಈ ನಿಟ್ಟಿನಲ್ಲಿ ಪ್ರಪಂಚ ಮುಂದುವರಿದುದರ ಬಗ್ಗೆ ಕೆಲವು ಉದಾಹರಣೆಗಳಾಗಿವೆ. ಇಂದಿನ ಕಾಲದಲ್ಲಿ ಪ್ರಗತಿ ಹೊಂದಿದ ಮನುಷ್ಯನು ಯಾವ ಆವಶ್ಯಕತೆಯನ್ನು ಮನವರಿಕೆ ಮಾಡಿಕೊಳ್ಳುತ್ತಾನೋ ಪವಿತ್ರ ಖುರ್‌ಆನ್ ಅದನ್ನು ಇಂದಿನಿಂದ ಹದಿನಾಲ್ಕುನೂರು ವರ್ಷಗಳ ಮುಂಚಿತವಾಗಿಯೇ ಬೀಜದ ರೂಪದಲ್ಲಿ ತನ್ನ ಉಪದೇಶಗಳಲ್ಲಿ ಸೇರ್ಪಡಿಸಿತ್ತು. ಈಗ ಸಂಚಾರ ಮತ್ತು ಸಂಪರ್ಕ ಸಾಧನಗಳ ಮೂಲಕ ಕೋಮುಗಳ ಐಕ್ಯತೆಯ ಸಲುವಾಗಿ ಕೋಮುಗಳ ಪ್ರಯಾಣ ಹೆಚ್ಚು ಹೆಚ್ಚು ಮಿಂಚಿನ ವೇಗದಿಂದ ಸಂಭವಿಸುತ್ತಿರುತ್ತದೆ. ಆದರೆ ನಾನು ಈ ಸಂದರ್ಭದಲ್ಲಿ ನಿಮಗೊಂದು ಸಂಗತಿ ತಿಳಿಯಪಡಿಸುತ್ತೇನೆ. ಈ ಪ್ರಯಾಣದ ಕೊನೆಯ ಗಮ್ಯಸ್ಥಾನ ಇಸ್ಲಾಮ್ ಧರ್ಮವಾಗುವುದು. ಇಸ್ಲಾಂ ಆರಂಭದಿಂದಲೇ, ಅದು ವಿಶ್ವಧರ್ಮ ಎಂಬುದನ್ನು ಘೋಷಿಸಿದೆ.

## ವಿವಿಧ ಧರ್ಮಗಳಲ್ಲಿ ಭಿನ್ನತೆಯ ಕಾರಣ

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ: ಎಲ್ಲಾ ಧರ್ಮಗಳ ಸ್ಥಾಪಕರು ದೇವನಿಂದ ನಿಯುಕ್ತರಾಗಿದ್ದವರಾಗಿದ್ದರೆ, ವಿವಿಧ ಧರ್ಮಗಳ ಉಪದೇಶಗಳಲ್ಲಿ ಭಿನ್ನತೆಗಳಿಗೆ ಕಾರಣವೇನು ? ಒಬ್ಬನೇ ದೇವ ವಿವಿಧ ಉಪದೇಶಗಳನ್ನು ನೀಡಬಲ್ಲನೇ ?

ಈ ಪ್ರಶ್ನೆಗೆ ಉತ್ತರ ಇಸ್ಲಾಮ್ ಧರ್ಮವಲ್ಲದೆ ಬೇರೆ ಯಾವುದೇ ಧರ್ಮವೂ ನೀಡುವುದಿಲ್ಲ. ಈ ವೈಶಿಷ್ಟ್ಯ ಇಸ್ಲಾಮಿನ ಧರ್ಮಶಾಸ್ತ್ರಕ್ಕೆ ಮಾತ್ರವಿದೆ. ಇಸ್ಲಾಮ್ ಈ ಸಂಗತಿಯ ಬಗ್ಗೆ ವಿವರಿಸುತ್ತಾ ಧರ್ಮಗಳ ಭಿನ್ನತೆಗೆ ಎರಡು ಕಾರಣಗಳನ್ನು ನೀಡುತ್ತದೆ.

ಪ್ರಥಮವಾಗಿ, ವಿವಿಧ ಪರಿಸ್ಥಿತಿಗಳಲ್ಲಿ ವಿವಿಧ ಉಪದೇಶಗಳು ಆವಶ್ಯಕವಾಗಿದ್ದವು. ಆದುದರಿಂದ ಜಾಣ್ಮೆಯುಳ್ಳವನೂ ಸರ್ವಜ್ಞನೂ ಆದ ದೇವನು ವಿವಿಧ ಕಾಲಘಟ್ಟಗಳಲ್ಲಿ ಮತ್ತು ವಿವಿಧ ಪರಿಸ್ಥಿತಿಗಳಲ್ಲಿ ಮನುಷ್ಯರ ಆವಶ್ಯಕತೆಗಳನ್ನು ಪರಿಗಣಿಸಿ ವಿವಿಧ ಕಾಲಗಳಲ್ಲಿ, ವಿವಿಧ ಕೋಮುಗಳಲ್ಲಿ ಮತ್ತು ವಿವಿಧ ರಾಜ್ಯಗಳಲ್ಲಿ ಅವರವರ ಆವಶ್ಯಕತೆಗಳಿಗೆ ಅನುಸಾರವಾಗಿ ಉಪದೇಶಗಳನ್ನು ನೀಡಿದನು.

ಧರ್ಮಗಳ ಭಿನ್ನತೆಯ ಎರಡನೆಯ ದೊಡ್ಡ ಕಾರಣ – ದೀರ್ಘ ಕಾಲಾವಧಿಯಲ್ಲಿ ಧಾರ್ಮಿಕ ಉಪದೇಶಗಳು ಸುರಕ್ಷಿತವಾಗದೆ ಇದ್ದುದಾಗಿದೆ. ಜನರು ತಮ್ಮ ಪರಿಸ್ಥಿತಿಗಳಿಗೆ ಮತ್ತು ಆವಶ್ಯಕತೆಗಳಿಗನುಸಾರವಾಗಿ ಧಾರ್ಮಿಕ ಗ್ರಂಥಗಳಲ್ಲಿ ಹಸ್ತಕ್ಷೇಪ ಮಾಡುತ್ತಾ ಬಂದಿದ್ದಾರೆ ಮತ್ತು ಧಾರ್ಮಿಕ ಗ್ರಂಥಗಳು ಮೊತ್ತ ಮೊದಲಿದ್ದಂತೆ ಸುರಕ್ಷಿತವಾಗಿ ಬಾಕಿಯುಳಿಯಲಿಲ್ಲ. ಆದುದರಿಂದಲೇ ಹೊಸ ಉಪದೇಶಗಳ ಆವಶ್ಯಕತೆಯುಂಟಾಯಿತು.

ಧಾರ್ಮಿಕ ಗ್ರಂಥಗಳಲ್ಲಿ ಹಸ್ತಕ್ಷೇಪ ನಡೆಸಿ ಅವುಗಳ ಸಂರಕ್ಷಣೆಗೆ ಭಂಗವುಂಟಾಗಲು ಪ್ರಧಾನವಾದ ಕಾರಣ – ಪ್ರವಾದಿಗಳ ಆಗಮನದಿಂದ ಕಾಲವು ಹೆಚ್ಚು ಹೆಚ್ಚು ದೂರವಾದಂತೆ ಧಾರ್ಮಿಕ ನಿಯಮಗಳ ಕಾಠಿಣ್ಯಗಳಿಗೆ ಪ್ರತಿಕ್ರಿಯೆಯಾಗಿ ಧರ್ಮಸ್ವಾತಂತ್ರ್ಯದ ಕಲ್ಪನೆ ತಲೆಯೆಬ್ಬಿಸಿದುದು ಮತ್ತು ಶಾರೀರಿಕ ಆಕಾಂಕ್ಷೆಗಳ ದಾಸತ್ವಕ್ಕೆ ಗುರಿಯಾದುದು. ಅವು ಧಾರ್ಮಿಕ

ಉಪದೇಶಗಳಿಗೆ ಭಂಗಬರಿಸುವಂತಹ ಎಂತಹ ಈಟಿಗಳನ್ನು ಎಸೆದುವೆಂದರೆ ಅವು ಅನಂತರದ ಸತ್ಯಧರ್ಮಗಳ ವಿರುದ್ಧ ಭಿನ್ನಾಭಿಪ್ರಾಯಗಳ ವಾಸಿಯಾಗದ ವ್ರಣಗಳನ್ನುಂಟುಮಾಡಿದವು. ಮಾತ್ರವಲ್ಲ, ದೀರ್ಘಕಾಲ ಕಳೆದ ಹಾಗೆಯೇ ಧಾರ್ಮಿಕ ಉಪದೇಶಗಳ ಒಂದು ಭಾಗ ಮರೆತುಹೋಗಲಿಕ್ಕೆ ಸಹ ಆಸ್ಪದವಾಯಿತು. ಹೀಗೆ ಧಾರ್ಮಿಕ ಗ್ರಂಥಗಳು ಸುರಕ್ಷಿತವಾಗಲಿಲ್ಲ. ಇದರ ಬಗ್ಗೆ, ಪವಿತ್ರ ಖುರ್‌ಆನ್ ಹೀಗೆಂದಿದೆ :

"ಅವರು ಗ್ರಂಥದ ಶಬ್ದಗಳನ್ನು ಸ್ಥಾನಪಲ್ಲಟಗೊಳಿಸುತ್ತಾರೆ. ಮತ್ತು ಅವರಿಗೆ ನೀಡಲಾದ ಉಪದೇಶದ ಒಂದು ಭಾಗವನ್ನು ಮರೆತುಬಿಟ್ಟಿದ್ದಾರೆ." (5 : 14)

ಇದಕ್ಕೆ ಉದಾಹರಣೆಯನ್ನು ಬೈಬಲಿನ ಪುನಃ ಪರಿಷ್ಕರಿಸಲ್ಪಟ್ಟ ಹೊಸ ಮುದ್ರಣದ ಅಧ್ಯಯನದಿಂದ ಮನಗಾಣಬಹುದು. ಗ್ರಂಥದ ಮೂಲಭಾಗದಲ್ಲಿದ್ದ ಹಲವಾರು ವಚನಗಳು ಅವುಗಳ ಅಡಿಟಿಪ್ಪಣಿಯಲ್ಲಿ ಸ್ಥಳ ಪಡೆದವು. ಅಡಿಟಿಪ್ಪಣಿಗಳಲ್ಲಿ ಇದ್ದ ಹಲವು ವಚನಗಳು ಮೂಲಗ್ರಂಥಗಳಲ್ಲಿ ಸ್ಥಾನಪಡೆದವು.

ಉದಾಹರಣೆಗೆ, ಬೈಬಲಿನ ಹೊಸ ಒಡಂಬಡಿಕೆಯ ಮಾರ್ಕನ ಸುವಾರ್ತೆಯ 16ನೇ ಅಧ್ಯಾಯದಲ್ಲಿ ಹೀಗೆ ಟಿಪ್ಪಣಿ ಬರೆಯಲಾಗಿದೆ : "9ನೆಯ ವಚನದಿಂದ 20ನೆಯ ವಚನದ ಪರ್ಯಂತರ ಬರೆದಿರುವ ಮಾತುಗಳು ಕೆಲವು ಪುರಾತನ ಪ್ರತಿಗಳಲ್ಲಿ ಇಲ್ಲ."

ಇದೇ ರೀತಿ ಮತ್ತಾಯನ ಸುವಾರ್ತೆಯ 17ನೇ ಅಧ್ಯಾಯದಲ್ಲಿ ಹೀಗೆ ಟಿಪ್ಪಣಿ ಇದೆ: "21ನೆಯ ವಚನ ಮೂಲಗ್ರಂಥದಲ್ಲಿ ಇಲ್ಲ."

ನಾನು ಇಲ್ಲಿ ನೀಡಿರುವುದು ಬಹಳ ಚಿಕ್ಕದಾದ ಉದಾಹರಣೆಯಾಗಿದೆ. ಯಥಾರ್ಥ ಸಂಗತಿಯೇನೆಂದರೆ ಬೈಬಲ್ ಮತ್ತು ಇತರ ಧಾರ್ಮಿಕ ಗ್ರಂಥಗಳಲ್ಲಿ ನಡೆದ ಹಸ್ತಕ್ಷೇಪಗಳ ವಿಷಯ ಬಹಳ ವೈಶಾಲ್ಯವನ್ನು ಪಡೆದ ಸಂಗತಿಯಾಗಿದೆ. ಪ್ರಕ್ಷಿಪ್ತ – ವಿಕ್ಷಿಪ್ತಗಳ ಸಂಶೋಧನೆಗಳನ್ನು ಮಾಡುತ್ತಿರುವವರು ಶತಮಾನಗಳಿಂದ ಈ ಕಾರ್ಯವನ್ನು ಮಾಡುತ್ತಿದ್ದಾರೆ. ಇವುಗಳ ಫಲವಾಗಿ ಒಂದು ಸಂಗತಿಯಂತೂ ದೃಢವಾಗಿ ಸಾಬೀತಾಗಿದೆ. ಧಾರ್ಮಿಕ ಗ್ರಂಥಗಳಲ್ಲಿ ಮೂಲಭೂತ ಬದಲಾವಣೆಗಳೂ ಪರಸ್ಪರ ವೈರುದ್ಧ್ಯಗಳೂ ಪತ್ತೆಯಾಗಿವೆ–ಅವುಗಳು ನಿರ್ಲಕ್ಷಿಸಲ್ಪಡುವಂತಹುಗಳು ಅಲ್ಲ. ಇದರ ಬಗ್ಗೆ ನಾವು "ವಿಶ್ವಾಸದ್ರೋಹ" ಎಂಬ ಹೆಸರು ನೀಡದಿದ್ದರೂ ಕಾಲವು ದಾಟಿದಂತೆ ಆ ಗ್ರಂಥಗಳಲ್ಲಿ ವ್ಯತ್ಯಾಸವನ್ನುಂಟು ಮಾಡಲು ಮನುಷ್ಯರು ನಿರ್ಬಂಧಕ್ಕೊಳಗಾದರು ಎಂಬ ಸಂಗತಿಯಂತೂ ಸ್ಪಷ್ಟವಾಗುತ್ತದೆ.

ಜಗತ್ತಿನಲ್ಲಿರುವ ಎಲ್ಲಾ ಧರ್ಮಗಳು ಅವುಗಳು ಈಗಿರುವ ಸ್ಥಿತಿಯಲ್ಲಿ ಸಂಪೂರ್ಣ ಸತ್ಯಧರ್ಮಗಳೆಂದು ಇಸ್ಲಾಮ್ ವಾದಿಸುವುದಿಲ್ಲ. ಪವಿತ್ರ ಖುರ್‌ಆನ್ ಅದರ ಆರಂಭದಿಂದ ಅದು ಮುಕ್ತಾಯವಾಗುವ ವರೆಗೆ ಬೇರೆ ಧರ್ಮಗಳ ಗ್ರಂಥದಲ್ಲಿ ಸಂಭವಿಸಿದ ಹಸ್ತಕ್ಷೇಪ, ಪ್ರಕ್ಷೇಪ ಅಥವಾ ವಿಕ್ಷೇಪಗಳ ಬಗ್ಗೆ ವಿವಿಧ ದೃಷ್ಟಿಕೋನಗಳಿಂದ ಪ್ರಕಾಶ ಬೀರುತ್ತದೆ. ಇಸ್ಲಾಮ್ ಧರ್ಮ ಬೇರೆ ಧರ್ಮಗಳ ಬಗ್ಗೆ ಅವುಗಳು ತಮ್ಮ ಪ್ರಾರಂಭ ಕಾಲದಲ್ಲಿ ಸತ್ಯಧರ್ಮಗಳಾಗಿದ್ದುವೆಂದು ವಾದಿಸುತ್ತದೆ. ಆದರೆ ಅನಂತರ ಆ ಧರ್ಮಗಳಲ್ಲಿ ಉಂಟಾದ ಪರಿವರ್ತನೆಗಳು ಆ ಧರ್ಮಗಳ ವಾಸ್ತವಿಕ ಸ್ವರೂಪವನ್ನೇ ಬದಲಾಯಿಸಿಬಿಟ್ಟವು. ಧಾರ್ಮಿಕ ಗ್ರಂಥಗಳಲ್ಲಿ ಪ್ರಕ್ಷೇಪ – ವಿಕ್ಷೇಪ ನಡೆಸಲಾಯಿತು. ವಿಶ್ವಾಸಾದರ್ಶಗಳಲ್ಲಿ ಪರಿವರ್ತನೆಯುಂಟಾಯಿತು ಮತ್ತು ಆ ಧರ್ಮಗಳು ಏಕತೆಯಿಂದ ಅನೇಕತೆಯ ಕಡೆಗೂ ಏಕದೈವ ವಿಶ್ವಾಸದಿಂದ ಬಹುದೈವಾರಾಧನೆಯ ಕಡೆಗೂ ತಿರುಗಿದವು.

ಪವಿತ್ರ ಖುರ್‌ಆನ್ ಮುಂದಿರಿಸಿದ ಈ ತತ್ವದ ಬೆಳಕಿನಲ್ಲಿ ವಿವಿಧ ಧರ್ಮಗಳ ಭಿನ್ನತೆಯ ಬಗ್ಗೆ ಅಧ್ಯಯನ ನಡೆಸಿದರೆ, ಒಂದು ಧರ್ಮದ ಉಗಮ ಸ್ಥಾನಕ್ಕೆ ಸಮೀಪಿಸಿದಂತೆ ಭಿನ್ನತೆಗಳು ಕಮ್ಮಿಯಾಗುತ್ತಾ ಹೋಗುತ್ತವೆ ಎಂಬ ಒಂದು ವಾಸ್ತವಿಕ ಸಂಗತಿ ನಮಗೆ ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಕ್ರೈಸ್ತ ಮತವನ್ನು ಹ॥ ಈಸಾ ಪ್ರವಾದಿಯವರ (ಯೇಸುಕ್ರಿಸ್ತರ) ಜೀವಿತ ಮತ್ತು ನಾಲ್ಕು ಸುವಾರ್ತೆಗಳ ಅಧ್ಯಯನಕ್ಕೆ ಸೀಮಿತಗೊಳಿಸಿ ಇಸ್ಲಾಮಿನೊಂದಿಗೆ ಹೋಲಿಸಿ ನೋಡಿದರೆ ಸುವಾರ್ತೆಗಳು ಮತ್ತು ಪವಿತ್ರ ಖುರ್‌ಆನಿನ ಮಧ್ಯೆ ತಾತ್ವಿಕವಾಗಿ ಬಹಳ ಕಮ್ಮಿ ವ್ಯತ್ಯಾಸಗಳೇ ಕಂಡುಬರುವವು. ಆದರೆ ಕಾಲ ಎಷ್ಟು ಮುಂದೆ ಮುಂದಕ್ಕೆ ಹೋಗುವುದೋ ಭಿನ್ನತೆಯ ಕಂದರ ಮನುಷ್ಯರ ಹಸ್ತ-

ಕ್ಷೇಪಗಳಿಂದಾಗಿ ಹೆಚ್ಚು ಹೆಚ್ಚು ವಿಶಾಲತೆ ಪಡೆಯುತ್ತಾ ಹೋಗುವುವು.

ಬೇರೆ ಬೇರೆ ಧರ್ಮಗಳ ಚಾರಿತ್ರಿಕ ಅಧ್ಯಯನ ದಿಂದ ಪವಿತ್ರ ಖುರ್‌ಆನ್ ಮುಂದಿರಿಸಿರುವ ವಿಚಾರದ ಸಮರ್ಥನೆಯ ಬಗ್ಗೆ ಬಲವಾದ ಸಾಕ್ಷ್ಯಗಳು ದೊರೆಯುತ್ತವೆ. ಅದೇನೆಂದರೆ, ಯಾವಾಗಲೂ ಬದಲಾವಣೆ ಏಕದೇವ ವಿಶ್ವಾಸದಿಂದ ಬಹು ದೇವಾರಾಧನೆಯ ಕಡೆಗೂ ವಾಸ್ತವಿಕತೆಯಿಂದ ಅವಾಸ್ತವಿಕತೆಯ ಕಡೆಗೂ ಆಗಿತ್ತು.

ಪವಿತ್ರ ಖುರ್‌ಆನ್ ಈ ತತ್ವವನ್ನು ಹೀಗೆ ನಿರೂಪಿಸುತ್ತದೆ :

"ನಾವು ಪ್ರತಿಯೊಂದು ಜನಾಂಗಕ್ಕೆ ಒಬ್ಬ ಪ್ರವಾದಿಯನ್ನು ಕಳುಹಿಸಿದ್ದೇವೆ. –(ಓ ಜನರೇ) ನೀವು ಅಲ್ಲಾಹ (ಏಕದೇವ)ನನ್ನೇ ಆರಾಧಿಸಿರಿ ಮತ್ತು ಪಥ ಭ್ರಷ್ಟರಿಂದ ದೂರ ಸರಿಯಿರಿ ಎಂಬ ಆಜ್ಞೆಯೊಂದಿಗೆ" (16 : 37)

"ಅಲ್ಲಾಹನ ಪ್ರಮಾಣ, ನಾವು ನಿನಗಿಂತ ಮುಂಚಿತವಾಗಿ ಎಲ್ಲಾ ಜನಾಂಗಗಳಿಗೆ ಪ್ರವಾದಿಗಳನ್ನು ಕಳುಹಿಸಿದ್ದೆವು. ಆದರೆ ಶೈತಾನನು ಅವರಿಗೆ ಅವರ ದುಷ್ಕೃತ್ಯಗಳನ್ನು ಸುಂದರವನ್ನಾಗಿ ಮಾಡಿ ತೋರಿಸಿದನು. ಅವನೇ ಈ ದಿನ ಅವರ ಸ್ನೇಹಿತನಾಗಿರುವನು. ಅವರಿಗೆ ಬಹಳ ನೋವನ್ನುಂಟು ಮಾಡುವ ಶಿಕ್ಷೆಯು ನಿಶ್ಚಿತವಾಗಿದೆ. ನಾವು ನಿನಗೆ ಗ್ರಂಥವನ್ನು ಅವತೀರ್ಣಗೊಳಿಸಿದುದು ಅವರು ಯಾವ ವಿಷಯದ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದರೋ ಅದರ ಯಥಾರ್ಥ ಸಂಗತಿಯನ್ನು ಅವರಿಗೆ ಸ್ಪಷ್ಟಪಡಿಸಲಿಕ್ಕಾಗಿದೆ ಮತ್ತು ಅದು ವಿಶ್ವಾಸಿಗಳಿಗೆ ಮಾರ್ಗದರ್ಶನವೂ, ಅನುಗ್ರಹವೂ ಆಗಲಿ ಎಂದಾಗಿದೆ." (16:64, 65)

ಧರ್ಮಗಳ ಆರಂಭದ ಬಗ್ಗೆ ಪವಿತ್ರ ಖುರ್‌ಆನಿನ ಈ ಪ್ರತಿಪಾದನೆಯ ಅರ್ಥ ಪ್ರತಿಯೊಂದು ಧರ್ಮವೂ ತನ್ನ ಆರಂಭದಲ್ಲಿ ಸತ್ಯವಾಗಿರುತ್ತದೆ ಎಂದು ಖಂಡಿತವಾಗಿಯೂ ಅಲ್ಲ. ಪ್ರತಿಯೊಂದು ಧರ್ಮ ಎಷ್ಟು ಪರಿವರ್ತಿತವಾಗಿದ್ದರೂ ಅದರ ಸತ್ಯತೆಯ ಬಗ್ಗೆ ನಿಖರವಾಗಿ ಮತ್ತು ದೃಢವಾಗಿ ಮನವರಿಕೆ ಮಾಡಿಕೊಳ್ಳಲು ಇರುವ ದಾರಿ ಇದಾಗಿದೆ: ಅದರ ಉದ್ಭವದ ಪರಿಶೀಲನೆ ಮಾಡಬೇಕು. ಅದರ ಉದ್ಭವದಲ್ಲಿ ಏಕದೇವಾರಾಧನೆಯ ಉಪದೇಶಗಳು ದೊರಕಿದರೆ ಮತ್ತು ಏಕದೇವನಿಗೆಯೇ ಆರಾಧನೆಯನ್ನು ಮೀಸಲಿಟ್ಟುದಾಗಿ ಕಂಡರೆ ಹಾಗೂ ಮಾನವರಿಗೆ ನಿಷ್ಕಳಂಕ ಸಹಾನುಭೂತಿ ದೊರಕುವ ಬಗ್ಗೆ ಮಾರ್ಗದರ್ಶನಗಳನ್ನು ಕಂಡರೆ, ಅಂತಹ ಧರ್ಮಗಳಲ್ಲಿ ಅನಂತರ ಪರಿವರ್ತನೆಗಳು ಉಂಟಾಗಿದ್ದರೂ ಆ ಧರ್ಮದ ಸ್ಥಾಪಕರು ಸತ್ಯಸಂಧರೂ ಪರಿಶುದ್ಧರೂ, ದೇವ ನಿಯುಕ್ತರಾದವರೂ ಸತ್ಯ ಪ್ರವಾದಿಗಳೂ ಆಗಿದ್ದರೆಂದು ವಿಶ್ವಾಸವಿಡಬೇಕಾಗಿದೆ, ಅವರ ಮಧ್ಯೆ ಪ್ರವಾದಿಗಳೆಂಬ ನೆಲೆಯಲ್ಲಿ ಯಾವುದೇ ವ್ಯತ್ಯಾಸವನ್ನೂ ಕಲ್ಪಿಸದೆ ಅವರ ಸತ್ಯತೆಯ ಬಗ್ಗೆ ನಂಬಿಕೆಯಿಡಬೇಕಾಗಿದೆ.

## ಇಸ್ಲಾಮ್ ಧರ್ಮ ತತ್ವಗಳು ಸದಾಕಾಲ ನೆಲೆನಿಲ್ಲುವುವು

ಇಸ್ಲಾಮ್ ಧರ್ಮ ವಿಶ್ವಧರ್ಮವೆಂಬ ವಾದದೊಂದಿಗೆ ಅದರ ಉಪದೇಶಗಳು ಸದಾಕಾಲ ನೆಲೆನಿಲ್ಲುವುವು ಎಂಬ ವಾದವನ್ನು ಮಾಡುತ್ತಿದೆ. ಅದು ತನ್ನ ಈ ವಾದದ ಕಾರಣದಿಂದುಂಟಾಗುವ ಆವಶ್ಯಕತೆಗಳನ್ನು ಸಹ ಪೂರೈಸುತ್ತದೆ. ಉದಾಹರಣೆಗೆ ಹೇಳುವುದಾದರೆ, ಯಾವುದಾದರೂ ಸಂದೇಶ ಸದಾಕಾಲ ನೆಲೆನಿಲ್ಲುವುದಕ್ಕೆ ಅದು ಎಲ್ಲಾ ವಿಧದಲ್ಲೂ ಪರಿಪೂರ್ಣವೂ ಸುರಕ್ಷಿತವೂ ಆಗಿರಬೇಕಿದೆ. ಎಂದರೆ ಅದರ ಪವಿತ್ರ ಗ್ರಂಥ ಸದಾಕಾಲ ಮಾನವ ಹಸ್ತಕ್ಷೇಪಗಳಿಂದ ಸಂರಕ್ಷಿಸಲ್ಪಡುವುದು ಎಂದು ದೇವರಿಂದ ಭರವಸೆ ದೊರೆತಿರಬೇಕಾಗಿದೆ.

ಪವಿತ್ರ ಖುರ್‌ಆನ್ ತನ್ನ ಉಪದೇಶಗಳ ಬಗ್ಗೆ (ಅಲ್ಲಾಹನು ಹೇಳಿರುವುದಾಗಿ) ಹೀಗೆ ಹೇಳುತ್ತದೆ :

"ಈ ದಿನ ನಾನು ನಿಮ್ಮ ಧರ್ಮವನ್ನು ನಿಮಗಾಗಿ ಪೂರ್ಣಗೊಳಿಸಿರುವೆನು. ನಿಮ್ಮ ಮೇಲೆ ನನ್ನ ಅನುಗ್ರಹಗಳನ್ನು ಸುರಿದಿರುವೆನು. ಮತ್ತು ನಿಮಗೆ ಧರ್ಮವಾಗಿ ನಾನು ಇಸ್ಲಾಮನ್ನು ಇಷ್ಟಪಟ್ಟಿರುವೆನು." (5 : 4)

ಒಂದು ಉಪದೇಶ ಸ್ಥಾಯಿಯಾಗಿ ನಿಲ್ಲುವುದಕ್ಕೆ ನಾನು ಮೊದಲೇ ಹೇಳಿದಂತೆ ಅದು ಪರಿಪೂರ್ಣವಾಗಿದ್ದರೆ ಮಾತ್ರ ಸಾಲದು. ಅದರ ಸಂರಕ್ಷಣೆಯ ವಾಗ್ದಾನ ಸಹ ದೇವರಿಂದ ದೊರೆತಿರಬೇಕಾಗಿದೆ. ಪವಿತ್ರ ಖುರ್‌ಆನ್ ಈ ಆವಶ್ಯಕತೆಯನ್ನು ನೆರವೇರಿಸುತ್ತದೆ. ಪವಿತ್ರ ಖುರ್‌ಆನನ್ನು ಅವತೀರ್ಣಗೊಳಿಸಿದ ದೇವನು ನಿಸ್ಸಂದಿಗ್ಧವಾಗಿ ಹೀಗೆ ಹೇಳಿರುವನು :

"ನಾವೇ ಈ ಉಪದೇಶವನ್ನು (ಖುರ್‌ಆನನ್ನು) ಅವತೀರ್ಣಗೊಳಿಸಿರುವೆವು; ನಾವೇ ಅದನ್ನು ಖಂಡಿತವಾಗಿಯೂ ಸಂರಕ್ಷಿಸುವೆವು." (15:10)

ಅಲ್ಲಾಹನೇ ಪವಿತ್ರ ಖುರ್‌ಆನಿನ ಸಂರಕ್ಷಣೆಯ ಹೊಣೆಯನ್ನು ಹೊತ್ತಿರುವನು. ಅದು ಪರಿವರ್ತನೆ ಹೊಂದಲು ಅವನು ಬಿಡಲಾರನು. ಅಲ್ಲಾಹನು ಪವಿತ್ರ ಖುರ್‌ಆನ್ ಶಾಬ್ದಿಕವಾಗಿ ಸಂರಕ್ಷಣೆ ಹೊಂದಲು ಎಲ್ಲಾ ಕಾಲಗಳಲ್ಲೂ ಲಕ್ಷಾಂತರ ಜನರು ಅದನ್ನು ಕಂಠಪಾಠ ಮಾಡಿರುವಂತೆ ಏರ್ಪಡಿಸಿರುವನು. ಈ ಕಾಲದಲ್ಲೂ ಇಂತಹವರು ಲೋಕದಲ್ಲಿರುವರು. ಪವಿತ್ರ ಖುರ್‌ಆನಿನ ಅರ್ಥವು ಸಂರಕ್ಷಿಸಲ್ಪಡುವಂತೆ ಪ್ರತಿಯೊಂದು ಹಿಜರಿ ಶತಮಾನದ ಆದಿಯಲ್ಲಿ ಮುಜದ್ದಿದ್ (ಮತ ಸುಧಾರಕ) ಆಗಮಿಸುವ ಹಾಗೆ ಮಾಡಿರುವನು ಮತ್ತು ಲೋಕದ ಕೊನೆಯ ಕಾಲಘಟ್ಟದಲ್ಲಿ ಆಗಮಿಸಲಿರುವ ಮಹತ್ವಶಾಲಿ ಮತ ಸುಧಾರಕರ (ಮುಜದ್ದಿದ್) ಬಗ್ಗೆಯೂ ಶುಭವಾರ್ತೆ ನೀಡಿರುವನು. ಆ ಬರಲಿರುವ ಮಹಾಪುರುಷರನ್ನು ಅಲ್ಲಾಹನು ಲೋಕಕ್ಕೆ ಇಮಾಮ್ (ನೇತಾರ)ನನ್ನಾಗಿ ಮಾಡುವನು. ಅವರು ಇಸ್ಲಾಮಿನ ಬಗ್ಗೆ ಉಂಟಾದ ಅಭಿಪ್ರಾಯ ವ್ಯತ್ಯಾಸಗಳನ್ನು ಅಲ್ಲಾಹನ ಮಾರ್ಗದರ್ಶನದಿಂದ ತೀರ್ಮಾನ ಮಾಡಿ ಪವಿತ್ರ ಖುರ್‌ಆನಿನ ಅರ್ಥಗಳನ್ನು ಸಂರಕ್ಷಿಸುವರು.

## ಪವಿತ್ರ ಖುರ್‌ಆನ್ ಸುರಕ್ಷಿತವಾದ ಗ್ರಂಥ

ಪವಿತ್ರ ಖುರ್‌ಆನ್ ಬಗ್ಗೆ ಅದು ಸುರಕ್ಷಿತವಾದ ಗ್ರಂಥವಾಗಿರುವುದೆಂಬ ವಾದ ಸಹ ಇಸ್ಲಾಂ ಧರ್ಮದ ಒಂದು ವೈಶಿಷ್ಟ್ಯವಾಗಿದೆ. ಇಸ್ಲಾಮಿನ ಹೊರತು ಬೇರೆ ಯಾವುದೇ ಧರ್ಮದ ಧಾರ್ಮಿಕ ಗ್ರಂಥ ತನ್ನ ಸುರಕ್ಷಿತತೆಯ ಬಗ್ಗೆ ವಾದಿಸಿದುದಾಗಿ ನಮಗೆ ಕಂಡು ಬರುವುದಿಲ್ಲ. ಅಲ್ಲದೆ ಯಥಾರ್ಥವಾಗಿ ಅವತೀರ್ಣಗೊಂಡ ಹಾಗೆಯೇ ಸುರಕ್ಷಿತವಾಗಿರುವ ಬೇರೆ ಯಾವುದೇ ಧಾರ್ಮಿಕ ಗ್ರಂಥವನ್ನು ಕಾಣಲು ಸಾಧ್ಯವಿಲ್ಲ. ಇಲ್ಲಿ ಒಂದು ಪ್ರಶ್ನೆ ಉದಿಸುತ್ತದೆ. – ಈ ವಾದಕ್ಕೆ ಪರವಾಗಿರುವ ಯಾವುದಾದರೂ ದೃಢವಾದ ಸಾಕ್ಷ್ಯಗಳು ದೊರೆಯುತ್ತವೆಯೋ ಅಥವಾ ಇದು ಕೇವಲ ಒಂದು ವಾದ ಮಾತ್ರವಾಗಿದೆಯೋ ಎಂದು. ಇದರ ಉತ್ತರವೇನೆಂದರೆ, ಅಮುಸ್ಲಿಮರಾದ ಎಷ್ಟೋ ಸಂಶೋಧಕರು ಎಷ್ಟೆಷ್ಟೋ ಪ್ರಯತ್ನಿಸಿದರೂ ಅವರಿಗೆ ಪವಿತ್ರ ಖುರ್‌ಆನಿನಲ್ಲಿ ಹಜ್ರತ್ ಮುಹಮ್ಮದ್ ಪೈಗಂಬರರ ಕಾಲದ ಅನಂತರ ಯಾವುದೇ ಪರಿವರ್ತನೆ ಉಂಟುಮಾಡಿರುವುದಾಗಿ ಸಾಬೀತುಗೊಳಿಸಲು ಸಾಧ್ಯವಾಗಲಿಲ್ಲ. ಹಲವು ಅಮುಸ್ಲಿಮ್ ಸಂಶೋಧಕರು ಸ್ಪಷ್ಟವಾದ ಶಬ್ದಗಳಲ್ಲಿ, ಪವಿತ್ರ ಖುರ್‌ಆನ್ ಯಾವುದೇ ಬದಲಾವಣೆಗೆ ಪಾತ್ರವಾಗದ ಸುರಕ್ಷಿತವಾದ ಗ್ರಂಥವೆಂದು ಒಪ್ಪಿಕೊಳ್ಳಲು ನಿರ್ಬಂಧಿತರಾಗಿರುವರು. ಉದಾಹರಣೆಗೆ ಸರ್ ವಿಲ್ಯಂ ಮೂರ್ ಹೀಗೆಂದಿರುವರು:

"We may, upon the strongest presumption, affirm that every verse in the Quran is the genuine and unaltered composition of Mohammad himself."(Life of Mohammad, page 562).

(ಬಲವಾದ ಸಾಕ್ಷ್ಯಾಧಾರಗಳ ಮೇಲಿನಿಂದ ನಾವು ದೃಢವಾಗಿ ಹೇಳಬಹುದು: ಖುರ್‌ಆನಿನ ಪ್ರತಿಯೊಂದು ವಚನ ಸಾಚಾ ಮತ್ತು ಯಾವುದೇ ಬದಲಾವಣೆಗೆ ಒಳಪಡದೆ ಇದ್ದು ಮುಹಮ್ಮದರಿಂದಲೇ ವಿರಚಿತವಾದುದಾಗಿದೆ.)

ಪುನಃ ಆ ಲೇಖಕ ಹೀಗೆಂದಿರುವರು :

"There is otherwise every security, internal and external that we possess the text which Mohammad himself gave forth and used." (Life of Mohammad, page 561).

(ಈ ಗ್ರಂಥಕ್ಕೆ ಆಂತರಿಕವಾದ ಮತ್ತು ಬಾಹ್ಯವಾದ ಸಂರಕ್ಷಣೆಯಿರುವುದರಿಂದ ನಮ್ಮ ಬಳಿಯಿರುವ ಗ್ರಂಥ ಮುಹಮ್ಮದರ ಬಳಿಯಿದ್ದುದೇ ಎಂದೂ ಅವರು ಉಪಯೋಗಿಸಿದುದೇ ಎಂದೂ ಹೇಳಬಹುದು.)

ನೋಲ್‌ಡೀಕ್ ಎಂಬ ಪೌರಸ್ತ್ಯ ಶಾಸ್ತ್ರಜ್ಞರು ಹೀಗೆಂದಿದ್ದಾರೆ :

"Quran of Uthman contains none but genuine elements though sometimes in very strange order. The efforts of European scholars to prove the existence of later interpolations in the Quran have failed." (Noldeke in Enclopeadia Brittanica 9th Edn., Quran).

(ಉಸ್ಮಾನ್ ಲೋಕದ ಮುಂದಿರಿಸಿದ ಖುರ್‌ಆನ್ ಕೆಲವು ಸ್ಥಳಗಳಲ್ಲಿ ಅದರ ಕ್ರಮಬದ್ಧತೆ ವಿಚಿತ್ರವಾಗಿದ್ದರೂ ಅದು ಸಾಚಾ ವಚನಗಳನ್ನೇ ಒಳಗೊಂಡಿದೆ. ನಂತರ ಕಾಲದಲ್ಲಿ ಖುರ್‌ಆನಿನಲ್ಲಿ ಪ್ರಕ್ಷಿಪ್ತ ವಚನಗಳು ಸೇರಿ ಕೊಂಡಿವೆಯೆಂದು ಸಾಬೀತುಪಡಿಸಲು ಐರೋಪ್ಯ ವಿದ್ವಾಂಸರು ನಡೆಸಿದ ಎಲ್ಲ ಪ್ರಯತ್ನಗಳೂ ವಿಫಲ ಗೊಂಡಿವೆ.)

### ಪವಿತ್ರ ಖುರ್‌ಆನಿನ ತತ್ವಗಳು ಸಾರ್ವಕಾಲಿಕ

ಪವಿತ್ರ ಖುರ್‌ಆನಿನ ತತ್ವಗಳು ಪರಿಪೂರ್ಣವೂ ಸಾರ್ವಕಾಲಿಕವೂ ಆಗಿವೆ ಹಾಗೂ ಪ್ರತಿಯೊಂದು ಕಾಲದ ಮನುಷ್ಯನು ಅದರಿಂದ ಮಾರ್ಗದರ್ಶನ ಪಡೆಯಬಲ್ಲ ಎಂಬ ವಾದ ಸಹ ನಿರಾಧಾರವಲ್ಲ. ಅದರ ಉಪದೇಶಗಳು ಆಂತರಿಕವಾದ, ಬಲಯುತವಾದ ಸಾಕ್ಷ್ಯಗಳಿಂದ ಅವು ಪರಿಪೂರ್ಣವೂ ಲೋಕದ ಬದಲಾಗುತ್ತಿರುವ ಆವಶ್ಯಕತೆಗಳನ್ನು ನೆರವೇರಿಸುವ ಸಾಮರ್ಥ್ಯವನ್ನು ಹೊಂದಿಕೊಂಡಿರುವಂತಹುಗಳೂ ಆಗಿವೆಯೆಂದು ಸ್ಪಷ್ಟಪಡಿಸುತ್ತವೆ. ಇಲ್ಲಿ ವಿಸ್ತಾರವಾಗಿ ಈ ಸಂಗತಿ ನಿರೂಪಿಸಲು ಸಾಧ್ಯವಿಲ್ಲದುದರಿಂದ ನಾನು ಕೆಲವು ತಾತ್ವಿಕ ಸಂಗತಿಗಳ ಕುರಿತು ಸೂಚನೆಯನ್ನೂ ಕೆಲವು ವಿವರಣಾತ್ಮಕ ಉದಾಹರಣೆಗಳನ್ನೂ ನೀಡುವೆನು.

ಪ್ರಥಮವಾಗಿ ಮನವರಿಕೆ ಮಾಡಿಕೊಳ್ಳಬೇಕಾದುದೇನೆಂದರೆ, ಮುಂದುವರಿಯುತ್ತಿರುವ ಕಾಲದಲ್ಲಿ ಬದಲಾಗುತ್ತಿರುವ ಆವಶ್ಯಕತೆಗಳಿದ್ದರೂ ಸಹ ಇಸ್ಲಾಂ ಧರ್ಮದ ತತ್ವಗಳಲ್ಲಿ ಯಾವುದೇ ಬದಲಾವಣೆಯ ಅಗತ್ಯವುಂಟಾಗದಂತೆ ಮಾಡುವ ಪ್ರಯತ್ನಗಳಲ್ಲಿ ಅದು ಹೇಗೆ ಜಯಶೀಲವಾಗುತ್ತಿದೆ ಎಂಬುದಾಗಿದೆ. ಈ ಬಗ್ಗೆ ಇಸ್ಲಾಮ್ ಧರ್ಮದ ಕಾರ್ಯ ವಿಧಾನದ ಜಾಣ್ಮೆಯ ಅಧ್ಯಯನ ಬಹಳ ಆಸಕ್ತಿಯನ್ನುಂಟುಮಾಡುವ ವಿಷಯವಾಗಿದೆ. ಅದರ ಕೆಲವು ಅಂಶಗಳನ್ನು ನಿಮ್ಮ ಮುಂದಿರಿಸುತ್ತೇನೆ.

1. ಇಸ್ಲಾಮ್ ಧರ್ಮ ಕೇವಲ ತಾತ್ವಿಕ ಉಪದೇಶಗಳನ್ನು ನೀಡುತ್ತದೆ. ಬದಲಾಗುತ್ತಿರುವ ಪರಿಸ್ಥಿತಿ ಮತ್ತು ಕಾಲಗಳಿಗನುಸಾರವಾಗಿ ಬದಲಾಗಬಹುದಾದ ವಿವರಣೆಗಳನ್ನು ಅದು ಬಿಟ್ಟುಬಿಟ್ಟಿದೆ.

2. ಮನುಷ್ಯನ ಬೌದ್ಧಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಪ್ರಾಗತಿಕ ಬೆಳವಣಿಗೆಗಳನ್ನು ಪರಿಗಣಿಸಿ, ಪ್ರತಿಯೊಂದು ಸಂಭಾವ್ಯ ಪರಿಸ್ಥಿತಿಯನ್ನು ದೃಷ್ಟಿಯಲ್ಲಿರಿಸಿಕೊಂಡು, ಯಾವುದೇ ಕಾಲದಲ್ಲಿ ವಿವಿಧ ಕೋಮುಗಳು ಒಂದೇ ರೀತಿಯಲ್ಲಿ ಅಭಿವೃದ್ಧಿ ಹೊಂದಿದ ಸ್ಥಿತಿಯಲ್ಲಿರಲಾರದೆಂಬ ಸ್ಪಷ್ಟ ದೃಷ್ಟಿಕೋನದಿಂದ ಇಸ್ಲಾಮ್ ಉಪದೇಶಗಳನ್ನು ನೀಡುತ್ತದೆ. ಪ್ರತಿಯೊಂದು ಕಾಲದಲ್ಲಿ ಕೆಲವು ಕೋಮುಗಳು ಸುಧಾರಣೆ ಮತ್ತು ಅಭಿವೃದ್ಧಿಯ ದೃಷ್ಟಿಯಲ್ಲಿ ಬೇರೆ ಕಾಲಗಳಿಗೆ ಸಂಬಂಧಿಸಿದಂತೆ ಇರುತ್ತವೆ. ಉದಾಹರಣೆಗೆ ಹೇಳುವುದಾದರೂ ಈಗಿನ ಕಾಲದಲ್ಲಿ ಶಿಲಾಯುಗದ ಮನುಷ್ಯರು ಕೆಲವು ಕಡೆ ಇರುವುದು ಸಂಭಾವ್ಯವಾಗಿದೆ. ಅಥವಾ ಸಾವಿರಾರು ವರ್ಷಗಳಷ್ಟು ಹಿಂದಿನ ಕೋಮುಗಳೊಂದಿಗೆ ಸಂಬಂಧವಿರುವ ಗುಂಪು ಅಥವಾ ಕೋಮುಗಳು ಇಂದೂ ಇರಬಹುದು. ಅವರು ಈ ಕಾಲದಲ್ಲಿ ಜೀವಿಸುವವರಾಗಿದ್ದರೂ ಬುದ್ಧಿಶಕ್ತಿ, ನಾಗರಿಕತೆ ಮತ್ತು ರಾಜಕೀಯ ಸ್ಥಿತಿ ಮತ್ತು ಪುರೋಗತಿಯ ದೃಷ್ಟಿಯಲ್ಲಿ ಹಿಂದಿನ ಕಾಲದವರಾಗಿರುತ್ತಾರೆ. ಆಸ್ಟ್ರೇಲಿಯಾದ ಆದಿವಾಸಿಗಳೂ ಕಾಂಗೋದ ಪಿಗ್ಮಿ ಜನರೂ ಇದಕ್ಕೆ ಉದಾಹರಣೆಗಳಾಗಿದ್ದಾರೆ. ಇವರ ಮೇಲೆ ಈಗಿನ ಕಾಲದ ಹೊಸ ರಾಜಕೀಯ ಸಿದ್ಧಾಂತಗಳನ್ನು ಹೇರಿದರೆ ವಿವೇಕ ಶೂನ್ಯತೆಯಿಂದ ವರ್ತಿಸಿದಂತಾಗುವುದು.

3. ಮನುಷ್ಯ ಪ್ರಕೃತಿಯ ಎಲ್ಲಾ ಸಂಭಾವ್ಯ ಆವಶ್ಯಕತೆಗಳನ್ನು ಪರಿಗಣಿಸಿ ಇಸ್ಲಾಮ್ ಧರ್ಮ ತನ್ನ ಉಪದೇಶಗಳನ್ನು ನೀಡಿದೆ. ಮನುಷ್ಯನ ಪ್ರಕೃತಿಯಲ್ಲಿ

ಬದಲಾವಣೆ ಉಂಟಾಗುವ ವರೆಗೆ ಆ ಉಪದೇಶಗಳೂ ಬದಲಾವಣೆ ಹೊಂದದೆ ಇರುವುವು.

ಇಸ್ಲಾಮಿನ ಧಾರ್ಮಿಕ ಸಿದ್ಧಾಂತಗಳ ಕೆಲವು ಸ್ವರೂಪಗಳನ್ನು ಉದಾಹರಿಸಲಾಗಿದೆ. ಸ್ವಲ್ಪ ಮಟ್ಟಿಗೆ ನಾನು ಇವುಗಳ ವಿವರಣೆಯನ್ನು ನೀಡಿ ನನ್ನ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಲಿಚ್ಛಿಸುತ್ತೇನೆ.

## ಇಸ್ಲಾಮಿನ ಆರ್ಥಿಕ ಪದ್ಧತಿಯ ಮೂಲತತ್ವ — ಝುಕಾತ್

ಇಸ್ಲಾಂ ಬಡ್ಡಿಯನ್ನು ಸಂಪೂರ್ಣವಾಗಿ ನಿಷಿದ್ಧಗೊಳಿಸಿದೆ. ಪ್ರಪಂಚದಿಂದ ಬಡ್ಡಿಯ ವ್ಯವಸ್ಥೆಯನ್ನೇ ಸಂಪೂರ್ಣ ಕಿತ್ತು ಹಾಕಲು ಅದು ಒತ್ತಿ ಹೇಳುತ್ತದೆ. ಆರ್ಥಿಕ ಚಕ್ರ ಚಲಿಸುವಂತಾಗಲು ಬಡ್ಡಿಯ ಬದಲಾಗಿ ಝುಕಾತನ್ನು ಚಾಲಕ ಶಕ್ತಿಯನ್ನಾಗಿ ಮಾಡಲು ಅದು ಪ್ರೇರೇಪಿಸುತ್ತದೆ. ಬಡ್ಡಿಯ ವ್ಯವಸ್ಥೆಗಿಂತ ಝುಕಾತ್ ವ್ಯವಸ್ಥೆ ಹೇಗೆ ಮೇಲ್ಮೆಯನ್ನು ಪಡೆದಿದೆ ಎಂಬುದನ್ನು ವಿವರಿಸಲು ಇಲ್ಲಿ ಸಮಯಾವಕಾಶವಿಲ್ಲ. ಆದರೆ ಈ ಉಪದೇಶವನ್ನು ಕಾಲದ ಹಸ್ತಕ್ಷೇಪದಿಂದ ಸಂರಕ್ಷಿಸಲು ಪವಿತ್ರ ಖುರ್‌ಆನ್ ಹೇಗೆ ನಿರ್ದೇಶನ ನೀಡಿದೆಯೆಂಬುದನ್ನು ಮಾತ್ರ ಇಲ್ಲಿ ವಿವರಿಸುವೆನು.

ಝುಕಾತ್ ಎಂಬುದು ಭಂಡವಾಳದ ಮೇಲಿನ ಒಂದು ತೆರಿಗೆಯಾಗಿದೆ. ಅದನ್ನು ಶ್ರೀಮಂತರಿಂದ ವಸೂಲು ಮಾಡಲಾಗುತ್ತಿದೆ. ರಾಜ್ಯದ ಆವಶ್ಯಕತೆಗಳಿಗಾಗಿ ಅದನ್ನು ವ್ಯಯಮಾಡುವುದರೊಂದಿಗೆ ಅದರ ವಸೂಲಾತಿಯ ಉದ್ದೇಶ ಬಡವರ ಆವಶ್ಯಕತೆಗಳನ್ನು ನೆರವೇರಿಸುವುದಾಗಿದೆ. ಈ ವ್ಯವಸ್ಥೆಯಿಂದ ಸರಕಾರದ ಆವಶ್ಯಕತೆಗಳೊಂದಿಗೆ, ಸಮಾಜ ಕಲ್ಯಾಣದ ಆವಶ್ಯಕತೆಗಳೂ ನೆರವೇರುತ್ತವೆ. ಪವಿತ್ರ ಖುರ್‌ಆನ್ ಮನುಷ್ಯನ ಕೈಗಳಿಂದ ವಿರಚಿತವಾಗಿದ್ದರೆ, ಆ ಕಾಲದ ಅರಬಸ್ಥಾನದ ಪರಿಸ್ಥಿತಿಯನ್ನು ಪರಿಗಣಿಸಿ ಆ ತೆರಿಗೆಯ ಯಾವುದಾದರೂ ದರವು ನಿಶ್ಚಯಿಸಲ್ಪಡುತ್ತಿತ್ತು. ಆದರೆ ಪವಿತ್ರ ಖುರ್‌ಆನಿನಲ್ಲಿ ಝುಕಾತ್ ನೀಡುವ ಬಗ್ಗೆ ಒತ್ತಾಯಪೂರ್ವಕ ಆಜ್ಞೆಗಳು ಹಲವಾರು ಕಡೆಗಳಲ್ಲಿ ನೀಡಲಾಗಿದ್ದರೂ ಒಂದು ಕಡೆಯಲ್ಲಾದರೂ ಝುಕಾತ್‌ನ ದರವನ್ನು ನಿಶ್ಚಯಿಸದಿರುವುದು ಆಶ್ಚರ್ಯಕರವಾಗಿದೆ. ಸಂಗತಿ ಹೀಗಿದ್ದರೂ ಪವಿತ್ರ ಖುರ್‌ಆನ್ ನೀಡಿದ ಕೆಲವು ತಾತ್ವಿಕ ನಿರ್ದೇಶನಗಳನ್ನು ದೃಷ್ಟಿಯಲ್ಲಿರಿಸಿದರೆ ಎಲ್ಲಾ ರಾಜ್ಯಗಳಲ್ಲಿ ಮತ್ತು ಎಲ್ಲಾ ಕಾಲಗಳಲ್ಲಿ ಆಯಾ ಕಾಲದ ಮತ್ತು ರಾಜ್ಯದ ಸ್ಥಿತಿಯನ್ನನುಸರಿಸಿ ಧಾರ್ಮಿಕ ಸಂಗತಿಗಳಲ್ಲಿ ತೀರ್ಮಾನ ಮಾಡುವವರು ನಿರ್ದಿಷ್ಟ ತೀರ್ಮಾನ ಮಾಡಬಲ್ಲರು. ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ :

> "ಅವರ (ಸತ್ಯ ವಿಶ್ವಾಸಿಗಳ) ಧನದಲ್ಲಿ ಯಾಚಿಸುವವರಿಗೂ, ಯಾಚಿಸಲು ಸಾಧ್ಯವಿಲ್ಲದವರಿಗೂ ಪಾಲು ಇದೆ." (51 : 20)

ಯಾರ ಬಳಿಯಾದರೂ ಅವರ ಮೂಲಭೂತ ಆವಶ್ಯಕತೆಗಳಿಗಿಂತಲೂ ಹೆಚ್ಚು ಧನವಿದ್ದರೆ, ಅವರ ಧನದಲ್ಲಿ ಯಾಚಿಸುವವರಿಗೂ ಯಾಚಿಸದ ಬಡವರಿಗೂ ಪಾಲು ಇದೆ ಎಂದು ಹೇಳಿರುವ ಉದ್ದೇಶ ಅವರ (ಬಡವರ) ಮೂಲಭೂತ ಆವಶ್ಯಕತೆಗಳು ನೆರವೇರುತ್ತಿಲ್ಲ ಎಂದಾಗಿದೆ. ಈ ತತ್ವದ ಪ್ರಕಾರ ಪ್ರತಿಯೊಂದು ಕಾಲ, ದೇಶ, ಕೋಮು ಮತ್ತು ಸಮಾಜದಲ್ಲಿ ಮನುಷ್ಯನ ಮೂಲಭೂತ ಆವಶ್ಯಕತೆಗಳನ್ನು ಪೂರೈಸುವುದು ಮನುಷ್ಯನಿಗೆ ನೀಡಲೇಬೇಕಾದ ಅತ್ಯಂತ ಕನಿಷ್ಠ ನ್ಯಾಯಬದ್ಧ ಹಕ್ಕೆಂದು ಒಪ್ಪಲಾಗಿದೆ. ಈ ಮೂಲಭೂತ ಆವಶ್ಯಕತೆಯ ನಿರ್ವಹಣೆಯ ಭಾರ ಹೊರಬೇಕಾದುದು ತಮ್ಮ ಮೂಲಭೂತ ಆವಶ್ಯಕತೆಗಳಿಗಿಂತ ಹೆಚ್ಚು ಧನವನ್ನು ಹೊಂದಿದವರಾಗಿದ್ದಾರೆ. ಆದರೆ ಇದರ ನೀಡಿಕೆಯ ವ್ಯವಸ್ಥೆಯನ್ನು ನ್ಯಾಯಯುತವಾಗಿ ಮೇಲೆ ಸೂಚಿಸಿದ ತತ್ವದಂತೆ ನಡೆಸಬೇಕಾದುದು ಸರಕಾರದ ಹೊಣೆಗಾರಿಕೆಯಾಗಿದೆ.

## ಆಡಳಿತ ವ್ಯವಸ್ಥೆಯ ಬಗ್ಗೆ ಇಸ್ಲಾಮಿನ ಉಪದೇಶಗಳು

ಈಗಿನ ಕಾಲದಲ್ಲಿರುವ ಒಂದು ಅಂತಾರಾಷ್ಟ್ರೀಯ ಸಮಸ್ಯೆ ಆಡಳಿತೆಯ ವ್ಯವಸ್ಥೆಯನ್ನು ನಿಗದಿಪಡಿಸುವುದಾಗಿದೆ. ಎಲ್ಲಿ ಯಾವ ವ್ಯವಸ್ಥೆ ಏರ್ಪಡಿಸಬೇಕೆಂದು ಇಲ್ಲಿ ಪ್ರಶ್ನೆಯಾಗಿದೆ. ಈ ಸಮಸ್ಯೆಯ ಬಗ್ಗೆ ಇಸ್ಲಾಂ ಧರ್ಮ ಸೂಚಿಸಿದ ಮಾರ್ಗಸೂಚಕ ದೃಢ ತತ್ವಗಳನ್ನು

ಪರಿಶೀಲಿಸಿದರೆ, ಅವುಗಳು ಎಲ್ಲಾ ಕಾಲಗಳಿಗೂ ದೇಶಗಳಿಗೂ ಹೊಂದಿಕೊಳ್ಳುವುದಾಗಿದ್ದು ಅವುಗಳ ಸತ್ಯತೆ ಮತ್ತು ಮಹತ್ವಕ್ಕೆ ಸ್ವಯಂಸಾಕ್ಷ್ಯ ನೀಡುತ್ತವೆ. ವಿವಿಧ ರೀತಿಯ ಆಡಳಿತ ವ್ಯವಸ್ಥೆಗಳು ವಿವಿಧ ಪರಿಸ್ಥಿತಿಗಳ ಆವಶ್ಯಕತೆಗಳಿಗೆ ಅನುಸಾರವಾಗಿ ಯೋಗ್ಯ ಅಥವಾ ಅಯೋಗ್ಯವೆಂದು ಪರಿಗಣಿಸಲ್ಪಡುತ್ತವೆ. ಎಲ್ಲಾ ಕಾಲಗಳಲ್ಲೂ ಎಲ್ಲಾ ಕೋಮುಗಳಿಗೂ ಎಲ್ಲಾ ಪ್ರದೇಶಗಳಲ್ಲಿ ವಾಸಿಸುವ ಜನರಿಗೂ ಒಂದೇ ರೀತಿಯ ರಾಜಕೀಯ ವ್ಯವಸ್ಥೆ ಲಾಭದಾಯಕವಾಗಲಾರದು. ಇದೇ ಕಾರಣದಿಂದ ಇಸ್ಲಾಮ್ ಯಾವುದೇ ಒಂದು ಆಡಳಿತ ವ್ಯವಸ್ಥೆಯನ್ನು ನಿಶ್ಚಯಿಸುವುದಿಲ್ಲ. ಅದು ಪ್ರಜಾಪ್ರಭುತ್ವವನ್ನಾಗಲೀ ಸಮತಾವಾದವನ್ನಾಗಲೀ ಆಡಳಿತೆಯ ತತ್ವವಾಗಿ ಮುಂದಿರಿಸುವುದಿಲ್ಲ. ಅದು ರಾಜ ಪ್ರಭುತ್ವದ ಬಗ್ಗೆಯಾಗಲೀ, ನಿರಂಕುಶ ಸರ್ವಾಧಿಕಾರದ ಬಗ್ಗೆಯಾಗಲೀ. ಫಾಸಿಸ್ಟ್ ಆಡಳಿತದ ಕುರಿತಾಗಲೀ ಮಾರ್ಗಸೂಚನೆ ನೀಡುವುದಿಲ್ಲ. ಅದು ಸರಕಾರವನ್ನು ರಚಿಸುವುದಕ್ಕಿಂತ ಹೆಚ್ಚಾಗಿ ಸರಕಾರ ನಡೆಸುವ ಬಗ್ಗೆ ಹೆಚ್ಚಿನ ದಾರಿಸೂಚಕ ತತ್ವಗಳನ್ನು ವಿವರಿಸಿದೆ. ಸರಕಾರ ಯಾವುದೇ ರೀತಿಯದ್ದಾದರೂ ಸರಕಾರದ ಹೊಣೆಗಾರಿಕೆಯನ್ನು ಕಡ್ಡಾಯವಾಗಿ ನ್ಯಾಯ, ಸಮತೆ ಮತ್ತು ಮಾನವೀಯ ಸಹಾನುಭೂತಿ ಹಾಗೂ ಮೂಲಭೂತ ಮಾನವ ಹಕ್ಕುಗಳ ಸಂರಕ್ಷಣೆಯ ಆವಶ್ಯಕತೆಗಳನ್ನು ನೆರವೇರಿಸುವಂತೆ ನಿರ್ವಹಿಸಬೇಕಾಗಿದೆ ಎಂದು ಇಸ್ಲಾಂ ಧರ್ಮ ಉಪದೇಶ ನೀಡುತ್ತದೆ.

ಈ ಉಪದೇಶ ಮನುಷ್ಯನ ಪ್ರಕೃತಿಗೆ ಮತ್ತು ಆತನ ಸಹಜ ಗುಣಗಳಿಗನುಸಾರವಾಗಿದೆ. ಹಲವಾರು ಹಿಂದುಳಿದ ಮತ್ತು ಅಭಿವೃದ್ಧಿಶೀಲ ರಾಜ್ಯಗಳನ್ನು ಇಂದು ಸಹ ಉದಾಹರಣೆಯಾಗಿ ನೀಡಬಹುದು. ಅವುಗಳು ತಮ್ಮ ಪ್ರತ್ಯೇಕ ಪರಿಸ್ಥಿತಿಗಳಿಂದಾಗಿ ಪ್ರಜಾಪ್ರಭುತ್ವದ ಆಡಳಿತ ರೀತಿಯನ್ನು ಜಾರಿಗೊಳಿಸಲಾರವು. ಮಾತ್ರವಲ್ಲ, ಪಾಶ್ಚಿಮಾತ್ಯ ರಾಜ್ಯಗಳಲ್ಲೂ ಬೇರೆ ಪರಿಸ್ಥಿತಿಯಿರುವ ಕೆಲವು ರಾಜ್ಯಗಳೂ ಇವೆ. ಅವುಗಳಲ್ಲಿ ಪ್ರಜಾಪ್ರಭುತ್ವದ ಪ್ರಯೋಗ ಯಶಸ್ವಿಯಾಗಲಿಲ್ಲ ಅಥವಾ ಪ್ರಜಾಪ್ರಭುತ್ವ ನಾಮ ಮಾತ್ರವಾಗಿದ್ದು ಯಥಾರ್ಥವಾಗಿ ಸಂಘಟಿತ, ಶಕ್ತಿಶಾಲಿ ಅಲ್ಪಸಂಖ್ಯಾತ ಕೂಟಗಳು ಅಧಿಕಾರವನ್ನು ತಮ್ಮ ಕೈಯೊಳಗಿರಿಸಿವೆ.

ಇಸ್ಲಾಮ್ ಪ್ರಜಾಪ್ರಭುತ್ವದ ಪರಿಭಾಷೆಯ ಪ್ರಥಮ ಪಾಠವಾದ BY THE PEOPLE (ಜನರಿಂದ) ಎಂಬುದಕ್ಕೆ ಹೆಚ್ಚಿನ ಮಹತ್ವ ನೀಡುವುದಿಲ್ಲ. ಅದು ಹೇಳುವುದೇನೆಂದರೆ ಸರಕಾರ ಯಾವುದೇ ರೀತಿಯದಾಗಿದ್ದರೂ ಅದು ಕಡ್ಡಾಯವಾಗಿ FOR THE PEOPLE (ಜನರಿಗಾಗಿ) ಆಗಿರಬೇಕೆಂದಾಗಿದೆ. ಪ್ರಜಾಪ್ರಭುತ್ವದ ಕುರಿತು ವಿವರಿಸುವಾಗ ಪವಿತ್ರ ಖುರ್‌ಆನ್ ಹೇಳುವುದೇನೆಂದರೆ ಕೇವಲ ಅಯಥಾರ್ಥ ಪ್ರಜಾಪ್ರಭುತ್ವವಿರಬಾರದೆಂದಾಗಿದೆ. ಪ್ರಜಾಪ್ರಭುತ್ವದಲ್ಲಿ ಅರ್ಹರಾದವರನ್ನು ಸರಕಾರ ನಡೆಸಲು ಆರಿಸುವ ಯೋಗ್ಯತೆ ಜನರಿಗೆ ಇರುವುದೂ ಅವರು ತಮ್ಮ ಯೋಗ್ಯತೆಯ ಸದುಪಯೋಗಪಡಿಸಿ ಅರ್ಹರಾದ ವ್ಯಕ್ತಿಗಳನ್ನು ಮಾತ್ರ ಆರಿಸಬೇಕಾದುದೂ ಅವರ ಕರ್ತವ್ಯವಾಗಿದೆ. ಆದುದರಿಂದ ಚುನಾವಣೆಯ ಕಾರ್ಯವನ್ನು ಈ ಶರ್ತಕ್ಕೊಳಪಡಿಸಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

> "ಅಲ್ಲಾಹನು ನಿಶ್ಚಯವಾಗಿಯೂ ನಿಮಗೆ ಆಜ್ಞಾಪಿಸುತ್ತಾನೆ: ನೀವು ನಿಮ್ಮ ವಿಶ್ವಸ್ತನಿಧಿಗಳನ್ನು ಅದಕ್ಕೆ ಅರ್ಹರಾದವರಿಗೆ ನೀಡಿರಿ. ನೀವು ಮನುಷ್ಯರ ಮಧ್ಯೆ ತೀರ್ಮಾನ ಮಾಡುವಾಗ ನ್ಯಾಯಯುತವಾಗಿ ತೀರ್ಮಾನ ಮಾಡಿರಿ." (4 : 59)

ಎಂದರೆ, ಆಡಳಿತಗಾರರನ್ನು ಚುನಾಯಿಸುವಾಗ ಅರ್ಹತೆಯನ್ನು ಪರಿಗಣಿಸಬೇಕು. ಅನಂತರ ಸ್ಥಾಪಿತವಾಗುವ ಸರಕಾರವು ವರ್ಣ, ವಂಶ, ಜಾತಿ, ಮತ ಇತ್ಯಾದಿ ಭೇದವನ್ನು ಕಲ್ಪಿಸದೆ ತನ್ನ ಕೆಲಸವನ್ನು ನ್ಯಾಯಪೂರ್ಣವಾಗಿ ನಿರ್ವಹಿಸಬೇಕು. ಈ ಉಪದೇಶವನ್ನು ಕಡೆಗಣಿಸಿದರೆ, ಕೆಲವು ಸಾರಿ ನಿಮಗೆ ಎಂತಹ ಪರಿಸ್ಥಿತಿಯನ್ನು ನೋಡಬೇಕಾಗಿ ಬರಬಹುದೆಂದರೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ಸ್ಥಾಪಿತವಾಗುವ ಅನೇಕ ಸರಕಾರಗಳು ರಾಜರುಗಳ ಮತ್ತು ನಿರಂಕುಶ ಸರ್ವಾಧಿಕಾರಿಗಳ ಆಡಳಿತಗಳಿಗಿಂತ ಹೆಚ್ಚು ಹೆಚ್ಚಾಗಿ ಮಾನವ ಹಕ್ಕುಗಳನ್ನು ಧ್ವಂಸಗೊಳಿಸುವವುಗಳಾಗಿರುತ್ತವೆ.

ಒಟ್ಟಾರೆ ಹೇಳುವುದಾದರೆ, ಆಡಳಿತೆ ಯಾವುದೇ ವ್ಯವಸ್ಥೆಗಳಿಗನುಸಾರವಾಗಿದ್ದರೂ – ಆಡಳಿತೆಗಾರನು ರಾಜನಾಗಿದ್ದರೂ ನಿರಂಕುಶ ಸರ್ವಾಧಿಕಾರಿಯಾಗಿದ್ದರೂ

ಅಥವಾ ಪ್ರಜಾಪ್ರಭುತ್ವದ ರೀತಿಯಲ್ಲಿ ಆಡಳಿತ ಸೂತ್ರ ಕೆಲವರ: ಕೈಯೊಳಗಿದ್ದರೂ ಅವರೆಲ್ಲರೂ ಪವಿತ್ರ ಖುರ್‌ಆನಿನ ಮಾರ್ಗದರ್ಶನಗಳಿಗನುಸಾರವಾಗಿ ಯಾವುದಾದರೂ ಆಡಳಿತೆಯ ಸಂವಿಧಾನವನ್ನು ರೂಪಿಸಿದರೆ, ಅವರು ತಮ್ಮ ಹೊಣೆಗಾರಿಕೆಯ ಬಗ್ಗೆ ಮನವರಿಕೆ ಮಾಡಿಕೊಂಡಿದ್ದರೆ ಮತ್ತು ಮಾನವರಿಗೆ ಮೂಲಭೂತ ಹಕ್ಕುಗಳನ್ನು ದಯಪಾಲಿಸುವ ಭರವಸೆಯನ್ನು ನೀಡುವುದಾದರೆ, ಅದರ ಫಲವಾಗಿ ಒಂದು ಅನುಕರಿಸಲು ಯೋಗ್ಯವಾದ ಹಾಗೂ ಮನುಷ್ಯನಿಗೆ ಉಪಕಾರಪ್ರದವಾದ ಸರಕಾರವು ಸ್ಥಾಪಿತವಾಗುವುದು.

## ಆಡಳಿತ ವ್ಯವಸ್ಥೆಯ ಮೂಲಭೂತ ಮಾರ್ಗದರ್ಶಕ ತತ್ವಗಳು

ಯಾವುದೇ ಆಡಳಿತ ವ್ಯವಸ್ಥೆಯಲ್ಲಿ ಪಾಲಿಸಬೇಕಾದ ಮೂಲಭೂತ ತತ್ವಗಳನ್ನು ನಾನಿಲ್ಲಿ ಪವಿತ್ರ ಖುರ್‌ಆನಿನ ಆಧಾರದಿಂದ ಸಂಕ್ಷಿಪ್ತವಾಗಿ ವಿವರಿಸುತ್ತೇನೆ:

* ಸರಕಾರದ ಪ್ರಥಮ ಕರ್ತವ್ಯ ಜನರ ಗೌರವ, ಜೀವ ಮತ್ತು ಸಂಪತ್ತಿನ ಸಂರಕ್ಷಣೆ ಮಾಡುವುದಾಗಿದೆ.[1]

* ವ್ಯಕ್ತಿಗಳ ಮಧ್ಯೆ ಮತ್ತು ಕೋಮುಗಳ ಮಧ್ಯೆ ನ್ಯಾಯಯುತವಾದ ತೀರ್ಮಾನ ಮಾಡಬೇಕಾದುದು ಸರಕಾರದ ಇನ್ನೊಂದು ಕರ್ತವ್ಯವಾಗಿದೆ.[2]

* ಸಾಮೂಹಿಕ ಪ್ರಶ್ನೆಗಳ ಬಗ್ಗೆ ಪರಸ್ಪರ ಸಮಾಲೋಚನೆಯಿಂದ ತೀರ್ಮಾನ ಕೈಗೊಳ್ಳಬೇಕು.[3]

* ಸರಕಾರ ಪ್ರತಿಯೊಬ್ಬನಿಗೆ ಮನುಷ್ಯನ ಅತ್ಯಂತ ಕನಿಷ್ಠ ಆವಶ್ಯಕತೆಗಳಾದ ಆಹಾರ, ಬಟ್ಟೆ ಮತ್ತು ಮನೆಯನ್ನು ಒದಗಿಸುವ ಹೊಣೆಗಾರಿಕೆಯನ್ನು ಹೊರ ಬೇಕಾಗಿದೆ.[4]

* ಜನರು ಎಲ್ಲಾ ವಿಧದಲ್ಲಿಯೂ ಶಾಂತಜೀವನ ನಿರ್ವಹಿಸುವಂತೆ ಸರಕಾರ ಶಾಂತಿಯನ್ನು ಕಾಪಾಡಬೇಕು. ಪ್ರತಿಯೊಬ್ಬನ ಜೀವ, ಸಂಪತ್ತು ಮತ್ತು ಗೌರವದ ಸಂರಕ್ಷಣೆಯ ಏರ್ಪಾಡುಮಾಡಬೇಕು.[5]

* ಜನರ ಆರ್ಥಿಕ ಸ್ಥಿತಿಯ ಸುಧಾರಣೆಗೆ ತಕ್ಕ ಏರ್ಪಾಡುಮಾಡಬೇಕು.[6]

* ಜನರ ಆರೋಗ್ಯದ ಸಂರಕ್ಷಣೆಯನ್ನು ನಿರ್ವಹಿಸಬೇಕು.[7]

* ರಾಜ್ಯದಲ್ಲಿ ಧಾರ್ಮಿಕ ಸ್ವಾತಂತ್ರ್ಯ ನೆಲೆಗೊಳ್ಳಬೇಕು.[8]

* ಯುದ್ಧದಲ್ಲಿ ಸೋಲಿಸಲ್ಪಟ್ಟ ಕೋಮಿನೊಂದಿಗೆ ನ್ಯಾಯಯುತವಾಗಿ ನಡಕೊಳ್ಳಬೇಕು.[9]

* ಯುದ್ಧ ಕೈದಿಗಳಿಗೆ ಪ್ರತ್ಯೇಕವಾದ ರಿಯಾಯತಿಗಳನ್ನು ನೀಡಬೇಕು.[10]

---

1–2. "ಅಲ್ಲಾಹನು ನಿಶ್ಚಯವಾಗಿಯೂ ನಿಮಗೆ ಆಜ್ಞಾಪಿಸುತ್ತಾನೆ: ನೀವು ನಿಮ್ಮ ವಿಶ್ವಸ್ತನಿಧಿಗಳನ್ನು ಅದಕ್ಕೆ ಅರ್ಹರಾದವರಿಗೆ ನೀಡಿರಿ. ನೀವು ಮನುಷ್ಯರ ಮಧ್ಯೆ ತೀರ್ಮಾನ ಮಾಡುವಾಗ ನ್ಯಾಯಯುತವಾಗಿ ತೀರ್ಮಾನ ಮಾಡಿರಿ." (ಪವಿತ್ರ ಖುರ್‌ಆನ್ 4 : 59)

3. "ಅವರು ತಮ್ಮ ಕಾರ್ಯಗಳನ್ನು ಪರಸ್ಪರ ಸಮಾಲೋಚನೆಗಳ ಮೂಲಕ ತೀರ್ಮಾನಿಸುತ್ತಾರೆ." (42 : 39)

4. "ನೀನು ಹಸಿವೆಯಿಂದಿರಬಾರದು ಮತ್ತು ನಗ್ನತೆಯಿಂದಿರಬಾರದು. ನೀನು ಇಲ್ಲಿ ಬಾಯಾರಿಕೆಯಿಂದಿರಬಾರದು ಮತ್ತು ಬಿಸಿಲಿನ ಬೇಗೆಗೆ ತುತ್ತಾಗಬಾರದು." (20 : 119, 120)

5–6–7. "ಕೆಲವರು ಅಧಿಕಾರ ಹೊಂದಿದರೆ ಹಿಂಸೆಯನ್ನು ಹಬ್ಬಿಸುತ್ತಾರೆ ಮತ್ತು ಬೆಳೆಯನ್ನೂ ಜನರನ್ನೂ ನಾಶಮಾಡಲು ದೇಶದಲ್ಲೆಲ್ಲಾ ಓಡಾಡುತ್ತಾರೆ; ಆದರೆ ಅಲ್ಲಾಹನು ಹಿಂಸೆಯನ್ನು ಇಷ್ಟಪಡುವುದಿಲ್ಲ." (2 : 206)

8. "ಧಾರ್ಮಿಕ ಸಂಗತಿಗಳಲ್ಲಿ ಬಲಾತ್ಕಾರ ಸಲ್ಲದು." (2 : 257)

9. "ಯಾವುದೇ ಕೋಮಿನ ಮೇಲಿರುವ ನಿಮ್ಮ ವಿರೋಧ ನಿಮ್ಮನ್ನು ಅನ್ಯಾಯವಾಗಿ ವರ್ತಿಸುವಂತೆ ಮಾಡದಿರಲಿ ನೀವು ನ್ಯಾಯಯುತವಾಗಿ ನಡೆಯಿರಿ. ಅದು ಭಯಭಕ್ತಿಗೆ ಹೆಚ್ಚು ಸಮೀಪವಾಗಿದೆ." (5 : 9)

10. "ಯಾವುದೇ ಪ್ರವಾದಿ ಯುದ್ಧ ಕೈದಿಗಳನ್ನು ವಶೀಕರಿಸಿಟ್ಟುಗೊಳ್ಳುವುದು ಯೋಗ್ಯವಲ್ಲ." (8 : 68)

"(ಯುದ್ಧ ಕೈದಿಗಳನ್ನು) ಯಾವುದೇ ಪರಿಹಾರ ಪಡೆಯದೆ ಬಿಟ್ಟುಬಿಡಿರಿ; ಅಥವಾ ಪರಿಹಾರ ಪಡೆದು ಬಿಡುಗಡೆಗೊಳಿಸಿರಿ" (47 : 5)

* ಒಪ್ಪಂದಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.[11]

* ಒಪ್ಪಂದ ಮಾಡಿದ ಕೋಮಿನ ಬಲಹೀನತೆಯನ್ನು ಅಥವಾ ಅದು ತೊಂದರೆಗೊಳಪಟ್ಟದನ್ನು ನೋಡಿಕೊಂಡು ಒಪ್ಪಂದಕ್ಕೆ ಭಂಗವುಂಟುಮಾಡಬಾರದು.[12]

* ಯಾವುದಾದರೂ ಸರಕಾರ ಸ್ಥಾಪಿತವಾದರೆ ಆ ಸರಕಾರ ಇಸ್ಲಾಮನ್ನು ಸ್ಪಷ್ಟವಾಗಿ ವಿರೋಧಿಸುವವರೆಗೆ ಅಥವಾ ಮುಸ್ಲಿಮರಾಗಿ ಜೀವಿಸುವುದನ್ನು ಅದು ತಡೆಯುವ ವರೆಗೆ ಆ ಸರಕಾರವನ್ನು ಅನುಸರಿಸುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವಾಗಿದೆ.[13]

* ಆಡಳಿತೆಗಾರರೊಂದಿಗೆ ಯಾವುದಾದರೂ ಭಿನ್ನಾಭಿಪ್ರಾಯವುಂಟಾದರೆ ಆ ಭಿನ್ನಾಭಿಪ್ರಾಯಗಳನ್ನು ಅಲ್ಲಾಹ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ನಿಶ್ಚಯಿಸಿದ ತತ್ವಗಳನ್ನಾಧರಿಸಿ ಪರಿಹರಿಸಬೇಕಲ್ಲದೆ ವ್ಯಕ್ತಿಪರವಾದ ಆಶಾಭಿಲಾಷೆಗಳನ್ನು ಹೊಂದಿಕೊಂಡು ತೀರ್ಮಾನ ಮಾಡಬಾರದು.[14]

* ಜನರಿಗೆ ಒಳಿತನ್ನುಂಟುಮಾಡುವ ಕಾರ್ಯದಲ್ಲೂ ಅವರಿಗೆ ವಿಜಯಾಭಿವೃದ್ಧಿಗಳನ್ನುಂಟುಮಾಡುವ ಕಾರ್ಯದಲ್ಲೂ ಜನರು ಸರಕಾರದೊಂದಿಗೆ ಸಹಕರಿಸಬೇಕೆಂದು ಆಜ್ಞೆ ನೀಡಲಾಗಿದೆ. ಸರಕಾರದೊಂದಿಗೆ ಅಸಹಕಾರ ಸೂಚಿಸುವ ಚಳವಳಿಗಳನ್ನು ಇಸ್ಲಾಮ್ ವಿರೋಧಿಸುತ್ತದೆ. ಇದೇ ರೀತಿ ಜನರ ವಿಜಯಾಭಿವೃದ್ಧಿಗಳ ಕಾರ್ಯಗಳಲ್ಲಿ, ಅವುಗಳು ವೈಯಕ್ತಿಕವಾಗಿದ್ದರೂ ಸಾಮೂಹಿಕವಾಗಿದ್ದರೂ, ಸರಕಾರ ಯಾವುದೇ ತಡೆಯನ್ನುಂಟುಮಾಡಬಾರದು: ಸರಕಾರ ಸಾಧ್ಯವಿರುವಷ್ಟು ಸಹಾಯ ನೀಡಬೇಕು.[15]

* ಶಕ್ತಿಶಾಲಿಯಾದ ಬಲಿಷ್ಠ ಸರಕಾರಗಳು ಬೇರೆ ರಾಜ್ಯಗಳ ಕಡೆಗೆ ಆಕ್ರಮಣಕಾರಿ ದೃಷ್ಟಿಯಿಂದ ನೋಡಬಾರದು; ಕೇವಲ ಸ್ವಯಂರಕ್ಷಣೆಗಾಗಿರುವ ಯುದ್ಧ ಮಾತ್ರ ಮಾಡಬಹುದು.[16]

ಪವಿತ್ರ ಖುರ್‌ಆನ್ ರಾಜ್ಯಾಡಳಿತೆಯ ವ್ಯವಸ್ಥೆಯ ಬಗ್ಗೆ ನೀಡಿದ ಉಪದೇಶಗಳು ಸರ್ವಸಂಗತಿಗಳನ್ನೂ ಒಳಗೊಂಡಿದ್ದು ಎಲ್ಲಾ ರೀತಿಯಲ್ಲೂ ಪರಿಪೂರ್ಣವಾಗಿದೆ. ಇಸ್ಲಾಮ್ ಧರ್ಮ ಕೇವಲ ಒಂದೇ ರೀತಿಯ ಆಡಳಿತ ವ್ಯವಸ್ಥೆಯನ್ನು ಆದೇಶಿಸಿದ್ದರೆ, ಆ ರೀತಿಯ ವ್ಯವಸ್ಥೆ ಸ್ಥಾಪಿಸಲು ಸಾಧ್ಯವೇ ಇಲ್ಲದ ಸ್ಥಳದಲ್ಲಿ ಅದನ್ನು ಹೇಗೆ ತಾನೆ ಜಾರಿಗೆ ತರಬಹುದೆಂಬ ಆಕ್ಷೇಪವುಂಟಾಗಬಹುದಾಗಿತ್ತು. ವಿವಿಧ ಕೋಮುಗಳಲ್ಲಿ ಮತ್ತು ವಿವಿಧ ರಾಜ್ಯಗಳಲ್ಲಿ ಆರ್ಥಿಕ-ಸಾಮಾಜಿಕ ಅಭಿವೃದ್ಧಿಯ ವೇಗತೆಯನ್ನನುಸರಿಸಿ ಈಗಿನ ಅಭಿವೃದ್ಧಿ ಹೊಂದಿದ ಲೋಕದಲ್ಲೂ ವಿವಿಧ ಜನಾಂಗಗಳೂ ವಿವಿಧ ಸಂಸ್ಕೃತಿಯ ಜನರೂ ವಾಸಿಸುತ್ತಾ ಇದ್ದಾರೆ. ಈಗಿನ ಕಾಲದ ಮಾನವರು ಒಂದೇ ಕಾಲಘಟ್ಟದಲ್ಲಿ ಜೀವಿಸುವವರಾಗಿದ್ದರೂ ಅವರ ಜೀವಿತ ರೀತಿಯ ಪ್ರಕಾರ ವಿವಿಧ ಕಾಲಘಟ್ಟಗಳಲ್ಲಿ ಜೀವಿಸುವವರ ಹಾಗೆ ಇರುತ್ತಾರೆ. ಆಫ್ರಿಕಾದ ಅನಾಗರಿಕ ಜನಾಂಗಗಳಿಗೆ ಸೇರಿದವರು ಮತ್ತು ಆಸ್ಟ್ರೇಲಿಯಾದ ಪಿಗ್ಮಿಗಳು ಶೈಕ್ಷಣಿಕವಾಗಿಯೂ

---

11–12 "ನಿನಗೆ ಯಾವುದೇ ಕೋಮಿನಿಂದ ಒಪ್ಪಂದದ ಉಲ್ಲಂಘನೆಯ ಭಯವುಂಟಾದರೆ, ನೀನು ಅದರ ಜೊತೆ ಮಾಡಿಕೊಂಡ ಒಪ್ಪಂದವನ್ನು ಕೊನೆಗೊಳಿಸು ಹಾಗೆ ನೀವಿಬ್ಬರೂ ಒಪ್ಪಂದದ ಶರ್ತಗಳಿಂದ ಸ್ವತಂತ್ರರಾಗಿರುವಿರೆಂದು ತಿಳಿಯುವಂತಾಗಲಿ. ಅಲ್ಲಾಹನು ಒಪ್ಪಂದದ ಉಲ್ಲಂಘನೆ ಮಾಡುವವರನ್ನು ಇಷ್ಟಪಡುವುದಿಲ್ಲ " (8 : 59)

13. "ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನನ್ನು ಅನುಸರಿಸಿರಿ; ಮತ್ತು ಅವನ ಪೈಗಂಬರರನ್ನೂ, ನಿಮ್ಮ ಆಡಳಿತೆಗಾರರನ್ನೂ ಅನುಸರಿಸಿರಿ " (4 : 60)

14 "ನೀವು (ಅಧಿಕಾರಿಗಳ ಜೊತೆ) ಯಾವುದೇ ವಿಷಯದಲ್ಲಿ ಭಿನ್ನಾಭಿಪ್ರಾಯವನ್ನು ಹೊಂದಿದರೆ, ನೀವು ಅಲ್ಲಾಹನಲ್ಲಿಯೂ ಬರಲಿರುವ ಕೊನೆಯ ದಿನದಲ್ಲಿಯೂ ವಿಶ್ವಾಸಹೊಂದಿದವರಾಗಿದ್ದರೆ, ಆ ಭಿನ್ನಾಭಿಪ್ರಾಯದ ವಿಷಯವನ್ನು ಅಲ್ಲಾಹನ ಕಡೆಗೆ ಮತ್ತು ಅವನ ಪೈಗಂಬರರ ಕಡೆಗೆ ತನ್ನಿರಿ (ಮತ್ತು ಅವರ ಆಜ್ಞೆಗಳ ಪ್ರಕಾರ ಸಮಸ್ಯೆಗಳನ್ನು ಬಗೆಹರಿಸಿರಿ )" (4 : 60)

15 "ನೀವು ಒಳಿತಿನ ಮತ್ತು ದೇವನಿಗೆ ಭಯಭಕ್ತಿದೋರುವ ಕಾರ್ಯದಲ್ಲಿ ಪರಸ್ಪರ ಸಹಕರಿಸಿರಿ, ನೀವು ಪಾಪ ಮತ್ತು ಅನ್ಯಾಯದ ಕೆಲಸಗಳಲ್ಲಿ ಪರಸ್ಪರ ಸಹಾಯಮಾಡಬೇಡಿರಿ " (5 : 3)

16 "ನಾವು ಅವರಲ್ಲಿ ಕೆಲವು ಜನರಿಗೆ ಪ್ರಾಪಂಚಿಕ ಜೀವಿತದ ಸೌಂದರ್ಯದ ಸಾಮಾಗ್ರಿಗಳನ್ನು ನೀಡಿದುದನ್ನು ನೀನು ನಿನ್ನ ಎರಡು ಕಣ್ಣುಗಳಿಂದಲೂ ದಿಟ್ಟಿಸಿ ನೋಡಬೇಡ." (20 : 132)

ಬೌದ್ಧಿಕವಾಗಿಯೂ ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಇಂಗ್ಲೆಂಡ್ ಮತ್ತು ಅಮೇರಿಕಾದ ನಿವಾಸಿಗಳೊಂದಿಗೆ ಸಮಾನರಾಗಲು ಸಾಧ್ಯವೇ? ಒಂದೇ ರೀತಿಯ ಆಡಳಿತ ವ್ಯವಸ್ಥೆ ಇವರಿಗೆಲ್ಲಾ ಸಮಾಧಾನ ನೀಡಲು ಸಮರ್ಥವಾಗುವುದೇ? ಎಂದಿಗೂ ಇಲ್ಲ. ಹಾಗೆ ಮಾಡಿದರೆ ಅದು ವಿವೇಕ ಶೂನ್ಯವೂ ಮನುಷ್ಯರ ಪ್ರಕೃತಿಗೆ ವಿರುದ್ಧವೂ ಆಗುವುದು. ಇಸ್ಲಾಂ ಧರ್ಮದ ನಿಯಮಗಳು ಮನುಷ್ಯನ ಸಹಜ ಸ್ವಭಾವಗಳಿಗನುಗುಣವಾಗಿದೆ. ಮನುಷ್ಯನ ಪ್ರತಿಯೊಂದು ಸಹಜ ಶಕ್ತಿಯನ್ನು ಅದು ಪೋಷಿಸುತ್ತದೆ. ಇಸ್ಲಾಮ್ ಪ್ರತಿಯೊಂದು ಸಂಗತಿಯ ಬಗ್ಗೆ ಎಂತಹ ಪರಿಪೂರ್ಣ ಉಪದೇಶ ನೀಡಿದೆಯೆಂದರೆ ಅದು ಕಾಲ ಮತ್ತು ಸ್ಥಳದ ಪರಿಧಿಯಿಂದ ಅತೀತವಾಗಿದೆ. ಆಡಳಿತ ವ್ಯವಸ್ಥೆಯ ಬಗ್ಗೆ ಇಸ್ಲಾಮ್ ನೀಡಿದ ಉಪದೇಶಗಳಿಂದ ಇದು ಸ್ಪಷ್ಟವಾಗುತ್ತದೆ.

## ಸ್ಥಿರವಾಗಿರುವ ಮತ್ತು ಬದಲಾಯಿಸಲ್ಪಡಲಾರದ ಉಪದೇಶಗಳು

ಇಸ್ಲಾಮ್ ಧರ್ಮ ಪರಿಪೂರ್ಣ ಮತ್ತು ಸ್ಥಿರವಾಗಿರುವುದರ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಬೇರೆ ರೀತಿಯ, ಎಂದೂ ಯಾವುದೇ ಪರಿವರ್ತನೆ ಮತ್ತು ಬದಲಾವಣೆಗೆ ತುತ್ತಾಗದ ಉಪದೇಶಗಳ ಉದಾಹರಣೆಗಳೂ ದೊರೆಯುತ್ತವೆ. ಪರಿಸ್ಥಿತಿಗಳ ಅಥವಾ ಕಾಲದ ಬದಲಾವಣೆಯಿಂದ ಈ ಉಪದೇಶಗಳು ಬದಲಾಗಲಾರವು. ಯಾರು ಎಷ್ಟು ಒತ್ತಾಯ ಹೇರಿದರೂ ಆ ಉಪದೇಶಗಳು ಬದಲಾಗದೆಯೇ ಉಳಿಯುವುವು. ಈ ವಿಷಯದ ಕುರಿತು ಈಗಿನ ಕಾಲಕ್ಕೆ ಅತ್ಯಾವಶ್ಯಕವಾದ ಕೆಲವು ಪ್ರಧಾನ ಉದಾಹರಣೆಗಳನ್ನು ನೀಡಲು ಬಯಸುತ್ತೇನೆ.

ಪ್ರಥಮವಾದ ಉದಾಹರಣೆ, ಇಸ್ಲಾಮ್ ನೀತಿ ಮತ್ತು ನ್ಯಾಯದ ಬಗ್ಗೆ ನೀಡಿರುವ ಉಪದೇಶಗಳಾಗಿವೆ. ಆದರೆ ಇಸ್ಲಾಮ್ ಈ ಬಗ್ಗೆ ನೀಡಿದ ಉಪದೇಶಗಳ ಯಥಾರ್ಥ ರೂಪ ಮತ್ತು ಅವುಗಳ ಮಹತ್ವವನ್ನು ಮನವರಿಕೆ ಮಾಡಿಕೊಳ್ಳಲು ಬೇರೆ ಧರ್ಮಗಳು ನೀತಿನ್ಯಾಯದ ಬಗ್ಗೆ ಏನು ಹೇಳಿವೆಯೆಂದು ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಆಗ ನಾಗರಿಕತೆಯ ಅಭಿವೃದ್ಧಿಯ ಚಾರಿತ್ರಿಕ ಕಾರ್ಯನಿರ್ವಹಣೆಯಲ್ಲಿ ಇಸ್ಲಾಂ ಧರ್ಮದ ನೀತಿ ನ್ಯಾಯದ ಸರಿಯಾದ ಸ್ಥಾನವನ್ನು ಮನಗಾಣಬಹುದಾಗಿದೆ.

ನಾವು ಬೇರೆ ಕೆಲವು ಧರ್ಮಗಳ ಪರಿಶೀಲನೆ ಮಾಡಿದರೆ ಅವುಗಳಲ್ಲಿ ನೀತಿ ಮತ್ತು ನ್ಯಾಯದ ಬಗ್ಗೆ ಸವಿವರ ಉಪದೇಶಗಳು ಕಂಡುಬರುವುದಿಲ್ಲ. ಅವುಗಳಲ್ಲಿ ಯಾವುದಾದರೂ ಉಪದೇಶಗಳು ಇದ್ದರೂ ಆ ಉಪದೇಶಗಳು ಇಂದಿನ ಮಾನವರಿಗೆ ಅನ್ವಯಗೊಳಿಸುವಂತೆ ಇರುವುದಿಲ್ಲ. ಅವುಗಳ ಕೆಲವು ಅಂಶಗಳು ಇಂದಿನ ಮನುಷ್ಯನ ಬುದ್ಧಿ, ಚಿಂತನಾ ರೀತಿ ಮತ್ತು ಮನೋಭಾವಗಳಿಗೆ ಕಠಿಣ ವಿರುದ್ಧವಾಗಿ ಕಂಡುಬರುತ್ತವೆ. ಅವುಗಳ ಕುರಿತು ಮನುಷ್ಯನು ಹೀಗೆ ಆಲೋಚಿಸಲು ನಿರ್ಬಂಧಿತನಾಗುತ್ತಾನೆ: ಆ ಉಪದೇಶಗಳು ಒಂದೋ ಕಾಲವು ದೀರ್ಘವಾಗಿ ದಾಟಿ ಹೋಗುವಾಗ ಬದಲಾಯಿಸಲ್ಪಟ್ಟಿರಬೇಕು. ಅಥವಾ ಆ ಉಪದೇಶಗಳು ಪ್ರತ್ಯೇಕ ಪರಿಸ್ಥಿತಿಗಳ ಕಾರಣದಿಂದ ಸೀಮಿತವಾಗಿರುವ ಪ್ರದೇಶದಲ್ಲಿ, ನಿರ್ದಿಷ್ಟ ಅವಧಿಗೆ ಅನಿವಾರ್ಯ ಕಾರಣಗಳಿಂದ ನೀಡಿದುದಾಗಿರಬೇಕು. ಹಾಗಲ್ಲದೆ, ಮನುಷ್ಯನ ಪ್ರಜ್ಞೆ ಅದನ್ನು ಎಲ್ಲರಿಗೂ ಎಲ್ಲಾ ಕಾಲಗಳಿಗೂ ಅನ್ವಯಿಸುವ ಉಪದೇಶಗಳಾಗಿ ಸ್ವೀಕರಿಸಲು ಸಾಧ್ಯವಿಲ್ಲ, ಉದಾಹರಣೆಗಾಗಿ, ಯಹೂದಿ ಧರ್ಮ ಹೇಳುವುದೇನೆಂದರೆ, ಹಝ್ರತ್ ಯಅಖೂಬ್ ಪ್ರವಾದಿಯ ಸಂತಾನಗಳೇ ದೇವರಿಗೆ ಪ್ರಿಯರಾದವರೆಂದೂ ಬಾಕಿ ಉಳಿದವರೆಲ್ಲರೂ ಅವರ ಅಡಿಯಾಳುಗಳಾಗಿ ಸೃಷ್ಟಿಸಲ್ಪಟ್ಟವರಾಗಿರುವರೆಂದೂ ಆಗಿದೆ. ಈ ಧರ್ಮದವರ ಸರಕಾರವೇನಾದರೂ ಸ್ಥಾಪಿತವಾದರೆ ಈ ಉಪದೇಶಗಳ ಪ್ರಕಾರ ದೌರ್ಜನ್ಯಗಳೇ ಉಂಟಾಗಬಹುದು. ಬೈಬಲ್ ಹೇಳುವುದನ್ನು ನೋಡಿರಿ :

> "ನಿಮ್ಮ ನಡುವೆ ಇರುವ ಪರವಾಸಿಗಳನ್ನೂ ನಿಮ್ಮ ದೇಶದಲ್ಲಿ ಅವರಿಂದ ಹುಟ್ಟಿದವರನ್ನೂ ಕ್ರಯಕ್ಕೆ ತೆಗೆದುಕೊಳ್ಳಬಹುದು; ಅಂಥವರು ನಿಮಗೆ ಸೊತ್ತಾಗಬಹುದು. ನೀವು ಅಂಥವರನ್ನು ಸ್ವಾಧೀನಪಡಿಸಿಕೊಂಡು ನಿಮ್ಮ ತರುವಾಯ

ನಿಮ್ಮ ಸಂತತಿಯವರಿಗೆ ಸ್ವಾಸ್ಥ್ಯವಾಗಿ ಕೊಟ್ಟು ಬಿಡಬಹುದು. ಅವರನ್ನು ಶಾಶ್ವತ ದಾಸರನ್ನಾಗಿ ಮಾಡಿಕೊಳ್ಳಬಹುದು. ಇಸ್ರಾಯೇಲ್ಯರಾದ ನೀವಾದರೋ ಎಲ್ಲರೂ ಸಹೋದರರಾಗಿರುವುದರಿಂದ ಒಬ್ಬರಿಂದೊಬ್ಬರು ಕಠಿಣವಾಗಿ ಸೇವೆ ಮಾಡಿಸಿಕೊಳ್ಳಬಾರದು."

(ಯಾಜಕ ಕಾಂಡ 25:45,46)

ಯಹೂದಿ ಮತ ದಾನ ಧರ್ಮದ ಬಗ್ಗೆ ಅದು ಅವರದೇ ಕೋಮಿನವರಿಗೆ ಮಾತ್ರ ನೀಡಬೇಕಾದುದೆಂದು ಹೇಳುತ್ತದೆ. ಯಾರಾದರೊಬ್ಬ ಯಹೂದಿ ರಾಜನಿದ್ದರೆ ಆತನು ವಸೂಲು ಮಾಡುವ ತೆರಿಗೆಗಳೆಲ್ಲಾ ಯಹೂದಿಯರಿಗೆಯೇ ಖರ್ಚು ಮಾಡಲ್ಪಡುವುದು. ಯಹೂದಿಯಲ್ಲದವರಿಗೆ ಯಾವುದೇ ಹಕ್ಕು ದೊರಕಲಾರದು.

ಇದೇ ರೀತಿ ಹಿಂದೂ ಧರ್ಮದಲ್ಲಿ ನೀತಿ ನ್ಯಾಯದ ಕುರಿತು ದೊರಕುವ ಸೀಮಿತ ಕಲ್ಪನೆ ಆ ಕಾಲದ ಪರಿಸ್ಥಿತಿಗನುಗುಣವಾಗಿ ಯೋಗ್ಯವಾಗಿತ್ತೆಂದು ಪ್ರಾಯಶಃ ಪರಿಗಣಿಸಬಹುದಾಗಿದ್ದರೂ ಅವುಗಳನ್ನು ಸರ್ವರಿಗೂ ಅನ್ವಯವಾಗುವಂತಹ ಸಾರ್ವಕಾಲಿಕ ಉಪದೇಶಗಳೆಂದು ಜನರು ಎಂದೂ ಸ್ವೀಕರಿಸಲಾರರು. ಉದಾಹರಣೆಗೆ :

ಒಬ್ಬ ಬ್ರಾಹ್ಮಣನು ಶೂದ್ರನಿಂದ ಸಾಲ ಪಡಕೊಂಡಿದ್ದರೆ ಮತ್ತು ಅದನ್ನು ಮರುಪಾವತಿ ಮಾಡಲು ಆತನಿಗೆ ಸಾಧ್ಯವಾಗದಿದ್ದರೆ, ಶೂದ್ರನು ಬ್ರಾಹ್ಮಣನಿಂದ ಹಣವನ್ನು ವಾಪಾಸು ಪಡೆಯಬಾರದು. ಆದರೆ ಶೂದ್ರನು ಬ್ರಾಹ್ಮಣನ ಹಣವನ್ನು ಹಿಂತಿರುಗಿಸಬೇಕಾಗಿದ್ದರೆ, ಮತ್ತು ಆತನು ಸಾಲ ಮರುಪಾವತಿ ಮಾಡಲಾರದ ಬಡವನಾಗಿದ್ದರೆ ಉಚ್ಚಕುಲದವರ ಸೇವೆ ಮಾಡಿ ಬ್ರಾಹ್ಮಣನ ಸಾಲವನ್ನು ತೀರಿಸಬೇಕು.

(ಮನುಸ್ಮೃತಿ ಅಧ್ಯಾಯ 10: ಶ್ಲೋಕ 35.)

ಯಹೂದಿ ಮತದಲ್ಲಿ ವಿರೋಧಿಗಳೊಂದಿಗೆ ನ್ಯಾಯಯುತವಾಗಿ ನಡೆದುಕೊಳ್ಳುವ ಕಲ್ಪನೆಯೇ ಕಂಡು ಬರುವುದಿಲ್ಲ. ಬೈಬಲ್‌ನಲ್ಲಿ ಬರೆದಿರುವುದನ್ನು ನೋಡಿರಿ:

"ನಿಮ್ಮ ದೇವರಾದ ಕರ್ತನು......... ಅವರನ್ನು ನಿಮ್ಮಿಂದ ಪರಾಜಯ ಪಡಿಸುವಾಗ. ನೀವು ಅವರನ್ನು ನಿಶ್ಶೇಷವಾಗಿ ಸಂಹರಿಸಬೇಕು. ಅವರ ಸಂಗಡ ಒಡಂಬಡಿಕೆ ಮಾಡಿಕೊಳ್ಳಬಾರದು, ಅವರನ್ನು ಕನಿಕರಿಸಬಾರದು."

(ಧರ್ಮೋಪದೇಶ ಕಾಂಡ 7 : 2)

ಇವುಗಳ ಎದುರಾಗಿ ಇಸ್ಲಾಮ್ ನೀತಿ ಮತ್ತು ನ್ಯಾಯದ ಬಗ್ಗೆ ನೀಡುವ ಉಪದೇಶಗಳ ಕೆಲವು ಉದಾಹರಣೆಗಳನ್ನು ನಾನು ನಿಮ್ಮ ಮುಂದಿಡಲು ಬಯಸುತ್ತೇನೆ. ಅವು ಜೀವಿತದ ಎಲ್ಲಾ ಪರಿಸ್ಥಿತಿಗಳಲ್ಲೂ ಸಂಪೂರ್ಣವಾಗಿ ಪ್ರಾಯೋಗಿಕವಾಗಿರುತ್ತವೆ. ಪವಿತ್ರ ಖುರ್‌ಆನ್ ಹೀಗೆ ಬೋಧಿಸುತ್ತದೆ:

1. "ನೀವು ಜನರ ಮಧ್ಯೆ ತೀರ್ಮಾನ ಮಾಡುವಾಗ ನೀತಿ–ನ್ಯಾಯಯುತವಾಗಿ ತೀರ್ಮಾನಮಾಡಿರಿ" (4 : 59)
2. "ನೀವು ಪೂರ್ಣವಾಗಿ ನ್ಯಾಯಯುತವಾಗಿ ವರ್ತಿವರ್ತಿಸುವವರೂ ಅಲ್ಲಾಹನಿಗಾಗಿ ಸಾಕ್ಷ್ಯ ನುಡಿಯುವವರೂ ಆಗಿರಿ : ಸಾಕ್ಷ್ಯ ನಿಮ್ಮ ವಿರುದ್ಧವಾಗಿದ್ದರೂ, ನಿಮ್ಮ ತಂದೆ ತಾಯಿಗಳ ಅಥವಾ ಸಂಬಂಧಿಕರ ವಿರುದ್ಧವಾಗಿದ್ದರೂ ಸಹ". (4:136)
3. "ಯಾವುದೇ ಕೋಮಿನ ಮೇಲಿರುವ ನಿಮ್ಮ ವಿರೋಧ, ನಿಮ್ಮನ್ನು ಅನ್ಯಾಯವಾಗಿ ವರ್ತಿಸುವಂತೆ ಮಾಡದಿರಲಿ. ನೀವು ನ್ಯಾಯಯುತವಾಗಿ ನಡೆಯಿರಿ. ಅದು ಭಯ ಭಕ್ತಿಗೆ ಹೆಚ್ಚು ಸಮೀಪವಾಗಿದೆ." (5:9)
4. "ನಿಮ್ಮೊಂದಿಗೆ ಯುದ್ಧ ಮಾಡಿದವರೊಂದಿಗೆ ನೀವು ಸಹ ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಿರಿ. ಆದರೆ ನೀವು ಮಿತಿ ಮೀರಿ ವರ್ತಿಸಬೇಡಿರಿ." (2:191)

   ಇದರಿಂದ ತಿಳಿಯುವುದೇನೆಂದರೆ ಯುದ್ಧದಲ್ಲೂ ಅನ್ಯಾಯವಾಗಿ ನಡೆದುಕೊಳ್ಳಬಾರದೆಂದಾಗಿದೆ.
5. "ಯುದ್ಧ ನಡೆಯುತ್ತಿರುವಾಗ ವಿರೋಧಿಗಳು ಸಂಧಾನ ಮಾಡಲು ತಮ್ಮ ಅಪೇಕ್ಷೆಯನ್ನು ಸೂಚಿಸಿದರೆ ಅವರ ಪ್ರಸ್ತಾಪವನ್ನು ಒಪ್ಪಬೇಕು." (8:62)

## ಕ್ಷಮಾದಾನ ಮತ್ತು ಪ್ರತೀಕಾರ ಇಸ್ಲಾಮಿನ ದೃಷ್ಟಿಯಲ್ಲಿ

ನಾನು ಇಸ್ಲಾಮ್ ಧರ್ಮದ, ಬದಲಾಗದ ಉಪದೇಶಗಳ ಪೈಕಿ ಇನ್ನೊಂದು ಉದಾಹರಣೆಯನ್ನು, ಕ್ಷಮಾದಾನ ಮತ್ತು ಪ್ರತೀಕಾರದ ಬಗ್ಗೆ ನಿಮ್ಮ ಮುಂದಿರಿಸುತ್ತೇನೆ. ಈ ಉಪದೇಶ ಅವತೀರ್ಣಗೊಂಡ ನಂತರ ಎಷ್ಟೋ ಕಾಲ ಕಳೆದು ಹೋಗಿದ್ದರೂ ಅದು ಇಂದಿಗೂ ಯಾವುದೇ ಪರಿವರ್ತನೆಯ ಆವಶ್ಯಕತೆಯಿಲ್ಲದ ಉಪದೇಶವಾಗಿದ್ದು ಅದಕ್ಕಿಂತಲೂ ಉತ್ತಮವಾದ ಉಪದೇಶದ ಕಲ್ಪನೆ ಮಾಡಲು ಸಹ ಸಾಧ್ಯವಿಲ್ಲ. ಈ ವಿಷಯದ ಬಗ್ಗೆ ಬೇರೆ ಧರ್ಮಗಳ ಉಪದೇಶಗಳೊಂದಿಗೆ ಹೋಲಿಸಿ ನೋಡಿದರೆ, ಬೈಬಲಿನ ಈ ಕೆಳಗಿನ ಉಪದೇಶ ಇಂದಿನ ಕಾಲದ ಮನುಷ್ಯರಿಗೆ ಆಶ್ಚರ್ಯಕರವಾಗಿ ಕಾಣುವುದು.

"ನೀವು ಅಂಥವರನ್ನು ಕನಿಕರಿಸಬಾರದು; ಪ್ರಾಣಕ್ಕೆ ಪ್ರತಿಯಾಗಿ ಪ್ರಾಣವನ್ನೂ ಕಣ್ಣಿಗೆ ಪ್ರತಿಯಾಗಿ ಕಣ್ಣನ್ನೂ ಹಲ್ಲಿಗೆ ಪ್ರತಿಯಾಗಿ ಹಲ್ಲನ್ನೂ ಕೈಗೆ ಪ್ರತಿಯಾಗಿ ಕೈಯನ್ನೂ ಕಾಲಿಗೆ ಪ್ರತಿಯಾಗಿ ಕಾಲನ್ನೂ ಅವನಿಗೆ ನಷ್ಟ ಪಡಿಸಬೇಕು." (ಧರ್ಮೋಪದೇಶ ಕಾಂಡ 19:20)

ಪ್ರತೀಕಾರದ ಬಗ್ಗೆ ಇಷ್ಟರಮಟ್ಟಿಗೆ ಒತ್ತಿ ಹೇಳಿದುದನ್ನು ನೋಡಿ ಇಂದಿನ ಜನರು ಆಶ್ಚರ್ಯಪಡುತ್ತಾರೆ ಮತ್ತು ಅವರಿಗೆ ಮಾನಸಿಕ ಯಾತನೆಯುಂಟಾಗುತ್ತದೆ. ನಾನು ಈ ಉಪದೇಶದ ಉದಾಹರಣೆ ನೀಡಿದುದು ಯಾವುದೇ ವಿಮರ್ಶೆಯ ಉದ್ದೇಶದಿಂದಲ್ಲ. ನಾನು ಕೇವಲ ಇಷ್ಟು ಮಾತ್ರ ನಿಮಗೆ ಮನವರಿಕೆಮಾಡಿಕೊಡಲು ಉದ್ದೇಶಿಸುತ್ತೇನೆ. ಅದೇನೆಂದರೆ, ಸ್ಪಷ್ಟವಾಗಿಯೂ ಬಹಳ ದಮನಕಾರಿಯಾಗಿರುವ ಈ ಉಪದೇಶಗಳ ನ್ಯಾಯೀಕರಣಕ್ಕೆ ಒಂದು ಸಾಕ್ಷ್ಯಾಧಾರ ಸಹ ಪವಿತ್ರ ಖುರ್‌ಆನಿನ ಉಪದೇಶಗಳ ಬೆಳಕಿನಲ್ಲಿ ದೊರೆಯುತ್ತದೆ. ಇಸ್ಲಾಮಿನ ಉಪದೇಶಗಳ ವೈಶಿಷ್ಟ್ಯಗಳಲ್ಲಿ ಇದು ಸಹ ಒಂದಾಗಿದೆ–ಅದು ಬೇರೆ ಧರ್ಮಗಳೊಂದಿಗೆ ಉಪದೇಶಗಳ ವಿಷಯದಲ್ಲಿ ವಿರುದ್ಧವಾಗಿದ್ದರೂ ಅವುಗಳ ವಿಶ್ವಾಸಗಳನ್ನು ಖಂಡಿಸದೆ ಅವುಗಳ ಉಪದೇಶಗಳನ್ನು ಅರಿತುಕೊಳ್ಳಲು ಬಹಳ ಜಾಣ್ಮೆಯಿಂದ ಕೂಡಿದ ತತ್ವಗಳನ್ನು ಮುಂದಿರಿಸುತ್ತದೆ. ಇತರ ಧರ್ಮದಲ್ಲಿರುವ, ಕಡ್ಡಾಯವಾಗಿ ಪ್ರತೀಕಾರ ಮಾಡುವ ಉಪದೇಶಗಳು ಪವಿತ್ರ ಖುರ್‌ಆನಿನ ದೃಷ್ಟಿಯಲ್ಲಿ ಒಂದು ಪ್ರತ್ಯೇಕ ಕಾಲದಲ್ಲಿ, ಆ ಕಾಲದ ಆವಶ್ಯಕತೆಗಳಿಗನುಸಾರವಾಗಿದ್ದವು. ಆ ಕಾಲದ ಯಹೂದಿಯರು ಒಂದು ಅವಧಿಯ ವರೆಗೆ ಬೇರೆಯವರ ಆಳ್ವಿಕೆಗೆ ಒಳಪಟ್ಟು ಬಹಳ ಅನ್ಯಾಯಗಳಿಗೆ ಪಾತ್ರರಾಗಿದ್ದರು. ಅವರು ಬಹಳ ಹೇಡಿಗಳಾಗಿ ಪರಿವರ್ತನೆಗೊಂಡಿದ್ದರು. ಅವರು ತಮ್ಮ ನ್ಯಾಯವಾದ ಹಕ್ಕುಗಳ ಸಂರಕ್ಷಣೆ ಮಾಡಲು ಸಮರ್ಥರಾಗಿರಲಿಲ್ಲ. ಅವರ ಸಂಪೂರ್ಣ ಜನಾಂಗ ಕೀಳರಿಮೆಗೆ ತುತ್ತಾಗಿತ್ತು.

ಆ ಬಗ್ಗೆ ಪವಿತ್ರ ಖುರ್‌ಆನ್ ಹೀಗೆಂದಿದೆ:

"ಆ ಸಂದರ್ಭವನ್ನು ನೆನಪಿಸಿರಿ: ನಾವು ನಿಮ್ಮನ್ನು ಫಿರ್‌ಔನನ ಕೋಮಿನಿಂದ ರಕ್ಷಿಸಿದೆವು. ಅವರು ನಿಮಗೆ ಬಹಳ ಕಠೋರ ಶಿಕ್ಷೆ ನೀಡುತ್ತಿದ್ದರು – ನಿಮ್ಮ ಗಂಡು ಮಕ್ಕಳನ್ನು ಅವರು ಕೊಲ್ಲುತ್ತಿದ್ದರು ಮತ್ತು ನಿಮ್ಮ ಹೆಂಗಸರನ್ನು ಜೀವಂತವಾಗಿಡುತ್ತಿದ್ದರು. ಅದರಲ್ಲಿ ನಿಮಗೆ ನಿಮ್ಮ ಸೃಷ್ಟಿಕರ್ತನಿಂದ ದೊಡ್ಡ ಪರೀಕ್ಷೆ ಇದ್ದಿತು." (2 : 50)

ಅವರನ್ನು ಮೇಲೆತ್ತಲು ಮತ್ತು ಅವರಲ್ಲಿ ಧೈರ್ಯವುಂಟಾಗಲು ಪ್ರತೀಕಾರದ ಬಗ್ಗೆ ಒತ್ತಿಹೇಳಲು ಆವಶ್ಯಕತೆಯಿದ್ದಿತು. ನೀವು ಪ್ರತೀಕಾರ ಮಾಡಲೇಬೇಕು; ಕಣ್ಣಿಗೆ ಪ್ರತಿಯಾಗಿ ಕಣ್ಣು, ಹಲ್ಲಿಗೆ ಪ್ರತಿ ಹಲ್ಲು ಕೀಳಲೇಬೇಕು–ಎಂದು. ಪ್ರತೀಕಾರ ಮಾಡುವ ಬಗ್ಗೆ ಇಷ್ಟು ಒತ್ತಿಹೇಳುವುದಕ್ಕೆ ಪ್ರತಿಯಾಗಿ ಕ್ಷಮಾದಾನ ನೀಡಬೇಕೆಂಬ ಉಪದೇಶವನ್ನು ಅವರಿಗೆ ನೀಡುತ್ತಿದ್ದರೆ ಅವರು ಭಯಪಡಿಸಲ್ಪಟ್ಟವರೂ ಅನ್ಯಾಯಕ್ಕೆ ತುತ್ತಾದವರೂ ಆಗಿದ್ದು ಮೊದಲೇ ಪ್ರತೀಕಾರ ಮಾಡಲು ಹೆದರುತ್ತಿದ್ದವರು, ಕೂಡಲೇ ತಮ್ಮ ಹೇಡಿತನವನ್ನು ಕ್ಷಮಾದಾನದ ಹೊದಿಕೆಯಲ್ಲಿ ಮುಚ್ಚಿಕೊಂಡು ತಮ್ಮ ಪೌರುಷವನ್ನು ಮೊದಲು ಕಳಕೊಂಡ ಹಾಗೆಯೇ ಮುಂದಕ್ಕೂ ಕಳಕೊಂಡ ಸ್ಥಿತಿಯಲ್ಲಿರುತ್ತಿದ್ದರು. ಈ ಉಪದೇಶ ಬಹಳ ಕಠಿಣವಾಗಿ ಹಗೆ ಸಾಧಿಸಲು ಪ್ರೇರೇಪಿಸುತ್ತಿದ್ದರೂ ಅದು ಜಾರಿಗೊಳಿಸಲ್ಪಟ್ಟ ಕಾಲದಲ್ಲಿ ಬಹಳ ಜಾಣ್ಮೆಯಿಂದ ಕೂಡಿದುದೂ

ಅನಿವಾರ್ಯವೂ ಆಗಿದ್ದಿತು. ಅದು ಜಾಣ್ಮೆಯುಳ್ಳವನೂ ಸರ್ವಜ್ಞನೂ ಆದ ದೇವರಿಂದ ಅವತೀರ್ಣಗೊಂಡುದಾಗಿತ್ತು.

ನಾವು ಈಗ ಹೊಸ ಒಡಂಬಡಿಕೆಯ ಕಡೆಗೆ ಗಮನಿಸಿದರೆ ಬಹಳ ಆಶ್ಚರ್ಯ ಚಕಿತರಾಗುವೆವು–ಅದರಲ್ಲಿ ಹಳೆ ಒಡಂಬಡಿಕೆಯ ಉಪದೇಶಗಳಿಗೆ ವಿರುದ್ಧವಾಗಿ ಪ್ರತೀಕಾರಕ್ಕೆ ಪ್ರತಿಯಾಗಿ ಕ್ಷಮಾದಾನದ ಬಗ್ಗೆ ಎಷ್ಟು ಒತ್ತಿ ಹೇಳಲಾಗಿದೆಯೆಂದರೆ ಇಸ್ರಾಯೇಲ್ ಸಂತತಿಗಳನ್ನು ಪ್ರತೀಕಾರ ಮಾಡುವ ಮೂಲಭೂತ ಹಕ್ಕನ್ನೇ ಕಳಕೊಳ್ಳುವಂತೆ ಮಾಡಲಾಗಿದೆ. ಯಥಾರ್ಥವೇನೆಂದರೆ ಇಸ್ರಾಯೇಲ್ ಸಂತತಿಗಳ ಜನರು ಒಂದು ದೀರ್ಘಕಾಲಾವಧಿಯ ವರೆಗೆ ವಂಶಪಾರಂಪರ್ಯವಾಗಿ ಪ್ರತೀಕಾರದ ನಿಯಮಗಳನ್ನು ಚಾಚೂತಪ್ಪದೆ ಪಾಲಿಸಿದಾಗ ಅವರು ರಕ್ತಪಿಪಾಸುಗಳೂ ಕಠಿಣ ಹೃದಯಿಗಳೂ ಆದರು. ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಅನಂತರ ನಿಮ್ಮ ಹೃದಯಗಳು ಕಠಿಣವಾದುವು; ಅವು ಕಲ್ಲುಗಳ ಹಾಗೆ ಅಥವಾ ಅದಕ್ಕಿಂತಲೂ ಹೆಚ್ಚು ಕಠಿಣವಾದುವು." (2 : 75)

ಈ ಪರಿಸ್ಥಿತಿಯಲ್ಲಿ ಬದಲಾವಣೆಯುಂಟು ಮಾಡಲು, ಒಂದು ನಿರ್ದಿಷ್ಟ ಅವಧಿಯ ವರೆಗೆ ಪ್ರತೀಕಾರಕ್ಕಾಗಿ ಯಹೂದಿಯರಿಗೆ ನೀಡಲಾದ ಹಕ್ಕನ್ನು ಅವರಿಂದ ಕಿತ್ತುಕೊಳ್ಳುವುದಲ್ಲದೆ ಬೇರೆ ಯಾವ ಪರಿಹಾರವೂ ಇರಲಿಲ್ಲ. ಹಝ್ರತ್ ಈಸಾ ಪ್ರವಾದಿ (ಯೇಸುಕ್ರಿಸ್ತರು)ಯ ಮೂಲಕ ಯಹೂದಿಯರಿಗೆ ಹೀಗೆ ಉಪದೇಶ ನೀಡಲಾಯಿತು :

"ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು, ಹಲ್ಲಿಗೆ ಪ್ರತಿಯಾಗಿ ಹಲ್ಲನ್ನು ತೆಗಿಸು ಅಂತ ಹೇಳಿಯದೆ ಎಂದು ಕೇಳಿದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ – ಕೆಡುಕನ್ನು ಎದುರಿಸಬೇಡ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು. ನಿನ್ನ ಸಂಗಡ ವ್ಯಾಜ್ಯವಾಡಿ ನಿನ್ನ ಒಳಂಗಿಯನ್ನು ತಕ್ಕೊಳ್ಳಬೇಕೆಂದಿರುವವನಿಗೆ ಮೇಲಂಗಿಯನ್ನೂ ಬಿಡು. ಒಬ್ಬನು – ಒಂದು ಮೈಲು ದೂರ ಬಾ ಎಂದು ನಿನ್ನನ್ನು ಬಿಟ್ಟೀಹಿಡಿದರೆ ಅವನ ಸಂಗಡ ಎರಡು ಮೈಲು ಹೋಗು ......... ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ಹೀಗೆ ಮಾಡಿದರೆ, ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ."

(ಮತ್ತಾಯ 5 : 38–45)

ಇಸ್ಲಾಮ್ ಧರ್ಮ ಕ್ರೈಸ್ತ ಧರ್ಮದ ವಿಮರ್ಶೆ ಮಾಡುವುದಿಲ್ಲ; ಎರಡು ಬಗೆಯ ಉಪದೇಶಗಳು ಆಯಾಕಾಲಕ್ಕೆ ಅನುಯೋಜ್ಯವಾಗಿದ್ದವು ಎಂಬುದನ್ನು ಇಸ್ಲಾಮ್ ಸ್ಪಷ್ಟಪಡಿಸುತ್ತಾ, ಪ್ರಥಮ (ಯಹೂದಿ ಧರ್ಮದ) ಉಪದೇಶ, ಹೇಡಿಗಳಾಗಿದ್ದ ಕೋಮಿನವರನ್ನು ಧೈರ್ಯವಂತರನ್ನಾಗಿ ಮಾಡಲಿಕ್ಕಾಗಿತ್ತು ಹಾಗೂ ಎರಡನೆಯ (ಕ್ರೈಸ್ತ ಧರ್ಮದ) ಉಪದೇಶ ಕ್ರೂರಿಗಳೂ ನಿಷ್ಕರುಣಿಗಳೂ ಆಗಿದ್ದವರನ್ನು ದಯಾಭಾವ ಹೊಂದುವಂತೆ ಮಾಡಲಿಕ್ಕಾಗಿದ್ದಿತು ಎಂದು ಹೇಳುತ್ತಿದೆ. ಅದು ಮನುಷ್ಯನು ತನ್ನ ಸಾಮಾಜಿಕ ಮತ್ತು ನೈತಿಕ ಅಭಿವೃದ್ಧಿಯ ಆರಂಭದ ಹಂತಗಳನ್ನು ದಾಟಿ ಹೋಗುತ್ತಿದ್ದ ಕಾಲವಾಗಿತ್ತು. ಆತನು ಇನ್ನೂ ಸಾಕಷ್ಟು ವೃದ್ಧಿಗಳಿಸಿರಲಿಲ್ಲ. ಆದುದರಿಂದ ಆ ಉಪದೇಶಗಳು ಉನ್ನತ ಮಟ್ಟವನ್ನು ತಲುಪಿದ ಮನುಷ್ಯರಿಗೆ ಅನುಸರಣೆಗೆ ಯೋಗ್ಯವಾಗಿರುವುದಿಲ್ಲ. ಇಂತಹ ಉಪದೇಶಗಳಿಂದ ಇಂದಿನ ಲೋಕದಲ್ಲಿ ಶಾಂತಿ ನೆಲೆಸಲು ಸಹ ಸಾಧ್ಯವಿರುವುದಿಲ್ಲ. ಅವುಗಳಿಂದ ಮಾನವರ ಸುಧಾರಣೆ ಕೂಡ ಸಾಧ್ಯವಿಲ್ಲ. ಇದೇ ಕಾರಣದಿಂದ ಇಸ್ಲಾಂ ಧರ್ಮ ದೂರದೃಷ್ಟಿಯನ್ನು ಹೊಂದಿದ, ಪ್ರಗತಿ ಹೊಂದಿದ ಮನುಷ್ಯರನ್ನು ಸಂಬೋಧಿಸಿ, ಸ್ಥಿರವಾಗಿ ನಿಲೆನಿಲ್ಲುವ ಉಪದೇಶಗಳನ್ನು ನೀಡಿದೆ – ಅವು ತಾತ್ಕಾಲಿಕವಾದ ಆವಶ್ಯಕತೆಗಳನ್ನು ಪರಿಗಣಿಸಿ ನೀಡಿದ ಉಪದೇಶಗಳಾಗಿರುವುದಿಲ್ಲ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಕೆಟ್ಟದಕ್ಕೆ ಪ್ರತಿಯಾಗಿ ಅಷ್ಟೇ ಕೆಡುಕು ಆಗಬಹುದು; ಮತ್ತು ಯಾರಾದರೂ (ಕೆಟ್ಟ ಕೆಲಸ ಮಾಡಿದವನ) ಸುಧಾರಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕ್ಷಮಿಸಿದರೆ, ಅದರ ಪ್ರತಿಫಲ

ಅಲ್ಲಾಹನ ಬಳಿ ಇದೆ. ಅವನು (ಅಲ್ಲಾಹನು) ಅನ್ಯಾಯಗಾರರನ್ನು ನಿಶ್ಚಯವಾಗಿಯೂ ಪ್ರೀತಿಸುವುದಿಲ್ಲ." (42 : 41)

ಪವಿತ್ರ ಖುರ್‌ಆನ್ ಒಂದು ಕಡೆಯಲ್ಲಿ ಹಝ್ರತ್ ಮೂಸಾ ಪ್ರವಾದಿಯ ಧರ್ಮಶಾಸ್ತ್ರವನ್ನು ಲೋಕದ ಮುಂದಿರಿಸಿ ತಪ್ಪುಗಾರನಿಗೆ ಆತನ ತಪ್ಪಿಗೆ ಅನುಯೋಜ್ಯವಾದ ಶಿಕ್ಷೆ ನೀಡಬೇಕೆಂದು ಹೇಳುತ್ತಿದೆ. ಇನ್ನೊಂದು ಕಡೆಯಲ್ಲಿ ಹಝ್ರತ್ ಈಸಾ ಪ್ರವಾದಿಯ ಉಪದೇಶವನ್ನು ಸ್ವೀಕರಿಸಿ ಕೆಡುಕಿನ ವಿರುದ್ಧ ಉತ್ತಮವಾದ ನಡವಳಿಕೆ ಕೈಗೊಳ್ಳಬೇಕೆಂದೂ ಉಪದೇಶಿಸುತ್ತದೆ. ಆದರೆ ಇವೆರಡು ಉಪದೇಶಗಳ ಜೊತೆ ಇನ್ನೊಂದು ಸಂಗತಿಯನ್ನು ಸೇರ್ಪಡಿಸಿದೆ. ಎಂದರೆ, ಕ್ಷಮಾದಾನ ನೀಡಿದರೆ ತಪ್ಪುಗಾರನ ಸುಧಾರಣೆ ಆಗುವುದಿದ್ದರೆ ಮಾತ್ರ ಕ್ಷಮೆ ನೀಡಬಹುದೆಂಬ ಶರ್ತವನ್ನು ಅದು ವಿಧಿಸಿದೆ. ಅಪರಾಧಿಗೆ ಕ್ಷಮೆ ನೀಡುವುದರಿಂದ ಅಪಾಯವುಂಟಾಗುವುದಾದರೆ, ಅಪರಾಧಿ ತನ್ನ ಸ್ಥಿತಿಯನ್ನು ಸುಧಾರಿಸುವುದಕ್ಕೆ ಪ್ರತಿಯಾಗಿ ಹೆಚ್ಚು ಹೆಚ್ಚಾಗಿ ಅಪರಾಧ ಮತ್ತು ದೌರ್ಜನ್ಯ ಮಾಡಲು ಧೈರ್ಯ ಹೊಂದುವುದಾದರೆ ಆ ಪರಿಸ್ಥಿತಿಯಲ್ಲಿ ಕ್ಷಮಾದಾನಕ್ಕೆ ಸಮ್ಮತಿಯಿಲ್ಲ.

ಒಟ್ಟಾರೆ ಹೇಳುವುದಾದರೆ, ಎರಡು ನಡವಳಿಕೆಗಳಲ್ಲಿ ಯಾವುದು ಸಂದರ್ಭಕ್ಕೆ ಅನುಯೋಜ್ಯವಾಗಿದೆಯೋ ಅದನ್ನು ಸ್ವೀಕರಿಸಿ ವರ್ತಿಸಬೇಕಾಗಿದೆ. ಈ ಉಪದೇಶದ ಆಸ್ತಿವಾರ ಮನುಷ್ಯನ ಸಹಜ ಪ್ರಕೃತಿಯಾಗಿದೆ. ಮನುಷ್ಯನ ಸಹಜ ಪ್ರಕೃತಿಯು ಹಾಗೆಯೇ ಈ ಉಪದೇಶಗಳೂ ಪರಿವರ್ತನೆಗೊಳ್ಳುವವುಗಳಾಗಿವೆ. ಹದಿನಾಲ್ಕು ನೂರು ವರ್ಷಗಳ ಹಿಂದೆ ಅನುಸರಿಸಲು ಯೋಗ್ಯವಾಗಿದ್ದಂತೆ ಇಂದು ಸಹ ಅವು ಅನುಸರಿಸಲು ಯೋಗ್ಯವಾಗಿವೆ. ಇವು ಸುಲಭವಾದ ಮತ್ತು ಸರ್ವರಿಗೂ ಅರ್ಥವಾಗುವಂತಹ ಉಪದೇಶಗಳಾಗಿದ್ದು ಸರಳತೆ ಮತ್ತು ಫಲದಾಯಕವಾಗುವಿಕೆಗಿರುವ ಚಮತ್ಕಾರಿ ಉದಾಹರಣೆಗಳಾಗಿವೆ. ನಾನು ಪರಿಶೀಲಿಸಿ ನೋಡಿದಾಗ ನನಗೆ ಬೇರೆ ಯಾವುದೇ ಧರ್ಮದ ಪವಿತ್ರ ಗ್ರಂಥಗಳಲ್ಲಿ ಇಂತಹ ಉಪದೇಶಗಳು ಕಂಡುಬರಲಿಲ್ಲ.

## ಇಸ್ಲಾಮಿನ ಬೇರೆ ಕೆಲವು ವೈಶಿಷ್ಟ್ಯಗಳು

ಮಾನ್ಯ ಶ್ರೋತೃಗಳೇ, ಇಸ್ಲಾಮಿನ ವೈಶಿಷ್ಟ್ಯಗಳನ್ನು ವಿವರಿಸುವುದೆಂದರೆ ಅದು ಬಹಳ ವಿಶಾಲವಾದ ಸಂಗತಿಗಳನ್ನು ಒಳಗೊಂಡಿರುವುದರಿಂದ ಸವಿಸ್ತಾರವಾಗಿ ವಿವರಿಸಲು ಇಲ್ಲಿ ಸಾಧ್ಯವಿಲ್ಲ. ಕೆಲವು ಪ್ರಧಾನ ಅಂಶಗಳನ್ನು ಸವಿವರವಾಗಿ ಹೇಳುವುದು ಆವಶ್ಯಕರವೆಂದು ನಾನು ಗ್ರಹಿಸುತ್ತೇನೆ. ಬೇರೆ ವೈಶಿಷ್ಟ್ಯಗಳ ಬಗ್ಗೆ, ಲಭ್ಯವಿರುವ ಸಮಯಕ್ಕನುಗುಣವಾಗಿ ಸಂಕ್ಷಿಪ್ತವಾಗಿಯೇ ವಿವರಣೆ ನೀಡಬಹುದಾಗಿದೆ.

1. ಇಸ್ಲಾಮಿನ ಇನ್ನೊಂದು ವೈಶಿಷ್ಟ್ಯ, ಧರ್ಮದ ಮೂಲಭೂತ ಕಲ್ಪನೆಗಳ ಸ್ಪಷ್ಟ ನಿರೂಪಣೆಯಾಗಿದೆ. ಉದಾಹರಣೆಗೆ, ಅದು ದೇವನನ್ನು ಸೃಷ್ಟಿಕರ್ತನೆಂದು ವಿವರಿಸುತ್ತಾ ದೇವನ ಏಕತ್ವವನ್ನು ಬೇರೆ ಧರ್ಮಗಳಿಗಿಂತ ವಿಭಿನ್ನವಾದ ರೀತಿಯಲ್ಲಿ, ಒಬ್ಬ ನಿರಕ್ಷರಿಯಾದ ಗುಡ್ಡಗಾಡು ನಿವಾಸಿಯೂ ಒಬ್ಬ ವಿದ್ಯಾಸಂಪನ್ನನಾದ ತತ್ವಶಾಸ್ತ್ರಜ್ಞನೂ ಸುಲಭವಾಗಿ ತಿಳಿದುಕೊಳ್ಳುವಂತೆ ವಿವರಿಸುತ್ತದೆ. ಇದರ ಫಲವಾಗಿ ದೇವನ ಸ್ವರೂಪದ ಬಗ್ಗೆಯೂ ಅವನ ಗುಣವಿಶೇಷಗಳ ಬಗ್ಗೆಯೂ ಹೃದಯದಲ್ಲಿ ಮಹತ್ತಾದ ಪ್ರಭಾವ ನೆಲೆಗೊಳ್ಳುವಂತೆ ಮಾಡುತ್ತದೆ. ಅವನು ಎಲ್ಲಾ ಒಳಿತುಗಳ ಒಕ್ಕೂಟವಾಗಿದ್ದಾನೆ ಮತ್ತು ಎಲ್ಲಾ ನ್ಯೂನತೆಗಳಿಂದ ಪರಿಶುದ್ಧನಾಗಿದ್ದಾನೆ. ಏಕನೂ ಸರ್ವಶಕ್ತನೂ ಜೀವಂತವಾಗಿರುವವನೂ ಆದ ದೇವನು ಎಲ್ಲಾ ಕಾಲಗಳಲ್ಲೂ ತನ್ನ ಸಾಮರ್ಥ್ಯಗಳನ್ನು ತೋರಿಸುತ್ತಾನೆ. ಅವನು ತನ್ನ ಪ್ರಿಯ ದಾಸರೊಂದಿಗೆ ಸ್ನೇಹದಿಂದ ನಡೆದುಕೊಳ್ಳುತ್ತಾನೆ; ಅವರ ಪ್ರಾರ್ಥನೆಗಳನ್ನು ಆಲಿಸುತ್ತಾನೆ ಮತ್ತು ಅವರೊಂದಿಗೆ ಮಾತನಾಡುತ್ತಾನೆ. ದೇವನ ಏಕತ್ವ ಎಲ್ಲಾ ಕಾಲಗಳಿಗೂ ಎಲ್ಲಾ ಸ್ಥಳಗಳಿಗೂ ಸಮಾನವಾಗಿ ವ್ಯಾಪಿಸಿರುವುದಾಗಿ ಉಪದೇಶಿಸಿರುವುದು ಇಸ್ಲಾಮಿನ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಅವನು ತನ್ನ ಸ್ವರೂಪದಲ್ಲೂ ಗುಣವಿಶೇಷಗಳನ್ನು ಹೊಂದುವುದರಲ್ಲೂ ಅದ್ವಿತೀಯನಾಗಿದ್ದಾನೆಂದು ಇಸ್ಲಾಮ್ ತೋರಿಸಿಕೊಡುತ್ತದೆ. ಯಾವುದೇ ಕಾಲದಲ್ಲಿ ಅವನ ಗುಣವಿಶೇಷಗಳು ಸ್ತಬ್ಧವಾದುದಾಗಿ ಇಸ್ಲಾಮ್ ಹೇಳುವುದಿಲ್ಲ. ಎಲ್ಲಾ ಕಾಲಗಳ ದೇವದಾಸರಿಗೆ ದೇವರೊಂದಿಗೆ ಸಂಬಂಧವೇರ್ಪಡಿಸುವ ಮತ್ತು ಅವನನ್ನು ಅಭಿಮುಖೀಕರಿಸಿ ಮಾತನಾಡುವ ಮಾರ್ಗವು ತೆರೆದಿದೆಯೆಂದು ಇಸ್ಲಾಮ್ ಘೋಷಿಸುತ್ತದೆ.

2. ಇಸ್ಲಾಮಿನ ಮತ್ತೊಂದು ವೈಶಿಷ್ಟ್ಯವೇನೆಂದರೆ ಅಲ್ಲಾಹನ ವಚನಕ್ಕೂ ಅವನ ವರ್ತನೆಗೂ ಯಾವುದೇ ವಿರೋಧವಿಲ್ಲವೆಂದು ಅದು ಬೋಧಿಸುತ್ತದೆ. ಈ ರೀತಿ ಇಸ್ಲಾಮ್ ಧರ್ಮ ಮತ್ತು ವಿಜ್ಞಾನದ ಮಧ್ಯೆ ಇರುವ ಜಗಳದಿಂದ ಮನುಷ್ಯನನ್ನು ಮುಕ್ತಗೊಳಿಸುತ್ತದೆ. ಬೇರೆ ಕೆಲವು ಧರ್ಮಗಳು ಉಪದೇಶಿಸುವಂತೆ ಪ್ರಕೃತಿ ನಿಯಮಗಳನ್ನು ಕಡೆಗಣಿಸಿ ಅವುಗಳಿಗೆ ವಿರುದ್ಧವಾದ ಸಂಗತಿಗಳ ಬಗ್ಗೆ ವಿಶ್ವಾಸಹೊಂದುವಂತೆ ಇಸ್ಲಾಂ ಉಪದೇಶಿಸುವುದಿಲ್ಲ. ನಿಸರ್ಗ ನಿಯಮಗಳ ಬಗ್ಗೆ ಆಳವಾಗಿ ಚಿಂತನಮಾಡಿ ಅವುಗಳಿಂದ ಪ್ರಯೋಜನ ಪಡೆಯಲು ಅದು ಉಪದೇಶಿಸುತ್ತದೆ.

3. ಇಸ್ಲಾಮಿನ ಬೇರೊಂದು ವೈಶಿಷ್ಟ್ಯವೇನೆಂದರೆ, ಅದು ತನ್ನ ಉಪದೇಶಗಳನ್ನು ಕೇವಲ ವಾದಗಳಿಂದ ಮತ್ತು ಆಜ್ಞೆಗಳಿಂದ ಜನರ ಮೇಲೆ ಹೇರಲು ಉದ್ದೇಶಿಸುವುದಿಲ್ಲ. ಅದು ಪ್ರತಿಯೊಂದು ಸಂಗತಿಯ ಬಗ್ಗೆ ವಿವೇಕಪೂರಿತ ಸಾಕ್ಷ್ಯಾಧಾರಗಳನ್ನು ನೀಡುತ್ತದೆ. ಅದು ವಿಶ್ವಾಸಕ್ಕೆ ಸಂಬಂಧಿಸಿದ ಸಂಗತಿಗಳನ್ನು ಎಷ್ಟು ಬಲಯುತವಾದ ಸಾಕ್ಷ್ಯಾಧಾರಗಳಿಂದ ಸಾಬೀತುಗೊಳಿಸುತ್ತದೆಯೆಂದರೆ ಮನುಷ್ಯನ ಬುದ್ಧಿ ಧಾರ್ಮಿಕ ಉಪದೇಶದೊಂದಿಗೆ ಸ್ಪಷ್ಟವಾದ ಜ್ಞಾನವನ್ನು ಗಳಿಸಿ ಸಮಾಧಾನ ಹೊಂದುತ್ತದೆ.

4. ಇಸ್ಲಾಮಿನ ಅಸ್ತಿವಾರ ಕೇವಲ ಕಥೆಗಳ ಮೇಲೆ ಇರುವುದಿಲ್ಲ. ಅದು ಪ್ರತಿಯೊಬ್ಬನನ್ನು ಅನುಭವದಿಂದ ಸತ್ಯವನ್ನು ತಿಳಿಯಲು ಆಮಂತ್ರಿಸುತ್ತದೆ. ಪ್ರತಿಯೊಂದು ಸತ್ಯವನ್ನು ಲೋಕದಲ್ಲಿಯೇ ಯಾವುದಾದರೊಂದು ರೀತಿಯಲ್ಲಿ ಪರೀಕ್ಷಿಸಬಹುದೆಂದು ಅದು ಹೇಳುತ್ತದೆ.

5. ಇಸ್ಲಾಮಿನ ಅವತೀರ್ಣಗೊಂಡ ಗ್ರಂಥ ಅನುಪಮೇಯವೂ ಅಪ್ರತಿಮವೂ ಆಗಿದೆ. ಈ ಸಂಗತಿ ಇಸ್ಲಾಮನ್ನು ಬೇರೆ ಎಲ್ಲಾ ಧರ್ಮಗಳಿಂದ ವಿಶಿಷ್ಟಗೊಳಿಸುತ್ತದೆ. ಪವಿತ್ರ ಖುರ್‌ಆನ್ ಬಹಳ ಸ್ಪಷ್ಟವಾದ ಶಬ್ದಗಳಲ್ಲಿ ಪಂಥಾಹ್ವಾನ ನೀಡಿದ್ದರೂ ಇಂದಿನ ತನಕ ಇಸ್ಲಾಮಿನ ಎಲ್ಲಾ ವಿರೋಧಿಗಳೂ ಒಟ್ಟಿಗೆ ಸೇರಿ ಅದರ ಒಂದು ಭಾಗವನ್ನು ಹೋಲುವಂತಹ ಕೃತಿಯನ್ನಾದರೂ ರಚಿಸಲು ಸಮರ್ಥರಾಗಲಿಲ್ಲ. ಪವಿತ್ರ ಖುರ್‌ಆನ್ ಅಪ್ರತಿಮವಾದುದು ಅದರ ಸಾಹಿತ್ಯಪ್ರೌಢಿಯ ಕಾರಣದಿಂದ ಮಾತ್ರವಲ್ಲ. ಅದು ಸರ್ವ ಸಂಗತಿಗಳನ್ನೂ ಒಳಗೊಂಡಿರುವುದರಿಂದಲೂ ಅತ್ಯುತ್ಕೃಷ್ಟ ಉಪದೇಶಗಳ ಕಾರಣದಿಂದಲೂ ಆಗಿದೆ. ಯಾರಿಗಾದರೂ ಸಂಶಯವಿದ್ದರೆ, ಆತನು ಪವಿತ್ರ ಖುರ್‌ಆನಿನ ಹಾಗಿರುವ ಅಥವಾ ಅದಕ್ಕಿಂತಲೂ ಉತ್ತಮವಾದ ಉಪದೇಶಗಳನ್ನು ಮುಂದಿರಿಸಲಿಯೆಂಬ ಪವಿತ್ರ ಖುರ್‌ಆನಿನ ಈ ಪಂಥಾಹ್ವಾನ ಆತನಿಗೆ ಇಂದಿಗೂ ಯೋಚಿಸಲು ಆಮಂತ್ರಣ ನೀಡುತ್ತದೆ. ಯಾರೊಬ್ಬನೂ ಹಾಗೆ ಮಾಡಲು ಸಮರ್ಥನಾಗಿಲ್ಲ; ಇನ್ನು ಮುಂದೆಯೂ ಸಮರ್ಥನಾಗಲಾರನೆಂದು ಪವಿತ್ರ ಖುರ್‌ಆನ್ ವಾದಿಸುತ್ತದೆ. ಬೇರೆ ಯಾವುದಾದರೂ ಧಾರ್ಮಿಕ ಗ್ರಂಥದಲ್ಲಿ ಅದರ ಬಗ್ಗೆ ಇದೇ ಮಾದರಿಯ ವಾದವಾಗಲೀ ಪಂಥಾಹ್ವಾನವಾಗಲೀ ಕಾಣಲಾರೆವು.

6. ಇಸ್ಲಾಮಿನ ಮಗದೊಂದು ವೈಶಿಷ್ಟ್ಯವೇನೆಂದರೆ, ಅದರ ಉಪದೇಶಗಳು ಅದಕ್ಕಿಂತ ಮೊದಲಿನ ಧರ್ಮಗಳ ಉಪದೇಶಗಳಿಂದ ಸಂಪೂರ್ಣವಾಗಿ ಸಂಬಂಧ ಕಡಿದುಕೊಂಡಿಲ್ಲ ಮತ್ತು ಪ್ರತ್ಯೇಕವಾಗಿಲ್ಲ ಎಂದು ಪವಿತ್ರ ಖುರ್‌ಆನ್ ಪ್ರಕಟಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

> "ಅದರಲ್ಲಿ (ಖುರ್‌ಆನಿನಲ್ಲಿ) ಶಾಶ್ವತವಾಗಿ ನೆಲೆನಿಲ್ಲುವ ಆಜ್ಞೆಗಳಿವೆ." (98 : 4)
> "ನಿಶ್ಚಯವಾಗಿಯೂ ಇದು (ಈ ಉಪದೇಶ) ಮೊದಲಿನ ಗ್ರಂಥಗಳಲ್ಲೂ ಇದೆ–ಇಬ್ರಾಹೀಮರ ಮತ್ತು ಮೂಸಾರ ಗ್ರಂಥಗಳಲ್ಲಿ" (87:19,20)

7. ಇಸ್ಲಾಮಿನ ಇನ್ನೊಂದು ವೈಶಿಷ್ಟ್ಯವೇನೆಂದರೆ ಇಸ್ಲಾಮ್ ಧರ್ಮದ ಗ್ರಂಥವಾದ ಪವಿತ್ರ ಖುರ್‌ಆನ್ ಯಾವ ಭಾಷೆಯಲ್ಲಿ ಅವತೀರ್ಣವಾಗಿದೆಯೋ ಆ ಭಾಷೆ, ಎಂದರೆ ಅರಬಿ ಭಾಷೆ ಇಂದಿಗೂ ಜೀವಂತ ಭಾಷೆಯಾಗಿ ಉಳಿದುಕೊಂಡಿದೆ. ಭಾಷೆಯು ಜೀವಂತವಾಗಿರುವುದು ಗ್ರಂಥವು ಜೀವಂತವಾಗಿರುವುದಕ್ಕೆ ಸಾಕ್ಷ್ಯವಾಗಿದೆ. ಬಾಕಿ ಎಲ್ಲಾ ಧಾರ್ಮಿಕ ಗ್ರಂಥಗಳು ಅವತೀರ್ಣವಾದ ಭಾಷೆ ಮೃತಪ್ರಾಯವಾದಂತಿರುವುದೂ ಪವಿತ್ರ ಖುರ್‌ಆನಿನ ಭಾಷೆ ಮಾತ್ರ ಜೀವಂತವಾಗಿರುವುದೂ ಇಸ್ಲಾಮಿನ ಮಹತ್ತಾದ ವೈಶಿಷ್ಟ್ಯವಾಗಿದೆ.

8. ಇಸ್ಲಾಮಿನ ಮತ್ತೊಂದು ವೈಶಿಷ್ಟ್ಯವೇನೆಂದರೆ, ಅದರ ಉಪದೇಶಗಳು ಪರಿಪೂರ್ಣವೂ ಉನ್ನತವಾದುದೂ ಆಗಿರುವುದರೊಂದಿಗೆ ಅದರ ಪ್ರವಾದಿ ಮನುಷ್ಯ ಜೀವಿತದ ವಿವಿಧ ಅವಸ್ಥೆಗಳಲ್ಲಿ ಜೀವಿಸಿದರು. ಅನಾಥ ಸ್ಥಿತಿಯಿಂದ ದೊರೆತನದ ವರೆಗಿನ ಅವರ ಜೀವಿತದ ವಿವಿಧ ಹಂತಗಳು ಚರಿತ್ರೆಯಲ್ಲಿ ಉಲ್ಲೇಖಿಸಲ್ಪಟ್ಟು ಹೆಜ್ಜೆ ಹೆಜ್ಜೆಗಳಲ್ಲೂ ತಿರುವು ತಿರುವುಗಳಲ್ಲೂ ಉತ್ಕೃಷ್ಟವಾದ ಮಾದರಿಯನ್ನು ಸ್ಥಾಪಿಸುತ್ತಾ ಹೋಗುತ್ತಿವೆ. ಇಂತಹ ಪರಿಪೂರ್ಣ ಮತ್ತು ಅನುಸರಣೀಯವಾದ ಮಾದರಿಯನ್ನು - ಅದು ತನ್ನ ವೈಶಾಲ್ಯದಲ್ಲಿ ಮತ್ತು ವೈವಿಧ್ಯದಲ್ಲಿ ಎಲ್ಲವನ್ನು ಒಳಗೊಂಡಿದೆ–ಕೇವಲ ಇಸ್ಲಾಮಿನ ಪ್ರವಾದಿ ಮಾತ್ರ ಮುಂದಿಡುತ್ತಾರೆ. ಅವರ ಜೀವಿತ ತೆರೆದ ಗ್ರಂಥದ ಹಾಗಿದ್ದು ನಮ್ಮ ಮುಂದೆ ಇದೆ. ಅವರ ಜೀವಿತದ ಯಾವುದೇ ಅಂಶ ರಹಸ್ಯವಾಗಿಲ್ಲ. ಎಲ್ಲಾ ಸಂಗತಿಗಳ ವಿವರ ಸುರಕ್ಷಿತವಾಗಿದೆ. ಒಂದು ಪರಿಪೂರ್ಣ ಆದರ್ಶಕಾರಕ ಮಾದರಿಯಾಗಲು ಇದು ಹೀಗೆ ಆಗುವುದು ಆವಶ್ಯಕರವಾಗಿತ್ತು. ಇದಕ್ಕೆದುರಾಗಿ, ಬೇರೆ ಪ್ರವಾದಿಗಳಿಗೆ ಮಾನವ ಜೀವಿತದ ಮತ್ತು ಸಮಸ್ಯೆಗಳ ಇಷ್ಟು ವಿಸ್ತಾರವಾದ ಅನುಭವಗಳು ದೊರೆಯಲಿಲ್ಲ. ಮಾತ್ರವಲ್ಲದೆ, ಅವರ ಜೀವಿತ ಚರಿತ್ರೆಗಳು ಸಹ ಸಂಪೂರ್ಣವಾಗಿ ಸಂರಕ್ಷಿತವೂ ಆಗಿಲ್ಲ. ಅವರ ಜೀವಿತದ ಬಹುಭಾಗಗಳು ದೃಷ್ಟಿಯಿಂದ ಮರೆಯಾಗಿವೆ.

9. ಇಸ್ಲಾಮಿನ ಬೇರೊಂದು ವೈಶಿಷ್ಟ್ಯವೇನೆಂದರೆ, ಅದರಲ್ಲಿ ಲೆಕ್ಕವಿಲ್ಲದಷ್ಟು ಭವಿಷ್ಯವಾಣಿಗಳು ಇವೆ. ಅವುಗಳು ಬೇರೆ ಬೇರೆ ಕಾಲಗಳಲ್ಲಿ ಪೂರ್ತಿಯಾಗಿ ಇಸ್ಲಾಮಿನ ಸತ್ಯತೆಗೆ ಮತ್ತು ಜೀವಂತನಾಗಿರುವ ದೇವನಲ್ಲಿ ದೃಢ ವಿಶ್ವಾಸವುಂಟುಮಾಡುತ್ತಾ ಇರುತ್ತವೆ. ಯಾವುದಾದರೊಂದು ಭವಿಷ್ಯವಾಣಿ ಪೂರ್ತಿಯಾಗದ ಯಾವುದೇ ಕಾಲ ಇರುವುದಿಲ್ಲ. ಈ ಕಾಲದಲ್ಲೂ ಅನೇಕ ಭವಿಷ್ಯವಾಣಿಗಳು ಪೂರ್ತಿಗೊಂಡಿವೆ. ಉದಾಹರಣೆಗೆ. ಈ ಕಾಲದಲ್ಲಿಯೇ ಹಝ್‌ರತ್ ಮೂಸಾ ಪ್ರವಾದಿಯ ಕಾಲದ ಫಿರ್‌ಔನ (ಫರೋಹ)ನ ಶವದ ಪತ್ತೆ ಹಚ್ಚಲಾಯಿತು. ಅಲ್ಲದೆ ಅಣುಬಾಂಬುಗಳ ಬಗ್ಗೆ ನುಡಿದ ಭವಿಷ್ಯನುಡಿಯೂ ಈ ಕಾಲದಲ್ಲಿಯೇ ಪೂರ್ತಿಯಾಯಿತು.

10. ಇಸ್ಲಾಮ್ ಧರ್ಮದ ಮಗದೊಂದು ವೈಶಿಷ್ಟ್ಯವೇನೆಂದರೆ, ಅದು ಪರಲೋಕದ ಬಗ್ಗೆ ವಿವರ ನೀಡುವುದರೊಂದಿಗೆ ಈ ಲೋಕದಲ್ಲಿ ನಡೆಯಲಿರುವ ಸಂಭವಗಳ ಬಗ್ಗೆ ಭವಿಷ್ಯ ನುಡಿದು ಅವುಗಳ ಪೂರ್ತೀಕರಣದಿಂದ ಪರಲೋಕದ ಬಗ್ಗೆ ನೀಡಿರುವ ಮುನ್ಸೂಚನೆಗಳಲ್ಲಿ ನಂಬಿಕೆ ಉಂಟಾಗುವಂತೆ ಮಾಡುತ್ತದೆ.

11. ಇಸ್ಲಾಮ್ ನೀತಿ ನ್ಯಾಯಗಳ ಬಗ್ಗೆ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಅಂತಾರಾಷ್ಟ್ರೀಯವಾಗಿಯೂ ಉಪದೇಶಗಳನ್ನು ನೀಡಿರುವುದರಿಂದ ಬೇರೆ ಎಲ್ಲಾ ಧರ್ಮಗಳಿಗಿಂತ ವೈಶಿಷ್ಟ್ಯವನ್ನು ಹೊಂದಿದೆ. ಅವುಗಳು ಪರಿಪೂರ್ಣವಾಗಿದ್ದು ಎಲ್ಲಾ ಸಂಭಾವ್ಯ ಪರಿಸ್ಥಿತಿಗಳಿಗೆ ಅನ್ವಯಿಸುವ ಹಾಗಿದೆ. ದೊಡ್ಡವ-ಚಿಕ್ಕವ, ಮಾಲೀಕ–ನೌಕರ, ಶತ್ರು–ಮಿತ್ರ, ವೈಯಕ್ತಿಕ – ಸಾಮೂಹಿಕ ಹಕ್ಕುಬಾಧ್ಯತೆಗಳ ಬಗ್ಗೆ ಬಹಳ ಆಶ್ಚರ್ಯಕರ ರೀತಿಯಲ್ಲಿ ಅದು ಮಾರ್ಗದರ್ಶನ ನೀಡುತ್ತದೆ. ಅವು ಸ್ಥಿರವಾಗಿರುವ ಮತ್ತು ಎಂದೂ ಬದಲಾಯಿಸಲ್ಪಡದ ತತ್ವಗಳನ್ನೊಳಗೊಂಡಿವೆ.

12. ಇಸ್ಲಾಮ್ ಮನುಷ್ಯರ ಮಧ್ಯೆ ಸಮತೆಯನ್ನು ಘೋಷಿಸುತ್ತದೆ. ಅದರಲ್ಲಿ ಜಾತಿ ವ್ಯತ್ಯಾಸ, ವಂಶ ಮತ್ತು ಕೋಮಿನ ತಾರತಮ್ಯತೆ ಇಲ್ಲ. ಅದು ಎಲ್ಲಾ ಜನರನ್ನೂ ಮಾನವತೆಯ ದೃಷ್ಟಿಯಲ್ಲಿ ಸಮಾನರೆಂದು ಸಾರುತ್ತದೆ. ಇಸ್ಲಾಮ್ ಗೌರವ ಮತ್ತು ಮರ್ಯಾದೆಯನ್ನು ಅಳೆಯುವ ಒಂದು ಹೊಸ ಮಾಪನವನ್ನು ಸಾದರಪಡಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆಂದಿದೆ :

> "ನಿಮ್ಮ ಪೈಕಿ ಹೆಚ್ಚು ಭಯಭಕ್ತಿಯುಳ್ಳವನೇ ಅಲ್ಲಾಹನ ದೃಷ್ಟಿಯಲ್ಲಿ ಹೆಚ್ಚು ಗೌರವಾರ್ಹನು."
> (49 : 14)

> "ಸ್ತ್ರೀ ಅಥವಾ ಪುರುಷ ಯಾರೇ ಆಗಲಿ, ಸತ್ಯವಿಶ್ವಾಸಿಯಾಗಿ ತನ್ನ ವಿಶ್ವಾಸಕ್ಕೆ ಅನುಯೋಜ್ಯವಾದ ಒಳ್ಳೆಯ ಕೆಲಸಗಳನ್ನು ಮಾಡಿದರೆ ಅವರು ಸ್ವರ್ಗವನ್ನು ಪ್ರವೇಶಿಸುವರು: ಅವರಿಗೆ ಲೆಕ್ಕವಿಲ್ಲದಷ್ಟು ಬಹುಮಾನಗಳು ನೀಡಲ್ಪಡುವುವು."
> (40 : 41)

13. ಇಸ್ಲಾಮ್ ಪಾಪ ಮತ್ತು ಪುಣ್ಯಗಳ ಬಗ್ಗೆ ನೀಡುವ ವಿವರಣೆ ಬೇರೆಲ್ಲಾ ಧರ್ಮಗಳಿಗಿಂತ ಅದನ್ನು

ವಿಶಿಷ್ಟಪಡಿಸುತ್ತದೆ. ಮನುಷ್ಯನ ಸಹಜ ಗುಣಗಳನ್ನು ಅದು ಪಾಪವೆಂದು ಪರಿಗಣಿಸುವುದಿಲ್ಲ. ಆದರೆ ಆ ಸಹಜ ಗುಣಗಳ ಅಯೋಗ್ಯ ಉಪಯೋಗವನ್ನು ಮಾತ್ರ ಅದು ಪಾಪವೆಂದು ಹೇಳುತ್ತದೆ. ಮನುಷ್ಯನ ಎಲ್ಲಾ ಸಹಜ ಪ್ರವೃತ್ತಿಗಳನ್ನು ನೀತಿಯುತವಾಗಿ ಮತ್ತು ಉತ್ತಮ ತರಬೇತಿಗೊಳಪಡಿಸಿ ಪವಿತ್ರ ಖುರ್‌ಆನಿನ ಮಾರ್ಗದರ್ಶನದಂತೆ ಉಪಯೋಗಿಸಲು ಅದು ಉಪದೇಶ ನೀಡುತ್ತದೆ.

14. ಸ್ತ್ರೀಯರಿಗೆ ವಾರೀಸು ಹಕ್ಕನ್ನು ನೀಡಿದ ಏಕ ಮಾತ್ರ ಧರ್ಮ ಇಸ್ಲಾಮ್ ಆಗಿದೆ. ಅದು ಪುರುಷರ ಮತ್ತು ಸ್ತ್ರೀಯರ ಮಧ್ಯೆ ಸಮಾನತೆ ಸ್ಥಾಪಿಸಿದೆಯಾದರೂ ಸ್ತ್ರೀ ಪುರುಷರ ಜನ್ಮಸಿದ್ಧವಾದ ವ್ಯತ್ಯಾಸಗಳನ್ನು ಕಡೆಗಣಿಸುವಂತೆ ತಪ್ಪಾದ ರೀತಿಯಲ್ಲಿ ಸಮಾನತೆಗೆ ಒತ್ತು ನೀಡಿಲ್ಲ.

## ಇಸ್ಲಾಮ್ ಶಾಂತಿ ಧರ್ಮ

ಕೊನೆಯದಾಗಿ, ಶಾಂತಿಪ್ರಿಯರಾದ ಎಲ್ಲಾ ವ್ಯಕ್ತಿಗಳಿಗೆ ಮತ್ತು ಜನಾಂಗಗಳಿಗೆ ಒಂದು ಮಹತ್ವಾದ ಶುಭ ವಾರ್ತೆಯನ್ನು ನಾನು ನೀಡುತ್ತೇನೆ: ಇಂದು ಮನುಷ್ಯನಿಗೆ ವೈಯಕ್ತಿಕ, ಸಾಮೂಹಿಕ, ಸಾಂಸ್ಕೃತಿಕ, ಆರ್ಥಿಕ, ಸಾಮುದಾಯಿಕ ಹಾಗೂ ಅಂತಾರಾಷ್ಟ್ರೀಯ ಶಾಂತಿಯ ಭರವಸೆ ನೀಡುವ ಏಕಮಾತ್ರ ಧರ್ಮ ಇಸ್ಲಾಂ ಆಗಿದೆ. ಇಸ್ಲಾಮ್ ಶಾಂತಿಯ ಬಗ್ಗೆ ನೀಡಿದ ಉಪದೇಶಗಳು ಇವುಗಳನ್ನೆಲ್ಲಾ ಆವರಿಸುತ್ತದೆ. ಶಾಂತಿ ಎಂಬ ಹೆಸರನ್ನು ಪಡೆದ ಏಕಮಾತ್ರ ಧರ್ಮವೂ ಇಸ್ಲಾಮೇ ಆಗಿದೆ. ಅದರೊಂದಿಗೆ ಸಂಬಂಧ ಹೊಂದುವವರನ್ನು ಮುಸ್ಲಿಂ ಎಂದು ಕರೆಯಲಾಗುತ್ತಿದೆ. ಎಂದರೆ ಸ್ವತಃ ಶಾಂತಿಯನ್ನು ಹೊಂದಿದವನೂ ಬೇರೆಯುವರಿಗೆ ಶಾಂತಿ ನೀಡುವವನೂ ಎಂದು ಇದರ ಅರ್ಥ. ಗೊಂದಲ ಮತ್ತು ಅವ್ಯವಸ್ಥೆ ಉಂಟಾಗಲಿರುವ ಎಲ್ಲಾ ಕೃತ್ಯಗಳಿಂದ ಆತನು ದೂರವಿರುವವನಾಗಿರುತ್ತಾನೆ. ಇಸ್ಲಾಮಿನ ಪ್ರವಾದಿಯನ್ನು "ಅವ್ವಲುಲ್ ಮುಸ್ಲಿಮೀನ್" ಎಂದು ಕರೆಯಲಾಗಿದೆ. ಶಾಂತಿ ಸಂದೇಶ ನೀಡುವವರ ನೇತಾರ ಎಂದು ಇದರ ಅರ್ಥ. ಅವರು ಹೀಗೆ ಹೇಳಿರುವರು:

"ಮಾತಿನಿಂದಾಗಲೀ ಕೃತ್ಯದಿಂದಾಗಲೀ ಅನ್ಯರಿಗೆ ದೋಷವನ್ನುಂಟುಮಾಡದವನೇ ಮುಸ್ಲಿಮನು"

ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರವರು ತನ್ನ ನಿಧನಕ್ಕೆ ಮೊದಲು ಮಾಡಿದ ಕೊನೆಯ ಹಜ್ ಕರ್ಮ ಸಂದರ್ಭದಲ್ಲಿ ಅವರು ನೀಡಿದ ಕೊನೆಯ ಸಂದೇಶ ಶಾಂತಿಯ ಬಗ್ಗೆ ಅವರು ನೀಡಿದ, ಶಾಶ್ವತವಾಗಿ ನಿಲ್ಲುವ ಸನದಾಗಿದೆ. ಅದು ಎಲ್ಲಾ ಕೋಮಿನವರಿಗೂ ವಂಶದವರಿಗೂ ಎಲ್ಲಾ ಧರ್ಮಗಳ ಅನುಯಾಯಿಗಳಿಗೂ ಇಂದಿಗೂ ಒಂದೇ ರೀತಿ ಅನುಸರಣೆಗೆ ಯೋಗ್ಯವಾಗಿದೆ.

ಇಸ್ಲಾಮಿನ ಉಪದೇಶಗಳ ಪ್ರಕಾರ, ಮನುಷ್ಯನ ಮಧ್ಯೆ ಶಾಂತಿ ನೆಲೆಸುವ ಕಲ್ಪನೆಯೊಂದಿಗೆ ಮನುಷ್ಯ ಮತ್ತು ದೇವರ ಮಧ್ಯೆ ಶಾಂತಿ ಸ್ಥಾಪನೆಯ ಕಲ್ಪನೆಯೂ ಇದೆ. ಈ ದೃಷ್ಟಿಯಲ್ಲಿ ಸತ್ಯವಿಶ್ವಾಸಿಯೆಂದರೆ ಆತನಿಂದ ಇತರ ಸತ್ಯವಿಶ್ವಾಸಿಗಳೂ ದೇವಾಜ್ಞೆಗಳೂ ಸುರಕ್ಷಿತವಾಗಿರುತ್ತವೆ. ಯಾರು ದೇವರೊಂದಿಗೆ ಈ ರೀತಿಯ ಸಂಬಂಧ ಹೊಂದಿರುತ್ತಾನೋ ಅವನು ಶಿಕ್ಷೆಯಿಂದ ಸುರಕ್ಷಿತನಾಗಿರುತ್ತಾನೆ. ಒಟ್ಟಾರೆ ಹೇಳುವುದಾದರೆ, ಮುಸ್ಲಿಮ್ ಎಂಬ ಶಬ್ದದಲ್ಲಿ ಈ ಲೋಕದ ಶಾಂತಿಯೊಂದಿಗೆ ಪರಲೋಕದಲ್ಲಿ ಶಾಂತಿ ಪಡೆಯುವ ಕಲ್ಪನೆಯೂ ಸೇರಿ ವೈಶಾಲ್ಯವನ್ನು ಪಡೆದಿದೆ. ಅದು ಮನುಷ್ಯರ ಸಂಬಂಧವನ್ನೂ ಮನುಷ್ಯ ಮತ್ತು ದೇವನ ಸಂಬಂಧವನ್ನೂ ಒಳಗೊಂಡಿದೆ. ಒಬ್ಬ ಮುಸ್ಲಿಮನ ಕರ್ತವ್ಯವೇನೆಂದರೆ ಸೃಷ್ಟಿಯ ವ್ಯವಸ್ಥೆಯಲ್ಲಿ ಯಾವುದೇ ಕೇಡನ್ನುಂಟುಮಾಡಬಾರದು. ಆತನು ಅಲ್ಲಾಹನನ್ನು ಅನುಸರಿಸುವವನಾಗಿರಬೇಕು. ಆತನು ತನ್ನವರಿಗೂ ಪರರಿಗೂ ಸಂಪೂರ್ಣ ಶಾಂತಿ ನೀಡುವವನಾಗಿರಬೇಕು.

ಇಂದು ವಿವಿಧ ಕೋಮಿನ ಜನರು ಇಸ್ಲಾಮ್ ಧರ್ಮತತ್ವಗಳಿಂದ ಪ್ರಯೋಜನ ಪಡೆದು ಭಯಂಕರ ನಾಶದಿಂದ ರಕ್ಷೆಗಳಿಸುವುದಕ್ಕೆ ಅದರ ತತ್ವಗಳು ಫಲದಾಯಕಗಳಾಗಿವೆ. ಈ ಸಂಗತಿಗಳಲ್ಲಿ ಉಪದೇಶ ನೀಡಬಲ್ಲ ಏಕೈಕ ಧರ್ಮ ಅದಾಗಿದೆ. ಬೇರೆ ಧರ್ಮಗಳಲ್ಲಿ ಅಂತಾರಾಷ್ಟ್ರೀಯ ಕಲ್ಪನೆಯೇ ಇಲ್ಲದಿರುವಾಗ ಅವುಗಳು ಆ ಬಗ್ಗೆ ಯಾವ ಉಪದೇಶ ತಾನೆ ನೀಡಬಲ್ಲವು? ಇದೊಂದು ಪ್ರತ್ಯೇಕ ವಿಷಯವಾಗಿದ್ದು ಇದರ ಕುರಿತು ವಿಸ್ತಾರವಾಗಿ ಪ್ರತಿಪಾದಿಸಲು ಇಲ್ಲಿ ಆಸ್ಪದವಿಲ್ಲ.

## ಇಸ್ಲಾಂ ಜೀವಂತ ಧರ್ಮವಾಗಿದೆ

ಕೊನೆಯದಾಗಿ ಇಸ್ಲಾಮಿನ ಮಹತ್ವಾದ ಒಂದು ವೈಶಿಷ್ಟ್ಯದ ಬಗ್ಗೆ ನಾನು ಹೇಳಬಯಸುತ್ತೇನೆ. ಇಸ್ಲಾಂ

ಜೀವಂತ ಧರ್ಮವಾಗಿದೆ. ಹಿಂದಿನ ಕಾಲಗಳಲ್ಲಿ ಮನುಷ್ಯ ಮತ್ತು ದೇವನ ಮಧ್ಯೆ ಸಂಬಂಧವೇರ್ಪಟ್ಟ ರೀತಿಯಲ್ಲಿ ಇಂದು ಸಹ ಅಂತಹ ಸಂಬಂಧವುಂಟಾಗಲು ಸಾಧ್ಯವಿದೆಯೆಂದು ಇಸ್ಲಾಮ್ ವಾದಿಸುತ್ತದೆ. ಇಸ್ಲಾಮ್ ದೇವಸಂದೇಶಗಳನ್ನು ಕಥೆಗಳ ಹಾಗೆಯೋ ಗತಕಾಲದ ಚರಿತ್ರೆಗಳಂತೆಯೋ ನಮ್ಮ ಮುಂದಿಡು ವುದಿಲ್ಲ. ಪ್ರತಿಯೊಂದು ಕಾಲದ ಮನುಷ್ಯರಿಗೆ ಅದು ಶುಭವಾರ್ತೆ ನೀಡುತ್ತದೆ. ಯಾವ ಮಾರ್ಗದಲ್ಲಿ ನಡೆದು ಪ್ರವಾದಿಗಳಾದ ಹಝ್ರತ್ ನೂಹ್, ಹಝ್ರತ್ ಇಬ್ರಾಹೀಮ್, ಹಝ್ರತ್ ಮೂಸಾ ಮತ್ತು ಹಝ್ರತ್ ಈಸಾ ತಮ್ಮ ಸೃಷ್ಟಿಕರ್ತನ ದರ್ಶನ ಪಡೆದರೋ ಯಾವ ಮಾರ್ಗವನ್ನು ಅನುಸರಿಸಿದುದರಿಂದ ಹಝ್ರತ್ ಮುಹಮ್ಮದ್ ಪೈಗಂಬರರ ಮೇಲೆ ಅಲ್ಲಾಹನು ತನ್ನ ಪ್ರಕಾಶ ಬೀರಿದನೋ ಇಂದು ಸಹ ದೇವನ ಸಾಮೀಪ್ಯದ ಆ ಮಾರ್ಗಗಳು ತೆರೆದುಕೊಂಡಿವೆ. ಯಾರು ಅಲ್ಲಾಹನ ಸಾಮೀಪ್ಯವನ್ನು ಬಯಸುತ್ತಾರೋ ಅವರಿಗೆ ಇದೊಂದು ಬಹಿರಂಗ ಪ್ರಕಟಣೆಯಾಗಿದೆ. ಪವಿತ್ರ ಖುರ್‌ಆನ್ ಹೀಗೆಂದಿದೆ:

"(ಓ ಮುಹಮ್ಮದ್) ನೀನು ಹೇಳು : ನಾನು ನಿಮ್ಮ ಹಾಗಿರುವ ಕೇವಲ ಒಬ್ಬ ಮನುಷ್ಯನಾಗಿರುವೆನು. (ವ್ಯತ್ಯಾಸ ಇಷ್ಟು ಮಾತ್ರ)–ನನಗೆ (ಈ) ಸಂದೇಶವನ್ನು ಅವತೀರ್ಣಗೊಳಿಸಲಾಗುತ್ತಿದೆ: ನಿಮ್ಮ ದೇವನು ಒಬ್ಬನೇ ದೇವನಾಗಿದ್ದಾನೆಂದು. ಆದುದರಿಂದ ಯಾರು ತನ್ನ ಒಡೆಯನ ಭೇಟಿಯನ್ನು ನಿರೀಕ್ಷಿಸುತ್ತಾನೋ ಆತನು ಒಳ್ಳೆಯ ಕೆಲಸ ಮಾಡಬೇಕು ಮತ್ತು ತನ್ನ ಸೃಷ್ಟಿಕರ್ತನ ಜೊತೆಯಲ್ಲಿ ಯಾರನ್ನೂ ಆರಾಧನೆಗೆ ಅರ್ಹನಾದ ಪಾಲುಗಾರನನ್ನಾಗಿ ಮಾಡಬಾರದು" (18:111)

"ನಮ್ಮ ಒಡೆಯ ಅಲ್ಲಾಹನು ಎಂದು ಯಾರು ದೃಢವಾಗಿ ಹೇಳುತ್ತಿದ್ದಾರೋ ಮತ್ತು ಆ ವಿಶ್ವಾಸದಲ್ಲಿ ಸ್ಥಿರವಾಗಿರುತ್ತಾರೋ ಅಂತಹವರ ಬಳಿಗೆ ದಿವ್ಯ ದೂತರು ಇಳಿದು ಬಂದು ಹೇಳುವರು: ನೀವು (ಮುಂದೆ ಬರಲಿರುವುದರ ಬಗ್ಗೆ) ಭಯಭೀತರಾಗಬೇಡಿರಿ, (ಈ ಮೊದಲಿನ ತಪ್ಪುಗಳಿಗಾಗಿ) ದುಃಖಿಸಬೇಡಿರಿ. ನಿಮಗೆ ದೊರೆಯುವುದೆಂದು ವಾಗ್ದಾನ ನೀಡಲಾದ ಸ್ವರ್ಗದ ಶುಭವಾರ್ತೆಯ ಸಲುವಾಗಿ ಸಂತೋಷಭರಿತರಾಗಿರಿ."
(41 : 31)

## ಪವಿತ್ರ ಖುರ್‌ಆನಿನ ವಾದಗಳ ಈ ಕಾಲದ ಜೀವಂತ ಸಾಕ್ಷ್ಯ

ಅಹ್ಮದಿಯಾ ಸಂಘಟನೆಯ ನಂಬಿಕೆಯ ಪ್ರಕಾರ, ಪವಿತ್ರ ಖುರ್‌ಆನಿನ ಈ ವಾದಗಳ ಜೀವಂತ ಸಾಕ್ಷ್ಯ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅವರಾಗಿದ್ದಾರೆ. ಅವರು ಕ್ರಿ.ಶ. 1835ರಲ್ಲಿ ಭಾರತದ ಪಂಜಾಬ್ ರಾಜ್ಯದ ಖಾದಿಯಾನ್ ಎಂಬ, ಯಾವುದೇ ಪ್ರಸಿದ್ಧಿ ಪಡೆದಿರದ ಊರಲ್ಲಿ ಜನಿಸಿದರು. ಒಳ್ಳೆಯತನ ಮತ್ತು ಭಯಭಕ್ತಿಯನ್ನು ಪ್ರೇರೇಪಿಸುವ ಇಸ್ಲಾಮಿನ ಉಪದೇಶಗಳನ್ನು ಅನುಸರಿಸಿ ನಡೆಯುತ್ತಾ ದೇವನ ವಾಣಿಗಳಿಂದ ಅನುಗ್ರಹೀತರಾಗುವ ಸೌಭಾಗ್ಯ ಅವರಿಗೆ ದೊರಕಿತು ಮತ್ತು ತಮ್ಮ ಜೀವಿತ ಕಾಲದಲ್ಲಿಯೇ ದೇವನ ದರ್ಶನ ಪಡೆಯುವ ಉನ್ನತ ಉದ್ದೇಶ ಅವರಿಗೆ ಸಫಲೀಕೃತವಾಯಿತು.

ಅವರು ದೇವನ ಇಷ್ಟದಂತೆ ಮತ್ತು ಅವನ ಆಜ್ಞೆಗಳ ಪ್ರಕಾರ ಕ್ರಿ.ಶ. 1889ರಲ್ಲಿ ಜಮಾಅತ್ ಅಹ್ಮದಿಯಾ (ಅಹ್ಮದಿಯಾ ಸಂಘಟನೆ)ವನ್ನು ಸ್ಥಾಪಿಸಿದರು. ಇಸ್ಲಾಮಿನ ಪ್ರಚಾರ ಮತ್ತು ಸೇವೆ ಮಾಡುವ ಲಕ್ಷಾಂತರ ಸದಸ್ಯರನ್ನೊಳಗೊಂಡ ಒಂದು ಕಾರ್ಯಪ್ರವೃತ್ತ ಸಂಘಟನೆಯನ್ನು ತನ್ನ ಹಿಂದೆ ಬಿಟ್ಟು ಕ್ರಿ. ಶ. 1908ರಲ್ಲಿ ಅವರು ನಿಧನಹೊಂದಿದರು. ಅವರು ಪ್ರಾರಂಭಿಸಿದ, ಇಸ್ಲಾಮ್ ಧರ್ಮದ ಪುನರುತ್ಥಾನ ಕಾರ್ಯವನ್ನು ಅವರ ನಂತರ ಅವರ ಖಲೀಫರು (ಧಾರ್ಮಿಕ ಉತ್ತರಾಧಿಕಾರಿಗಳು) ನಡೆಸಿಕೊಂಡು ಬರುತ್ತಿದ್ದಾರೆ. ತಾನು ದೇವನಿಂದ ನಿಯುಕ್ತನಾಗಿರುವುದರ ಉದ್ದೇಶವನ್ನು ವಿವರಿಸುತ್ತಾ ಅಹ್ಮದಿಯಾ ಸಂಘಟನೆಯ ಸ್ಥಾಪಕರು ಹೀಗೆಂದು ಹೇಳಿದ್ದಾರೆ:

"ನಾನು ಕಳುಹಿಸಲ್ಪಟ್ಟಿರುವುದು ಇಸ್ಲಾಮ್ ಧರ್ಮವೇ ಏಕಮಾತ್ರ ಜೀವಂತ ಧರ್ಮವೆಂದು ಸಾಬೀತುಗೊಳಿಸಲಿಕ್ಕಾಗಿದೆ. ನನಗೆ ದೇವನಿಂದ ನೀಡಲ್ಪಟ್ಟಿರುವ ದೃಷ್ಟಾಂತಗಳ ಮುಂದೆ ಅನ್ಯ ಧರ್ಮೀಯರೂ ಸ್ವಧರ್ಮಕ್ಕೆ ಸೇರಿದ ಆಧ್ಯಾತ್ಮಿಕವಾಗಿ ಅಂಧರಾಗಿರುವವರೂ ಪರಾಜಿತರಾಗಿರುವರು. ಪವಿತ್ರ ಖುರ್‌ಆನ್ ತನ್ನ ಉಪದೇಶಗಳಿಂದಲೂ ಜಾಣ್ಮೆಯಿಂದ ಕೂಡಿದ ಜ್ಞಾನಗಳಿಂದಲೂ ತನ್ನ ಸೂಕ್ಷ್ಮ ಅಂಶಗಳಿಂದಲೂ ಪರಿ

ಪೂರ್ಣ ಸ್ಪಷ್ಟತೆಯ ಕಾರಣದಿಂದಲೂ ಒಂದು ಪವಾಡವೇ ಆಗಿದೆ ಎಂದು ನಾನು ಪ್ರತಿಯೊಬ್ಬ ವಿರೋಧಿಗೂ ತೋರಿಸಬಲ್ಲೆ. ಅದು ಮೂಸಾ ಪ್ರವಾದಿಯ ದೃಷ್ಟಾಂತಗಳಿಗಿಂತ ಮೇಲ್ಮೆ ಹೊಂದಿದುದೂ ಈಸಾ ಪ್ರವಾದಿಯ ದೃಷ್ಟಾಂತಗಳಿಗಿಂತ ನೂರಾರು ಪಾಲು ಹೆಚ್ಚಿನ ಮಹತ್ವ ಪಡೆದುದೂ ಆಗಿದೆ."

(ಅಂಜಾಮೆ ಆಥಮ್, ಪುಟ 46)

ಅವರು ಪುನಃ ಹೀಗೆ ಹೇಳಿರುತ್ತಾರೆ:

"ಅಂಧಕಾರಮಯವಾದ ಕಾಲದ ಪ್ರಕಾಶ ನಾನೇ ಆಗಿರುವೆನು. ನನ್ನನ್ನು ಅನುಸರಿಸುವವರು, ಅಂಧಕಾರದಲ್ಲಿ ಸಂಚರಿಸುವವರಿಗೆ ಶೈತಾನನು ಸಿದ್ಧಪಡಿಸಿಟ್ಟಿರುವ ಹಳ್ಳಗಳಿಂದಲೂ ಗುಂಡಿಗಳಿಂದಲೂ ರಕ್ಷಿಸಲ್ಪಡುವರು. ನನ್ನನ್ನು ದೇವನು ಕಳುಹಿಸಿರುವುದು – ನಾನು ಶಾಂತಿ ಮತ್ತು ಸಮಾಧಾನದಿಂದ ಪ್ರಪಂಚದಲ್ಲಿರುವವರನ್ನು ದೇವನ ಕಡೆಗೆ ಮಾರ್ಗದರ್ಶನ ನೀಡಲಿಕ್ಕಾಗಿ ಮತ್ತು ಇಸ್ಲಾಮಿನ ಉನ್ನತ ಸ್ವಭಾವ ಗುಣಗಳನ್ನು ಪುನಃ ಸ್ಥಾಪಿಸಲಿಕ್ಕಾಗಿದೆ. ಸತ್ಯಾನ್ವೇಷಿಗಳಿಗೆ ಸಮಾಧಾನವುಂಟಾಗಲಿಕ್ಕಾಗಿ ದೇವನು ನನಗೆ ದೈವಿಕ ದೃಷ್ಟಾಂತಗಳನ್ನೂ ಅನುಗ್ರಹಿಸಿರುವನು."

(ಮಸೀಹ್ ಹಿಂದುಸ್ಥಾನ್ ಮೇ. ಪುಟ 46)

ನಾನು ನನ್ನ ಈ ಭಾಷಣವನ್ನು ಅಹ್ಮದಿಯಾ ಸಂಘಟನೆಯ ಸ್ಥಾಪಕರ ಈ ಕೆಳಗಿನ ಉಲ್ಲೇಖನದೊಂದಿಗೆ ಮುಕ್ತಾಯಗೊಳಿಸುತ್ತೇನೆ. ಅವರು ಮಾನವ ವರ್ಗಕ್ಕೆ ಸಾರ್ವತ್ರಿಕ ಆಮಂತ್ರಣ ನೀಡುತ್ತಾ ಹೀಗೆನ್ನುತಾರೆ:

"ಆ ಸರ್ವೋತ್ಕೃಷ್ಟ ಶಕ್ತಿವಂತನ (ದೇವನ) ದರ್ಶನ ಮಾಡಿಸಬಲ್ಲ ದರ್ಪಣ ದೇವನು ಭಕ್ತನನ್ನು ಅಭಿಮುಖೀಕರಿಸಿ ನುಡಿಯುವ ಮಾತುಗಳಾಗಿವೆ.........ಯಾರ ಆತ್ಮದಲ್ಲಿ ಸತ್ಯವನ್ನು ತಿಳಿಯುವ ತೀವ್ರ ಆಕಾಂಕ್ಷೆಯಿದೆಯೋ ಆತನು ಎದ್ದೇಳಲಿ ಮತ್ತು ಅನ್ವೇಷಣೆ ನಡೆಸಲಿ. ನಾನು ಸತ್ಯವಾಗಿ ಹೇಳುತ್ತೇನೆ – ಆತ್ಮಗಳಲ್ಲಿ ಯಥಾರ್ಥವನ್ನು ತಿಳಿಯುವ ಬಗ್ಗೆ ಆಶೆಯುಂಟಾದರೆ, ಹೃದಯಗಳಲ್ಲಿ ಸತ್ಯವನ್ನು ತಿಳಿಯುವ ನೀರಡಿಕೆಯೂ ಇದ್ದರೆ, ಜನರು ಅದನ್ನು ಹುಡುಕಲಿ ಮತ್ತು ಆ ಮಾರ್ಗದ ಅನ್ವೇಷಣೆ ಮಾಡಲಿ. ಆದರೆ ಈ ಮಾರ್ಗ ಹೇಗೆ ತಾನೆ ತೆರೆಯಲ್ಪಡುವುದು ? ಈ ಪರದೆ ಹೇಗೆ ತಾನೆ ಸರಿಸಲ್ಪಡುವುದು ? ನಾನು ಎಲ್ಲಾ ಸತ್ಯಾನ್ವೇಷಿಗಳಿಗೆ ದೃಢಪಡಿಸಲಿಚ್ಛಿಸುತ್ತೇನೆ 'ಇಸ್ಲಾಮ್ ಮಾತ್ರ ಈ ಮಾರ್ಗದ ಬಗ್ಗೆ ಶುಭ ವಾರ್ತೆ ನೀಡುತ್ತದೆ. ದೇವನ ಸಂದೇಶ ವಾಣಿಗಳು ದೀರ್ಘ ಕಾಲದಿಂದ ಸ್ಥಗಿತಗೊಂಡಿವೆಯೆಂದು ಬೇರೆ ಧರ್ಮಾವಲಂಬಿಗಳು ವಾದಿಸುತ್ತಾರೆ. ನೀವು ದೃಢವಾಗಿ ಮನವರಿಕೆ ಮಾಡಿಕೊಳ್ಳಿರಿ – ಈ ಸ್ಥಾಗಿತ್ಯ ಅಲ್ಲಾಹನಿಂದ ಉಂಟಾದುದಲ್ಲ. ಆದರೆ ಈ ಅನುಗ್ರಹ ಲಭಿಸದ ಕಾರಣ ಮನುಷ್ಯನು ಯಾವುದಾದರೊಂದು ನೆಪ ಕಂಡು ಹಿಡಿಯುತ್ತಾನೆ. ನೀವು ದೃಢವಾಗಿ ಮನವರಿಕೆ ಮಾಡಿಕೊಳ್ಳಿರಿ – ನಮಗೆ ಕಣ್ಣುಗಳಿಲ್ಲದೆ ಕಾಣಲಿಕ್ಕೂ ಕಿವಿಗಳಿಲ್ಲದೆ ಕೇಳಲಿಕ್ಕೂ ನಾಲಗೆಗಳಿಲ್ಲದೆ ಮಾತಾಡಲಿಕ್ಕೂ ಸಾಧ್ಯವಾಗದ ಹಾಗೆಯೇ ಪವಿತ್ರ ಖುರ್‌ಆನಿನ ಸಹಾಯವಿಲ್ಲದೆ ಆ ಪ್ರಿಯಕರನೂ ಪ್ರೇಮಪಾತ್ರನೂ ಆದ ದೇವನ ಮುಖವನ್ನು ಕಾಣಲು ನಿಮಗೆ ಸಾಧ್ಯವಾಗಲಾರದು. ನಾನು ಯುವಕನಾಗಿದ್ದೆ; ಈಗ ವೃದ್ಧನಾಗಿರುವೆನು. ಈ ಪರಿಶುದ್ಧವಾದ ಚಿಲುಮೆಯಿಂದಲ್ಲದೆ ಆ ಸ್ಪಷ್ಟವಾದ ಜ್ಞಾನದ ಪಾತ್ರೆಯನ್ನು ಕುಡಿದ ಯಾರನ್ನೂ ನಾನು ಕಾಣಲಿಲ್ಲ."

(ಇಸ್ಲಾಮಿ ಉಸೂಲ್ ಕೀ ಫಿಲಾಸಫಿ, ಪುಟ 131, 132)

ಶಾಂತಿಯನ್ನು ಅನ್ವೇಷಿಸುವ ಚಂಚಲಚಿತ್ತನಾದ ಮನುಷ್ಯನಿಗೆ ಈ ಆಹ್ವಾನ ಜೀವದಾಯಕವಾಗಿದೆ.

ಭಾಷಾಂತರ: ಎಂ. ಉಬೈದುಲ್ಲಾ

★

With the Best Compliments of

# JUBILEE MOTORS

**BUNDER**

**MANGALORE**



*With Best Compliments From:-*

Phone: 6736 (Res.)
6699 (P. P)

# U. S. MAHIN KUNHI

*Prop :* **S. A. POULTRY FARM**

Keduvadka, P. O. Kabaka

**PUTTUR-574220. D. K.**

*Distributors for:*

*'GOLD MOHUR'* **Feeds**

# ಖುರ್‌ಆನಿನ ಪಾಠಗಳು *

★ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್
ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ

ಧಾರ್ಮಿಕ ರಂಗದಲ್ಲಿ ಉದ್ಭವಿಸುವ ಎಲ್ಲಾ ಸಮಸ್ಯೆಗಳಿಗೂ ತೃಪ್ತಿಕರವಾದ ಪರಿಹಾರವನ್ನು ನೀಡುತ್ತದೆ ಎಂಬುದು ಖುರ್‌ಆನಿಗಿರುವ ಒಂದು ವಿಶೇಷತೆಯಾಗಿದೆ. ಧರ್ಮದ ಕುರಿತು ಒತ್ತಿ ಹೇಳುತ್ತಾ ಅದರ ಸರಿಯಾದ ವೃತ್ತದೆಡೆಗೂ ಪ್ರಯೋಜನಗಳೆಡೆಗೂ ಖುರ್‌ಆನ್ ನಮ್ಮ ಗಮನವನ್ನು ಸೆಳೆಯುತ್ತದೆ. ಸೃಷ್ಟಿಯ ತತ್ವಶಾಸ್ತ್ರವನ್ನೂ ಅದಕ್ಕೆ ಸಂಬಂಧಿಸಿದ ಇತರ ಎಲ್ಲಾ ಸಂಗತಿಗಳನ್ನೂ ಅದು ವಿವರಿಸುತ್ತದೆ. ದೇವನು ಪ್ರಪಂಚವನ್ನು ಸೃಷ್ಟಿಸಿದ್ದು ಏಕೆಂದೂ ಮನುಷ್ಯನನ್ನು ಸೃಷ್ಟಿಸಿದ ಉದ್ದೇಶ ಏನೆಂದೂ ಆ ಉದ್ದೇಶಸಿದ್ಧಿಗಿರುವ ಮಾರ್ಗಗಳು ಯಾವುವೆಂದೂ ಅದು ಹೇಳಿಕೊಡುತ್ತದೆ. ದೇವರ ಅಸ್ತಿತ್ವ, ಅವನ ಗುಣಗಳು, ದೈವಿಕ ಗುಣಗಳು ಪ್ರಕಟಗೊಳ್ಳುವ ವಿಧಗಳು ಇವುಗಳ ಬಗ್ಗೆ ಖುರ್‌ಆನ್ ಬೆಳಕುಬೀರುತ್ತದೆ. ಮನುಷ್ಯನ ಸೃಷ್ಟಿಯ ಉದ್ದೇಶಕ್ಕೆ ಸಂಬಂಧಿಸಿದಂತೆ, ಪ್ರಪಂಚದ ಚಲನಕ್ಕೆ ಆಧಾರವಾದ ನಿಯಮಗಳನ್ನೇ ಅದು ಬೊಟ್ಟುಮಾಡುತ್ತದೆ. ಮನುಷ್ಯನ ಶಾರೀರಿಕ ವಿಕಾಸಕ್ಕೆ ದೇವರು ನಿಸರ್ಗ ನಿಯಮಗಳನ್ನು ಏರ್ಪಡಿಸಿದ್ದಾನೆಂದೂ ಆ ಮೂಲಕ ಮನುಷ್ಯನ ಶಾರೀರಿಕ ಮತ್ತು ಬೌದ್ಧಿಕ ಸ್ಥಿತಿಗತಿಗಳನ್ನು ನಿಯಂತ್ರಿಸುತ್ತಾನೆಂದೂ ದೇವದೂತ (ಮಲಕ್)ರ ಪ್ರವರ್ತನೆ ಮೂಲಕ ಈ ನಿಯಮಗಳನ್ನು ಅವನು ನಡೆಸುತ್ತಿದ್ದಾನೆಂದೂ ಅದು ಸೂಚಿಸುತ್ತದೆ. ಮನುಷ್ಯಾತ್ಮದ ಉತ್ಕರ್ಷಕ್ಕೆ ದೇವರು ಧರ್ಮಶಾಸ್ತ್ರಗಳನ್ನು ಪ್ರವಾದಿಗಳ ಮೂಲಕ ಬಹಿರಂಗಪಡಿಸಿದ್ದಾನೆ. ಕೆಲವೊಮ್ಮೆ ಈ ಧರ್ಮಶಾಸ್ತ್ರ ಒಳಗೊಂಡ ದೈವೀಪ್ರಕಾಶನಗಳು ಅದರ ಸ್ವಭಾವದಲ್ಲಿ ಸೀಮಿತವಾಗಿರಬಹುದು. ಆದರೆ, ಪರಿಪೂರ್ಣ ನಿಯಮ ಸಮುಚ್ಚಯಗಳಿಂದ ಕೂಡಿದ ಧರ್ಮಶಾಸ್ತ್ರವೂ ಇದೆ. ಕೆಲವು ಬಾರಿ ರೂಢಿಯಲ್ಲಿರುವ ಧರ್ಮಶಾಸ್ತ್ರಕ್ಕೆ ಮನುಷ್ಯನು ನೀಡಿದ ವಿಕೃತ ವ್ಯಾಖ್ಯಾನಗಳನ್ನು ಸರಿಪಡಿಸಲಿಕ್ಕಾಗಿ ದೈವೀ ಪ್ರಕಾಶನ ಉಂಟಾಗುತ್ತದೆ. ಆ ಮೂಲಕ ಅದರ ಪ್ರಾರಂಭದ ಪರಿಶುದ್ಧತೆ ಪುನಃ ಸಿದ್ಧಿಸುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ದೇವರು ವಿವಿಧ ದೌತ್ಯ ಕರ್ತವ್ಯಗಳ ಸಹಿತ ಪ್ರವಾದಿಗಳನ್ನು ನಿಯೋಜಿಸುತ್ತಾನೆ. ಕೆಲವರು ಧರ್ಮಶಾಸ್ತ್ರ ವಾಹಕರಾಗಿರುತ್ತಾರೆ. ಅವರ ಮೂಲಕ ಹೊಸ ವಿಧಿವಿಧಾನಗಳು ಆವಿಷ್ಕರಿಸಲ್ಪಡುತ್ತವೆ. ಬೇರೆ ಕೆಲವರು ಮುಂಚಿನ ಧರ್ಮವಿಧಿಗಳನ್ನು ಪರಿಷ್ಕರಿಸಲಿಕ್ಕೆ ಮಾತ್ರ ಇರುವವರಾಗಿರುತ್ತಾರೆ. ಮತ್ತೆ ಕೆಲವರು ಧರ್ಮಶಾಸ್ತ್ರದ ಕುರಿತಿರುವ ತಪ್ಪು ತಿಳುವಳಿಕೆಗಳನ್ನೂ ತಪ್ಪು ನಂಬಿಕೆಗಳನ್ನೂ ದೂರೀಕರಿಸಲಿಕ್ಕೆ ಮಾತ್ರ ನಿಯೋಜಿಸಲ್ಪಟ್ಟಿರುತ್ತಾರೆ. ಧರ್ಮಶಾಸ್ತ್ರವನ್ನು ಅನುಸರಿಸುವುದರ ಆವಶ್ಯಕತೆಯ ಬಗ್ಗೆಯೂ ಆ ಮೂಲಕ ಸಿದ್ಧಿಸುವ ಗುಣಗಳ ಬಗ್ಗೆಯೂ ಮಾತ್ರವಲ್ಲ, ಮನುಷ್ಯನ ಆಧ್ಯಾತ್ಮಿಕ ಪರಿವರ್ತನೆಯಲ್ಲಿ ಅದಕ್ಕಿರುವ ಪಾತ್ರದ ಕುರಿತು ಸಹ ಖುರ್‌ಆನ್ ವಿವರಿಸುತ್ತದೆ.

## ದೇವ ವಿಶ್ವಾಸ

ದೇವರು ಮತ್ತು ಅವನ ಗುಣಗಳ ಮಧ್ಯೆ ಇರುವ ವ್ಯತ್ಯಾಸವನ್ನು ಖುರ್‌ಆನ್ ಸ್ಪಷ್ಟಪಡಿಸುತ್ತದೆ. "ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು" (ಬೈಬಲ್ – ಯೋಹಾನ 1:1) ಎಂದು ಹೇಳಿದವರಿಗೆ ಉಂಟಾದ ಪ್ರಮಾದವನ್ನು ಆ ಮೂಲಕ ಮನಗಾಣಲು ಸಾಧ್ಯವಾಗುತ್ತದೆ. ಗುಣವು ಒಂದು ಸತ್ತೆಗೆ ಬದಲಿಯಾಗಿರುವುದಿಲ್ಲವೆಂದೂ ಗುಣ ಮತ್ತು ಸತ್ತೆ ಎರಡು ಸಹ ಬೇರೆ ಬೇರೆ ಎಂದೂ ಖುರ್‌ಆನ್ ಕಲಿಸುತ್ತದೆ.

ಮನುಷ್ಯನು ತನ್ನ ಕರ್ಮಮಾರ್ಗ ನಿರ್ಣಯಿಸುವುದರಲ್ಲಿ ಎಷ್ಟರ ಮಟ್ಟಿಗೆ ಸ್ವತಂತ್ರನೆಂದೂ ಎಷ್ಟರ

* **Introduction to the study of the Holy Quran** ಎಂಬ ಗ್ರಂಥದಿಂದ.

ಮಟ್ಟಿಗೆ ನಿರ್ಬಂಧಿತನೆಂದೂ ಖುರ್‌ಆನ್ ಹೇಳಿಕೊಡುತ್ತದೆ. ಮನುಷ್ಯನು ತನ್ನ ಕೃತ್ಯಗಳಿಗೆ ದೇವರೊಡನೆ ಉತ್ತರ ಹೇಳಲಿಕ್ಕೆ ಬದ್ಧನೆಂದೂ ಅವನು ಆತ್ಮಸಂಸ್ಕರಣಕ್ಕಿರುವ ಅನಂತವಾದ ಕರ್ಮಗಳ ಮೂಲಕ ಸಂಚರಿಸುವ ಸ್ವಾತಂತ್ರ್ಯ ಹೊಂದಿದವನೆಂದೂ ಖುರ್‌ಆನ್ ಕಲಿಸುತ್ತದೆ. ಇನ್ನೊಂದು ಕಡೆಯಲ್ಲಿ, ಅವನ ಕಾರ್ಯಕ್ಷೇತ್ರ ಪರಿಮಿತವಾಗಿದ್ದು, ಅದರ ಸೀಮೆಗಳನ್ನು ಉಲ್ಲಂಘಿಸಲು ಅವನಿಗೆ ಅಸಾಧ್ಯವೆಂದು ಕಾಣಬಹುದು. ಮನುಷ್ಯನು ಎಷ್ಟೇ ಶ್ರಮಿಸಿದರೂ ಅವನಿಗೆ ಜೀವನದ ಎಲ್ಲೆಗಳನ್ನು ದಾಟಿ ಹೊರಗೆ ಹೋಗಲಿಕ್ಕೆ ಸಾಧ್ಯವಿಲ್ಲ. ಅವನಿಗೆ, ಜಡ ವಸ್ತುವಾಗಿ ಪತನ ಹೊಂದಲಿಕ್ಕಾಗಲಿ ದೇವದೂತರ ಸೂಕ್ಷ್ಮಾವಸ್ಥೆಗೆ ಏರಲಿಕ್ಕಾಗಲಿ ಅಸಾಧ್ಯ. ಆದರೆ ಅವನು ತನ್ನ ಕಾರ್ಯಕ್ಷೇತ್ರದೊಳಗೆ ವರ್ತಿಸಲು ಹೆಚ್ಚು ಶಕ್ತಿಯುಳ್ಳವನೂ ನಿರಂತರವಾದ ಪ್ರಗತಿ ಮತ್ತು ಉನ್ನತಿಯನ್ನು ಗಳಿಸಲು ಸಾಮರ್ಥ್ಯ ಉಳ್ಳವನೂ ಆಗಿದ್ದಾನೆ.

ಖುರ್‌ಆನ್, ದೇವರಲ್ಲಿ ನಂಬಿಕೆಯಿಡುವುದರ ಆವಶ್ಯಕತೆಯನ್ನು ವಿವರಿಸಿ ದೇವಾಸ್ತಿತ್ವದ ಕುರಿತುಳ್ಳ ಪುರಾವೆಗಳೆಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಅಂಧಕಾರದ ಕಾಲಘಟ್ಟದಲ್ಲಿ ದೇವರು ದೈವೀಪ್ರಕಾಶನಗಳ ಮೂಲಕ ತನ್ನ ವಚನಾಮೃತಗಳನ್ನು ಅನುಗ್ರಹಿಸುತ್ತಾನೆಂದೂ ಅವನ ಶಕ್ತಿ ಪ್ರತಾಪಗಳನ್ನು ಅಸಾಧಾರಣ ಸೂಚಕಕಾರ್ಯಗಳ ಮೂಲಕ ಪ್ರಕಟಗೊಳಿಸುತ್ತಾನೆಂದೂ ಹಾಗೆ ಅವನ ಅಸ್ತಿತ್ವದ ಬಗ್ಗೆ ನಿರಾಕರಿಸಲಾಗದ ಪುರಾವೆಗಳನ್ನು ನೀಡುತ್ತಾನೆಂದೂ ಖುರ್‌ಆನ್ ಒತ್ತಿ ಹೇಳುತ್ತವೆ. ಮನುಷ್ಯನ ಹೃದಯದಲ್ಲಿ ದೇವಾಸ್ತಿತ್ವವನ್ನು ದೃಢಪಡಿಸಲು ಪ್ರವಾದಿಗಳೂ ಅವರನ್ನು ಪೂರ್ಣವಾಗಿ ಅನುಸರಿಸುವವರೂ ಲೋಕಕ್ಕೆ ಅತ್ಯಗತ್ಯ. ದೇವನು ಪ್ರವಾದಿಗಳ ಮತ್ತವರ ಸರಿಯಾದ ಅನುಚರರ ದರ್ಪಣಗಳ ಮೂಲಕ ಅವನ ಮುಖವನ್ನು ತೋರಿಸಿಕೊಳ್ಳುತ್ತಿರಲಿಲ್ಲವಾಗಿದ್ದರೆ ಲೋಕವು ಸಂದೇಹ-ಸಂಶಯಗಳ ಪಾತಾಳಕ್ಕೆ ತಳ್ಳಲ್ಪಟ್ಟು ದೇವರೊಡನಿರುವ ದೃಢ ವಿಶ್ವಾಸ ಅಪ್ರತ್ಯಕ್ಷವಾಗುತ್ತಿತ್ತು.

## ದೈವೀಪ್ರಕಾಶನಗಳು

ಜಗತ್ತು ಬಾಕಿಯಿರುವ ಕಾಲದ ವರೆಗೆ ದಿವ್ಯ ದರ್ಶನದಿಂದಲೂ ದಿವ್ಯವಾಣಿಯಿಂದಲೂ ಅನುಗ್ರಹೀತರಾದ ಮಹಾತ್ಮರುಗಳು ಪ್ರತ್ಯಕ್ಷರಾಗುತ್ತಿಲಿರಬೇಕಾಗುತ್ತದೆ. ಈ ಕ್ರಮ ಎಂದಿಗೂ ಕೊನೆಗೊಳ್ಳಲಾರದು. ಲೋಕಾರಂಭ ಮೊದಲ್ಗೊಂಡು ಯೇಸುಕ್ರಿಸ್ತರ ಕಾಲದ ವರೆಗೂ, ಯೇಸುಕ್ರಿಸ್ತರ ಕಾಲದಿಂದ ಮುಹಮ್ಮದ್ ಪೈಗಂಬರ್ (ಸ)ರ ಕಾಲದ ವರೆಗೂ ಅಲ್ಲಾಹನು ಮಾತನಾಡುತ್ತಿದ್ದನು. ಅವನು ಯಾವ ರೀತಿ ಸೃಷ್ಟಿಕರ್ತೃತ್ವವನ್ನು ನಿರ್ವಹಿಸಿಕೊಂಡು ಬಂದದ್ದು, ಯಾವ ರೀತಿ ಅವನು ಆಲಿಸಿಕೊಂಡು ಬಂದದ್ದು, ಯಾವ ರೀತಿ ಕಾಣುತ್ತಾ ಬಂದದ್ದು, ಅದೇ ರೀತಿಯಲ್ಲೇ ಮುಹಮ್ಮದ್ ಪೈಗಂಬರರ ನಂತರ ಸಹ ಸೃಷ್ಟಿಗಳ ಅಂತ್ಯದ ವರೆಗೂ ತನ್ನ ವರಿಷ್ಠದಾಸರೊಡನೆ ಮಾತಾಡುತ್ತಲೇ ಇರುವನು. ಹಾಗೆ ಅವನು ತನ್ನ ಇರುವಿಕೆಯನ್ನು ಲೋಕಕ್ಕೆ ಬಹಿರಂಗ ಪಡಿಸುವನು. ಯೇಸುಕ್ರಿಸ್ತರ ಮತ್ತು ಮುಹಮ್ಮದ್ ಪೈಗಂಬರರ ಕಾಲದ ವರೆಗೆ ಅಲ್ಲಾಹನು ಮಾತನಾಡುತ್ತಿದ್ದನೆಂದೂ ಅದರ ಬಳಿಕ ಅವನು ಮೂಕನಾದನೆಂದೂ ಹೇಳಲಾಗದು. ಯೇಸು ಕ್ರಿಸ್ತರ ಮತ್ತು ಮುಹಮ್ಮದ್ ಪೈಗಂಬರರ ಕಾಲದ ವರೆಗೆ ಅಲ್ಲಾಹನು ಕಾಣುತ್ತಿದ್ದನೆಂದೂ ಅದರ ನಂತರ ಅವನು ಅಂಧನಾಗಿಬಿಟ್ಟನೆಂದಾಗಲಿ, ಅಷ್ಟರ ವರೆಗೆ ಆವನು ಸೃಷ್ಟಿಕರ್ಮವನ್ನು ನಡೆಸುತ್ತಿದ್ದರೂ ನಂತರ ಅದು ಸ್ಥಗಿತಗೊಂಡಿತೆಂದಾಗಲಿ, ಅಷ್ಟರ ವರೆಗೆ ಅವನು ಸರ್ವಶಕ್ತನಾಗಿದ್ದರೂ ನಂತರ ಆ ಸರ್ವಶಕ್ತಿತ್ವ ನಷ್ಟವಾಯಿತೆಂದಾಗಲಿ ಹೇಳುವುದು ಅವಿವೇಕತನವೂ ಅರ್ಥರಹಿತವೂ ಆಗಿರುವ ರೀತಿಯಲ್ಲೇ ದೇವರು ಒಂದು ನಿರ್ದಿಷ್ಟ ಕಾಲಘಟ್ಟದ ವರೆಗೆ ಮಾತನಾಡುತ್ತಿದ್ದನೆಂದೂ ಅದರ ನಂತರ ಮಾತು ಎಂದೆಂದಿಗೂ ಸ್ಥಗಿತಗೊಂಡಿತೆಂದೂ ಹೇಳುವುದು ಸಹ ಅವಿವೇಕತನವೂ ಅರ್ಥಶೂನ್ಯವೂ ಆಗಿದೆ. ವಾಸ್ತವಾಂಶವೇನೆಂದರೆ, ಈ ಎಲ್ಲಾ ದೈವಿಕ ಗುಣಗಳು ಪರಿಪೂರ್ಣವೂ ಶಾಶ್ವತವೂ ಆಗಿವೆ. ಆದರೆ ಕ್ರೈಸ್ತರು, ಯಹೂದಿಯರು, ಝೊರಾಸ್ಟ್ರಿಯನರು ಮಾತ್ರವಲ್ಲ ಮುಸ್ಲಿಮರೆಂದು ಹೇಳಿಕೊಳ್ಳುವವರಲ್ಲಿ ಹೆಚ್ಚಿನವರು ಕೂಡ ನಂಬುವುದು, ಝೊರಾಸ್ಟರ್‌ರ ನಂತರ, ಅಥವಾ ಇಸ್ರಾಯೀಲ್ ಪ್ರವಾದಿಗಳ ನಂತರ, ಅಥವಾ ಯೇಸುಕ್ರಿಸ್ತರ ನಂತರ, ಅಥವಾ ಮುಹಮ್ಮದ್ ಪೈಗಂಬರರ ನಂತರ ದೈವೀಪ್ರಕಾಶನಗಳು ಎಂದೆಂದಿಗೂ ಕೊನೆಗೊಂಡಿತು ಎಂದಾಗಿದೆ! ಖುರ್‌ಆನ್ ಈ ತತ್ವವನ್ನು ತಳ್ಳಿಹಾಕುತ್ತದೆ. ಜೀವಂತ ದೇವನಲ್ಲಿ ನಂಬಿಕೆಯಿಡಲು ಖುರ್‌ಆನ್ ಅಗತ್ಯಪಡಿಸುತ್ತದೆ.

ದೇವರು ಪೂರ್ವಕಾಲದಲ್ಲಿ ಮಾತನಾಡತ್ತಿದ್ದ ಹಾಗೆಯೇ ಇನ್ನು ಮುಂದೆಯೂ ತನ್ನ ವರಿಷ್ಠ ದಾಸರೊಡನೆ ಮತ್ತು ಸಾತ್ವಿಕ ಜನರೊಡನೆ ಮಾತನಾಡುತ್ತಲೇ ಇರುವನೆಂಬ ಯಥಾರ್ಥತೆಯನ್ನು ಅವಕ್ಕೆ ಪುರಾವೆಯಾಗಿಯೂ ನೀಡುತ್ತದೆ. ಖುರ್‌ಆನ್ ಕಲಿಸುವ ಈ ತತ್ವದ ಸತ್ಯತೆ ಈ ಕಾಲದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ವಾಗ್ದತ್ತ ಮಸೀಹರ ಆವಿರ್ಭಾವದಿಂದ ದೃಢೀಕರಿಸಲ್ಪಟ್ಟಿದೆ. ಆ ಮಹಾಪುರುಷರಿಗೂ ಅವರ ಶ್ರೇಷ್ಠ ಅನುಯಾಯಿಗಳಿಗೂ ಲಭ್ಯವಾದ ದೈವೀಪ್ರಕಾಶನ ದೇವರಿಗೆ ಅವನ ವಾಕ್ಶಕ್ತಿ ನಷ್ಟಗೊಂಡಿದೆಯೆಂದು ಬಹಿರಂಗವಾಗಿ ಹೇಳುವುದಿಲ್ಲವಾದರೂ ತಮ್ಮ ತಪ್ಪಾದ ನಂಬಿಕೆ ಮೂಲಕ ಪರೋಕ್ಷವಾಗಿ ಹಾಗೆ ಸಿದ್ಧಾಂತಿಸುವವರಿಗೆ ವಿರುದ್ಧವಾಗಿ ಒಂದು ಪಂಥಾಹ್ವಾನವಾಗಿ ನಿಲ್ಲುತ್ತದೆ.

## ಪ್ರವಾದಿತ್ವ

ದೈವೀಪ್ರಕಾಶನಗಳು ಒಂದು ನಿರ್ದಿಷ್ಟ ಜನತೆಗೆ ಮಾತ್ರವುಳ್ಳದ್ದಲ್ಲವೆಂದೂ ದೇವರು ಎಲ್ಲಾ ಜನತೆಗಳಲ್ಲೂ ಪ್ರವಾದಿಗಳನ್ನು ನಿಯೋಜಿಸಿರುವನೆಂದೂ ಖುರ್‌ಆನ್ ಕಲಿಸುತ್ತದೆ. ಒಬ್ಬರ ನಂತರ ಮತ್ತೊಬ್ಬರನ್ನು ಪ್ರವಾದಿಗಳಾಗಿ ಕಳುಹಿಸಿದ್ದು ಏಕೆಂದೂ ಮಾನವ ಚರಿತ್ರೆಯ ಆರಂಭ ಘಟ್ಟದಲ್ಲೇ ಪರಿಪೂರ್ಣವಾದ ಧರ್ಮಶಾಸ್ತ್ರ ಗ್ರಂಥವನ್ನು ದೇವರು ಅನುಗ್ರಹಿಸದೆ ಇದ್ದುದು ಏಕೆಂದೂ ಅದು ವಿವರಿಸುತ್ತದೆ. ದೇವೇಕತ್ವದ ಕುರಿತು ಅದು ವಿಶದವಾಗಿ ಪ್ರತಿಪಾದಿಸುತ್ತಾ ನಿರಾಕರಿಸಲಾಗದ ಪುರಾವೆಗಳನ್ನು ಮುಂದಿರಿಸುತ್ತದೆ. ಬಹುದೈವ ವಿಶ್ವಾಸ ಹೇಗೆ ಅವೈಚಾರಿಕವೆಂದು ಅದು ಸಾಬೀತುಪಡಿಸುತ್ತದೆ. ಮನುಷ್ಯನ ಆಧ್ಯಾತ್ಮಿಕ ಏಳಿಗೆಗೆ ದೇವೇಕತ್ವ ನಂಬಿಕೆ ಯಾವ ರೀತಿ ಸಹಾಯಕವಾಗುತ್ತದೆಂದು ಸಹ ಖುರ್‌ಆನ್ ವಿವರಿಸುತ್ತದೆ.

ಪ್ರವಾದಿತ್ವದ ಬಗ್ಗೆ ಖುರ್‌ಆನ್ ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಪ್ರವಾದಿ (ನಬಿ) ಎಂಬ ಪದ ಹಾಗೂ ಅದರ ಸದೃಶಪದಗಳು ಧರ್ಮ ಗ್ರಂಥಗಳಲ್ಲಿ ಧಾರಾಳವಾಗಿ ಪ್ರಯೋಗಿಸಲ್ಪಟ್ಟುದಾಗಿ ಕಾಣಬಹುದು. ಆದರೆ ಪ್ರವಾದಿತ್ವ ಎಂಬುದರಿಂದ ಉದ್ದೇಶಿಸಲ್ಪಟ್ಟುದು ಏನೆಂದು ಅವುಗಳ ಪೈಕಿ ಯಾವುದೂ ಸ್ಪಷ್ಟಪಡಿಸಿಕೊಡುವುದಿಲ್ಲ. ಪ್ರವಾದಿ ಎಂಬ ಪದದ ಲಕ್ಷಣ ನಿರೂಪಣೆಯನ್ನು ಖುರ್‌ಆನ್ ಮಾತ್ರ ವ್ಯಕ್ತಪಡಿಸಿಕೊಡುತ್ತದೆ. ಅಷ್ಟೇ ಅಲ್ಲ, ವಿವಿಧ ತರದ ಪ್ರವಾದಿತ್ವವನ್ನು ಅದು ಪ್ರತ್ಯೇಕಿಸಿ ತೋರಿಸಿಕೊಡುತ್ತದೆ. ಯಾರನ್ನು ಪ್ರವಾದಿಯೆಂದು ಹೇಳಬೇಕು ? ಯಾರನ್ನು ಪ್ರವಾದಿಯೆಂದು ಹೇಳಬಾರದು ? ಪ್ರವಾದಿ ಎಂಬ ಪದದ ಪರಿಭಾಷೆ ಏನು? ಪ್ರವಾದಿಗಳಲ್ಲಿ ಎಷ್ಟು ವಿಧ ? ಪ್ರವಾದಿ ಮತ್ತು ಪ್ರವಾದಿಯಲ್ಲದವರ ಮಧ್ಯೆ ವ್ಯತ್ಯಾಸವೇನು? ಪ್ರವಾದಿ ನಿಯೋಜಿಸಲ್ಪಡುವ ಉದ್ದೇಶವೇನು ? ಪ್ರವಾದಿ ಮತ್ತು ಪ್ರವಾದಿಯ ಅನುಚರವೃಂದದೊಳಗೆ ಸಂಬಂಧ ಹೇಗಿರಬೇಕು? ಪ್ರವಾದಿ ಮತ್ತು ಅವರನ್ನು ನಂಬದವರ ಮಧ್ಯೆ ಸಂಬಂಧ ಹೇಗಿರಬೇಕು? ಪ್ರವಾದಿಗಳ ಹಕ್ಕುಗಳು ಯಾವುವು? ಪ್ರವಾದಿಯ ಪಾತ್ರವು ದೇವರು ಮತ್ತು ಮನುಷ್ಯನ ಮಧ್ಯೆ ಒಂದು ತಡೆಗೋಡೆಯಂತಿರುತ್ತದೋ ಅಥವಾ ಸಹಾಯಕ ಹಾಗೂ ಮಾರ್ಗದರ್ಶಕದಂತಿರುತ್ತದೋ? ಎಂಬಿತ್ಯಾದಿ ಪ್ರಶ್ನೆಗಳಿಗೆಲ್ಲಾ ಖುರ್‌ಆನ್ ಉತ್ತರ ನೀಡುತ್ತದೆ,

## ದೇವದೂತರು ಮತ್ತು ಸೈತಾನ

ದೇವದೂತ (ಮಲಕ್)ರ ಕುರಿತು, ಅವರ ಚಟುವಟಿಕೆಗಳ ಕುರಿತು ಮತ್ತು ಅವರನ್ನು ಸೃಷ್ಟಿಸಿದ ಉದ್ದೇಶಗಳ ಕುರಿತು ಸಹ ಖುರ್‌ಆನ್ ವಿವರಿಸುತ್ತದೆ.

ಸೈತಾನ್ ಎಂದರೆ ಏನೆಂದೂ ಸೈತಾನ್ ಮತ್ತು ಮನುಷ್ಯನ ಸಂಬಂಧವೇನು? ಸೈತಾನನ ಪ್ರಲೋಭನೆಯಿಂದ ಮನುಷ್ಯನು ಸ್ವಯಂ ಹೇಗೆ ರಕ್ಷೆ ಹೊಂದಬಹುದು? ಒಂದು ನಿರ್ದಿಷ್ಟ ಕರ್ಮಮಾರ್ಗವನ್ನು ಕೈಗೊಳ್ಳಲು ಮನುಷ್ಯನನ್ನು ನಿರ್ಬಂಧಿಸಲು ಸೈತಾನನಿಗೆ ಶಕ್ತಿ ಇದೆಯೇ ? ಎಂಬಿತ್ಯಾದಿಗಳನ್ನು ಖುರ್‌ಆನ್ ವಿಶದೀಕರಿಸುತ್ತದೆ. ದೇವದೂತರು ಮನುಷ್ಯನ ಹೃದಯದಲ್ಲಿ ಒಳಿತಿಗೆ ಪ್ರೇರಣೆಯನ್ನು ನೀಡುವಂತೆ ಸೈತಾನ ಮನುಷ್ಯನ ಹೃದಯದಲ್ಲಿ ಕೆಡುಕಿಗೆ ಪ್ರೇರಣೆ ನೀಡುತ್ತಿರುತ್ತಾನೆ. ಈ ಎರಡು ಶಕ್ತಿಗಳು ಸಹ ಮನುಷ್ಯನಲ್ಲಿ ಕ್ರಿಯಾಶೀಲವಾಗಿರುವಾಗ ದೇವದೂತರ ಸತ್ಪ್ರೇರಣೆಗಳನ್ನು ಅವನು ಸ್ವೀಕರಿಸಬಹುದು ಯಾ ನಿರಾಕರಿಸಬಹುದು. ಅದೇ ರೀತಿ ಸೈತಾನನ ದುಷ್ಪ್ರೇರಣೆಗಳನ್ನು ನಿರಾಕರಿಸಬಹುದು ಅಥವಾ ಸ್ವೀಕರಿಸಬಹುದು. ಮನುಷ್ಯನನ್ನು ಪರಿಪೂರ್ಣತೆಗೆ ತಲಪಿಸಲಿಕ್ಕೋಸ್ಕರ ಈ

ಎರಡು ವಿರುದ್ಧ ಶಕ್ತಿಗಳನ್ನು ದೇವರು ಸೃಷ್ಟಿಸಿದ್ದಾನೆ. ಮಾತ್ರವಲ್ಲ, ಇದು ಮನುಷ್ಯನ ಜೀವಿತಕ್ಕೆ ನೈಜತೆಯನ್ನು ನೀಡುವ ಒಂದು ಮಾರ್ಗವೂ ಆಗಿದೆ. ಸೈತಾನನ ದುಷ್ಪ್ರೇರಣೆ ಮತ್ತು ದೇವದೂತರ ಸತ್ಪ್ರೇರಣೆ ಇಲ್ಲವಾದರೆ ಮನುಷ್ಯನು ಬಹುಮಾನಕ್ಕೆ ಅರ್ಹ ಅಥವಾ ಶಿಕ್ಷೆಗೆ ಗುರಿ ಆಗಲಾರ. ಸೈತಾನನ ದುಷ್ಟ ಪ್ರೇರಣೆಗಳ ವಿರುದ್ಧ ಒಬ್ಬ ಮನುಷ್ಯನ ಹೋರಾಟ ಅವನನ್ನು ಪುರಸ್ಕಾರಕ್ಕೆ ಅರ್ಹನನ್ನಾಗಿ ಮಾಡಿ ಅಭಿವೃದ್ಧಿಯ ದಾರಿಗಳನ್ನು ಅವನಿಗೆ ತೆರೆದು ಕೊಡುತ್ತದೆ. ದೇವದೂತರ ಸತ್ಪ್ರೇರಣೆಗಳನ್ನು ಅಲಕ್ಷ್ಯ ಮಾಡಿ ಅವುಗಳಿಂದ ಮುಖ ತಿರುಗಿಸುವುದಾದರೆ ಮನುಷ್ಯನು ಶಿಕ್ಷೆಗೆ ಈಡಾಗುತ್ತಾನೆ.

## ಪ್ರಾರ್ಥನೆ ಮತ್ತು ಪಶ್ಚಾತ್ತಾಪ

ಪ್ರಾರ್ಥನೆ ಎಂದರೆ ಏನೆಂದೂ ಹೇಗೆ ಪ್ರಾರ್ಥಿಸಬೇಕೆಂದೂ ಯಾವ ಸಂದರ್ಭಗಳಲ್ಲಿ ಪ್ರಾರ್ಥನೆ ಸ್ವೀಕರಿಸಲ್ಪಡುತ್ತದೆಂದೂ ಯಾವ ತರದ ಪ್ರಾರ್ಥನೆ ಸ್ವೀಕರಿಸಲ್ಪಡುವುದಿಲ್ಲವೆಂದೂ ಪ್ರಾರ್ಥನೆಗಳು ಫಲ ನೀಡಲು ನಿಬಂಧನೆಗಳು ಯಾವುವೆಂದೂ ಖುರ್‌ಆನ್ ಕಲಿಸುತ್ತದೆ.

ಒಳಿತು ಕೆಡುಕುಗಳ ಬಗ್ಗೆ ಸಹ ಅದು ಹೇಳಿಕೊಡುತ್ತದೆ. ಒಳಿತೆಂದರೆ ಏನೆಂದೂ ಕೆಡುಕೆಂದರೆ ಏನೆಂದೂ ಅವುಗಳ ಗಡಿಗಳು ಎಲ್ಲಿ ಸಂದಿಸುತ್ತವೆಂದೂ ಅಪ್ಪಟ ಒಳಿತು ಮತ್ತು ಅಪ್ಪಟ ಕೆಡುಕು ಯಾವುವೆಂದೂ ಸಾಪೇಕ್ಷ ಒಳಿತು, ಸಾಪೇಕ್ಷ ಕೆಡುಕು ಯಾವುವೆಂದೂ ಖುರ್‌ಆನ್ ವಿವರಿಸಿಕೊಟ್ಟು, ಉತ್ಕೃಷ್ಟವಾದ ನೈತಿಕತೆ ಮತ್ತು ಸಾತ್ವಿಕತೆ ಹೇಗೆ ಸಿದ್ಧಿಸುತ್ತದೆಂದೂ ಕೆಡುಕನ್ನು ಹೇಗೆ ದೂರೀಕರಿಸಬಹುದೆಂದೂ ಖುರ್‌ಆನ್ ವ್ಯಕ್ತಪಡಿಸುತ್ತದೆ, ಒಳಿತು ಮತ್ತು ಕೆಡುಕುಗಳ ಉತ್ಪತ್ತಿ ಸ್ಥಾನದೆಡೆಗೆ ಅದು ಬೆಳಕು ಚೆಲ್ಲಿ ಕೆಡುಕಿನಿಂದ ಹೇಗೆ ಮುಕ್ತಿಹೊಂದಿ ಶುದ್ಧನಾಗಬಹುದೆಂದು ಕಲಿಸಿಕೊಡುತ್ತದೆ.

ಪಶ್ಚಾತ್ತಾಪದ ಕುರಿತು ಸಹ ಖುರ್‌ಆನ್ ಪ್ರತಿಪಾದಿಸುತ್ತದೆ. ಯಥಾರ್ಥ ಪಶ್ಚಾತ್ತಾಪದ ಅರ್ಥವೇನೆಂದೂ ಅದರ ಮೂಲಕ ಲಭ್ಯವಾಗುವ ಗುಣವೇನೆಂದೂ ನಿಜವಾದ ಪಶ್ಚಾತ್ತಾಪದ ನಿಬಂಧನೆಗಳು ಯಾವುವೆಂದೂ ಯಾವ ಸಂದರ್ಭದಲ್ಲಿ ಪಶ್ಚಾತ್ತಾಪಪಡಬೇಕೆಂದೂ ಅದು ವಿಶದೀಕರಿಸುತ್ತದೆ. ಶಿಕ್ಷೆ ಮತ್ತು ರಕ್ಷೆಯ ಮೂಲ ತತ್ವವೇನೆಂದೂ ಯಾವ ಸಂದರ್ಭಗಳಲ್ಲಿ ಶಿಕ್ಷೆ ನೀಡಲಾಗುತ್ತದೆಂದೂ ಅಪರಾಧ ಮತ್ತು ಶಿಕ್ಷೆಯ ಅಳತೆಗೋಲು ಏನೆಂದೂ ಖುರ್‌ಆನ್ ಸ್ಪಷ್ಟಪಡಿಸುತ್ತದೆ.

## ಮೋಕ್ಷ

ಮೋಕ್ಷ ಎಂದರೇನೆಂದೂ ಅದು ಹೇಗೆ ಪ್ರಾಪ್ತಿಯಾಗುವುದೆಂದೂ ಖುರ್‌ಆನ್ ವಿವರಿಸಿಕೊಡುತ್ತದೆ. ಮೋಕ್ಷ ಮೂರು ವಿಧ 1. ಪರಿಪೂರ್ಣ 2. ಅಪರಿಪೂರ್ಣ 3. ತಡೆದಿಟ್ಟದ್ದು. ಪರಿಪೂರ್ಣ ಮೋಕ್ಷವನ್ನು ಈ ಲೋಕದಲ್ಲೇ ಗಳಿಸಲು ಸಾಧ್ಯ. ಈ ಲೋಕದಲ್ಲಿ ಅಪೂರ್ಣ ಮೋಕ್ಷವನ್ನು ಗಳಿಸುವವರು ಮರಣಾನಂತರ ಮೋಕ್ಷ ಮಾರ್ಗವನ್ನು ಕ್ರಮೇಣ ಪೂರ್ಣಗೊಳಿಸುವರು. ನರಕದ ಶಿಕ್ಷೆಯನ್ನು ಅನುಭವಿಸಿದ ನಂತರ ಮಾತ್ರವೇ ತಡೆಹಿಡಿದ ಮೋಕ್ಷವನ್ನು ಪಡೆಯಲು ಸಾಧ್ಯ. ಕೊನೆಯಲ್ಲಿ ಹೇಳಿದ ಮೋಕ್ಷ ಮಾರ್ಗಕ್ಕೆ ಸಂಬಂಧಿಸಿದಂತೆ ಇಸ್ಲಾಂ ಮತ್ತು ಕ್ರೈಸ್ತ ಧರ್ಮ ಪರಸ್ಪರ ಒಂದು ಸಂಗತಿಯಲ್ಲಿ ಮಾತ್ರ ಸಾಮ್ಯತೆ ಇದ್ದರೂ ಮೂಲಭೂತವಾಗಿ ವ್ಯತ್ಯಾಸವಿದೆ. ಈ ಮೋಕ್ಷಮಾರ್ಗ ಕೂಡ ಕ್ರೈಸ್ತ ಧರ್ಮದ ತತ್ವಗಳಲ್ಲಿ ದೃಢವಾಗಿ ನಂಬುವವರಿಗೆ ಮಾತ್ರ – ಅವರು ಈ ಲೋಕದಲ್ಲಿ ಪೂರ್ಣ ಮೋಕ್ಷವನ್ನು ಗಳಿಸಲು ಅಸಮರ್ಥರಾಗಿದ್ದರೆ – ಪ್ರಾಪ್ತವಾಗುವುದೆಂದು ಕ್ರೈಸ್ತ ಧರ್ಮ ಕಲಿಸುತ್ತದೆ. ನರಕಶಿಕ್ಷೆಯ ಒಂದು ಹಂತವನ್ನು ದಾಟಿಹೋದ ಬಳಿಕ ಇವರು ಪೂರ್ಣಮೋಕ್ಷವನ್ನು ಪಡೆಯುವರು. ಆದರೆ, ಪೂರ್ಣಮೋಕ್ಷ ಪ್ರಾಪ್ತವಾಗಬೇಕೆಂಬ ಉದ್ದೇಶದಿಂದ ಪ್ರತಿಯೊಬ್ಬ ಮನುಷ್ಯನೂ ಸೃಷ್ಟಿಸಲ್ಪಟ್ಟಿರುವನೆಂಬುದು ಇಸ್ಲಾಂ ಧರ್ಮದ ಪಾಠವಾಗಿದೆ. ಅತ್ಯಂತ ಕಠಿಣ ಅವಿಶ್ವಾಸಿ ಅಥವಾ ಅಪರಾಧಿ ಸಹ ಕೆಲವು ಪರಿಷ್ಕರಣ ಕ್ರಮಗಳಿಗೆ ಒಳಗಾದ ನಂತರ – ನರಕಶಿಕ್ಷೆ ಅದರಲ್ಲಿ ಒಂದು ಬಗೆ – ಕೊನೆಗೆ ಮೋಕ್ಷವನ್ನು ಗಳಿಸಿ ಸ್ವರ್ಗದಲ್ಲಿ ಪ್ರವೇಶಿಸಲ್ಪಡುವನು. ಈ ವಿಚಾರದಲ್ಲಿ, ಕರ್ಮಗಳ ತುಲನದ ಬಗ್ಗೆ ಖುರ್‌ಆನ್ ಒತ್ತಿ ಹೇಳುತ್ತದೆ. ಒಬ್ಬನ ಜೀವನದಲ್ಲಿ ಅವನು ಮಾಡಿದ ಸತ್ಕರ್ಮದ ತೂಕ ಹೆಚ್ಚಾಗಿದ್ದರೆ ಅದು ಮೋಕ್ಷವನ್ನು ಗಳಿಸುವರೆ ಅವನ ಪ್ರಾಮಾಣಿಕ ಶ್ರಮಕ್ಕೆ ಪುರಾವೆಯಾಗುತ್ತದೆ. ಒಂದು ಗುರಿ ಸಾಧಿಸುವ ಪ್ರಯತ್ನದ ಮಧ್ಯೆ ಮೃತ್ಯುವನ್ನಪ್ಪುವ ಒಬ್ಬನು, ಜಯಗಳಿಸುವ ಮೊದಲೇ ಮರಣಕ್ಕೀ

ಡಾಗುವ ಒಬ್ಬ ಭಟನ ಹಾಗೆಂದೂ ಅದು ಕಲಿಸುತ್ತದೆ. ಮರಣವು ಪೂರ್ಣವಾಗಿಯೂ ದೇವರ ನಿಯಂತ್ರಣ ದಲ್ಲಿದೆ. ಯುದ್ಧರಂಗದಲ್ಲಿರುವ ಓರ್ವ ಯೋಧನಿಗೆ ಜಯಸಿದ್ಧಿಸುವ ವರೆಗೆ ತನ್ನ ಮರಣವನ್ನು ತಡೆದಿಡಲಿಕ್ಕೆ ಅಸಾಧ್ಯ. ಅದೇ ಪ್ರಕಾರ, ಶಾಶ್ವತ ಮುಕ್ತಿಗಾಗಿ ಹೃತ್ಪೂರ್ವಕವಾಗಿ ಹೋರಾಡುವವನಿಗೆ ಸಹ ಹೋರಾಟದಲ್ಲಿ ಜಯ ಸಾಧಿಸುವ ತನಕ ತನ್ನ ಮರಣವನ್ನು ಮುಂದಕ್ಕೆ ಹಾಕಲು ಸಾಧ್ಯವಿಲ್ಲ. ಈ ಪ್ರಯತ್ನಗಳ ಮಧ್ಯೆ ಆತನು ಮರಣ ಹೊಂದಿದರೆ, ಆತನು ದೇವಾನುಗ್ರಹಕ್ಕೂ ಕಾರುಣ್ಯಕ್ಕೂ ಅರ್ಹನಾಗುತ್ತಾನೆ; ದೇವರ ಕ್ರೋಧಕ್ಕೂ ಶಿಕ್ಷೆಗೂ ಗುರಿಯಾಗುವುದಿಲ್ಲ. ಜಯುಗಳಿಸುವುದಕ್ಕೆ ಮುಂಚಿತವಾಗಿ ಕೊಲ್ಲಲ್ಪಡುವ ಸೈನಿಕರನ್ನು ಯಾವ ರಾಷ್ಟ್ರವಾಗಲಿ ನಿಂದಿಸುವುದಿಲ್ಲ. ವಿಜಯಕ್ಕಾಗಿ ಪ್ರಾಮಾಣಿಕವಾಗಿ ಹೋರಾಡುವ ಭಟನು ಗೌರವಿಸಲ್ಪಡುತ್ತಾನೆ. ಸೈತಾನನ ಮೇಲೆ ಜಯಹೊಂದಲು ಹೋರಾಡುವವನ ಸ್ಥಿತಿಯೂ ಇದೇ ಆಗಿದೆ. ಒಮ್ಮೊಮ್ಮೆ ಸೈತಾನನು ಆತನ ಮೇಲೆ ಜಯಗಳಿಸಬಹುದು. ಜಯಾಪಜಯುಗಳ ಮಧ್ಯದಲ್ಲೂ ಆತನು ಸಮರದಲ್ಲಿ ದೃಢವಾಗಿದ್ದುಕೊಂಡು ದೇವರಾಜ್ಯವನ್ನು ಸ್ಥಾಪಿಸುವುದಕ್ಕೋಸ್ಕರ ಧೀರವಾಗಿ ಹೋರಾಡುತ್ತಾನೆ. ಅಂಥವನು ಮೋಕ್ಷಕ್ಕೆ ಅರ್ಹನೆಂದು ಖುರ್‌ಆನ್ ಹೇಳುತ್ತದೆ. ಆತನ ಬಲಹೀನತೆಯು ದೋಷವಲ್ಲ, ಭೂಷಣವಾಗಿದೆ. ದೇವರಿಗಾಗಿ ಹೋರಾಡುತ್ತಾ ಆ ಸಮರದಲ್ಲಿ ಜೀವತ್ಯಾಗ ಮಾಡಲು ಸನ್ನದ್ಧರಾಗಿರುವವರ ಸಾಲಿನಿಂದ ಆತನು ಎಂದಿಗೂ ಹೆದರಿ ಹಿಂದಕ್ಕೆ ಸರಿಯುವುದಿಲ್ಲ.

## ಆಧ್ಯಾತ್ಮಿಕ ವಿಕಾಸ

ಆಧ್ಯಾತ್ಮಿಕ ವಿಕಾಸದ ಹಂತಗಳ ಕುರಿತು, ಅದರ ಸಂಖ್ಯೆಗಳ ಕುರಿತು ಮತ್ತು ಅದರ ಪೂರ್ಣ ವಿಚಾರಗಳ ಕುರಿತು ಖುರ್‌ಆನ್ ವಿವರಿಸುತ್ತದೆ. ಉದಾಹರಣೆಗೆ ಪರಿಶುದ್ಧತೆ, ಚಾರಿತ್ರ್ಯ ಶುದ್ಧಿ, ದಾನಶೀಲತೆ, ಸತ್ಯಸಂಧತೆ, ದಯಾದಾಕ್ಷಿಣ್ಯ, ಸದ್ವರ್ತನೆ ಮೊದಲಾದುವನ್ನು ಒಬ್ಬನ ನೈತಿಕ ಹಾಗೂ ಆಧ್ಯಾತ್ಮಿಕ ವಿಕಾಸಕ್ಕನುಗುಣವಾಗಿ ರೂಪಿಸಲು ಅದು ಆತನನ್ನು ಪ್ರಾಪ್ತನನ್ನಾಗಿ ಮಾಡುತ್ತದೆ. ಹೀಗೆ ಅವನ ಸಾಮರ್ಥ್ಯಕ್ಕೆ ಅನುಗುಣವಾಗಿ ಒಂದು ಗುರಿಯನ್ನಿರಿಸಿಕೊಂಡು ಪ್ರಗತಿಗಾಗಿ ಪ್ರಯತ್ನಿಸಲಿಕ್ಕೂ ಮುಂದೆ, ಇನ್ನೂ ಉನ್ನತವಾದ ಉದ್ದೇಶಗಳನ್ನಿಟ್ಟು ಪ್ರತಿಯೊಂದು ದಿಶೆಯಲ್ಲೂ ಪುರೋಗಮನಕ್ಕಾಗಿ ಹೆಚ್ಚಿನ ಶ್ರಮ ವಹಿಸಿಕೊಳ್ಳಲಿಕ್ಕೂ ಅದು ಆತನಿಗೆ ಪ್ರೋತ್ಸಾಹ ನೀಡುತ್ತದೆ. ಹೀಗೆ ಅಭಿವೃದ್ಧಿಯ ಪಥದಲ್ಲಿ ಹಂತಹಂತವಾಗಿ ಅದು ಮನುಷ್ಯನನ್ನು ಮುಂದು ಮುಂದಕ್ಕೆ ಕೊಂಡೊಯ್ಯುತ್ತದೆ.

ಮನುಷ್ಯನ ಬೌದ್ಧಿಕ ವಿಕಾಸದ ಕಡೆಗೂ ಖುರ್‌ಆನ್ ಬೆಳಕು ಚೆಲ್ಲಿ ಅದು ಹೇಗೆ ಉಂಟಾಗುತ್ತದೆಂದು ವಿವರಿಸುತ್ತದೆ. ಒಬ್ಬನ ವರ್ತನೆಯ ಕುರಿತು ಅವನ ಬೌದ್ಧಿಕ ವಿಕಾಸವನ್ನು ಗಣನೆಗೆ ತೆಗೆದುಕೊಂಡು ಮಾತ್ರವೇ ದೇವರು ವಿಧಿಸುತ್ತಾನೆಂದು ಅದು ಕಲಿಸುತ್ತದೆ. ಅನುಕೂಲ ಪರಿಸ್ಥಿತಿಯಲ್ಲಿ ಬೆಳೆಯಲು ಭಾಗ್ಯ ಸಿದ್ಧಿಸಿದ, ಒಳಿತಿನ ಮಾರ್ಗದಲ್ಲಿ ಚಲಿಸಲು ಸೌಲಭ್ಯವಿದ್ದ ಒಬ್ಬನು ವಿಧಿಸಲ್ಪಡುವುದು ಯಾವ ಮಾನದಂಡದಿಂದಲೋ, ಅದರಿಂದ ಭಿನ್ನವಾದ ಮಾನದಂಡದಿಂದಾಗಿರಬಹುದು ಅಷ್ಟು ಬುದ್ಧಿ ವಿಕಾಸವನ್ನು ಹೊಂದದ, ಅನುಕೂಲ ಪರಿಸ್ಥಿತಿ ಇಲ್ಲದ ಮತ್ತೊಬ್ಬನು ವಿಧಿಸಲ್ಪಡುವುದು. ಎರಡನೆಯವನಿಗೆ ಎದುರಿಸಬೇಕಾಗಿ ಬಂದ ಪ್ರತಿಕೂಲ ಪರಿಸ್ಥಿತಿಗಳ ಬಗ್ಗೆ ಖಂಡಿತವಾಗಿಯೂ ರಿಯಾಯತಿಗಳು ತೋರಿಸಲ್ಪಡುವುವು.

ಸತ್ಯವಿಶ್ವಾಸ (ಈಮಾನ್) ಎಂದರೇನೆಂದೂ ಅದು ಹೇಗೆ ಸಿದ್ಧಿಸುತ್ತದೆಂದೂ ಅದನ್ನು ಹೇಗೆ ಮನಗಾಣಬಹುದೆಂದೂ ಖುರ್‌ಆನ್ ವಿವರಿಸುತ್ತದೆ. "ಶರೀಅತ್" ನಿಯಮಗಳ ಆವಶ್ಯಕತೆ ಮತ್ತು ಅದರ ತತ್ವ ಶಾಸ್ತ್ರವನ್ನೂ ಅದು ವಿವರಿಸುತ್ತದೆ. ದೈವಿಕ ನಿಯಮಗಳು ವಿವೇಕ ಪೂರ್ಣವಾಗಿದ್ದು ಪ್ರಗತಿಯ ಮಾರ್ಗದಲ್ಲಿ ಮುಂದೆ ಸಾಗಲು ಅದು ಮನುಷ್ಯನಿಗೆ ಸಹಾಯಕವಾಗಿದೆ ಎಂದು ಖುರ್‌ಆನ್ ಕಲಿಸುತ್ತದೆ. ದೇವಾಜ್ಞೆಗಳು ಅವನ ದಾಸರಿಗೆ ಒಂದು ಹೊರೆ ಅಥವಾ ಶಿಕ್ಷೆಯಾಗಿ ವಿಧಿಸಲ್ಪಡುವುದಿಲ್ಲ. ಪುರೋವೃದ್ಧಿಯೆಡೆಗಿರುವ ಮನುಷ್ಯನ ಪ್ರಯಾಣದಲ್ಲಿ ಅವನಿಗೆ ಸಹಾಯ ಮತ್ತು ಆಸರೆಯಾಗುವುದು ಮತ್ತು ಅವನ ಸಾಮಾಜಿಕ ಪರಿಸರವನ್ನು ಸುಧಾರಿಸುವುದು ಪ್ರತಿಯೊಂದು ದೇವಾಜ್ಞೆಯ ಉದ್ದೇಶವಾಗಿರುತ್ತದೆ.

ದೇವಾಜ್ಞೆಗಳನ್ನು ಮತ್ತು ಶಿಕ್ಷೆಗಳನ್ನು ಬಲವಂತವಾಗಿ ವಿಧಿಸುವ ತತ್ವವನ್ನು ಖುರ್‌ಆನ್ ಪುರಸ್ಕರಿಸುವುದಿಲ್ಲ. ಒಬ್ಬನ ಗುಣಸ್ವಭಾವ ಮತ್ತು ನಡವಳಿಕೆಗಳಿಗೆ ಸಂಬಂಧಿಸಿ ಆತನ ಇತಿಮಿತಿ ಮತ್ತು ಕುಂದು ಕೊರತೆಗಳನ್ನೆಲ್ಲಾ ಪೂರ್ಣವಾಗಿ ಗಣನೆಗೆ ತೆಗೆದುಕೊಳ್ಳದೆ ದೇವರು ಯಾರನ್ನೂ ಶಿಕ್ಷೆಗೆ ಗುರಿಪಡಿಸುವುದಿಲ್ಲವೆಂದು ಖುರ್‌ಆನ್ ಕಲಿಸುತ್ತದೆ. ಮುಂಚಿತವಾಗಿ ಎಚ್ಚರಿಕೆ ನೀಡಿದ ಬಳಿಕವೇ ಹೊರತು ಯಾರನ್ನೂ ಶಿಕ್ಷೆಗೆ ಈಡು ಮಾಡಲಾಗುವುದಿಲ್ಲವೆಂದು ಸಹ ಖುರ್‌ಆನ್ ಕಲಿಸುತ್ತದೆ.


اليس الله بكاف عبده

"ತನ್ನ ದಾಸನಿಗೆ ಅಲ್ಲಾಹನು ಸಾಕಾಗನೇ?"

[ಹಝ್ರತ್ ಅಹ್ಮದ್ (ಅ)ರವರಿಗೆ ಲಭಿಸಿದ ದಿವ್ಯಬೋಧನೆ]

**B. SHEKHALI**

MERCHANT

**KOYNAD (Kodagu)**

Phone : 34



*With Best Compliments From :*

**DOCTORS, NURSES & STAFF**

**FIROZ HOSPITAL**

**MATTANNUR-670 702**

**Phone : 222**

# ದೇವವಿಶ್ವಾಸ

★ ಮೌಲಾನಾ ಬಿ. ಅಬ್ದುಲ್ಲಾ ಸಾಹೇಬ್ ಎಚ್. ಎ.



**ಜನಾಬ್ ಮೌಲಾನಾ ಬಿ. ಅಬ್ದುಲ್ಲಾ ಸಾಹೇಬ್ ಎಚ್. ಎ. ಅವರು ಅಹ್ಮದಿಯಾ ಅಗ್ರಗಣ್ಯ ಮತಪಂಡಿತರಲ್ಲಿ ಒಬ್ಬರು. ಅವರು ಅರಬಿ, ಇಂಗ್ಲಿಷ್, ಉರ್ದು, ಪಾರ್ಸಿ, ತಮಿಳು ಮೊದಲಾದ ಭಾಷೆಗಳನ್ನು ಬಲ್ಲ ಬಹುಭಾಷಾ ಪಂಡಿತರಾಗಿದ್ದರು. ಅವರು ಓರ್ವ ಉತ್ತಮ ವಾಗ್ಮಿ ಹಾಗೂ ಅನೇಕ ಗ್ರಂಥಗಳ ಕರ್ತರಾಗಿದ್ದರು. ಸುಮಾರು 40 ವರ್ಷಗಳ ಕಾಲ ಅವರು ಕೇರಳದ ಮುಖ್ಯ ಅಹ್ಮದಿಯಾ ಪ್ರಚಾರಕರಾಗಿ ಸೇವೆಸಲ್ಲಿದ್ದಾರೆ. ಕೆಲವು ವರ್ಷಗಳ ಕಾಲ ಅವರು ಸಿಲೋನ್‌ನಲ್ಲಿ ಸಹ ಮಿಶನರಿಯಾಗಿ ದುಡಿದಿದ್ದರು. ಅವರು ತನ್ನ 73ನೇ ಪ್ರಾಯದಲ್ಲಿ, 1968 ಸಪ್ಟೆಂಬರ್ 10ರಂದು ದಿವಂಗತರಾದರು.**

**ಅವರ ಈ ಲೇಖನ ಮಲಯಾಳದಿಂದ ಭಾಷಾಂತರಿಸಲ್ಪಟ್ಟಿದೆ.**

ದೇವವಿಶ್ವಾಸ ಎಲ್ಲಾ ಧರ್ಮಗಳ ಮೂಲ ತತ್ವವಾಗಿದೆ. ನಾವು ಈ ಲೋಕಕ್ಕೆ ಸ್ವಇಚ್ಛೆಯಂತೆ ಬಂದವರಲ್ಲ. ನಮ್ಮ ಸೃಷ್ಟಿಕರ್ತ ಹಾಗೂ ಈ ಪ್ರಪಂಚದ ನಿಯಾಮಕನಾಗಿ ಒಬ್ಬ ಸರ್ವೇಶ್ವರನು ಇದ್ದಾನೆ. ಅವನನ್ನು ಗಳಿಸುವುದೇ ನಮ್ಮ ಜೀವಿತೋದ್ದೇಶ ಎಂಬುದು ಎಲ್ಲಾ ಧರ್ಮಗಳ ಸಿದ್ಧಾಂತಗಳಲ್ಲಿ ಪ್ರಧಾನ ಅಂಶವಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಧರ್ಮಗಳ ಎಲ್ಲಾ ತತ್ವಗಳೂ ಉಪದೇಶಗಳೂ ಈ ಆಸ್ತಿಕತತ್ವವನ್ನು ಕೇಂದ್ರೀಕರಿಸಿಕೊಂಡು ತಿರುಗುತ್ತವೆ. ಲೋಕದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಕಾಲಘಟ್ಟಗಳಲ್ಲಿ ಅವತರಿಸುತ್ತಿದ್ದ ಆದರ್ಶ ಪುರುಷರಾದ ಪ್ರತಿಯೊಬ್ಬ ಧರ್ಮೋಪದೇಶಕರ ಬೋಧನೆಗಳ ಪ್ರಧಾನ ಅಂಶ ಈ ತತ್ವವೇ ಆಗಿದೆ. ಆ ಮಹಾಪುರುಷರು ಈ ತತ್ವದ ಕುರಿತು ಉಪದೇಶಿಸಿದ್ದು ಮಾತ್ರವಲ್ಲ, ಇದೇ ಪರಮ ಸತ್ಯವೆಂದೂ ಅದನ್ನು ಗಳಿಸುವುದೇ ಮಾನವ ಬದುಕಿನ ಉದ್ದೇಶವೆಂದೂ ಅವರು ತಮ್ಮ ಪಾವನವಾದ ಜೀವನಕ್ರಮ ಮೂಲಕ ರುಜುಪಡಿಸಿದ್ದಾರೆ.

ಸಕಲ ಮತಾಚಾರ್ಯರ ಬೋಧನೆಯ ಸಾರಾಂಶ, ಈ ಪ್ರಪಂಚದ ಕಾರಣಕರ್ತ ಹಾಗೂ ನಿಯಾಮಕನಾಗಿ ಒಬ್ಬ ದೇವನಿದ್ದಾನೆ ಮತ್ತು ಅವನನ್ನು ನಂಬಿ ಅವನನ್ನು ಪಡೆಯಲಿಕ್ಕಾಗಿ ತೀವ್ರವಾಗಿ ಪ್ರಯತ್ನಿಸಬೇಕೆಂಬುದಾಗಿ ಮನಗಾಣಬಹುದು. ಇಂದು ಲೋಕದಲ್ಲಿ ಕಾಣಲ್ಪಡುವ ಧರ್ಮಗಳು ಅವುಗಳ ನಿಜವಾದ ಉಪದೇಶಗಳಿಂದ ಬಹಳ ದೂರ ವ್ಯತಿಕ್ರಮಿಸಿ ಕಾಲಾಂತರದಲ್ಲಿ ಅವುಗಳಲ್ಲಿ ಹಲವು ಮಾರ್ಪಾಟುಗಳುಂಟಾಗಿ ದೇವತತ್ವವನ್ನು ಕುರಿತಾದ ವಿವರಣೆಯಲ್ಲಿ ಕೆಲವು ವ್ಯತ್ಯಾಸಗಳೆಲ್ಲ ಕಾಣಲ್ಪಡುವುದಾದರೂ ಈ ಪ್ರಪಂಚದ ಮೂಲ ಕಾರಣವಾಗಿರುವಂಥ ಒಬ್ಬ ದೇವನಿದ್ದಾನೆ ಹಾಗೂ ಅವನನ್ನು ಪಡೆಯುವುದೇ ಮನುಷ್ಯ ಜೀವಿತೋದ್ದೇಶ ಎಂಬ ಉಪದೇಶದಲ್ಲಿ ಒಂದು ಏಕರೂಪವನ್ನು ಕಾಣಬಹುದು. ಮನುಷ್ಯ ವಂಶದ ಆರಂಭ ಮೊದಲ್ಗೊಂಡೇ ಅವರಿಗೆ ಈ ಪರಮಸತ್ಯದ ಅರಿವು ನೀಡಲಾಗಿತ್ತೆಂದೂ ಕಿರಾತಾವಸ್ಥೆಯಲ್ಲಿ ಜೀವಿಸುತ್ತಿದ್ದವರಿಗೆ ಕೂಡ ಒಂದು ಮಹಾಶಕ್ತಿಯ ಮೇಲೆ ನಂಬಿಕೆ ಇತ್ತೆಂದೂ ತಿಳಿದು ಬರುತ್ತದೆ. ಇಂದು ಬಾಹ್ಯವಾದ ಸಂಸ್ಕೃತಿ ಅದರ ಪರಾಕಾಷ್ಠೆಗೆ ತಲಪಿ, ಅದು ಒಂದು ಭ್ರಮೆಯಾಗಿ ಮಾರ್ಪಟ್ಟಿರುವುದರ ಫಲವಾಗಿ ದೇವವಿಶ್ವಾಸ ಮತ್ತು ಧರ್ಮಾನುಸರಣೆ ಅವಶ್ಯವಿಲ್ಲವೆಂದು ಘಂಟಾಘೋಷ

ಮಾಡುವ ಕೆಲವು ಜನರಿದ್ದರೂ ಹೆಚ್ಚಿನ ಜನರು ದೇವರನ್ನು ನಂಬುವವರಾಗಿಯೇ ಕಾಣಲ್ಪಡುವುದು. ಎಲ್ಲಾ ಧರ್ಮಗಳು ಈ ತತ್ವವನ್ನು ಏಕಕಂಠವಾಗಿ ಬೋಧಿಸುತ್ತಿರುವುದರಿಂದಲೇ ಆಗಿದೆ.

ಆದರೆ, ಧರ್ಮಗಳು ದೈವತತ್ವದ ಕುರಿತು ಕಲಿಸುವುದರಿಂದ ಮತಸ್ಥರೆಲ್ಲ ಆಯಾ ವಿಶ್ವಾಸಿಗಳಂತೆ ಕಾಣಲ್ಪಡುವರಾದರೂ ಅವರು ಯಥಾರ್ಥ ಧರ್ಮೋಪದೇಶದಿಂದ ಮತ್ತು ಭಕ್ತಿಮಾರ್ಗದಿಂದ ವಿಮುಖರಾದುದರ ಫಲವಾಗಿ ದೇವವಿಶ್ವಾಸ ಅವರ ಹೃದಯಗಳನ್ನು ಸ್ಪರ್ಶಿಸಿರುವುದಾಗಿ ಕಂಡು ಬರುವುದಿಲ್ಲ. ದೇವಾಸ್ತಿತ್ವದ ಕುರಿತು ಗಂಭೀರವಾಗಿ ಮಾತನಾಡುವ ಹೆಚ್ಚು ಜನರಿದ್ದರೂ ಆ ಸರ್ವವಲ್ಲಭನನ್ನು ನಿಜವಾಗಿಯೂ ನಂಬಿ ಆ ವಿಶ್ವಾಸದ ಪ್ರಕಾರ ಜೀವನ ನಡೆಸುವವರು ತುಂಬಾ ವಿರಳವೆಂದು ಹೇಳಿದರೆ ಅದು ಸತ್ಯವಿರುದ್ಧವಾಗಲಾರದು. ದೇವರನ್ನು ನಿಜವಾಗಿ ನಂಬುವವನಿಗೆ ತನ್ನ ಕರ್ತನ ಸೃಷ್ಟಿಗಳಾಗಿರುವ ಮನುಷ್ಯ ಸಹೋದರರನ್ನು ಪ್ರೀತಿಸದೆ ಇರಲಿಕ್ಕಾಗಲಿ, ಅವರಿಗೆ ತನ್ನ ಕೈಲಾದಷ್ಟು ಸಹಾಯ-ಉಪಕಾರಗಳನ್ನು ಮಾಡದಿರಲಿಕ್ಕಾಗಲಿ ಸಾಧ್ಯವಿಲ್ಲ. ಮನುಷ್ಯರೆಲ್ಲ ಒಬ್ಬನೇ ದೇವನ ಸೃಷ್ಟಿಗಳೆಂದಾದರೆ, ಆ ಸೃಷ್ಟಿಕರ್ತನನ್ನು ಪ್ರಾಮಾಣಿಕವಾಗಿ ನಂಬುವವರಿಗೆ ಅವನ ಸೃಷ್ಟಿಗಳನ್ನು ದ್ವೇಷಿಸಲಿಕ್ಕೆ ಸಾಧ್ಯವಿಲ್ಲವಷ್ಟೆ. ವಾಸ್ತವಿಕವಾಗಿ ಒಬ್ಬನಿಗೆ ದೇವವಿಶ್ವಾಸವಿದ್ದರೆ - ಯಾರೋ ಹೇಳಿದ್ದನ್ನು ಕೇಳಿ, ಅಥವಾ ಮಾತಪಿತರಿಂದ ಪಾರಂಪರ್ಯವಾಗಿ ಬಂದ ನಂಬಿಕೆಯಲ್ಲ, ಅನುಭವಸಿದ್ಧ ನಂಬಿಕೆ ಎಂದರೆ ಸ್ಥೂಲವಸ್ತುಗಳನ್ನು ಇಂದ್ರಿಯಗಳಿಂದ ಗ್ರಹಿಸುವಾಗ ಉಂಟಾಗುವಷ್ಟಾದರೂ ವಿಶ್ವಾಸವಿದ್ದರೆ - ಅದರ ಫಲ ಅವನ ಜೀವನದಲ್ಲಿ ಪ್ರತಿಬಿಂಬಿಸಿ ಕಾಣಬಹುದು. ಹೀಗೆ ನಂಬಿಕೆಯುಳ್ಳವನು ಸಮಸ್ತಸೃಷ್ಟಿಗಳನ್ನು ಪ್ರೀತಿಸುವನು, ಅವರ ಕ್ಷೇಮಾಭಿವೃದ್ಧಿಯನ್ನು ಬಯಸುವನು, ಅವರೊಡನೆ ಅನುಕಂಪವನ್ನು ತೋರ್ಪಡಿಸುವನು. ಹೊರತು, ವಿರುದ್ಧವಾಗಿ ವರ್ತಿಸಲು ಸಾಧ್ಯವಿಲ್ಲ. ಪುಣ್ಯಾತ್ಮರುಗಳಾದ ಮತಾಚಾರ್ಯರು ಸಮಸ್ತಸೃಷ್ಟಿ ಪ್ರೀತಿಯಲ್ಲಿ ಅಸಾಮಾನ್ಯವಾದ ಆಸಕ್ತಿಯನ್ನು ತೋರಿಸುತ್ತಿದ್ದುದು ಅವರಿಗೆ ದೇವರೊಡನಿರುವ ದೃಢವಿಶ್ವಾಸ ಮತ್ತು ಪ್ರೀತಿಯ ಕಾರಣದಿಂದಲೇ ಆಗಿದೆ.

ಇಂದು ದೇವವಿಶ್ವಾಸಿಗಳೆಂದು ಹೆಮ್ಮೆಪಡುವವರಲ್ಲಿ ಎಷ್ಟು ಮಂದಿಗೆ ಈ ರೀತಿಯ ವಿಶ್ವಾಸವಿದೆಯೆಂದೂ ಎಷ್ಟು ಮಂದಿ ಆ ನಂಬಿಕೆಯನ್ನು ತಮ್ಮ ಜೀವನದಲ್ಲಿ ಜೀವಂತವಾಗಿಟ್ಟಿದ್ದಾರೆಂದೂ ಪರಿಶೀಲಿಸುವುದಾದರೆ, ಪರಿತಪಿಸುವುದಲ್ಲದೆ ನಿರ್ವಾಹವಿಲ್ಲ. ದೇವರಲ್ಲಿ ನಂಬಿಕೆಯುಳ್ಳವರೆಂದು ಹೇಳಿಕೊಳ್ಳುವವರು ಅಸಂಖ್ಯಾತ. ಆದರೆ ನಿಜವಾಗಿ ಆ ಸರ್ವೇಶ್ವರನನ್ನು ನಂಬುವವರು ಬಹಳ ವಿರಳ. ಮನುಷ್ಯರು ಸ್ವಯಂ ದೇವವಿಶ್ವಾಸಿಗಳೆಂದು ವಾದಿಸುತ್ತಾರೆ; ಆದರೆ ಆ ನಂಬಿಕೆ ಅವರನ್ನು ಅಕ್ರಮದಿಂದಲೂ ಅನ್ಯಾಯ ಕೃತ್ಯದಿಂದಲೂ ದೂರವಿಡಲಿಕ್ಕೆ ಪರ್ಯಾಪ್ತವಾಗಿ ಕಾಣುವುದಿಲ್ಲ. ಅವರು ತಾವು ದೇವವಿಶ್ವಾಸಿಗಳೆಂದು ಹೇಳಿಕೊಳ್ಳುತ್ತಾರೆ; ಆದರೆ ಸುಳ್ಳು, ವಂಚನೆ, ವ್ಯಭಿಚಾರ, ಪರದ್ರೋಹ, ಅಕ್ರಮ, ಸ್ವಾರ್ಥ, ಅಹಂಭಾವ ಇತ್ಯಾದಿ ನೀಚಕೃತ್ಯಗಳಲ್ಲೇ ಅವರು ಕಾಲಕಳೆಯುತ್ತಾರೆ. ಜನರು ದೇವವಿಶ್ವಾಸಿಗಳೆಂದು ಉದ್ಘೋಷಿಸುತ್ತಾರೆ; ಆದರೆ ಸರ್ವಶಕ್ತನಾದ ದೇವರ ಆಜ್ಞಾನುಸಾರ ಜೀವನವನ್ನು ನಡೆಸಬೇಕೆಂದಾಗಲಿ, ಅವನ ಆದೇಶಗಳಿಗೆ ವಿರುದ್ಧವಾಗಿ ವರ್ತಿಸಬಾರದೆಂದಾಗಲಿ ಅವರಿಗೆ ತುಸುಮಾತ್ರವಾದರೂ ಪ್ರಜ್ಞೆಯುಳ್ಳದ್ದಾಗಿ ಕಾಣುವುದಿಲ್ಲ. ಜನರು ಸ್ವಯಂ ದೇವವಿಶ್ವಾಸಿಗಳೆಂದು ಹೇಳುತ್ತಾರೆ; ಆದರೆ ಆ ವಿಶ್ವೇಕನಾಥ ತಮ್ಮನ್ನು ಏಕೆ ಸೃಷ್ಟಿಸಿದನೆಂದು ತಿಳಿದುಕೊಂಡು ಅದಕ್ಕನುಗುಣವಾಗಿ ಅವರು ಜೀವನ ನಡೆಸುವುದಿಲ್ಲ, ಅವನ ಶಿಕ್ಷೆಯ ಕುರಿತು ಅವರು ಭಯಗೊಳ್ಳುವುದಿಲ್ಲ. ಜನರು ದೇವವಿಶ್ವಾಸದ ಬಗ್ಗೆ ಸಾರುತ್ತಾರೆ; ಆದರೆ ಆ ಸರ್ವಾಂತರ್ಯಾಮಿಯ ಕುರಿತುಳ್ಳ ಸ್ಮರಣೆ ಮತ್ತು ಚಿಂತನೆ ಅವರ ಹೃದಯಾಂತರಾಳಗಳಲ್ಲಿ ಪ್ರವೇಶಿಸುವುದಿಲ್ಲ. ಅವರು ತಾವು ದೇವರನ್ನು ನಂಬುವವರೆಂದು ಘೋಷಿಸುತ್ತಾರೆ; ಆದರೆ ಹೃದಯಪೂರ್ವಕವಾಗಿ ಆ ಲೋಕರಕ್ಷಕನನ್ನು ಪ್ರೀತಿಸುತ್ತಾ ಅವನೊಡನಿರುವ ಪ್ರೀತಿಯನ್ನು ತಮ್ಮ ಜೀವನದ ಗುರಿಯಾಗಿಟ್ಟುಕೊಳ್ಳುವುದಿಲ್ಲ. ಹೀಗೆ ಜೀವನದಲ್ಲಿ ಯಾವುದೇ ಪರಿವರ್ತನೆಯನ್ನುಂಟುಮಾಡಲು ಪರ್ಯಾಪ್ತವಲ್ಲದ, ಅಧರಗಳಲ್ಲಿ ಮಾತ್ರ ಬಾಕಿ ಉಳಿದಿರುವ, ಈ ವಿಶ್ವಾಸ ಎಂದಿಗೂ ಯಥಾರ್ಥ ದೇವವಿಶ್ವಾಸವಾಗಲಾರದು. ಒಂದು ಹುತ್ತದೊಳಗೆ ಸರ್ಪವಿದೆಯೆಂದು ಗೊತ್ತಿದ್ದರೆ ಯಾರೂ

ಅದರೊಳಗೆ ಕೈಹಾಕಲು ತಯಾರಾಗಲಿಕ್ಕಿಲ್ಲವಷ್ಟೇ. ಎಷ್ಟು ರುಚಿಕರವಾದ ಪಾನೀಯವಾಗಿದ್ದರೂ ಅದರಲ್ಲಿ ವಿಷ ಬೆರೆತಿದೆಯೆಂದು ತಿಳಿದರೆ.ಬಾಯಾರಿಕೆಯಿಂದ ಕಂಗಾಲಾದವನು ಕೂಡ ಅದನ್ನು ಕುಡಿಯಲಿಕ್ಕೆ ಒಡಂಬಡಲಿಕ್ಕಿಲ್ಲ. ಯಾರಾದರೂ ತಿಳಿದು ಬಿಟ್ಟಾರೆಂಬ ಹೆದರಿಕೆ ಇದ್ದರೆ, ಒಬ್ಬ ಚೋರನು ಎಷ್ಟು ಬೆಲೆಬಾಳುವ ವಸ್ತುವನ್ನಾದರೂ ಕದಿಯಲಿಕ್ಕೆ ಸಿದ್ಧನಾಗಲಾರನು. ಒಬ್ಬ ಮ್ಯಾಜಿಸ್ಟ್ರೇಟನ ಆಜ್ಞೆಯನ್ನು ಉಲ್ಲಂಘಿಸಿದರೆ ಲಘುವಾದ ಶಿಕ್ಷೆಯನ್ನಾದರೂ ಅನುಭವಿಸಬೇಕಾಗಿ ಬರಬಹುದೆಂದು ತಿಳಿದವನು ಆಜ್ಞಾಲಂಘನ ಮಾಡಲಾರನು. ಹೀಗೆ ಸಾಮಾನ್ಯ ಸಂಗತಿಗಳಲ್ಲಿ ಸಹ ಮನುಷ್ಯನಿಗೆ ನಂಬಿಕೆ ಇದ್ದ ಪಕ್ಷದಲ್ಲಿ ಅದರ ಫಲ ಅವನ ಜೀವನಕ್ರಮದಲ್ಲಿ ಗೋಚರವಾಗುತ್ತದೆ. ಆದರೆ ದೇವವಿಶ್ವಾಸಿಗಳೆಂದು ಹೇಳುವವರು ತಾವು ಸರ್ಪಕ್ಕೆ, ವಿಷಕ್ಕೆ, ಮಾತ್ರವಲ್ಲ ಮನುಷ್ಯನಿಗೆ ಕೂಡ ಭಯಪಡುವ ಪ್ರಕಾರ ಸರ್ವಶಕ್ತನೂ ಸರ್ವಾಧಿನಾಥನೂ ಎಂದು ನಂಬುವ ದೇವರಿಗೆ ಭಯಪಡುವುದಿಲ್ಲ. ಅವರು ತಮಗೆ ಅಲ್ಪಮಾತ್ರವಾದೊಂದು ಉಪಕಾರ ಮಾಡಬಲ್ಲ ಒಬ್ಬ ಬಂಧುವನ್ನಾಗಲಿ, ಯಜಮಾನನ್ನಾಗಲಿ, ಮಾತಾಪಿತರನ್ನಾಗಲಿ ಗೌರವ ಮತ್ತು ಸ್ನೇಹಭಾವದಿಂದ ಕಾಣುವ ರೀತಿಯಲ್ಲಿ ಸರ್ವದಾತನೂ ಸರ್ವಗುಣಸಂಪೂರ್ಣನೂ ಆದ ದೇವರನ್ನು ಪ್ರೀತಿಸುವುದಿಲ್ಲ. ಇಂತಹವರಿಗೆ ದೇವವಿಶ್ವಾಸವಿದೆಯೆಂದು ಹೇಳುವುದು ಬರೇ ಪೊಳ್ಳು ಮಾತಲ್ಲವೇ ? ನಿಜವಾಗಿಯೂ ಒಬ್ಬನು ದೇವರನ್ನು ನಂಬುವನಾದರೆ, ಖಂಡಿತವಾಗಿಯೂ ಆ ನಂಬಿಕೆ ಅವನ ಜೀವಿತದಲ್ಲಿ ಗಣ್ಯವಾದ ಒಂದು ಪರಿವರ್ತನೆಯನ್ನುಂಟುಮಾಡುವುದು. ಆದುದರಿಂದ ದೇವವಿಶ್ವಾಸಿಗಳೆಂದು ಅಭಿಮಾನಗೊಳ್ಳುವವರೆಲ್ಲರೂ ತಮ್ಮ ಜೀವನಕ್ರಮದಲ್ಲಿ ಒಂದು ಬದಲಾವಣೆಯನ್ನುಂಟುಮಾಡಲು ಆ ವಿಶ್ವಾಸ ಸಾಧಕವಾಗಿದೆಯೋ ಎಂದು ನೋಡಬೇಕಾಗಿದೆ. ದೇವರನ್ನು ನಾವು ನಂಬುವುದು ಆ ಸರ್ವಾಧಿನಾಥನಿಗೆ ಆ ಮೂಲಕ ಏನಾದರೂ ಹಿತವಾಗುವುದಕ್ಕೋಸ್ಕರವಲ್ಲ. ನಾವು ಅವನನ್ನು ನಂಬದಿದ್ದರೆ ಅವನಿಗೆ ಅದರಿಂದ ಏನೂ ದೋಷವುಂಟಾಗುವುದಿಲ್ಲ. ನಾವು ದೇವಾಸ್ತಿತ್ವವನ್ನು ಅಲ್ಲಗಳೆಯುವುದಾದರೆ ಅವನು ಇಲ್ಲದಾಗುವುದಿಲ್ಲ. ದೇವನಿದ್ದಾನೆಂದು ನಾವು ಹೇಳುವುದರಿಂದ ಅವನಿಗೆ ವಿಶೇಷವಾದೊಂದು ಮಹಾತ್ಮೆ ಬರುವುದಿಲ್ಲ. ದೇವವಿಶ್ವಾಸ ಎಲ್ಲ ವಿಶ್ವಾಸ ಸಿದ್ಧಾಂತಗಳ ಕೇಂದ್ರವೆಂದೂ ಆ ಸರ್ವಶಕ್ತನನ್ನು ನಂಬಬೇಕಾದುದು ಅತ್ಯಾವಶ್ಯಕವೆಂದೂ ಹೇಳುವುದು ಈ ನಂಬಿಕೆಯಿಂದ ನಮ್ಮಲ್ಲಿ ಅತ್ಯಂತ ಪರಿಶುದ್ಧವಾದೊಂದು ಪರಿವರ್ತನೆ ಮತ್ತು ಆತ್ಮೋನ್ನತಿ ಉಂಟಾಗಬೇಕೆಂಬುದರಿಂದಾಗಿದೆ.

ದೇವವಿಶ್ವಾಸಿಗಳೆಂದು ಹೇಳುವವರ ಸ್ಥಿತಿ ಹೀಗಿರುವಾಗ, ಬೇರೆ ಕೆಲವು ಜನರು ದೇವನೆಂಬ ಒಬ್ಬನಿಲ್ಲವೆಂದೂ ಇದ್ದಾನೆಂದು ನಂಬಿ ಏನೂ ಪ್ರಯೋಜನವಿಲ್ಲವೆಂದೂ ಹೇಳುತ್ತಾರೆ. ಇವರು ತಮ್ಮ ವಾದಕ್ಕೆ, ದೇವವಿಶ್ವಾಸಿಗಳೆಂದು ಕರೆಯಲ್ಪಡುವವರ ಜೀವನಕ್ರಮವನ್ನೇ ಒಂದು ಆಧಾರವಾಗಿ ಹೇಳುತ್ತಾರೆ. ಆದ್ದರಿಂದ, ದೇವವಿಶ್ವಾಸವಿದ್ದು ಕೂಡ ಧರ್ಮವಿರುದ್ಧವಾದ ರೀತಿಯಲ್ಲಿ ಬದುಕುವವರು ಯಥಾರ್ಥ ದೇವವಿಶ್ವಾಸಿಗಳಾಗುವುದಿಲ್ಲ: ಮಾತ್ರವಲ್ಲ, ಅವರು ದೇವಾಸ್ತಿತ್ವವನ್ನು ಅಲ್ಲಗಳೆಯುವವರಿಗೆ ಹಾಗೆ ಮಾಡಲು ದಾರಿಮಾಡಿಕೊಡುವುದರಿಂದ ಒಂದು ಪ್ರಕಾರದಲ್ಲಿ ದೇವದೂಷಣ ಪಾತಕಕ್ಕೆ ಪಾತ್ರರಾಗುತ್ತಾರೆ. ಆದರೆ, ದೇವವಿಶ್ವಾಸಿಗಳೆಂದು ಅಭಿಮಾನ ಪಡುವವರು ಸ್ವೇಚ್ಛೆಗಳಿಗೆ ಆಧೀನರಾಗಿ ಜೀವಿಸುವುದು ಅವರಿಗೆ ದೇವರಲ್ಲಿ ದೃಢವಿಶ್ವಾಸವಿದೆಯೆಂಬುದಕ್ಕೆ ಸಾಕ್ಷ್ಯವಾಗದಿರುವಂತೆಯೇ ಅವರ ಈ ವಿಧ ಅಧಾರ್ಮಿಕ ಜೀವನ, ದೇವರಿಲ್ಲವೆಂದೂ ದೇವವಿಶ್ವಾಸ ಪ್ರಯೋಜನವಿಲ್ಲದ್ದೆಂದೂ ಹೇಳುವುದಕ್ಕೆ ಸಾಕ್ಷಿಯಾಗುವುದಿಲ್ಲ. ಶಿಕ್ಷಾರಕ್ಷೆ ನೀಡಲು ಸಾಮರ್ಥ್ಯ ಮತ್ತು ಅಧಿಕಾರವುಳ್ಳ ಒಬ್ಬ ಸರ್ವಾಧಿನಾಥನಿದ್ದಾನೆಂಬ ನಂಬಿಕೆ ಎಂದಿಗೂ ಪಾಪಮಾಡಲು ಪ್ರೇರಕವಾಗಲಾರದು. ಬದಲು, ಅದು ಪಾಪದಿಂದ ದೂರವಿದ್ದುಕೊಳ್ಳಲು ಹೇತುವಾಗುವುದು. ಅದೇ ಪ್ರಕಾರ ಸರ್ವಾಧಿಪತಿಯಾದ ಒಬ್ಬ ದೇವನಿದ್ದಾನೆಂಬ ವಿಶ್ವಾಸವಲ್ಲ, ಅವನೊಡನೆ ಯಥಾರ್ಥ ಭಕ್ತಿ ವಿಶ್ವಾಸ ಇಲ್ಲದಿರುವಿಕೆ ಮನುಷ್ಯರಿಗೆ ಪಾಪಮಾಡಲು ಧೈರ್ಯ ನೀಡುತ್ತದೆ. ಆದುದರಿಂದ ದೇವವಿಶ್ವಾಸಿಗಳೆಂದು ಸ್ವಯಂ ವಾದಿಸುವವರ ಧರ್ಮವಿರುದ್ಧ ಜೀವನಕ್ರಮವು ದೇವರಿಲ್ಲವೆಂಬುದಕ್ಕೆ ಮತ್ತು ಅವನನ್ನು ನಂಬುವುದು ನಿಷ್ಪ್ರಯೋಜಕವೆಂಬುದಕ್ಕೆ ಸಾಕ್ಷಿಯೆಂದು ನಿರೀಶ್ವರವಾದಿಗಳು ಹೇಳುವುದಾದರೆ, ಅದು ವೈಚಾರಿಕವಲ್ಲ.

ಜಗತ್ತಿನಲ್ಲಿ ಸದಾ ನೈತಿಕತೆಯನ್ನು ಅದ್ಭುತಕರ

ವಾದ ತರದಲ್ಲಿ ಜೀವಂತಗೊಳಿಸಿ ತೋರಿಸುತ್ತಾ ಮಹತ್ತಾದ ಒಂದು ನೈತಿಕ ಪರಿವರ್ತನೆಯನ್ನು ಉಂಟುಮಾಡಿದವರು ದೇವವಿಶ್ವಾಸಿಗಳೇ ಆಗಿದ್ದಾರೆ. ಪ್ರವಾದಿಗಳಿಗೂ ಆಧ್ಯಾತ್ಮಿಕ ಗುರುಗಳಿಗೂ ಲೋಕದಲ್ಲಿ ಉಂಟುಮಾಡಲು ಸಾಧ್ಯವಾದ ಪರಿವರ್ತನೆ ಮತ್ತು ಸುಧಾರಣೆ ತತ್ವಜ್ಞಾನಿಗಳಿಗಾಗಲಿ, ವೈಜ್ಞಾನಿಕ ಸಂಶೋಧಕರಿಗಾಗಲಿ, ರಾಜಕೀಯ ಮುತ್ಸದ್ದಿಗಳಿಗಾಗಲಿ ಉಂಟುಮಾಡಲು ಸಾಧ್ಯವಾಗಲಿಲ್ಲ; ಪುಣ್ಯಪುರುಷರುಗಳಾದ ಆ ಗುರುವರ್ಯರುಗಳ ಮುಖಾಂತರ ಜಗತ್ತಿಗೆ ಗೋಚರವಾದ ಆಧ್ಯಾತ್ಮಿಕ ಶಕ್ತಿಯನ್ನು ಮೇಲೆ ಹೇಳಿದ ಇನ್ನಿತರರ ಮೂಲಕ ಲೋಕಕ್ಕೆ ಕಾಣಲಿಕ್ಕೆ ಸಾಧ್ಯವೂ ಆಗಲಿಲ್ಲ. ಧಾರ್ಮಿಕ ಪ್ರಜ್ಞೆ ಬಹಳಷ್ಟು ಮಂದಗೊಂಡಿರುವ ಈ ಕಾಲದಲ್ಲಿ ಕೂಡ ಕೋಟಿಗಟ್ಟಲೆ ಜನರ ಹೃದಯಗಳನ್ನು ಆಳುತ್ತಿರುವವರು ದೇವತತ್ವಪ್ರಬೋಧಕರಾದ ಗತ ಗುರುವರ್ಯರುಗಳೇ ಆಗಿದ್ದಾರೆ, ಎಷ್ಟರ ಮಟ್ಟಿಗೆ ಒಬ್ಬನಿಗೆ ದೇವರಲ್ಲಿ ಭಕ್ತಿಶ್ರದ್ಧಾದಿಗಳು ಹೆಚ್ಚುತ್ತಾ ಬರುತ್ತವೆಯೋ ಅಷ್ಟರ ಮಟ್ಟಿಗೆ ಆತನ ಜೀವನದಲ್ಲಿ ಪರಿಶುದ್ಧವಾದೊಂದು ಪರಿವರ್ತನೆ ಉಂಟಾಗುತ್ತಾ ಬರುವುದೆಂಬುದು ನಿರಾಕರಿಸಲಾಗದ ಒಂದು ವಾಸ್ತವಾಂಶವಾಗಿದೆ. ಆದ್ದರಿಂದ, ದೇವವಿಶ್ವಾಸವನ್ನು ಒಂದು ಮಾಮೂಲಾಗಿ ಕೈಗೊಂಡಿರುವವರ ಬದುಕನ್ನು ಆಧಾರವಾಗಿಟ್ಟು ದೇವರಿಲ್ಲವೆಂದು ನಿರೀಶ್ವರವಾದಿಗಳು ಅನುಮಾನಿಸುವುದಾದರೆ ಅದು ಸ್ವೀಕಾರಾರ್ಹವಲ್ಲ. ಏಕೆಂದರೆ, ಒಂದು ವಿಚಾರದಲ್ಲಿ ಯಥಾರ್ಥವಾದ ವಿಶ್ವಾಸ ಆ ವಿಶ್ವಾಸಕ್ಕೆ ವಿರುದ್ಧವಾಗಿ ವರ್ತಿಸಲು ಹೇತುವಾಗುತ್ತದೆಂದು ಹೇಳುವುದು ತೀರಾ ಅವೈಚಾರಿಕವಾಗಿದೆ. ಮಾತ್ರವಲ್ಲ, ದೇವತತ್ವವನ್ನು ಶಕ್ತಿಯುತವಾಗಿ ಪ್ರಬೋಧಿಸಿದ ಆಧ್ಯಾತ್ಮಿಕ ಗುರುಗಳೂ ಅವರ ನಿಜವಾದ ಅನುಯಾಯಿಗಳೂ ನಾಸ್ತಿಕ ವಾದಿಗಳ ಈ ಊಹೆ ಸತ್ಯವಿರುದ್ಧವೆಂದು ಎಲ್ಲ ಕಾಲಗಳಲ್ಲೂ ಸಾಬೀತುಗೊಳಿಸಿದ್ದಾರೆ.

ದೇವರು ಮಾಂಸಚಕ್ಷುಸ್ಸುಗಳಿಗೆ ಗೋಚರಿಸುವುದಿಲ್ಲ ಎಂಬುದನ್ನು ಅವನ ಅಸ್ತಿತ್ವವನ್ನು ಅಲ್ಲಗಳೆಯಲಿಕ್ಕೆ ಒಂದು ಪ್ರಮಾಣವಾಗಿ ಸಾಮಾನ್ಯ ಹೇಳಲಾಗುತ್ತದೆ. ಆದರೆ ಅವನು ದೃಷ್ಟಿಗೆ ಗೋಚರಿಸುವನಾದರೆ ಅವನು ಸಹ ವೃಕ್ಷಶಿಲಾದಿಗಳಂತೆ ಸ್ಥೂಲವಸ್ತುವಾಗುವನಲ್ಲದೆ ದೇವರಾಗಲಿಕ್ಕಿಲ್ಲ. ದೇವರು ಅತಿ ಸೂಕ್ಷ್ಮನೂ ಸರ್ವಾಂತರ್ಯಾಮಿಯೂ ಆಗಿರುವಾಗ ಸ್ಥೂಲದೃಷ್ಟಿಗೆ ಗೋಚರಿಸಲಾರನಷ್ಟೆ. ಆದರೆ ವಿವೇಕಶಾಲಿ ಮನುಷ್ಯನು ಬಾಹ್ಯದೃಷ್ಟಿಗೆ ಕಾಣಿಸದುದರ ಬಗ್ಗೆ ಮಾತ್ರವಲ್ಲ, ಪಂಚೇಂದ್ರಿಯಗಳಲ್ಲಿ ಯಾವುದಕ್ಕೂ ಅನುಭವವಾಗದ ಎಷ್ಟೋ ಸಂಗತಿಗಳ ಇರುವಿಕೆಯ ಬಗ್ಗೆ ನಂಬುತ್ತಾನೆ. ಅತಿ ಸೂಕ್ಷ್ಮವಾದ ಕೆಲವು ವಸ್ತುಗಳ ಕುರಿತು ನಾವು ಬಾಹ್ಯೇಂದ್ರಿಯಗಳ ಮೂಲಕವಲ್ಲ, ಅವುಗಳ ಗುಣವಿಶೇಷಗಳ ಮೂಲಕ ತಿಳಿಯುತ್ತೇವೆ. ದೇವಾನುರಾಗದಲ್ಲಿ ಆತ್ಮಾರ್ಪಣೆ ಮಾಡಿ ಅವನನ್ನು ಪಡೆಯಲಿಕ್ಕೋಸ್ಕರ ತೀವ್ರ ಪ್ರಯತ್ನ ಮಾಡಿದ ಸತ್ಯಸಂಧರೂ ಜ್ಞಾನಿಗಳೂ ಆದ ಮಹಾತ್ಮರುಗಳಿಗೆ ದೇವರನ್ನು ಅವನ ಪ್ರಭಾವಗಳು ಮತ್ತು ಮಹಿಮಾವಿಲಾಸಗಳ ಮೂಲಕ ಅರಿಯಲು ಸಾಧ್ಯವಾಗಿದ್ದು, ಭೌತ ವಸ್ತುಗಳ ಕುರಿತು ಇಂದ್ರಿಯಗಳಿಗೆ ಉಂಟಾಗುವುದಕ್ಕಿಂತ ಹೆಚ್ಚು ಖಚಿತವಾದ ಒಂದು ಅನುಭವಜ್ಞಾನ ಅವನ ಅಸ್ತಿತ್ವದ ಕುರಿತು ಉಂಟಾಗಿ ಅವರು ಆ ಸಂಗತಿಯ ಕುರಿತು ಸಾಕ್ಷ್ಯ ವಹಿಸಿದ್ದಾರೆ. ಸತ್ಯಸಂಧರಾದ ಅನೇಕ ಮಹಾತ್ಮರುಗಳ ಇಂತಹ ಅನುಭವಿಸಿದ್ಧ ಸಾಕ್ಷ್ಯಗಳನ್ನು ಎಂದಿಗೂ ನಿರಾಕರಿಸಲಿಕ್ಕೆ ಅಸಾಧ್ಯ. ಅಜ್ಞಾನದಿಂದ ಲಕ್ಷಗಟ್ಟಲೆ ಜನರು ಒಂದು ಸಂಗತಿಯ ಇರುವಿಕೆಯನ್ನು ಅಲ್ಲಗಳೆಯುವರಾದರೆ, ಅದು ಆ ಸಂಗತಿ ಇಲ್ಲವೆಂಬುದಕ್ಕೆ ಸಾಕ್ಷಿಯಾಗುವುದಿಲ್ಲ. ಆದರೆ ಸತ್ಯಸಂಧರಾದ ಇಬ್ಬರು ಆ ಸಂಗತಿಯ ಬಗ್ಗೆ ಅವರಿಗುಂಟಾದ ಅನುಭವವನ್ನು ಪ್ರಸ್ತಾಪಿಸುವರಾದರೆ ಅದು ಸ್ವೀಕಾರಾರ್ಹವಾಗುವುದು. ದೇವಾಸ್ತಿತ್ವವನ್ನು ನಿರಾಕರಿಸುವವರು ಅದಕ್ಕೆ ಆಧಾರವಾಗಿ ಹೇಳುವುದು ದೇವರ ಕುರಿತು ತಮಗಿರುವ ಅಜ್ಞಾನವನ್ನಾಗಿದೆ. ಮಾತ್ರವಲ್ಲ, ಅವರು ದೇವರನ್ನು ಪಡೆಯಲಿಕ್ಕೆ ಹೃದಯ ಪೂರ್ವಕವಾಗಿ ತೀವ್ರ ಪ್ರಯತ್ನವನ್ನು ಮಾಡಲೂ ಇಲ್ಲ. ಆದರೆ ದೇವರಿದ್ದಾನೆಂದೂ ಅವನನ್ನು ತಾವು ಗಳಿಸಿರುವೆವೆಂದೂ ಹೇಳುವವರು ತಮ್ಮ ಜೀವಮಾನವನ್ನು ಸಂಪೂರ್ಣವಾಗಿ ದೇವಮಾರ್ಗದಲ್ಲಿ ಅರ್ಪಿಸಿದವರಾಗಿದ್ದಾರೆ. ಸಸ್ಯಶಾಸ್ತ್ರದ ಗಂಧಗಾಳಿ ತಿಳಿಯದ ಜನಕೋಟಿ ಸಸ್ಯಗಳಿಗೆ ಜೀವವಿಲ್ಲವೆಂದು ಹೇಳುವುದರಿಂದ ಅದು ಸ್ವೀಕಾರಾರ್ಹ ತತ್ವವಾಗುವುದಿಲ್ಲ. ಆದರೆ ಸಸ್ಯಗಳಿಗೆ ಜೀವವಿದೆಯೆಂದು ಡಾಕ್ಟರ್ ಬೋಸ್ ಹೇಳುವಾಗ,

ಅದು ಅಂಗೀಕಾರಾರ್ಹವಾಗುತ್ತದೆ. ಏಕೆಂದರೆ, ಅವರು ಆ ವಿಷಯದಲ್ಲಿ ತನ್ನ ಜೀವಮಾನದ ಬಹ್ವಂಶವನ್ನು ವಿನಿಯೋಗಿಸಿ, ಸಂಶೋಧನೆ ನಡೆಸಿ ಆ ಸತ್ಯಾಂಶವನ್ನು ಗ್ರಹಿಸಿದವರಾಗಿದ್ದಾರೆ. ಹೀಗೆ ಪ್ರತಿಯೊಂದು ವಿಷಯದಲ್ಲೂ ತೀವ್ರಯತ್ನ ಮಾಡಿ ಅದರ ನಿಜಸಂಗತಿಯನ್ನು ತಿಳಿದುಕೊಂಡವರ ಸಾಕ್ಷ್ಯವು ಆ ವಿಚಾರದಲ್ಲಿ ಸತ್ಯವಾದ ಸಾಕ್ಷ್ಯವಾಗುತ್ತದೆ; ಹಾಗಲ್ಲದೆ ಆ ವಿಚಾರದಲ್ಲಿ ಏನೂ ಪ್ರಯತ್ನ ಮಾಡದವರ ಹೇಳಿಕೆಗಳಲ್ಲ. ಅದೇ ಪ್ರಕಾರ ದೇವಸಾಮಿಪ್ಯವನ್ನು ಗಳಿಸಲಿಕ್ಕಾಗಿ ಏನೂ ಪರಿಶ್ರಮಿಸದೆ ಪ್ರಾಪಂಚಿಕ ವಿಷಯಗಳಲ್ಲಿ ಮಾತ್ರ ವಿವರಿಸಿದವರಿಗೆ ದೇವಾಸ್ತಿತ್ವ ಕುರಿತಿರುವ ಅಜ್ಞಾನ ಎಂದಿಗೂ ಅಂಗೀಕಾರಾರ್ಹವಾದ ಸಾಕ್ಷ್ಯವಾಗಲಾರದು. ಒಟ್ಟಾರೆ, ಪ್ರತಿಯೊಂದು ಕಾಲದಲ್ಲೂ ದೇವರನ್ನು ಗಳಿಸಲಿಕ್ಕಾಗಿ ಅತ್ಯಂತ ಪ್ರಯತ್ನ ಮಾಡುತ್ತಾ ಅವನ ಮೇಲಿನ ಪ್ರೀತಿಯಲ್ಲಿ ಮುಳುಗಿರುವವರ ಅನುಭವಸಿದ್ಧ ಸಾಕ್ಷ್ಯ ದೇವರಿದ್ದಾನೆಂಬುದಕ್ಕೆ ಅತ್ಯಂತ ವಿಚಾರಯುತವಾದ ಒಂದು ಪ್ರಮಾಣವಾಗಿದೆ.

ಇದೇ ಪ್ರಕಾರ, ಅದ್ಭುತಕರವಾದ ವ್ಯವಸ್ಥೆಯಿಂದಲೂ ಸಂಪೂರ್ಣವಾದ ನಿಯಮಾನುಸಾರವಾಗಿಯೂ ಚಲಿಸುತ್ತಿರುವ ಈ ಬ್ರಹ್ಮಾಂಡವು, ಅದಕ್ಕೆ ಅತ್ಯಂತ ಜ್ಞಾನಿಯೂ ಅತಿ ಬುದ್ಧಿಶಾಲಿಯೂ ಆದ ಒಬ್ಬ ನಿಯಾಮಕನಿದ್ದಾನೆಂದು ಸಾರುತ್ತದೆ. ದೇವರು ಬಾಹ್ಯೇಂದ್ರಿಯಗಳಿಗೆ ಅನುಭವವಾಗದಿರುವುದರಿಂದ ಅವನನ್ನು ನಂಬುವುದು ಅವಿವೇಕತನವೆಂದು, ಹೇಳುವುದಾದರೆ, ಅತ್ಯಂತ ವ್ಯವಸ್ಥಿತರಾದ ಕ್ರಮದಲ್ಲಿರುವ ಈ ಪ್ರಪಂಚಕ್ಕೆ ಬುದ್ಧಿಶಾಲಿಯಾದ ಒಬ್ಬ ನಿಯಾಮಕನು ಇಲ್ಲವೆಂದು ಭಾವಿಸುವುದು ಅದಕ್ಕಿಂತಲೂ ಹೆಚ್ಚು ಅವಿವೇಕತನವಾಗಿದೆ. ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವೂ ಪ್ರತ್ಯೇಕ ನಿಯಮಕ್ಕನುಸಾರವಾಗಿ ಮತ್ತು ಪ್ರತ್ಯೇಕ ಸೀಮೆಯೊಳಗೆ ಸೀಮಿತ ಶಕ್ತಿಯೊಂದಿಗೆ ಹಲವು ವಿಧ ಪರಿವರ್ತನೆಗಳಿಗೂ ಮಾರ್ಪಾಟಿಗೂ ನಾಶಕ್ಕೂ ಗುರಿಯಾಗಿ ಕಾಣಲ್ಪಡುತ್ತದೆ. ಈ ಅವಸ್ಥೆಗಳೆಲ್ಲ ಎಲ್ಲವಕ್ಕೂ ಒಬ್ಬ ಕಾರಣಕರ್ತನಿದ್ದಾನೆಂಬುವಕ್ಕೆ ಸರಿಯಾದ ಪುರಾವೆಗಳಾಗಿವೆ. ಹೀಗೆ ಚಿಂತಾಶೀಲರಿಗೆ ಈ ಬ್ರಹ್ಮಾಂಡವೇ, ಅದರ ನಿರ್ಮಾಪಕನಾಗಿ ಒಬ್ಬ ದೇವನಿದ್ದಾನೆಂಬುದಕ್ಕೆ ಪ್ರಥಮ ಸಾಕ್ಷ್ಯವಾಗಿದೆ. ಒಂದು ಮೂಲಕಾರಣವಿಲ್ಲದೆ ಈ ಪ್ರಪಂಚವು ಸೃಷ್ಟಿಯಾಗಲು ಸಾಧ್ಯವಿಲ್ಲವೆಂದು ಹೇಳುವಾಗ ಹಾಗಾದರೆ ದೇವರನ್ನು ಸೃಷ್ಟಿಸಿದ್ದು ಯಾರೆಂದೂ ಅವನ ಸೃಷ್ಟಿಗೆ ಕಾರಣ ಯಾರೆಂದೂ ಕೆಲವರು ಪ್ರಶ್ನಿಸಬಹುದು. ಆದರೆ, ಪ್ರಪಂಚದ ಸ್ಥಿತಿಯೇ ಅದಕ್ಕೊಬ್ಬ ನಿಯಾಮಕನಿದ್ದಾನೆಂದು ಸಾರುತ್ತದೆ. ಸಕಲ ಚರಾಚರಗಳ ಆದಿಕಾರಣನಾದ ಆ ಜಗನ್ನಿಯಾಮಕನು ಅತ್ಯಂತ ಜ್ಞಾನಿಯೂ ಅತಿ ಬುದ್ಧಿಶಾಲಿಯೂ ಆಗಿರಬೇಕೆಂದು ಸಹ ಅದು ಮನದಟ್ಟು ಮಾಡಿಕೊಡುತ್ತದೆ. ಹೀಗೆ, ಈ ಕಾರ್ಯಕಾರಣ ಸಂಬಂಧ ಒಂದು ಕಡೆಯಲ್ಲಿ ಕೊನೆಗೊಳ್ಳುವುದಿಲ್ಲವಾದರೆ ಮೂಲಕಾರಣವೆಂಬುದು ಇಲ್ಲವೆಂದು ಹೇಳಬೇಕಾದೀತು. ಆಗ, ಅದರ ಕಾರ್ಯವಾಗಿರುವ ಈ ಪ್ರಪಂಚ ಸಹ ಇಲ್ಲವೆಂದು ಹೇಳಬೇಕಾದೀತು. ದೇವನೆಂದರೆ ಎಲ್ಲದರ ಮೂಲಕಾರಣನೆಂದೂ ಯಾರದೇ ಕಾರ್ಯವಲ್ಲವೆಂದೂ ಆಗಿರಲಿಕ್ಕೆ ಸಾಧ್ಯ. ಆಗ, ಅವನ ಕಾರಣಕರ್ತ ಯಾರೆಂಬ ಪ್ರಶ್ನೆ ಅಸಂಗತವಾಗುತ್ತದೆ. ಆದರೆ ಪ್ರಪಂಚದ ಸ್ಥಿತಿ, ಅದರಲ್ಲಿ ಗೋಚರವಾಗುವ ವೈವಿಧ್ಯತೆ ಹಾಗೂ ಅದರಲ್ಲೇ ಅಂತರ್ಗತವಾಗಿರುವ ಏಕತೆ ಎಲ್ಲವೂ ಅದಕ್ಕೊಬ್ಬ ಸೃಷ್ಟಿಕರ್ತನಿದ್ದಾನೆಂದು ತಿಳಿಸಿಕೊಡುತ್ತದೆ. ಈ ಪ್ರಪಂಚದ ಮೂಲಕಾರಣ ಪರಮಾಣುವೆಂದು ಹೇಳುವವರಿಗೆ, ಅದೇನು? ಅದು ಹೇಗೆ ಉದ್ಭವಿಸಿತು? ಯಾವಾಗ ಉಂಟಾಯಿತು? ಈ ರೀತಿ ಪರಿವರ್ತನೆಗಳಿಗೆ ಒಳಗಾಗಲು ಹಾಗೂ ವಿವಿಧ ನಿಯಮಾನುಸಾರ ವರ್ತಿಸಲು ಅದಕ್ಕೆ ಹೇಗೆ ಶಕ್ತಿ ಸಿದ್ಧಿಸಿತು? ಎಂಬ ವಿಚಾರಗಳ ಬಗ್ಗೆ ಯಾವುದೇ ತಿಳುವಳಿಕೆ ಇಲ್ಲ. ಆದರೆ ಕೂಡ, ಪ್ರಪಂಚದ ಮೂಲಕಾರಣ ಪರಮಾಣುವೆಂದು ಅವರು ಘೋಷಿಸುತ್ತಾರೆ. ಆದರೆ ಈ ವಿವೇಕಶೂನ್ಯ ಪರಮಾಣು ಮೂಲಕಾರಣವೆಂದು ನಂಬುವವರಿಗೆ, ಈ ಬ್ರಹ್ಮಾಂಡದ ಅದ್ಭುತಕರವಾದ ರಚನೆ ಮತ್ತು ಅದರ ನಿಯಮ ವ್ಯವಸ್ಥೆಗಳನ್ನು ಮುಂದಿರಿಸಿ, ಬಹಳ ಬುದ್ಧಿಶಾಲಿಯೂ ಅತೀವ ಜ್ಞಾನಿಯೂ ಆದ ಓರ್ವನು ಇದರ ನಿರ್ಮಾಪಕ ಹಾಗೂ ನಿಯಾಮಕನೆಂದು ಹೇಳುವುದು ಹೆಚ್ಚು ವಿವೇಕಪೂರ್ಣವೆಂದು ಮನವರಿಕೆಯಾಗಬಹುದು.

ವಾಸ್ತವದಲ್ಲಿ, ಪಂಚೇಂದ್ರಿಯಗಳಿಗೆ ಅನುಭವವಾಗದಿರುವುದರಿಂದಲೂ ದೇವನಿದ್ದಾನೆಂದು ಹೇಳುವವರಲ್ಲಿ ಬಹ್ವಂಶ ಜನರ ಜೀವನದಲ್ಲಿ ದೊಡ್ಡ ಪರಿವರ್ತನೆಯುಂಟಾಗಿ ಕಾಣದಿರುವುದರಿಂದಲೂ ದೇವರಿಲ್ಲವೆಂದು ಹೇಳುವುದು ಸಮರ್ಥನೀಯವಲ್ಲ. ಅದೇ ಪ್ರಕಾರ ಧರ್ಮವಿರುದ್ಧವಾಗಿ ಜೀವನ ನಡೆಸುವವರಿಗೆ ನಿಜವಾಗಿಯೂ ದೇವವಿಶ್ವಾಸ ಇದೆಯೆಂದು ಹೇಳುವುದು ಸಹ ಅಸಮರ್ಥನೀಯ. ಸಂಕ್ಷಿಪ್ತದಲ್ಲಿ, ಸರ್ವ ಧರ್ಮಗಳ ಮೂಲತತ್ವ ಮತ್ತು ಸಕಲ ಸತ್ಯಗಳ ಕೇಂದ್ರವೂ ಆದ ದೇವವಿಶ್ವಾಸ ಇಂದು ಬಹಳ ಪರಿತಾಪಕರವಾದ ಆವಸ್ಥೆಗೆ ತಲಪಿದೆ. ಕೆಲವರು ಬಹಿರಂಗವಾಗಿ ದೇವರಿಲ್ಲವೆಂದು ಘೋಷಿಸುತ್ತಾರೆ. ಬೇರೆ ಕೆಲವರು ಆ ಸರ್ವಶಕ್ತನ ಸತ್ತೆಯನ್ನು ತಾವು ನಂಬುತ್ತೇವೆಂದು ಹೇಳಿಕೊಂಡು, ಆ ನಂಬಿಕೆಗೆ ತೀರಾ ವಿರುದ್ಧವಾದ ರೀತಿಯಲ್ಲಿ ಜೀವಿಸುತ್ತಾ, ಆ ಮೂಲಕ ತಮಗೆ ಯಾವ ಫಲವೂ ಸಿದ್ಧಿಸಲಿಲ್ಲವೆಂದು ತಮ್ಮ ವರ್ತನೆಗಳಿಂದ ತೋರ್ಪಡಿಸುತ್ತಾರೆ. ಇಂದಿನ ದೇವವಿಶ್ವಾಸದ ಸ್ಥಿತಿ ಈ ಪ್ರಕಾರವಾಗಿದೆ. ಯಥಾರ್ಥವಾಗಿಯೂ ದೇವರನ್ನು ನಂಬುವ, ಪ್ರೀತಿಸುವ ಒಬ್ಬ ಭಕ್ತನಿಗೆ ಇದಕ್ಕಿಂತ ವ್ಯಸನಕರವಾದುದು ಬೇರೊಂದಿಲ್ಲ. ಈ ಲೇಖನದಲ್ಲಿ ದೇವಾಸ್ತಿತ್ವದ ಕುರಿತು ಕೂಲಂಕಷವಾಗಿ ಚರ್ಚಿಸಲು ಉದ್ದೇಶವಿಲ್ಲದುದರಿಂದ, ಆ ಸರ್ವೇಶ್ವರನನ್ನು ಹೃದಯಪೂರ್ವಕವಾಗಿ ನಂಬಿ ಅದಕ್ಕನುಸಾರವಾಗಿ ಬದುಕುವ ಭಾಗ್ಯ ಮನುಷ್ಯರೆಲ್ಲರಿಗೂ ಉಂಟಾಗಲಿ ಎಂದು ಪ್ರಾರ್ಥಿಸುತ್ತಾ ನಾನು ಇದನ್ನು ಸಮಾಪ್ತಿಗೊಳಿಸುತ್ತೇನೆ. ★

### ದೇವದರ್ಶನ

ಈ ಲೋಕದಲ್ಲಿ ದೇವರನ್ನು ಕಾಣಲು ಭಾಗ್ಯ ಲಭಿಸದವನು ಅಂತ್ಯದಿನದಲ್ಲೂ ಅಂಧಕಾರದಲ್ಲಿ ಮುಳುಗುವನು. ಅಲ್ಲಾಹನು ಹೇಳುತ್ತಾನೆ: من كان في هذه اعمى فهو في الاخرة اعمى "ಯಾವನು ಈ ಲೋಕದಲ್ಲಿ ಅಂಧನಾಗಿರುವನೋ ಅವನು ಪರಲೋಕದಲ್ಲೂ ಅಂಧನಾಗಿರುವನು" (17:73)

—ಹರ್ಷುತ್ ಅಹ್ಮದ್ (ಅ)

*With Best Compliments From :*

**ASSOO SAW MILLS**
**Puthiyapalam,**
**CALICUT-673 002.**
**Phone : 73704**

*With Best Compliments From :*

**MUFASABA TRADERS**
**MANNARGHAT-678 582.**

Phone : 229
429
439

STD : 04924

# ಸಾಮಾಜಿಕ ಮೌಲ್ಯಗಳು

★ **ಸರ್ ಮುಹಮ್ಮದ್ ಝುಫ್ರುಲ್ಲಾ ಖಾನ್**

ನೈತಿಕ ಮತ್ತು ಆಧ್ಯಾತ್ಮಿಕ ಪ್ರಗತಿಯ ಅತ್ಯುನ್ನತ ಹಂತವನ್ನೇರಲು ಪ್ರತಿಯೊಬ್ಬ ವ್ಯಕ್ತಿಗೆ ಸಾಧ್ಯ ಹಾಗೂ ಅವನ ವ್ಯಕ್ತಿತ್ವವು ಮಾನಿಸಲ್ಪಡಬೇಕು ಎಂಬ ಕಲ್ಪನೆಯಲ್ಲಿ ಮನುಷ್ಯನಿಗೆ ಸಂಬಂಧಿಸಿದ ಎಲ್ಲಾ ಮೌಲ್ಯಗಳು ನೆಲೆಗೊಳ್ಳುತ್ತವೆ. ವರ್ಗ, ವರ್ಣ, ಭಾಷೆ, ಸಂಪತ್ತು ಇತ್ಯಾದಿಗಳಲ್ಲಿರುವ ವ್ಯತ್ಯಾಸಗಳಿಂದ ಸಮಾಜ ರಚನೆಯಲ್ಲಿ ಪ್ರಯೋಜನವಿರುವುದರಿಂದ ಖುರ್‌ಆನ್ ಆ ವ್ಯತ್ಯಾಸಗಳನ್ನು ಅಂಗೀಕರಿಸುತ್ತಾ ದೈವಿಕ ದೃಷ್ಟಾಂತಗಳೆಂಬಂತೆ ಶ್ರದ್ಧಾಳು ಮತ್ತು ಜ್ಞಾನಿಗಳ ಮುಂದೆ ಅವುಗಳನ್ನಿರಿಸುತ್ತವೆ (30:23). ಆದರೆ ಈ ವ್ಯತ್ಯಾಸದಿಂದ ಏನಾದರೂ ವಿಶೇಷಾಧಿಕಾರವಾಗಲಿ ಅಯೋಗ್ಯತೆಯಾಗಲಿ ಒಬ್ಬ ವ್ಯಕ್ತಿಗೆ ಉಂಟಾಗುವುದಿಲ್ಲ. ಸಾಮಾಜಿಕ ವ್ಯವಹಾರದಲ್ಲಿ ಹೆಚ್ಚಿನ ಸೌಕರ್ಯಕ್ಕಾಗಿ ಮನುಷ್ಯವಂಶವನ್ನು ಗೋತ್ರಗಳನ್ನಾಗಿಯೂ ದೇಶಗಳನ್ನಾಗಿಯೂ ದೇವರು ವಿಂಗಡಿಸಿದ್ದಾನೆಂದು ಖುರ್‌ಆನ್ ಹೇಳುತ್ತದೆ. ಯಾವುದಾದರೂ ಗೋತ್ರಕ್ಕೆ ಸೇರಿದವನೆಂಬ ಕಾರಣದಿಂದ ಅಥವಾ ಯಾವುದಾದರೂ ದೇಶದ ಪ್ರಜೆಯೆಂಬ ಕಾರಣದಿಂದ ಯಾರಿಗೂ ಯಾವುದೇ ವಿಶೇಷಾಧಿಕಾರ ಸಿದ್ಧಿಸುವುದಿಲ್ಲ; ವಿಶಿಷ್ಟವಾದ ಗೌರವಾದರಕ್ಕೆ ಅದು ಹೇತುವೂ ಆಗುವುದಿಲ್ಲ. ಸಾತ್ವಿಕ ಜೀವನವೇ ದೇವರದೃಷ್ಟಿಯಲ್ಲಿ ಗೌರವದ ನಿಜವಾದ ಮಾನದಂಡ (49:14). ತನ್ನ ಐತಿಹಾಸಿಕ "ಬೀಳ್ಕೊಡುಗೆ" ಭಾಷಣದಲ್ಲಿ ಪೈಗಂಬರ್ (ಸ.) ಈ ರೀತಿ ನುಡಿದರು: "ನೀವೆಲ್ಲರೂ ಪರಸ್ಪರ ಸಹೋದರರು. ಎಲ್ಲರೂ ಸಮಾನರು. ನಿಮ್ಮ ಪೈಕಿ ಯಾರಿಗೂ ಯಾರ ಮೇಲೆಯೂ ಯಾವುದೇ ಹಿರಿಮೆಯಾಗಲಿ ವಿಶೇಷಾಧಿಕಾರವಾಗಲಿ ಇಲ್ಲ. ಒಬ್ಬ ಅರಬಿಯನಿಗೆ ಅರಬಿಯೇತರನ ಮೇಲೆ ಯಾವ ಅಧಿಕಾರವೂ ಇಲ್ಲ; ಒಬ್ಬ ಅರಬಿಯೇತರನಿಗೆ ಅರಬಿಯನ ಮೇಲೆ ಸಹ ಯಾವುದೇ ಅಧಿಕಾರವಿಲ್ಲ. ಬಿಳಿಯವನಿಗೆ ಕರಿಯವನ ಮೇಲಾಗಲಿ ಕರಿಯವನಿಗೆ ಬಿಳಿಯವನ ಮೇಲಾಗಲಿ ಯಾವ ಶ್ರೇಷ್ಠತೆಯೂ ಇಲ್ಲ – ಸಾತ್ವಿಕತೆಯ ಆಧಾರದಲ್ಲಿ ಹೊರತು." (ಹಂಬಲ್)



**ಸರ್ ಮುಹಮ್ಮದ್ ಝುಫ್ರುಲ್ಲಾ ಖಾನ್ ಅವರು ಅಂತಾರಾಷ್ಟ್ರೀಯ ರಂಗದಲ್ಲಿ ಪ್ರಖ್ಯಾತ ವ್ಯಕ್ತಿಯಾಗಿದ್ದಾರೆ. ಅಂತಾರಾಷ್ಟ್ರೀಯ ನಿಯಮ – ರಾಜ್ಯನೀತಿ ಮಾತ್ರವಲ್ಲ ಧಾರ್ಮಿಕಜ್ಞಾನದಲ್ಲೂ ಅವರು ಒಬ್ಬ ಮಹಾಪಂಡಿತರು. ಓರ್ವ ನಿಷ್ಠಾವಂತ ಅಹ್ಮದಿಯಾಗಿದ್ದ ಅವರು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ 17ನೇ ಅಧಿವೇಶನದ ಅಧ್ಯಕ್ಷರಾಗಿದ್ದರು. ಹೇಗ್‌ನಲ್ಲಿರುವ ಜಾಗತಿಕ ನ್ಯಾಯಾಲಯದ ಅಧ್ಯಕ್ಷರಾಗಿಯೂ ಅವರು ಸೇವೆಸಲ್ಲಿಸಿದ್ದಾರೆ. ತನ್ನ 93ನೇ ವಯಸ್ಸಿನಲ್ಲಿ 1985, ಸಪ್ಟೆಂಬರ್ 1ರಂದು ಅವರು ನಿಧನರಾದರು.**

**ಝುಫ್ರುಲ್ಲಾ ಖಾನರು ಉರ್ದು ಮತ್ತು ಇಂಗ್ಲಿಷ್‌ನಲ್ಲಿ ಧಾರಾಳವಾಗಿ ಬರೆದಿದ್ದಾರೆ. ಹೆಚ್ಚಿನವು ಧರ್ಮಕ್ಕೆ ಸಂಬಂಧಿಸಿದವು. ಪವಿತ್ರ ಖುರ್‌ಆನಿನ ಅವರ ಇಂಗ್ಲಿಷ್ ಭಾಷಾಂತರವನ್ನು ಲಂಡನಿನ Curzon Press Ltd. ಪ್ರಕಾಶನಗೊಳಿಸಿದೆ. Islam and Human Rights ಎಂಬ ಪುಸ್ತಕದ Social Values ಎಂಬ ಅಧ್ಯಾಯದ ಅನುವಾದವಾಗಿದೆ ಈ ಲೇಖನ.**

ಇಸ್ಲಾಂ ಸಾರ್ವಲೌಕಿಕ ಭ್ರಾತೃತ್ವವನ್ನು ದೃಢ ಪಡಿಸುತ್ತದೆ. ದೇವರ ಮೂಲಕ ಮನುಷರ್ಯು ಪರಸ್ಪರ ಪೋಷಿಸುವ ಸಂಬಂಧದಿಂದ ಯಥಾರ್ಥವಾದ ಸಾಹೋದರ್ಯವನ್ನು ಸ್ಥಾಪಿಸಲು ಸಾಧ್ಯವೆಂದು ಅದು ಒತ್ತಿ ಹೇಳುತ್ತದೆ. ಇತರ ಸಂಗತಿಗಳು – ಸರ್ವಸಮವಾದ ಆಸಕ್ತಿ, ಸರ್ವಸಮವಾದ ಪ್ರಯತ್ನ, ಸರ್ವಸಮವಾದ ಉದ್ಯೋಗಗಳು – ಒಂದು ಮಿತಿಯ ವರೆಗೆ ಮೈತ್ರಿಯನ್ನೂ ಸಹೋದರತೆಯನ್ನೂ ಬೆಳೆಸಲು ಉಪಯುಕ್ತವಾದರೂ ಅವು ಹಗೆ ಮತ್ತು ದ್ವೇಷವನ್ನು ಸೃಷ್ಟಿಸಲು ಸಹ ಹೇತುವಾಗುವುವು. ಎಲ್ಲ ಮನುಷ್ಯರೂ ಒಂದೇ ರೀತಿಯಲ್ಲಿ ದೇವರ ಸೃಷ್ಟಿಗಳೂ ದಾಸರೂ ಆಗಿದ್ದಾರೆ ಮತ್ತು ಅವರೆಲ್ಲರೂ ಅವನ ಸಂತೃಪ್ತಿಯನ್ನು ಪಡೆಯಲಿಕ್ಕಾಗಿ ನಿರಂತರವಾಗಿ ಪರಿಶ್ರಮಿಸಬೇಕಾಗಿದೆ ಎಂಬ ಪ್ರಜ್ಞೆಯಿಂದ ಮಾತ್ರವೇ ಮಾನವಜೀವಿತದ ನಾನಾತರ ಪರೀಕ್ಷೆಗಳನ್ನು ಜಯಿಸಲು ಸಹಾಯಕವಾದ ಯಥಾರ್ಥ ಸಾಹೋದರ್ಯವನ್ನು ಸೃಷ್ಟಿ ಮಾಡಲು ಸಾಧ್ಯ. "ನೀವೆಲ್ಲರೂ ಒಗ್ಗಟ್ಟಾಗಿ ದೇವಪಾಶವನ್ನು ಭದ್ರವಾಗಿ ಹಿಡಿದುಕೊಳ್ಳಿರಿ; ಭಿನ್ನರಾಗದಿರಿ. ಅಲ್ಲಾಹನು ನಿಮಗೆ ನೀಡಿದ ಅನುಗ್ರಹಗಳನ್ನು ನೀವು ಸ್ಮರಿಸುತ್ತಿರಿ. ನೀವು ಪರಸ್ಪರ ಶತ್ರುಗಳಾಗಿದ್ದಾಗ ಅವನು ನಿಮ್ಮ ಹೃದಯಗಳನ್ನು ಅನ್ಯೋನ್ಯ ಪ್ರೀತಿಯಿಂದ ಒಂದುಗೂಡಿಸಿದನು. ಹಾಗೆ ಅವನ ಕೃಪೆಯಿಂದ ನೀವು ಸಹೋದರರಾಗಿ ಮಾರ್ಪಟ್ಟಿದ್ದೀರಿ. ನೀವು ಒಂದು ಅಗ್ನಿಕುಂಡದ ಅಂಚಿನಲ್ಲಿದ್ದಾಗ ಅವನು ನಿಮ್ಮನ್ನು ಅದರಿಂದ ರಕ್ಷಿಸಿದನು. ಈ ಪ್ರಕಾರ ದೇವರು ಅವನ ಆಜ್ಞೆಗಳನ್ನು ವಿವರಿಸಿಕೊಡುತ್ತಾನೆ – ನೀವು ಸತ್ಪಥದಲ್ಲಿ ನಡೆಸಲ್ಪಡಲಿಕ್ಕಾಗಿ" (3:104).

ಕುಟುಂಬವು ಮನುಷ್ಯ ಸಮುದಾಯದ ಪ್ರಾಥಮಿಕ ಘಟಕವಾಗಿದೆ. ವಿವಾಹದ ಮೂಲಕ ಒಂದು ಕುಟುಂಬಕ್ಕೆ ಬುನಾದಿ ಹಾಕಲ್ಪಡುತ್ತದೆ. ಪತ್ನಿಯನ್ನು ಆಯ್ಕೆಮಾಡುವಾಗ ಪರಿಗಣಿಸಬೇಕಾದ ಪ್ರಧಾನ ವಿಚಾರಗಳಲ್ಲೊಂದನ್ನು, ವಿವಾಹಕರ್ಮ ಸಂದರ್ಭದಲ್ಲಿ ಮುಹಮ್ಮದ್ ಪೈಗಂಬರರು ಯಾವಾಗಲೂ ಪಠಿಸುತ್ತಿದ್ದ ಮೂರು-ನಾಲ್ಕು ಖುರ್‌ಆನ್ ವಚನಗಳಲ್ಲಿ ವಿವರಿಸಲಾಗಿದೆ. "ಓ ವಿಶ್ವಾಸಿಗಳೇ, ನೀವು ಅಲ್ಲಾಹನ ಭಯ ವಿರಿಸಿಕೊಳ್ಳಿರಿ. ನಾಳೆಗಾಗಿ ಏನನ್ನು ಕಳುಹಿಸಲಾಗಿದೆಯೆಂದು ಪ್ರತಿಯೊಂದು ಮನುಷ್ಯಾತ್ಮವು ನೋಡಿಕೊಳ್ಳಲಿ" (59:19). ಪ್ರತ್ಯಕ್ಷ ಮತ್ತು ಜರೂರಾದ ಆವಶ್ಯಕತೆಗಳನ್ನು ಮಾತ್ರ ಪರಿಗಣಿಸಿಕೊಂಡು ನೀವು ಸಹಧರ್ಮಿಣಿಯನ್ನು ಆರಿಸಬಾರದು; ಇಹದಲ್ಲೂ ಪರದಲ್ಲೂ ದೂರವ್ಯಾಪಕ ಪರಿಣಾಮವುಂಟುಮಾಡುವ ವಿಚಾರಗಳ ಕುರಿತು ಕೂಡ ಚಿಂತನೆ ಮಾಡಿ ಆ ಬಗ್ಗೆ ತೀರ್ಮಾನ ಕೈಗೊಳ್ಳಬೇಕೆಂದಾಗಿದೆ ಇದರ ಅರ್ಥ. ಪೈಗಂಬರರು ಹೀಗೆ ಹೇಳಿದರು: "ಕೆಲವರು ಸೌಂದರ್ಯವನ್ನು ನೋಡಿ, ಬೇರೆ ಕೆಲವರು ಸಂಪತ್ತನ್ನು ನೋಡಿ, ಬೇರೆ ಕೆಲವರು ಕುಟುಂಬದ ನೆಲೆ ನೋಡಿ, ಮತ್ತೆ ಕೆಲವರು ಸಂಪತ್ತನ್ನು ನೋಡಿ ವಿವಾಹವಾಗುತ್ತಾರೆ. ಆದರೆ ನೀವು ನೈತಿಕ ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಪರಿಗಣಿಸಿ ಪತ್ನಿಯನ್ನು ಆಯ್ಕೆಮಾಡಬೇಕು. ಇದುವೇ ಶಾಶ್ವತವಾದ ಆನಂದದ ಮೂಲಸ್ಥಾನ" (ಮುಸ್ಲಿಂ). ವಿವಾಹವು ನಿರೋಧಿಸಲ್ಪಟ್ಟ ರಕ್ತಸಂಬಂಧದ ಸೀಮೆಗಳನ್ನು ಖುರ್‌ಆನ್ ನಿರ್ಣಯಿಸಿಕೊಟ್ಟಿದೆ (4:23–25).

ದೇವರು ಮನುಷ್ಯರನ್ನು ಗಂಡು – ಹೆಣ್ಣುಗಳನ್ನಾಗಿ ಸೃಷ್ಟಿಸಿ ಪರಸ್ಪರ ಮನಃಶಾಂತಿ ಮತ್ತು ಸುಖಕ್ಕೋಸ್ಕರ ಅವರಲ್ಲಿ ಅನ್ಯೋನ್ಯ ಪ್ರೀತಿ ಮತ್ತು ಕರುಣೆಯನ್ನು ತುಂಬಿಸಿರುವುದು ಅವನ ಒಂದು ಅನುಗ್ರಹವಾಗಿದೆ. "ಚಿಂತನೆ ಮಾಡುವವರಿಗೆ ಇದರಲ್ಲಿ ದೃಷ್ಟಾಂತಗಳಿವೆ" (30:22) ಎಂದು ಖುರ್‌ಆನ್ ಹೇಳುತ್ತದೆ. ಪತಿ–ಪತ್ನಿ ಸಂಬಂಧವನ್ನು ಒಂದು ಹೊದಿಕೆಯೆಂಬಂತೆ ಅದು ಉಪಮಿಸಿದೆ. ಪತ್ನಿಯು ಪತಿಗೆ ಒಂದು ಉಡುಪಿನಂತೆ; ಪತಿಯು ಪತ್ನಿಗೂ ಒಂದು ಉಡುಪಿನಂತೆ ಎಂದು ಖುರ್‌ಆನ್ ಘೋಷಿಸುತ್ತದೆ (2:188). ಪೋಷಾಕು ರಕ್ಷಣೆಯನ್ನೂ ಸುಖವನ್ನೂ ಅಲಂಕಾರವನ್ನೂ ಒದಗಿಸುತ್ತದೆಯಷ್ಟೆ. ಅವನ ಮತ್ತು ಅವಳ ದೇಹದ ಹೊರಗಿನ ಅತಿ ಸಮೀಪದ ವಸ್ತು ಬಟ್ಟೆಯೇ ಆಗಿದೆ. ಹೃದಯಗಳಲ್ಲಿ ದೇವರು ತುಂಬಿಸಿದ "ಪ್ರೀತಿ ಮತ್ತು ಕರುಣೆ"ಯಿಂದ ಬಂಧಿತರಾದ ದಂಪತಿಗಳು ಪರಸ್ಪರ ಪೋಷಾಕುಗಳಂತೆ ಎಂಬ ವಿಚಾರದಲ್ಲಿ ತರ್ಕವಿಲ್ಲ. ಅತ್ಯಂತ ಉತ್ತಮ ವಸ್ತ್ರ ಭಕ್ತಿಯ ವಸ್ತ್ರವೆಂದು ಖುರ್‌ಆನ್ ಹೇಳುತ್ತದೆ (7:26). ಒಟ್ಟಾರೆ, ಪತಿ ಮತ್ತು ಪತ್ನಿ ಪರಸ್ಪರ ಅಂತಹ

ವಸ್ತ್ರದಂತೆ ವರ್ತಿಸಬೇಕಾಗಿದೆ.

ಅನ್ಯೋನ್ಯ ಸಂಬಂಧದಲ್ಲಿ ಪುರುಷನಿಗೆ ಸ್ತ್ರೀಯ ಮೇಲಿರುವಂತೆ ಸ್ತ್ರೀಗೆ ಪುರುಷನ ಮೇಲೆ ಸಹ ಸೌಮನಸ್ಯ ಮತ್ತು ಸಮಭಾವನೆಯ ಆಧಾರದಲ್ಲಿ ಕೆಲವು ಹಕ್ಕುಗಳಿವೆ (2:229). ಪುರುಷರು ತಮ್ಮ ಹೆಂಡಂದಿರೊಡನೆ ಅತ್ಯಂತ ದಯೆಯಿಂದ ವರ್ತಿಸಬೇಕೆಂದು ಖುರ್‌ಆನ್ ಆದೇಶಿಸುತ್ತದೆ. "ನೀವು ಅವರನ್ನು ದ್ವೇಷಿಸುವಿರಾದರೆ, ಅಲ್ಲಾಹನು ಒಳಿತನ್ನು ನಿಕ್ಷೇಪಿಸಿಟ್ಟಿರುವ ವಸ್ತುವೊಂದನ್ನು ನೀವು ದ್ವೇಷಿಸಿದಂತಾಗಬಹುದು" (4:20) ಎಂಬಿತ್ಯಾದಿಯಾಗಿ ಅದು ನೆನಪಿಸಿಕೊಡುತ್ತದೆ.

ಮುಹಮ್ಮದ್ ಪೈಗಂಬರರು ಹೀಗೆ ನುಡಿದಿದ್ದರು: "ತನ್ನ ಕುಟುಂಬದವರೊಡನೆ ಅತಿ ಉತ್ತಮವಾಗಿ ವರ್ತಿಸುವವನೇ ನಿಮ್ಮ ಪೈಕಿ ಅತ್ಯುತ್ತಮನು" (ಇಬ್ನುಮಾಜಃ). ಹಝ್ರತ್ ಪೈಗಂಬರರು ಸ್ತ್ರೀಯರ ಬಗ್ಗೆ ಎಲ್ಲಾ ವಿಚಾರಗಳಲ್ಲೂ ಬಹಳವಾಗಿ ಗಮನಕೊಡುವವರಾಗಿದ್ದರು. ಒಮ್ಮೆ ಪೈಗಂಬರರು ಯಾತ್ರೆಮಾಡುತ್ತಿದ್ದಾಗ ಸ್ತ್ರೀಯರು ಸಹ ಜೊತೆಗಿದ್ದರು. ಒಂದು ಹಂತದಲ್ಲಿ, ಒಂಟೆಯನ್ನು ನಡೆಸುವವರು ತಾವು ತಡವಾದೆವೆಂಬ ಭಾವನೆಯಲ್ಲಿ ಒಂಟೆಗಳನ್ನು ಅತಿವೇಗವಾಗಿ ಓಡಿಸತೊಡಗಿದರು. ಆಗ ಪೈಗಂಬರರು "ಗಾಜುಗಳನ್ನು ಲಕ್ಷಿಸಿರಿ" ಎಂದು ಎಚ್ಚರಿಕೆಕೊಟ್ಟರು. ಸ್ತ್ರೀಯರ ಸುಖಸೌಕರ್ಯಗಳ ಬಗ್ಗೆ ಗಮನವಿರಿಸಬೇಕೆಂಬುದಾಗಿತ್ತು ಪೈಗಂಬರರ ಉದ್ದೇಶ. ಅವರು ಸಹಜವಾಗಿಯೇ ಕೋಮಲ ಹೃದಯಿಗಳೂ ಸೌಮ್ಯಶೀಲರೂ ಶೀಘ್ರವಾಗಿ ನೊಂದುಕೊಳ್ಳುವವರೂ ಆಗಿರುವುದರಿಂದ ಪೈಗಂಬರರು ಅವರ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿದ್ದರು. ಇನ್ನೊಂದು ಸಂದರ್ಭದಲ್ಲಿ, ಸ್ತ್ರೀಯರು ಸ್ವಭಾವದಲ್ಲಿ ಪಕ್ಕೆಲುಬಿನಂತೆ ಎಂದು ಹೇಳಿದರು (ಬುಖಾರಿ). ಎಂದರೆ ಪುರುಷನಿಂದ ಭಿನ್ನವಾದ ಕೆಲವು ಸ್ವಭಾವಗಳು ಸ್ತ್ರೀಗೆ ಇವೆಯೆಂದೂ ಅವಳ ನೈಸರ್ಗಿಕ ಗುಣಗಳನ್ನು ಲಕ್ಷಿಸದೆ ಪುರುಷನು ತನ್ನ ಸ್ವಭಾವಕ್ಕನುಗುಣವಾಗಿ ಅವಳನ್ನು ಬಗ್ಗಿಸಲು ಪ್ರಯತ್ನಿಸುವುದು ಮೂರ್ಖತನವೆಂದೂ ಆಗಿದೆ. ತನ್ನದೇ ಆದ ಸ್ವಭಾವದಲ್ಲಿ ಸ್ತ್ರೀಯ ಲಾವಣ್ಯವಿರುತ್ತದೆ ಹೊರತು ಪುರುಷನ ಅನುಕರಣೆಯಿಂದಲ್ಲ.

ವಿವಾಹವೆಂದರೆ ಬೇರ್ಪಡಿಸಲಾಗದ ಒಂದು ದಿವ್ಯ ಬಂಧವೆಂದು ಇಸ್ಲಾಂ ಗಣಿಸುವುದಿಲ್ಲ. ಅದು ಪರಸ್ಪರ ಕರ್ತವ್ಯ ಮತ್ತು ಋಣಾನುಬಂಧಗಳನ್ನು ಹೊರಿಸುವ ಒಂದು ಕರಾರು ಆಗಿದೆ. ಈ ಕರಾರಿನಲ್ಲಿ ಅನುಪೇಕ್ಷಣೀಯವಾದ ಒಂದು ಅಂಶವೆಂದರೆ ಗಂಡನು ಹೆಂಡತಿಗೆ ನೀಡುವ 'ಮಹರ್' ಎಂಬ ವ್ಯವಸ್ಥೆ (4:5). ಸಂಪೂರ್ಣವಾಗಿ ತನ್ನ ನಿಯಂತ್ರಣದಲ್ಲಿರುವ ಸಂಪತ್ತು ಅವಳ ಒಡೆತನದಲ್ಲಿರಬೇಕು ಎಂಬುದಾಗಿದೆ ಇದರ ಉದ್ದೇಶ. ವಿವಾಹ ವಿಚ್ಛೇದನೆ ಇಸ್ಲಾಮಿನಲ್ಲಿ ಅನುಮತಿಸಲ್ಪಟ್ಟಿದೆ. ಆದರೆ, ಅನುಮತಿಸಲ್ಪಟ್ಟ ವಿಚಾರಗಳಲ್ಲಿ ದೇವದೃಷ್ಟಿಯಲ್ಲಿ ಅತ್ಯಂತ ಅನಿಷ್ಟವಾದುದು ವಿವಾಹವಿಚ್ಛೇದನವೆಂದು ಪೈಗಂಬರರು ಹೇಳಿದ್ದಾರೆ (ಅಬೂದಾವೂದ್). ವಿವಾಹವಿಚ್ಛೇದನದ ಪ್ರಕ್ರಿಯೆ ಪೂರ್ಣಗೊಳ್ಳಲಿಕ್ಕೆ ಒಂದು ಕಾಲಾವಧಿಯಿದೆ. ಈ ಕಲಾವಧಿಯೊಳಗೆ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿ ಸಾಮರಸ್ಯವನ್ನುಂಟು ಮಾಡಲಿಕ್ಕೆ ಶ್ರಮಿಸಬೇಕು. ಭಿನ್ನಾಭಿಪ್ರಾಯಗಳು ತೀವ್ರವಾಗಿದ್ದರೆ, ಪತ್ನಿ ಮತ್ತು ಪತಿಯ ಕಡೆಯಿಂದ ಒಬ್ಬೊಬ್ಬರನ್ನು ಒಳಗೊಂಡ ಮಧ್ಯಸ್ಥಿಕೆಗಾರರ ಸಹಾಯ ಮತ್ತು ಸಲಹೆಗಳನ್ನು ಪಡೆಯಬೇಕಾಗಿದೆ (4:36). ಕೊನೆಗೆ, ವಿವಾಹ ವಿಚ್ಛೇದವೇ ಪರಿಹಾರವೆಂದಾದರೆ, ಪತ್ನಿಗೆ ನೀಡಲಾದ ಏನನ್ನೂ ಪತಿ ಅವಳಿಂದ ವಾಪಾಸು ಪಡೆಯಲಾರ (4:21–22). ವಿವಾಹ ವಿಚ್ಛೇದದ ಪ್ರಕ್ರಿಯೆ ಪೂರ್ಣಗೊಳ್ಳುವ ವರೆಗೆ ಕೆಲವು ತಿಂಗಳುಗಳ ತನಕ ಅವಳ ಜೀವನಕ್ಕೆ ಬೇಕಾದ ಎಲ್ಲಾ ಸವಲತ್ತುಗಳನ್ನು ಪತಿಯೇ ಒದಗಿಸಿಕೊಡಬೇಕಾಗಿದೆ. ಈ ಕಾಲಾವಧಿಯೊಳಗೆ ಅವರೀರ್ವರೂ ರಾಜಿಮಾಡಿಕೊಂಡರೆ ವಿವಾಹವಿಚ್ಛೇದಕ್ಕೆ ಸಂಬಂಧಿಸಿದ ಇತರ ವಿಧಿ ಕ್ರಮಗಳು ರದ್ದಾಗುವುವು (2:229-230).

ಇಸ್ಲಾಂ ಬಹುಪತ್ನೀತ್ವಕ್ಕೆ ಅನುಮತಿ ನೀಡುತ್ತದೆ. ಪತ್ನಿಯರ ಮಧ್ಯೆ ಕಟ್ಟುನಿಟ್ಟಿನ ಸಮಭಾವನೆಯನ್ನು ಪಾಲಿಸಬೇಕೆಂಬ ನಿಬಂಧನೆಯಲ್ಲಿ ನಾಲ್ಕು ಮಂದಿಯ ವರೆಗೆ ವರಿಸಬಹುದಾಗಿದೆ. "ಅವರೊಂದಿಗೆ ನ್ಯಾಯಪಾಲಿಸಲು ಸಾಧ್ಯವಿಲ್ಲವೆಂದು ನಿಮಗೆ ಭಯವಿದ್ದರೆ ಒಬ್ಬಳನ್ನು ಮಾತ್ರ ವರಿಸಬೇಕು" (4:4). ದೇಶಿಯ ಅಥವಾ ಗಾರ್ಹಿಕ ನಿರ್ಬಂಧಾವಸ್ಥೆ ಕಾರಣ

ದಿಂದ ಈ ಅನುಮತಿಯ ಉಪಯೋಗವನ್ನು ಪಡೆಯ ಬಹುದು; ಅಥವಾ ಏಕಪತ್ನೀವ್ರತವನ್ನು ತ್ಯಜಿಸು ವುದು ಅಪೇಕ್ಷಣೀಯವಾದ ಕೆಲವು ವಿಶೇಷ ಸಂದರ್ಭ ಗಳಲ್ಲಾಗಿರಬಹುದು. ಯಾವ ಸ್ಥಿತಿಯಲ್ಲೂ, ಯಾವಳೇ ಓರ್ವ ಪತ್ನಿಯೊಡನೆ ಪ್ರತ್ಯೇಕ ತರದ ಪ್ರೇಮವಿದ್ದರೆ ಸಹ, ಎಲ್ಲ ಪತ್ನಿಯರೊಡನೆ ಸಮಾನವಾಗಿ ವರ್ತಿಸ ಬೇಕು. ಪ್ರತಿಯೊಬ್ಬಳಿಗೆ ಸಮಾನ ಸವಲತ್ತುಗಳನ್ನು ಒದಗಿಸಬೇಕಲ್ಲದೆ ಪ್ರತಿಯೊಬ್ಬಳೊಡನೆ ತುಲ್ಯ ಸಮಯ ವ್ಯಯಿಸಬೇಕಾಗಿದೆ. ಈ ಅನುಮತಿಯ ಪ್ರಯೋಜ ನವನ್ನು ಪಡೆಯಲು ಇಚ್ಛಿಸುವವನು ಕಠಿಣವಾದ ಶಿಸ್ತಿಗೆ ಸ್ವಯಂ ವಿಧೇಯನಾಗಿರಬೇಕೆಂದು ನಿಷ್ಕರ್ಷಿ ಸುವ ಧಾರಾಳ ನಿಯಮಗಳು ಮತ್ತು ಶಿಸ್ತುಕ್ರಮಗಳು ನಿರ್ದೇಶಿಸಲ್ಪಟ್ಟಿವೆ. ಬಹುಪತ್ನೀತ್ವವನ್ನು ಕೈಗೊಳ್ಳಲು ನಿರ್ಬಂಧಿಸುವ ವಿಶೇಷ ಸಂದರ್ಭಗಳು ಜೀವನವನ್ನು ಶಿಸ್ತುಬದ್ಧಗೊಳಿಸುವುದು ಹೊರತು ಎಂದಿಗೂ ವಿಷಯೇ ಚ್ಛೆಗೆ ಗುರಿಪಡಿಸುವುದಿಲ್ಲ. "ಇಬ್ಬರು ಪತ್ನಿಯರನ್ನು ವರಿಸಿ ಅವರೊಡನೆ ನ್ಯಾಯಪಾಲಿಸದಿರುವವನು ಅರ್ಧ ಚೇತನದಿಂದ ಪುನರುಜ್ಜೀವನಗೊಳಿಸಲ್ಪಡುವನು" ಎಂದು ಪೈಗಂಬರರು ನುಡಿದಿದ್ದಾರೆ (ತಿರ್ಮದಿ). ಉತ್ಕೃಷ್ಟ ಮೌಲ್ಯಗಳ ಕಾಪಾಡುವಿಕೆ ಮತ್ತು ಸಾತ್ವಿ ಕತೆಗೆ ಉತ್ತೇಜನ ಇವು ಜೀವನದ ಸ್ಥಿರ ಗುರಿಯಾಗಿರ ಬೇಕು. ಉನ್ನತವಾದ ಸಾಮಾಜಿಕ ಮೌಲ್ಯಗಳನ್ನು ಕಾಪಾಡಲಿಕ್ಕೆ ಮತ್ತು ಬೆಳೆಸಲಿಕ್ಕೆ, ಅನಿಯಂತ್ರಿತವಾದ ಸ್ತ್ರೀ-ಪುರುಷ ಸ್ವೇಚ್ಛಾ ಸಂಪರ್ಕದಿಂದ ಸಮಾಜವನ್ನು ರಕ್ಷಿಸಲಿಕ್ಕೆ ಅತ್ಯಗತ್ಯವಾದ ಒಂದು ವ್ಯವಸ್ಥೆಯೆಂಬಂತೆ ಬಹುಪತ್ನೀತ್ವ ಪದ್ಧತಿಗೆ ಇಸ್ಲಾಂ ಅನುಮತಿ ನೀಡಿದೆ. ಇಸ್ಲಾಮಿ ಸಾಮಾಜಿಕ ಕ್ರಮದಲ್ಲಿ ಬಹುಪತ್ನೀತ್ವ ಪದ್ಧತಿಗೆ ಯಾವ ಕಳಂಕವೂ ಅಂಟಿರುವುದಿಲ್ಲ. ಪ್ರತಿ ಯೋರ್ವ ಪತ್ನಿಗೆ ಅವಳ ಗಂಡನ ದೃಷ್ಟಿಯಲ್ಲಿ ಸಮಾನ ಸ್ಥಾನಮಾನಗಳಿವೆ. ಮಕ್ಕಳ ಮಧ್ಯೆ ಯಾವುದೇ ಪಕ್ಷ ಪಾತವಿರುವುದಿಲ್ಲ. ಇಸ್ಲಾಮಿನ ಈ ಅನುಮತಿಯು ದುರುಪಯೋಗಿಸಲ್ಪಡುತ್ತದೆಂಬುದು ಸತ್ಯವೇ ಆಗಿದೆ. ಆದರೆ ಈ ರೀತಿಯ ದುರುಪಯೋಗವನ್ನು ನಿಯಮ ಕ್ರಮಗಳಿಂದ ತಡೆದು ಸುವ್ಯವಸ್ಥೆಗೊಳಿಸಲು ಇಸ್ಲಾಮಿ ಸಮಾಜ ಪ್ರಯತ್ನಿಸುತ್ತದೆ.

ಮಕ್ಕಳನ್ನು ಸರಿಯಾದ ಕ್ರಮದಲ್ಲಿ ಸಾಕಿ ಉತ್ತಮ ಶಿಕ್ಷಣವನ್ನು ನೀಡಲು ಇಸ್ಲಾಂ ಬಹಳವಾಗಿ ಒತ್ತಾಯಿ ಸುತ್ತದೆ. ಮಗುವಿನ ಜನನಕ್ಕೆ ಎಷ್ಟೋ ಮುಂಚಿತ ವಾಗಿಯೇ ಸರಿಯಾದ ಶಿಕ್ಷಣದ ಬಗ್ಗೆ ಸಾಕಷ್ಟು ಗಮನ ಕೊಡಬೇಕಾಗಿದೆ. ಪತಿ-ಪತ್ನಿ ಸಂಸರ್ಗ ವೇಳೆಯಲ್ಲಿ "ಓ ದೇವಾ, ನೀನು ನಮ್ಮನ್ನೂ ನಮಗೆ ನೀಡಲಿ ರುವ ಸಂತಾನವನ್ನೂ ಕೆಡುಕಿನಿಂದ ರಕ್ಷಿಸು" ಎಂದು ಪ್ರಾರ್ಥಿಸಲು ಪೈಗಂಬರರು ಕಲಿಸಿ (ಬುಖಾರಿ), ಮಾತಪಿತರಿಗೆ ತಮ್ಮ ಮಕ್ಕಳ ಬಗ್ಗೆ ಎಷ್ಟರ ಮಟ್ಟಿಗೆ ಜವಾಬ್ದಾರಿಕೆಯಿದೆಯೆಂಬುದನ್ನು ನೆನಪಿಸಿಕೊಟ್ಟಿದ್ದಾರೆ. ಇದಕ್ಕೆ ಸಂಬಂಧಿಸಿ ಖುರ್‌ಆನ್ ಕಲಿಸುವ ಪ್ರಾರ್ಥನೆ ಸಹ ಇದೇ ಉದ್ದೇಶವನ್ನಿರಿಸಿಕೊಂಡಿದೆ. "ದೇವಾ, ಸಾತ್ವಿಕ ಸಂತಾನವನ್ನು ನನಗೆ ನೀಡು" ಎಂಬ ಪ್ರವಾದಿ ಇಬ್ರಾಹೀಮ್ (ಅ)ರವರ ಪ್ರಾರ್ಥನೆ (37:101) ಮತ್ತು "ದೇವಾ, ಪರಿಶುದ್ಧವಾದೊಂದು ಸಂತಾನ ವನ್ನು ನಿನ್ನಿಂದ ನನಗೆ ನೀಡು" ಎಂಬ ಪ್ರವಾದಿ ಝಕರಿಯ್ಯಾ (ಅ)ರವರ ಪ್ರಾರ್ಥನೆ ಅದನ್ನು ವಿಶದೀಕ ರಿಸುತ್ತವೆ. "ದೇವಾ, ನೀನು ನಮ್ಮ ಪತ್ನಿಯರಿಂದಲೂ ಮಕ್ಕಳಿಂದಲೂ ನಮ್ಮ ಕಣ್ಣುಗಳಿಗೆ ತಂಪನ್ನು ಕರು ಣಿಸು; ನಮ್ಮನ್ನು ನೀನು ಸಾತ್ವಿಕರಿಗೆ ಮಾದರಿಯಾ ಗಿಯೂ ಮಾಡು" (25:75) ಮತ್ತು "ದೇವಾ, ನನ್ನ ಸಂತಾನವನ್ನು ನೀನು ಸದ್ಧರ್ಮಿಯನ್ನಾಗಿ ಮಾಡು" (46:16) ಎಂದು ಪ್ರಾರ್ಥಿಸಲು ಸಹ ಖುರ್‌ಆನ್ ನಮಗೆ ಕಲಿಸುತ್ತದೆ. "ನಿಮ್ಮ ಮಕ್ಕಳನ್ನು ಗೌರವಿಸಿರಿ; ಅವರನ್ನು ಉತ್ತಮ ರೀತಿಯಲ್ಲಿ ಸಾಕಿ ಸಲಹಲು ಬೇಕಾದ ಏರ್ಪಾಡುಗಳನ್ನು ಮಾಡಿಕೊಳ್ಳಿರಿ" ಎಂದು ಪೈಗಂಬರರು ಆದೇಶಿಸಿದ್ದಾರೆ (ಇಬ್ನುಮಾಜಃ). ಇದು ಮಕ್ಕಳನ್ನು ಸತ್ಪಥದಲ್ಲಿ ನಡೆಸಿ ಅವರನ್ನು ಗೌರವಾದರಕ್ಕೆ ಅರ್ಹರನ್ನಾಗಿ ಮಾಡುವುದರ ಆವಶ್ಯ ಕತೆಯ ಬಗ್ಗೆ ನಮ್ಮ ಗಮನವನ್ನು ಸೆಳೆಯುತ್ತದೆ. "ನಿಮ್ಮ ಸಂತಾನಗಳನ್ನು ಕೊಲ್ಲಬೇಡಿರಿ" (17:32) ಎಂಬ ಖುರ್‌ಆನಿನ ಆದೇಶದಲ್ಲಿ, ಅವರಲ್ಲಿ ಅಂತರ್ಲೀನ ವಾಗಿರುವ ನೈಸರ್ಗಿಕ ಶಕ್ತಿಗಳನ್ನು ಅವಗಣಿಸಿ ಅವ ರನ್ನು ನಾಶಗೊಳಿಸಬಾರದು ಎಂಬ ಅರ್ಥವ್ಯಾಪ್ತಿಯಿದೆ.

ಮಾನವ ಇತಿಹಾಸದ ಕೆಲವು ಕಾಲಘಟ್ಟಗಳಲ್ಲಿ ಸಾಮಾನ್ಯ ರೂಢಿಯಲ್ಲಿದ್ದ ಶಿಶುಹತ್ಯೆ ಇಸ್ಲಾಮಿನಲ್ಲಿ ಕಠಿಣವಾಗಿ ನಿಷೇಧಿಸಲ್ಪಟ್ಟಿತು (17:32). ಕುಲ ಮಹಿ ಮೆಯ ಬಗ್ಗೆ ಹೆಮ್ಮೆ ಪಡುತ್ತಿದ್ದ ಕೆಲವು ಅರಬಿ

ಗೋತ್ರಗಳಲ್ಲಿ ಹೆಣ್ಣುಮಕ್ಕಳನ್ನು ಹತ್ಯೆಮಾಡುವ ಕ್ರಮ ರೂಢಿಯಲ್ಲಿತ್ತು. ಇಸ್ಲಾಂ ಅದನ್ನು ಕಟುವಾಗಿ ನಿಷೇಧಿಸಿತು (81:9-10). ಅರಬಿಯವಲ್ಲಿ ಸಾಮಾನ್ಯವಾಗಿ ಸ್ತ್ರೀಯರನ್ನು ಮತ್ತು ಹೆಣ್ಮಕ್ಕಳನ್ನು ಕೀಳಾಗಿ ಕಾಣಲಾಗುತ್ತಿದ್ದುದರಿಂದ, ಹೆಣ್ಮಕ್ಕಳ ಪರಿಪಾಲನೆ ಮತ್ತು ಸ್ತ್ರೀಯರ ಉನ್ನತಿಗಾಗಿ ಪೈಗಂಬರರು ಬಹಳ ಗಮನ ನೀಡುತ್ತಿದ್ದರು. "ಒಂದು ಅಥವಾ ಹೆಚ್ಚು ಹೆಣ್ಮಕ್ಕಳಿಂದ ಅನುಗ್ರಹಿಸಲ್ಪಟ್ಟು ಹೆಣ್ಣು-ಗಂಡು ಮಕ್ಕಳ ಮಧ್ಯೆ ಏನೂ ಭೇದಭಾವವನ್ನು ತೋರಿಸದೆ ಕರುಣೆ ಮತ್ತು ವಾತ್ಸಲ್ಯದಿಂದ ಅವರ ಪಾಲನೆ ಪೋಷಣೆ ಮಾಡುವವನು ಸ್ವರ್ಗದಲ್ಲಿ, ತೋರುಬೆರಳು ಮತ್ತು ಮಧ್ಯಬೆರಳುಗಳಿರುವಂತೆ ನನ್ನ ಜೊತೆಯಲ್ಲಿರುವನು" ಎಂದು ಪೈಗಂಬರರು ನುಡಿದಿದ್ದರು (ಮುಸ್ಲಿಂ).

ಮಕ್ಕಳೊಡನೆ ಕರುಣೆ ಮತ್ತು ಪ್ರೀತಿಯನ್ನು ತೋರಿಸಬೇಕೆಂದೂ ಎಲ್ಲ ಮಕ್ಕಳೊಡನೆ ದಯಾರ್ದ್ರವಾಗಿ ವರ್ತಿಸಬೇಕೆಂದೂ ಒತ್ತಿ ಹೇಳಿದ ಪೈಗಂಬರರು ಸ್ವಬಂಧು ಪಕ್ಷಪಾತವನ್ನು ಎಂದಿಗೂ ಅಂಗೀಕರಿಸಲಿಲ್ಲ. ತನ್ನ ಕುಟುಂಬದವರೂ ತನ್ನ ಸಂತತಿಗಳೂ ದಾನಸಂಪತ್ತು ಅನುಭೋಗಿಸಬಾರದೆಂದು ಅವರು ಸಾರಿದರು. ಒಮ್ಮೆ ದಾನನೀಡಲಿಕ್ಕಾಗಿ ತನ್ನ ಮುಂದೆ ತಂದಿಟ್ಟ ಖಜೂರದಿಂದ ತನ್ನ ಒಬ್ಬ ಕಿರಿಯ ಮೊಮ್ಮಗ ಒಂದು ತೊಳೆಯನ್ನು ತೆಗೆದು ಬಾಯಲ್ಲಿಟ್ಟಾಗ, "ಕಂದಾ, ಉಗುಳಿ ಬಿಡು; ಅದನ್ನು ಉಗುಳಿ ಬಿಡು; ಮುಹಮ್ಮದ್‌ನ ಕುಟುಂಬಕ್ಕೆ ದಾನಸಂಪತ್ತಿನಲ್ಲಿ ಪಾಲಿಲ್ಲವೆಂದು ನಿನಗೆ ಗೊತ್ತಿಲ್ಲವೇ?" ಎಂದು ಹೇಳುತ್ತಾ ಪೈಗಂಬರರು ಮಗುವನ್ನು ತಡೆದರು (ಮುಸ್ಲಿಂ). ಇನ್ನೊಂದು ಸಂದರ್ಭದಲ್ಲಿ, ತನ್ನ ಪುತ್ರಿ ಫಾತಿಮಳಿಗೆ, ಸತ್ಕರ್ಮಗಳಲ್ಲಿ ಸದಾ ಸಾಕಷ್ಟು ಶ್ರದ್ಧೆವಹಿಸಬೇಕೆಂದು ಉಪದೇಶಿಸಿದರು. ನಿರ್ಣಾಯಕ ದಿನದಂದು ಯಾರ ಮಗಳೆಂದು ಪ್ರಶ್ನಿಸಲು ಎಡೆಕೊಡದೆ, ತಾನು ಏನು ಮಾಡಿದೆ ಎಂದು ಮಾತ್ರ ಪ್ರಶ್ನಿಸುವಂತಾಗಬೇಕೆಂದು ಆ ಉಪದೇಶ ಮೂಲಕ ಪೈಗಂಬರರು ಸೂಚಿಸಿದರು (ಬುಖಾರಿ).

ನೆರೆಹೊರೆಯವರೊಡನೆ ಅತ್ಯಂತ ಪ್ರೀತಿ ಮತ್ತು ಅನುಕಂಪದಿಂದ ವರ್ತಿಸಬೇಕೆಂದು ಖುರ್‌ಆನ್ ಉಪದೇಶಿಸುತ್ತದೆ (4:37). ನೆರೆಹೊರೆಯವರಿಗಾಗಿ ಮಾಡಬೇಕಾದ ಕರ್ತವ್ಯಗಳ ಕುರಿತು ಪೈಗಂಬರರು ಅನೇಕ ಸಂದರ್ಭಗಳಲ್ಲಿ ತನ್ನ ಶಿಷ್ಯರಿಗೆ ಬೋಧಿಸಿದ್ದಾರೆ. "ನೆರೆಹೊರೆಯವರೊಡನಿರುವ ಹೊಣೆಗಾರಿಕೆಯ ಬಗ್ಗೆ ದೇವರು ಪದೇ ಪದೇ ಹೆಚ್ಚು ಹೆಚ್ಚಾಗಿ ಒತ್ತಿ ಹೇಳುತ್ತಿದ್ದಾಗ, ನೆರೆಹೊರೆಯವನು ವಾರಿಸುಹಕ್ಕಿಗೆ ಅರ್ಹನಾಗಿ ಬಿಡುವನೇ ಎಂದು ನಾನು ಸಂಶಯಿಸುವಂತಾಯಿತು" ಎಂದು ಪೈಗಂಬರರು ನುಡಿದಿದ್ದರು (ಬುಖಾರಿ). ನೆರೆಹೊರೆಯವರೊಡನೆ ತೋರಿಸಬೇಕಾದ ಅನುಕಂಪ ಮತ್ತು ಪ್ರೀತಿಯ ಆವಶ್ಯಕತೆಯನ್ನು ಮರೆಯಬಾರದೆಂದು ಉಪದೇಶಿಸುತ್ತಾ ಇದು ಕಷ್ಟಕರವಲ್ಲವೆಂದು ಪೈಗಂಬರರು ಹೇಳಿದರು. ಸದಾ ತನ್ನ ನೆರೆವಾಸಿ ತನ್ನೊಂದಿಗೆ ಪಾಲ್ಗೊಳ್ಳುವಂತೆ ಮಾಡುವ ಸನ್ಮತ ಮಾತ್ರ ಇದ್ದರೆ ಸಾಕು.

ಇದೇ ಪ್ರಕಾರ, ನಿರ್ಗತಿಕರಿಗೆ ಸಹಾಯ ಮಾಡಬೇಕೆಂದು ಖುರ್‌ಆನ್ ಉಪದೇಶಿಸುತ್ತದೆ (4:37). ಸಂಚಾರಿಗಳಿಗೆ ಸಹಾಯ ನೀಡಿ ಅವರೊಂದಿಗೆ ಅನುಕಂಪದಿಂದ ವರ್ತಿಸಬೇಕೆಂದು ಇಸ್ಲಾಂ ಒತ್ತಾಯಿಸುತ್ತದೆ. ವಿದೇಶಗಳಲ್ಲಿ ಸಂಚರಿಸುವ ಸಂದರ್ಭ ದೊರೆತವರಿಗೆ ಈ ನಿರ್ದೇಶದ ಪ್ರಾಧಾನ್ಯವನ್ನು ಗ್ರಹಿಸಲು ಪ್ರಯಾಸವಿಲ್ಲ. ಪಯಣಿಗ ಬಡವನಾಗಿರಬೇಕೆಂದಿಲ್ಲ. ಗೊತ್ತುಗುರಿಯಿಲ್ಲದ ಒಂದು ರಾಜ್ಯದಲ್ಲಿ, ಅಪರಿಚಿತರ ಮಧ್ಯೆ, ತನ್ನ ಇಂಗಿತವನ್ನು ತಿಳಿಯಪಡಿಸಲು ಭಾಷೆಯು ಅಡ್ಡಿಪಡಿಸುತ್ತಿರುವಾಗ ಅವನು ಬೇರೆಯವರ ದಯಾಪೂರ್ಣ ಸಹಾಯ ಸಹಕಾರಗಳಿಗೆ ಮೊರೆಹೊಗುತ್ತಾನೆ. ಕೆಲವೊಮ್ಮೆ ದಾರಿ ತೋರಿಸಿಕೊಡುವುದು, ಊಟ ವಸತಿ ಗೃಹದ ಬಗ್ಗೆ ಮಾಹಿತಿ ನೀಡುವುದು, ಬೇಕಾದ ವಿಳಾಸವನ್ನು ವಿವರಿಸಿಕೊಡುವುದು ಇತ್ಯಾದಿಗಳು ಸಂಚಾರಿಗೆ ತುಂಬಾ ನೆಮ್ಮದಿಯನ್ನುಂಟು ಮಾಡುವುದು. ದಾರಿಹೋಕನಿಗೆ ಕರುಣೆ ತೋರಿಸಬೇಕೆಂಬ ಖುರ್‌ಆನಿನ ಆದೇಶದಲ್ಲಿ ಇವೆಲ್ಲವೂ ಸೇರುತ್ತವೆ.

ಸಾಲದಲ್ಲಿ ಮುಳುಗಿ ಹೋದವರು ಮತ್ತು ಬಿಡುಗಡೆಯ ಮೌಲ್ಯವನ್ನು ಕೊಡಲಾಗದೆ ಬಂಧನದಲ್ಲಿರಬೇಕಾದವರು "ದೇವ ಮಾರ್ಗದಲ್ಲಿ ಖರ್ಚುಮಾಡಿರಿ" ಎಂಬ ಆಜ್ಞೆಯ ಪರಿಧಿಯೊಳಗೆ ಸೇರುತ್ತಾರೆ (9:60).

ಅನಾಥರ ಬಗ್ಗೆ ಸಮಾಜ ವಿಶೇಷವಾದ ಕಾಳಜಿ ವಹಿಸಬೇಕಾಗಿದೆ. ಅವರನ್ನು ಸರಿಯಾದ ರೀತಿಯಲ್ಲಿ ಸಾಕಿಸಲಹಬೇಕು. ಅವರ ಸೊತ್ತುಗಳನ್ನು ಸಂರಕ್ಷಿಸಬೇಕು. ಅಪ್ರಾಪ್ತ ವಯಸ್ಕರ ರಕ್ಷಣೆ ಮತ್ತು ಅವರ ಸೊತ್ತಿನ ಕಾರ್ಯನಿರ್ವಹಣೆಯ ಬಗ್ಗೆ ಇಸ್ಲಾಂ ವಿಶದವಾಗಿ ನಿರ್ದೇಶಿಸಿದೆ. ಅನಾಥರ ಪಾಲನೆಪೋಷಣೆ ಸರಿಯಾಗಿ ನಡೆಯುತ್ತಿದೆಯೇ ಎಂದು ಆಗಿಂದಾಗ್ಗೆ ಪರಿಶೀಲಿಸಬೇಕಾದುದು ರಕ್ಷಕನ ಕರ್ತವ್ಯವಾಗಿದೆ. ಒಬ್ಬ ಅನಾಥನು ಪ್ರಾಪ್ತ ವಯಸ್ಸು ಪಡೆದು ತನ್ನ ಕಾರ್ಯಗಳನ್ನು ನಿರ್ವಹಿಸಲಿಕ್ಕೆ ಸಮರ್ಥನಾದಾಗ ಸಾಕ್ಷಿಗಳ ಮುಂದೆ ಅವನಿಗೆ ಸೇರಿದ ಸೊತ್ತುಗಳನ್ನು ಅವನ ವಶಕ್ಕೆ ಒಪ್ಪಿಸಬೇಕಾಗಿದೆ. ರಕ್ಷಕ ಅಥವಾ ಅನಾಥನ ಸೊತ್ತಿನ ಕಾರ್ಯನಿರ್ವಾಹಕನು, ತಾನು ವ್ಯಯಿಸುವ ಸಮಯಕ್ಕೆ ಪ್ರತಿಫಲ ಪಡೆಯಲು ಅರ್ಹನೆಂದಾದರೆ ಯಥೋಚಿತವಾದ ಸಂಭಾವನೆಯನ್ನು ಸ್ವೀಕರಿಸಲು ಅವನಿಗೆ ಅನುಮತಿ ಇದೆ. ಅವನು ಐಶ್ವರ್ಯವಂತನಾಗಿದ್ದರೆ ಪ್ರತಿಫಲವನ್ನು ಪಡೆಯಬಾರದು (4:7). ರಕ್ಷಕನು ಅನಾಥನ ಸೊತ್ತುಗಳ ಕಾರ್ಯನಿರ್ವಹಣವನ್ನು ಸರಿಯಾಗಿ ಮಾಡಬೇಕಲ್ಲದೆ, ಅವನ ಎಲ್ಲಾ ಹಕ್ಕು ಬಾಧ್ಯತೆಗಳನ್ನು ಸಂರಕ್ಷಿಸುವುದರಲ್ಲಿ ಏನೂ ಚ್ಯುತಿಮಾಡಬಾರದು (4:6).

ಅನಾಥನ ಸೊತ್ತನ್ನು ರಕ್ಷಕನು ತನ್ನ ಹಿತಾನುಸಾರ ಬದಲಾಯಿಸಬಾರದು; ತನ್ನ ಸೊತ್ತಿನೊಂದಿಗೆ ಸೇರಿಸಲೂಬಾರದು (4:3). ಈ ಬಗ್ಗೆ ರಕ್ಷಕನ ಜವಾಬ್ದಾರಿಕೆಯನ್ನು ಇಸ್ಲಾಂ ಬಹಳ ಸ್ಪಷ್ಟವಾಗಿ ಬೋಧಿಸಿದೆ. "ಅಲ್ಪವಯಿಗಳ ರಕ್ಷಕರು, ತಾವು ಅಗಲಿ ಹೋದಾಗ ತಮ್ಮ ಮಕ್ಕಳ ಬಗ್ಗೆ ಯಾವ ರೀತಿಯ ಜಾಗರೂಕತೆ ವಹಿಸಲ್ಪಡಬೇಕೆಂದು ಬಯಸುತ್ತಾರೋ ಅದೇ ರೀತಿಯ ಜಾಗರೂಕತೆಯನ್ನು ವಹಿಸಬೇಕಾಗಿದೆ. ಅವರು ಅಲ್ಲಾಹನ ಭಯವಿರಿಸಿಕೊಂಡು ಸರಿಯಾದ ಮಾತನ್ನೇ ಆಡಲಿ. ಅನಾಥರ ಸೊತ್ತನ್ನು ಅನ್ಯಾಯವಾಗಿ ಭೋಗಿಸುವವರು ತಮ್ಮ ಹೊಟ್ಟೆಯಲ್ಲಿ ಬೆಂಕಿಯನ್ನು ತುಂಬಿಸುತ್ತಾರೆ" (4:10,11).

ಹಿರಿಯರೊಡನೆ ಕಿರಿಯರು ಗೌರವದಿಂದ ವರ್ತಿಸಬೇಕೆಂದೂ ಕಿರಿಯರೊಡನೆ ಮತ್ತು ಮಕ್ಕಳೊಡನೆ ಹಿರಿಯರು ಕರುಣೆ ಮತ್ತು ಪ್ರೀತಿಯಿಂದ ವರ್ತಿಸಬೇಕೆಂದೂ ಇಸ್ಲಾಂ ಆಜ್ಞಾಪಿಸುತ್ತದೆ. ಪೈಗಂಬರರು ಒಮ್ಮೆ ಹೀಗೆ ಹೇಳಿದರು: "ಕಿರಿಯರೊಡನೆ ದಯೆಯಿಂದ ವರ್ತಿಸದವನೂ ಹಿರಿಯರಿಗೆ ಗೌರವ ತೋರಿಸದವನೂ ನಮ್ಮ ಪೈಕಿಯವನಲ್ಲ" (ತಿರ್ಮಿದಿ).

ಸಮಾಜದ ಎಲ್ಲ ವಿಭಾಗದವರೂ ಒಟ್ಟಿಗೆ ಸೇರಿಕೊಂಡು, ತಾವು ಒಂದೇ ಕುಟುಂಬದ ಸದಸ್ಯರೆಂಬಂತೆ ವರ್ತಿಸಬೇಕೆಂದು ಇಸ್ಲಾಂ ಉದ್ದೇಶಿಸುತ್ತದೆ. ಸರಳ ಜೀವನವನ್ನು ನಡೆಸಬೇಕೆಂದೂ ಸಾಂಘಿಕ ಬದುಕಿನಲ್ಲಿ ಸ್ವತಂತ್ರವಾದ ಪರಸ್ಪರ ಸಂಪರ್ಕದ ಮಾರ್ಗದಲ್ಲಿ ಕೃತಕ ತಡೆಗಳನ್ನು ನಿರ್ಮಿಸಬಾರದೆಂದೂ ಇಸ್ಲಾಂ ನಿರ್ದೇಶಿಸುತ್ತದೆ. ಉದಾಹರಣೆಗೆ, ಆಹಾರ-ಪಾನೀಯಗಳ ಅಪವ್ಯಯಮಾಡಬಾರದು (7:32) ಮತ್ತು ಎಲ್ಲ ವಿಧ ಆಡಂಬರಗಳನ್ನು ವರ್ಜಿಸಬೇಕು (23:4) ಎಂದು ಖುರ್‌ಆನ್ ಧನಿಕರಿಗೆ ಆದೇಶಿಸುತ್ತದೆ. ತಮ್ಮ ಸಂಪತ್ತಿನಲ್ಲಿ ಇತರರು ಯಾವ ರೀತಿಯಲ್ಲೂ ಭಾಗಿಯಾಗಬಾರದೆಂಬ ಭಾವನೆಯಲ್ಲಿ ಜಿಪುಣತನವನ್ನು ತೋರಿಸುವುದಾಗಲಿ ತಮ್ಮ ಸಂಪತ್ತಿನಲ್ಲಿ ಭಾಗಿಯಾಗಬೇಕಾದವರನ್ನು ಕಡೆಗಣಿಸಿ, ದುಂದುವೆಚ್ಚಮಾಡಿ ತಮ್ಮ ಕುಟುಂಬದವರೊಂದಿಗೆ ಸುಖೈಶ್ವರ್ಯದಿಂದ ಬಾಳುವುದಾಗಲಿ ಸಲ್ಲದು (25:68 ; 51:20). ಯಾರಿಗೂ ಸುಲಭವಾಗಿ ಸಂಪರ್ಕಿಸಲು ಸಾಧ್ಯವಾಗುವಂತೆ ಎಲ್ಲ ವಿಧ ವೈಭವಾಡಂಬರಗಳನ್ನು ತ್ಯಜಿಸಿ ಸರಳವಾಗಿ ಬಾಳಬೇಕಾಗಿದೆ.

ದೇಹ, ವಸ್ತ್ರ, ಮನೆ ಮತ್ತು ಸಾರ್ವಜನಿಕ ಸ್ಥಳಗಳನ್ನು ಶುಚಿಯಾಗಿಡಬೇಕೆಂದು ಇಸ್ಲಾಂ ಒತ್ತಿ ಹೇಳುತ್ತದೆ (74:5,6). ದಿನನಿತ್ಯ ಮಾಡಬೇಕಾದ ಅಂಗಶುದ್ಧಿ ಮತ್ತು ಸ್ನಾನದ ಬಗ್ಗೆ ಅದು ನಿರ್ದೇಶಿಸುತ್ತದೆ.

ಆರೋಗ್ಯಪೂರ್ಣವಾದ ಒಂದು ಸಮಾಜದಲ್ಲಿ ಎಲ್ಲ ವಿಧ ವೈವಿಧ್ಯಗಳಿಗೆ ಸ್ಥಾನವಿದೆ. ಇತರರ ಉನ್ನತವಾದ ಸ್ಥಾನಮಾನ ಮತ್ತು ಐಶ್ವರ್ಯವನ್ನು ಕಂಡು ಅಸೂಯೆಪಡಬಾರದು; ಅದು ದೋಷಕರ. ಪ್ರತಿಯೋರ್ವ ಸ್ತ್ರೀ ಅಥವಾ ಪುರುಷ ತನ್ನ ಸಾಮರ್ಥ್ಯವನ್ನೂ ಪ್ರತಿಭೆಯನ್ನೂ ಸದುಪಯೋಗಪಡಿಸಿ ವೈಯ

ಕ್ತಿಕ ಮತ್ತು ಸಾಮೂಹಿಕ ಒಳಿತಿಗಾಗಿ ಅತ್ಯಂತ ಶ್ರಮಿಸ ಬೇಕಾಗಿದೆ. ಸಹಾಯವನ್ನು ದೇವರಿಂದ ಮಾತ್ರ ಯಾಚಿಸಬೇಕಾಗಿದೆ (4:33). ಗತ್ಯಂತರವಿಲ್ಲದಿದ್ದರೆ ಹೊರತು ಭಿಕ್ಷೆಬೇಡುವುದು ನಿಷೇಧಿಸಲ್ಪಟ್ಟಿದೆ.

ಸದ್ವರ್ತನೆಯ ವಿವಿಧ ಮುಖಗಳನ್ನು ಜೀವನ ದಲ್ಲಿ ತೋರಿಸಲು ಇಸ್ಲಾಂ ಒತ್ತಾಯಿಸುತ್ತದೆ. "ಭೂಮಿ ಯಲ್ಲಿ ನಮ್ರತೆಯಿಂದ ನಡೆಯುವವರು, ತಮ್ಮ ವಿರುದ್ಧ ಅವಾಚ್ಯ ಮಾತುಗಳನ್ನು ಕೇಳುವಾಗ 'ಶಾಂತಿ' ಎಂದು ಹೇಳುತ್ತಾರೆ" (25:64). "ನೀವು ಜನರಿಂದ ಗರ್ವ ದಿಂದ ಮುಖವನ್ನು ತಿರುಗಿಸಬೇಡಿರಿ; ಅಹಂಕಾರದಿಂದ ನೀವು ಭೂಮಿಯಲ್ಲಿ ನಡೆಯಬೇಡಿರಿ. ಢಾಂಬಿಕತೆ ಯನ್ನು ತೋರಿಸುವ ದುರಂಹಕಾರಿಯನ್ನು ಅಲ್ಲಾಹನು ಮೆಚ್ಚುವುದಿಲ್ಲ. ನೀವು ಮಧ್ಯಮ ನೆಲೆಯಲ್ಲಿ ಹೆಜ್ಜೆ ಹಾಕಿರಿ: ಮೃದುವಾಗಿ ನುಡಿಯಿರಿ" (31:19.20).

ಇಸ್ಲಾಮಿಕ ಲೋಕದಲ್ಲೆಡೆ ಪ್ರಚಾರದಲ್ಲಿರುದ ಮುಸ್ಲಿಂ ಅಭಿವಾದನ "ಅಸ್ಸಲಾಮು ಅಲೈಕುಂ ವ ರಹ್ಮ ತುಲ್ಲಾಹಿ ವ ಬರಕಾತುಹು" ಎಂದಾಗಿದೆ. "ನಿಮ್ಮ ಮೇಲೆ ಶಾಂತಿಯೂ ದೇವಾನುಗ್ರಹಗಳೂ ದೇವ ಕಾರುಣ್ಯವೂ ಇರಲಿ" ಎಂದು ಅದರ ಅರ್ಥ. ನೀವು ಅಭಿವಾದನ ಕೇಳಿದರೆ ಅದಕ್ಕಿಂತ ಉತ್ತಮವಾದ ರೀತಿ ಯಲ್ಲಿ ಅಥವಾ ಅದಕ್ಕೆ ತುಲ್ಯವಾಗಿ ಪ್ರತ್ಯಭಿವಾದನ ವನ್ನು ಹೇಳಿರಿ ಎಂದು ಖುರ್‌ಆನ್ ನಿರ್ದೇಶಿಸಿದೆ (4:87). ಸತ್ಯವಾದ ಮತ್ತು ನೇರವಾದ ಮಾತ ನ್ನಾಡಬೇಕೆಂದೂ ಹೊರಳು ನುಡಿ ಆಡಬಾರದೆಂದೂ ಅದು ಆದೇಶಿಸುತ್ತದೆ (33:71).

ಅನ್ಯರ ಗೃಹಗಳನ್ನು ಅಥವಾ ತನ್ನ ಸ್ವಂತ ಮನೆ ಯನ್ನು ಪ್ರವೇಶಿಸುವಾಗ ಮುಂಬಾಗಿಲಿನಿಂದಲೇ ಒಳಗೆ ಹೋಗಬೇಕು; ಅದುವೇ ಸಭ್ಯತೆಯ ಕ್ರಮ. ಮನೆ ಯೊಳಗೆ ನಿಮ್ಮ ಪ್ರವೇಶ ಯಾರನ್ನೂ ದಿಗಿಲು ಗೊಳಿಸುವಂತಿರಬಾರದು (21:90). ಬೇರೆಯವರ ಮನೆಯನ್ನು ಸಂದರ್ಶಿಸುವಾಗ, ಅವರ ಅನುಮತಿ ದೊರೆತರೆ ಮಾತ್ರ ಒಳಗೆ ಹೋಗಬಹುದು. ಪ್ರವೇಶಿ ಸಿದ ಕೂಡಲೇ ಒಳಗಿದ್ದವರಿಗೆ 'ಸಲಾಂ' ಹೇಳಬೇಕು (24:28). "ಅಲ್ಲಿ ಯಾರೂ ಇಲ್ಲವಾದರೆ ನಿಮಗೆ ಸಮ್ಮತಿ ದೊರೆಯುವ ತನಕ ಒಳಗೆ ಪ್ರವೇಶಿಸಬಾರದು. ಅಪ್ಪಣೆ ನಿರಾಕರಿಸಲ್ಪಟ್ಟರೆ ಕೂಡಲೇ ಹಿಂತಿರುಗಬೇಕು. ಅದು ನಿಮಗೆ ಇನ್ನಷ್ಟು ಶುದ್ಧತೆಯ ಕಾರ್ಯವಾಗಿದೆ. ನೀವು ಮಾಡುವುದೆಲ್ಲವನ್ನೂ ಅಲ್ಲಾಹನು ಬಲ್ಲನು. ಜನವಾಸವಿಲ್ಲದ ಮನೆಗಳಲ್ಲಿ ನಿಮ್ಮ ಸಾಮಾನು ಸರಂಜಾ ಮುಗಳಿದ್ದರೆ ಸ್ವತಂತ್ರವಾಗಿ ನೀವು ಪ್ರವೇಶಿಸುವುದರಲ್ಲಿ ದೋಷವಿಲ್ಲ. ನೀವು ಬಹಿರಂಗಪಡಿಸುವುದನ್ನೂ ಬಚ್ಚಿಡುವುದನ್ನೂ ಅಲ್ಲಾಹನು ಅರಿಯುತ್ತಾನೆ" (24:29-30).

ಒಂದು ಪ್ರಯಾಣಕ್ಕೆ ಹೊರಡುವುದಕ್ಕೆ ಮುಂಚಿ ತವಾಗಿ, ತೊಂದರೆಗೆ ಈಡಾಗದಂತೆ ಎಲ್ಲ ಏರ್ಪಾಡು ಗಳನ್ನು ಮಾಡಿಕೊಳ್ಳಬೇಕು (2:198).

ಮೂರು ವಿಧದ ಸಾಮಾಜಿಕ ಸಂಘಟನೆಗಳಿಗೆ ಮಾತ್ರ ಇಸ್ಲಾಮಿನಲ್ಲಿ ಸ್ಥಾನವಿದೆ. ಒಂದನೆಯದು, ಜನರ ಕ್ಷೇಮಾಭಿವೃದ್ಧಿಗಾಗಿ ರೂಪಿಸಲ್ಪಟ್ಟದ್ದು. ಎರಡನೆಯದು, ವಿದ್ಯೆಗೆ ಸಂಬಂಧಿಸಿದ್ದು: ವಿದ್ಯೆಗೆ ಪ್ರೋತ್ಸಾಹ, ವಿಜ್ಞಾನ, ಕಲೆ, ತತ್ವಜ್ಞಾನ ಇತ್ಯಾದಿಗಳ ಬಗ್ಗೆ ಸಂಶೋಧನೆಗಾಗಿ ರಚಿಸಲ್ಪಟ್ಟದ್ದು. ಮೂರನೆಯದು, ಕೌಟುಂಬಿಕ, ದೇಶೀಯ ಮತ್ತು ಅಂತರ್ದೇಶೀಯ ರಂಗಗಳಲ್ಲುಂಟಾಗುವ ವಾದ ವಿವಾದ ಗಳಿಗೂ ಘರ್ಷಣೆಗಳಿಗೂ ಪರಿಹಾರವನ್ನುಂಟು ಮಾಡಿ ಶಾಂತಿಸ್ಥಾಪಿಸುವ ಉದ್ದೇಶವನ್ನು ಹೊಂದಿದ್ದು (4:15). ಒಂದು ಸಾಮೂಹಿಕ ಆವಶ್ಯಾರ್ಥ ಜನರು ಒಂದೆಡೆ ಸೇರಿದ್ದರೆ ಅವರು ಶಿಸ್ತುಬದ್ಧರಾಗಿ ವರ್ತಿಸಬೇಕಾಗಿದೆ. ಅನುಮತಿ ಇಲ್ಲದೆ ಕೂತಲ್ಲಿಂದ ಎದ್ದುಹೋಗುವುದಾ ಗಲಿ, ಸಭೆಯಿಂದ ಚದರಿ ಹೋಗುವುದಾಗಲಿ ಕೂಡದು (24:63). ಜನಕೂಟದಲ್ಲಿ ಯಾರಿಗಾದರೂ ಜಾಗ ವನ್ನುಕೊಡಬೇಕಾಗಿ ಬಂದಲ್ಲಿ ಸಂತೋಷದಿಂದ ಹಾಗೆ ಮಾಡಬೇಕು. ಎಲ್ಲ ನಿರ್ದೇಶ ಉಪದೇಶಗಳನ್ನು ಉತ್ಸು ಕತೆಯಿಂದ ಕಾರ್ಯಗತಗೊಳಿಸಬೇಕು (58:12).

ಜನರು ಪರಸ್ಪರ ಗೌರವಾದರದಿಂದ ವರ್ತಿಸ ಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ರಸ್ತೆಗಳಲ್ಲಿ ನಿಯಮ ಮತ್ತು ಶಿಸ್ತು ಪಾಲಿಸಬೇಕು; ಅವುಗಳನ್ನು ಶುಚಿಯಾಗಿಡುವ ಬಗ್ಗೆ ಗಮನವಿರಿಸಬೇಕು. ಸಾರ್ವ ಜನಿಕ ಸ್ಥಳಗಳನ್ನು ಉಪಯೋಗಿಸುವವರು, ಅದೇ

ಸ್ಥಳವನ್ನು ಉಪಯೋಗಿಸುವ ಇತರರಿಗೆ ಅನಾವಶ್ಯಕ ತೊಂದರೆ ಉಂಟಾಗದಂತೆ ಜಾಗ್ರುತೆವಹಿಸಬೇಕಾಗಿದೆ; ಇತರರಿಗೆ ನಷ್ಟವಾಗಲಿ ಅಪಾಯವಾಗಲಿ ಉಂಟಾಗ ದಂತೆಯೂ ನೋಡಿಕೊಳ್ಳಬೇಕು. ಸಾರ್ವಜನಿಕ ರಸ್ತೆ ಯಲ್ಲಿ ಸಂಚರಿಸುವಾಗ, ಅಜಾಗ್ರುತೆಯಿಂದ ಇತರರಿಗೆ ಗಾಯವನ್ನುಂಟುಮಾಡುವಂತಹ ಚೂಪಾದ ಮೊನೆ ಯಿರುವ ಆಯುಧವನ್ನು ಮುಚ್ಚಿಡದೆ ಕೊಂಡೊಯ್ಯ ಬಾರದೆಂದು ಪೈಗಂಬರರು ಎಚ್ಚರಿಸಿದ್ದಾರೆ (ಮುಸ್ಲಿಂ). ಸಾಂಕ್ರಾಮಿಕ ರೋಗಗಳು ಹರಡಿದ ಸ್ಥಳಗಳಲ್ಲಿ ವಾಸಿ ಸುವವರು ಜನವಾಸವಿರುವ ಬೇರೆಡೆಗೆ ಹೋಗಬಾರ ದೆಂದು ಪೈಗಂಬರರು ನಿರ್ದೇಶಿಸಿದ್ದಾರೆ (ಮುಸ್ಲಿಂ). ಏಕೆಂದರೆ ಆ ಕಾರಣದಿಂದ ಅಲ್ಲಿ ಕೂಡ ಈ ಸಾಂಕ್ರಾ ಮಿಕ ರೋಗ ಹರಡುವ ಸಂಭವವಿದೆ.

ಒಳಿತಿನ ಬಗ್ಗೆ ಉಪದೇಶಿಸುತ್ತಾ ಕೆಡುಕಿನಿಂದ ಜನರನ್ನು ದೂರವಿರುವಂತೆ ಮಾಡುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವಾಗಿದೆ. ಆದರೆ ಇದು ಕರುಣೆ ಮತ್ತು ಪ್ರೀತಿಯಿಂದ ಕೂಡಿರಬೇಕಾಗಿದೆ (31:18). ಗುಪ್ತಚಾರಿಕೆ, ಹಿಂದಿನಿಂದ ದೂರುವುದು, ಅನಾವಶ್ಯಕ ವಾದ ಸಂಶಯ ಇತ್ಯಾದಿ ಸ್ವಭಾವಗಳನ್ನು ತೊರೆಯ ಬೇಕು (49:13). ಒಬ್ಬನಿಗೆ ನಿಜವಾಗಿಯೂ ಇರುವ ಕುಂದು ಕೊರತೆಯ ಬಗ್ಗೆ ಹೇಳುವುದು ಪರನಿಂದೆ ಯಾಗುವುದೇ ಎಂದು ಒಮ್ಮೆ ಪೈಗಂಬರರೊಡನೆ ಯಾರೋ ಕೇಳಿದರು. ಹಾಗೆ ಹೇಳುವುದೇ ಪರ ನಿಂದೆಯೆಂದೂ, ಇಲ್ಲದ ನ್ಯೂನತೆಗಳನ್ನು ಹೇಳುವು ದಾದರೆ, ಅದು ಪರನಿಂದೆ ಮಾತ್ರವಲ್ಲ ಸುಳ್ಳುಕೂಡ ಆಗುತ್ತದೆಂದೂ ಪೈಗಂಬರರು ಉತ್ತರಿಸಿದರು (ಮುಸ್ಲಿಂ). ಒಬ್ಬನು ಮತ್ತೊಬ್ಬನ ಕುರಿತು ಚಾಡಿ ಹೇಳಿದರೆ, ಆ ಚಾಡಿ ಮಾತನ್ನು ಅದಕ್ಕೆ ಸಂಬಂಧ ಪಟ್ಟವನ ಕಿವಿಗೆ ಹಾಕಲೇಬಾರದು. ಏಕೆಂದರೆ ಅದು ಹಾನಿಗೆ ಹೇತುವಾಗುವುದು. ಒಬ್ಬನ ಬಗ್ಗೆ ಹಿಂದಿನಿಂದ ಹೇಳುವವನು ಗುರಿಯಿಲ್ಲದೆ ಬಾಣಬಿಟ್ಟವನಂತೆ; ಆದರೆ ಆ ಮಾತನ್ನು, ಯಾರ ಬಗ್ಗೆ ಆಡಲಾಯಿತೋ ಅವನ ಕಿವಿಗೆ ಹಾಕುವುದು, ಆ ಬಾಣವನ್ನು ಗುರಿಮುಟ್ಟಿ ಸಿದಂತಾಗುತ್ತದೆ ಎಂದು ಪೈಗಂಬರರು ನುಡಿದಿದ್ದಾರೆ (ಮುಸ್ಲಿಂ).

ಜ್ಞಾನದ ವರ್ಧನೆಗಾಗಿ ಸದಾ ಪ್ರಯತ್ನಿಸುತ್ತಿ ರಬೇಕಾದುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯ ವಾಗಿದೆ (20:115). ಜ್ಞಾನಾರ್ಜನೆಗಾಗಿ ಪರಿಶ್ರ ಮಿಸಬೇಕಾದುದು ಪ್ರತಿಯೋರ್ವ ಮುಸ್ಲಿಂ ಸ್ತ್ರೀ-ಪುರು ಷರ ಕರ್ತವ್ಯವೆಂದು ಪೈಗಂಬರರು ನುಡಿದಿದ್ದಾರೆ (ಇಬ್ನುಮಾಜಃ). ಜ್ಞಾನ ಸಂಪಾದನೆಗಾಗಿ ಬಹು ದೂರದ ಕಾತಾಯಿ (ಚೀನಾದ ಪುರಾತನ ಹೆಸರು)ಗೆ ಹೋಗಬೇಕಾಗಿ ಬಂದರೆ ಅದಕ್ಕೆ ಕೂಡ ಸಿದ್ಧರಾಗಿರ ಬೇಕೆಂದು ಪೈಗಂಬರರು ಹೇಳಿದ್ದರು (ಬೈಹಖಿ). "ಜ್ಞಾನವು ಮುಸ್ಲಿಮನ ಕಳೆದುಹೋದ ಸಂಪತ್ತು, ಅದನ್ನು ಅವನು ಎಲ್ಲಿ ಕಂಡರೂ ಕೈವಶಮಾಡಿಕೊಳ್ಳ ಬೇಕು" ಎಂದು ಕೂಡ ಪೈಗಂಬರರು ನುಡಿದಿದ್ದರು (ತಿರ್ಮುದಿ).

ಮನೆಯ ಕೆಲಸದಾಳುಗಳ ಕುರಿತು ಪೈಗಂಬರರು ಈ ರೀತಿ ನುಡಿದಿದ್ದರು: "ಅವರು ನಿಮ್ಮ ಸಹೋದರ ರಂತೆ. ನೀವು ಉಡುವಂತಹ ಉಡುಪನ್ನು ಅವರಿಗೆ ಸಹ ಒದಗಿಸಬೇಕು. ಕಷ್ಟದ ಒಂದು ಕೆಲಸವನ್ನು ನೀವು ಅವರಿಗೆ ಕೊಟ್ಟಿದ್ದರೆ, ಅದನ್ನು ಪೂರ್ಣಗೊಳಿಸಲು ನೀವು ಸಹ ಅವರೊಂದಿಗೆ ಸೇರಿ ಸಹಾಯಮಾಡಬೇಕು (ಅಬೂ ದಾವೂದ್). ಆಹಾರವನ್ನು ಸೇವಿಸುವಾಗ, ಅದನ್ನು ತಯಾರಿಸಲು ನೆರವು ನೀಡಿದವರನ್ನು ಕೂಡ ಭಾಗಿಯಾಗಲು ಕರೆಯಬೇಕೆಂದು ಪೈಗಂಬರರು ನಿರ್ದೇ ಶಿಸಿದ್ದಾರೆ (ಅಬೂ ದಾವೂದ್).

ಕೂಲಿಕಾರನ ಕೂಲಿಯನ್ನು "ಅವನ ದೇಹದ ಬೆವರು ಆರುವುದಕ್ಕಿಂತ ಮುಂಚಿತವಾಗಿ" ಕೊಡ ಬೇಕೆಂದು ಪೈಗಂಬರರು ಆದೇಶಿಸಿದ್ದಾರೆ (ಇಬ್ನು ಮಾಜಃ).

ಪಕ್ಷಿಮೃಗಾದಿಗಳ ಮೇಲೆ ಕರುಣೆ ತೋರಿಸುವ ವಿಚಾರದಲ್ಲಿಯೂ ಪೈಗಂಬರರು ಕಾಳಜಿ ವಹಿಸುತ್ತಿ ದ್ದರು. ಒಂದು ಸಂದರ್ಭದಲ್ಲಿ ಒಂದು ಪರಿವಾಳ ಪರವಶತೆಯಿಂದ ಸುತ್ತು ಹಾಕಿ ಹಾರಾಡುವುದನ್ನು ಪೈಗಂಬರರು ಕಂಡರು. ಪಾರಿವಾಳದ ಮರಿಯನ್ನು ಯಾರೋ ಹಿಡಿದಿಟ್ಟಿರುವುದನ್ನು ಅರಿತ ಪೈಗಂಬರರು ತುಂಬಾ ಬೇಸರಗೊಂಡು, ಆ ಮರಿಯನ್ನು ಕೂಡಲೇ

ತಾಯಿ ಪಾರಿವಾಳದ ಸಮೀಪದಲ್ಲಿ ತಂದಿಡಲು ಆಜ್ಞಾಪಿಸಿದರು (ಅಬೂ ದಾವೂದ್). ಒಮ್ಮೆ ಪೈಗಂಬರರು ಸಂಚಾರದಲ್ಲಿರುವಾಗ, ಒಂದೆಡೆ ಇರುವೆ ಕುಪ್ಪೆಗೆ ಯಾರೋ ಬೆಂಕಿಯಿಡುವುದನ್ನು ಕಂಡಾಗ, ಹಾಗೆ ಮಾಡಬಾರದೆಂದು ಎಚ್ಚರಿಕೆ ಕೊಟ್ಟರು (ಅಬೂ ದಾವೂದ್). ಮುಖಕ್ಕೆ ಕಾದ ಕಬ್ಬಿಣದಿಂದ ಬರೆ ಹಾಕಲ್ಪಟ್ಟ ಒಂದು ಕತ್ತೆಯನ್ನು ಪೈಗಂಬರರು ಒಮ್ಮೆ ಕಂಡಾಗ, ಅದೊಂದು ಕ್ರೂರ ಕ್ರಮವೆಂದು ಅವರು ಹೇಳಿದರು. ಬರೆಹಾಕಲೇ ಬೇಕೆಂದಾದರೆ, ಕಾಲಿಗೆ ಬರೆಹಾಕಬಹುದೆಂದೂ ಮುಖದಂತಹ ಮೃದುಲ ಭಾಗಕ್ಕೆ ಹಾಕಬಾರದೆಂದೂ ಅವರು ಉಪದೇಶಿಸಿದರು. ಯಾವುದೇ ಮೃಗದ ಮುಖಕ್ಕೆ ಹೊಡೆಯಬಾರದು; ಶರೀರದ ಅತೀ ಮೃದುಲವಾದ ಭಾಗ ಮುಖವೆಂದು ಪೈಗಂಬರರು ನುಡಿದರು (ಮುಸ್ಲಿಂ).

ಸಾಮಾಜಿಕ ಮೌಲ್ಯಗಳ ಮಂಡಲದಲ್ಲಿ ಮಹತ್ತರವಾದ ಒಂದು ನಿರ್ದೇಶ ಈ ರೀತಿಯಾಗಿದೆ: "ಸಾತ್ವಿಕತೆ ಮತ್ತು ಸದ್ವರ್ತನೆಯಲ್ಲಿ ನೀವು ಪರಸ್ಪರ ನೆರವು ನೀಡಿರಿ; ಆದರೆ ಪಾಪ ಮತ್ತು ಆಜ್ಞಾಲ್ಲಂಘನದಲ್ಲಿ ನೀವು ಅನ್ಯೋನ್ಯ ಸಹಾಯ ಮಾಡಬಾರದು" (5:3). "ದ್ರೋಹಿಯಾದರೂ ದ್ರೋಹಿತನಾದರೂ ನೀನು ನಿನ್ನ ಸಹೋದರನಿಗೆ ಸಹಾಯಮಾಡು" ಎಂದು ಪೈಗಂಬರರು ಒಮ್ಮೆ ಹೇಳಿದಾಗ, "ದ್ರೋಹಿಸಲ್ಪಟ್ಟ ಒಬ್ಬ ಸಹೋದರನಿಗೆ ಸಹಾಯಮಾಡಬೇಕೆಂದು ಹೇಳಿದ್ದು ನಮಗೆ ಮನವರಿಕೆಯಾಯಿತು. ಆದರೆ ದ್ರೋಹಿಯಾದ ಒಬ್ಬ ಸಹೋದರನಿಗೆ ಹೇಗೆ ನೆರವು ನೀಡುವುದು?" ಎಂದು ಪೈಗಂಬರರೊಡನೆ ಕೇಳಲಾಯಿತು. "ಬೇರೆಯವರನ್ನು ದ್ರೋಹಿಸುವುದರಿಂದ ಅವನನ್ನು ತಡೆದು ಕೊಂಡು" ಎಂದು ಪೈಗಂಬರರು ಉತ್ತರಿಸಿದರು (ಬುಖಾರಿ).

"ಯಾರ ಕೈಗಳಿಂದಲೂ ನಾಲಗೆಯಿಂದಲೂ ಇತರರಿಗೆ ಕೇಡುಂಟಾಗುವುದಿಲ್ಲವೋ ಅವನೇ ನಿಜವಾದ ಮುಸ್ಲಿಂ" ಎಂದು ಪೈಗಂಬರರು ಮುಸ್ಲಿಮನ ಲಕ್ಷಣವನ್ನು ನಿರೂಪಿಸಿದ್ದಾರೆ. "ತನ್ನ ಸಹೋದರನಿಗೆ ಸಹಾಯ ನೀಡುವುದರಲ್ಲಿ ಶ್ರಮವಹಿಸುವವನಿಗೆ ಅಲ್ಲಾಹನು ಸಹಾಯ ನೀಡುತ್ತಾನೆ" (ತಿರ್ಮಿದಿ) ಎಂದು ಪೈಗಂಬರರು ನುಡಿದು ಪರಸ್ಪರ ಸಹಾಯ - ಸಹಕಾರಕ್ಕೆ ಪ್ರಬಲವಾದ ಒಂದು ಚಾಲಕಶಕ್ತಿಯನ್ನು ನೀಡಿದರು.

*With Best Compliments From :*



**M. BASHIR AHMAD**

**"Rashied Villa", Kunjathur,**

**MANJESHWAR-670 323**

*WITH BEST COMPLIMENTS FROM :*

# P. K. UMAR

**Timber Merchant**

**MADIKERI-571201**

Phone: **6795**

# ಇಮಾಂ ಮಹ್‌ದಿಯ ಸೂಚಕಕಾರ್ಯ: ಸೂರ್ಯ-ಚಂದ್ರ ಗ್ರಹಣಗಳು

★ ಡಾ। ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದ್ದೀನ್ MSc., Ph. D.

ಹಝ್ರತ್ ಮುಹಮ್ಮದ್ ಪೈಗಂಬರರು (ಸ), ಕಾಲಾಂತರದಲ್ಲಿ ಸಂಭವಿಸಲಿರುವ ಧರ್ಮಗ್ಲಾನಿಯ ಕುರಿತು ಶಕ್ತಿಯುತವಾಗಿ ಭವಿಷ್ಯ ನುಡಿದಿರುವರು. ಮಾನವ ಸಮುದಾಯವು ಅತ್ಯಂತ ಅಪತ್ಕರವಾದ ರೀತಿಯಲ್ಲಿ ಧಾರ್ಮಿಕ ಅಂಧಕಾರದಲ್ಲಿ ಮುಳುಗುವುದೆಂದೂ ವಿಶೇಷತಃ ತನ್ನ ಸಮುದಾಯವಾದ ಮುಸ್ಲಿಂ ಜನಾಂಗವು ಅತ್ಯಂತ ಶೋಚನೀಯವಾಗಿ ಅಧಃಪತನ ಹೊಂದಲಿರುವುದೆಂದೂ ಆ ಪ್ರವಾದಿಯವರು ಭವಿಷ್ಯ ನುಡಿದಿದ್ದಾರೆ. ಆಗ ಇಸ್ಲಾಮಿನಲ್ಲಿ ಅದರ ಹೆಸರೂ ಖುರ್‌ಆನಿನಲ್ಲಿ ಅದರ ಲಿಪಿಗಳೂ ಮಾತ್ರವೇ ಬಾಕಿಯುಳಿವುವು; ಯಥಾರ್ಥವಾದ ಸತ್ಯವಿಶ್ವಾಸವು ಭೂಮಂಡಲದಿಂದ ಅಂತರ್ಧಾನವಾಗುವುದು; ನಾಸ್ತಿಕವಾದವು ಜಯಭೇರಿ ಹೊಡೆಯುವುದು ಹಾಗೂ ಇಸ್ಲಾಂ ಧರ್ಮವು ನಾನಾ ಕಡೆಗಳಿಂದಲೂ ಆಕ್ರಮಿಸಲ್ಪಟ್ಟು ಅತಿಭಯಂಕರ ಆಪತ್ತಿನಲ್ಲಿ ಸಿಲುಕಲಿರುವುದೆಂದು ಆ ಮಹಾತ್ಮರು ಪ್ರವಾದನಗೈದಿರುವರು. ಆ ಕಾಲದಲ್ಲಿ ಅಲ್ಲಾಹನು ಒಬ್ಬ ಉದ್ಧಾರಕನನ್ನು ನಿಯೋಜಿಸಿ ಇಸ್ಲಾಂ ಧರ್ಮದ ಪೂರ್ವ ಪ್ರತಾಪವನ್ನು ಪುನರುತ್ಥಾನಗೊಳಿಸುವನೆಂದು ಕೂಡ ಹಝ್ರತ್ ಪೈಗಂಬರರು ಭವಿಷ್ಯ ನುಡಿದಿದ್ದಾರೆ. ಈ ವಾಗ್ದತ್ತ ಉದ್ಧಾರಕನ ಸತ್ಯತೆಗೆ ಸಾಕ್ಷ್ಯವಾಗಿ ಪೈಗಂಬರರು ಹಲವಾರು ಸೂಚಕ ಕಾರ್ಯಗಳನ್ನು ತಿಳಿಸಿ ಕೊಟ್ಟಿರುತ್ತಾರೆ. "ಇಮಾಂ ಮಹ್‌ದಿ" ಮತ್ತು "ಮಸೀಹ್" ಎಂಬ ಗುಣನಾಮಗಳೊಂದಿಗೆ ಆವಿರ್ಭವಿಸುವರೆಂದು ವಾಗ್ದಾನ ಮಾಡಲ್ಪಟ್ಟ ಆ ಮಹಾಪುರುಷನ ಆಗಮನ ಕಾಲದಲ್ಲಿ ನವನವೀನ ವಾರ್ತಾಪ್ರಸಾರ ಮಾಧ್ಯಮಗಳು ಕಂಡುಹಿಡಿಯಲ್ಪಡುವುವೆಂದೂ ನವೀನ ಸಾರಿಗೆ ಸೌಲಭ್ಯಗಳ ಆವಿಷ್ಕರಣದಿಂದಾಗಿ ಒಂಟೆ ಸವಾರಿಯು ವರ್ಜಿಸಲ್ಪಡುವುದೆಂದೂ ಅನೇಕ ವೈಜ್ಞಾನಿಕ ಸಂಶೋಧನೆಗಳು ಆ ಕಾಲದಲ್ಲಿ ಉಂಟಾಗಲಿವೆಯೆಂದೂ ಪ್ರವಾದನಗಳಲ್ಲಿ ವಿವರಿಸ



ಡಾ। ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದ್ದೀನ್ ಅವರು ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಖಗೋಳಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಅವರು 1963ರಲ್ಲಿ ಅಮೇರಿಕದ ಚಿಕಾಗೋ ವಿಶ್ವವಿದ್ಯಾಲಯದಿಂದ ಖಗೋಳಜ್ಞಾನ ಮತ್ತು ಜ್ಯೋತಿರ್ಭೌತ ವಿಜ್ಞಾನದಲ್ಲಿ ಪಿಎಚ್. ಡಿ. ಪದವಿಯನ್ನು ಪಡೆದರು. ಅವರು Astronomical Society of India ದ ಉಪಾಧ್ಯಕ್ಷರಾಗಿಯೂ (1986-1989), Indian Astronomical Societyಯ ಅಧ್ಯಕ್ಷರಾಗಿಯೂ (1986 - 87) ಸೇವೆ ಸಲ್ಲಿಸಿದ್ದಾರೆ. ಜಾಗತಿಕ ಖಗೋಳಶಾಸ್ತ್ರ ಸಂಘ (International Astronomical Union)ದ ಸದಸ್ಯರಾಗಿರುವ ಅವರು ವಿದೇಶಗಳಲ್ಲಿ ಜರಗಿದ ಕೆಲವು ಖಗೋಳಶಾಸ್ತ್ರ ಗೋಷ್ಠಿಗಳಲ್ಲಿ ಸಹ ಭಾಗವಹಿಸಿದ್ದಾರೆ.

ಪವಿತ್ರ ಖುರ್‌ಆನನ್ನು ಸಂಪೂರ್ಣವಾಗಿ ಕಂಠಪಾಠ ಮಾಡಿರುವ (ಹಾಫಿಝ್) ಸಾಲಿಹ್ ಮುಹಮ್ಮದ್ ಸಾಹೇಬರು ಖುರ್‌ಆನಿನ ಅಗಾಧ ಜ್ಞಾನವನ್ನು ಹೊಂದಿದವರೂ ಆಗಿದ್ದಾರೆ. ಅವರು ಈಗ ಸೆಕುಂದರಾಬಾದಿನ ಅಹ್ಮದಿಯಾ ಜಮಾಅತಿನ ಅಧ್ಯಕ್ಷರಾಗಿ ಸೇವೆಸಲ್ಲಿಸುತ್ತಿದ್ದಾರೆ.

ಲಾಗಿದೆ. ಆ ಕಾಲದಲ್ಲಿ ಕ್ರೈಸ್ತ ಧರ್ಮವು ಅತ್ಯಧಿಕ ಪ್ರಾಬಲ್ಯದಿಂದ ಜಗತ್ತಿನಾದ್ಯಂತ ವ್ಯಾಪಿಸುವುದೆಂದು ಸಹ ಹಝ್ರತ್ ಪೈಗಂಬರರು ಭವಿಷ್ಯ ನುಡಿದಿದ್ದಾರೆ. ವಾಗ್ದಾನ ಮಾಡಲಾದ ಆ ಉದ್ಧಾರಕನ ಕಾಲದಲ್ಲಿ ಸಂಭವಿಸಲಿರುವುದೆಂದು ಹಝ್ರತ್ ಮುಹಮ್ಮದ್ ಪೈಗಂಬರರು ಭವಿಷ್ಯ ನುಡಿದಿರುವ ಅತಿ ಮಹತ್ವಾದ ಒಂದು ಸೂಚಕ ಕಾರ್ಯದ ಕುರಿತು ನಾನಿಲ್ಲಿ ವಿವರಿಸ ಬಯಸುತ್ತೇನೆ.

ಹಝ್ರತ್ ಪೈಗಂಬರರು ಈ ರೀತಿ ಹೇಳಿದರು : "ನಮ್ಮ ಮಹ್‌ದಿಗೆ ಎರಡು ಸೂಚಕ ಕಾರ್ಯಗಳು ನಿಶ್ಚಯಿಸಲ್ಪಟ್ಟಿವೆ. ಆಕಾಶ ಭೂಮಿಗಳು ಉಂಟಾದ ಮೊದಲ್ಗೊಂಡು ಇಂತಹ ದೃಷ್ಟಾಂತಗಳು ಯಾವ ಉದ್ಧಾರಕನ ಪರವಾಗಿಯೂ ತೋರಿಸಲ್ಪಟ್ಟಿರಲಾರವು. ಅದೇನೆಂದರೆ, ಒಂದು ರಮಝಾನ್ ತಿಂಗಳಲ್ಲಿ ಚಂದ್ರ ಗ್ರಹಣವು ಸಂಭವಿಸುವ ರಾತ್ರಿಗಳ ಮೊದಲನೆಯ ರಾತ್ರಿಯಲ್ಲಿ ಚಂದ್ರಗ್ರಹಣವೂ ಸೂರ್ಯನಿಗೆ ಗ್ರಹಣವಾಗುವ ದಿವಸಗಳ ಪೈಕಿ ಮಧ್ಯದ ದಿವಸದಲ್ಲಿ ಸೂರ್ಯಗ್ರಹಣವೂ ಉಂಟಾಗುವುವು". (ದಾರು ಖುತ್‌ನಿ). ಪೈಗಂಬರರ ಈ ವಚನವನ್ನು ಅನೇಕ ಹದೀಸ್ ಪಂಡಿತರು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ.

ಸೂರ್ಯ ಗ್ರಹಣಗಳೂ ಚಂದ್ರ ಗ್ರಹಣಗಳೂ ಪ್ರಕೃತಿಯ ನಿಯಮಾನುಸಾರ ಸಂಭವಿಸುತ್ತವೆ. ಭೂಮಿಯ ನೆರಳು ಚಂದ್ರನ ಮೇಲೆ ಬೀಳುವಾಗ ಚಂದ್ರಗ್ರಹಣವುಂಟಾಗುತ್ತದೆ. ಅದೇರೀತಿ ಸೂರ್ಯ ಪ್ರಕಾಶವು ಭೂಮಿಗೆ ಬೀಳುವುದನ್ನು ಚಂದ್ರನು ಮಧ್ಯೆ ಬಂದು ತಡೆಯುವಾಗ ಸೂರ್ಯಗ್ರಹಣವುಂಟಾಗುವುದು. ಚಂದ್ರಗ್ರಹಣವು ಪೂರ್ಣ ಚಂದ್ರನಿರುವ ದಿನಗಳಾದ ಚಂದ್ರಮಾನ ತಿಂಗಳ 13, 14, 15 ಎಂಬೀ ದಿನಾಂಕಗಳ ರಾತ್ರಿಗಳಲ್ಲಿ ಸಂಭವಿಸುತ್ತದೆ. ಹಾಗೆಯೇ ಚಂದ್ರನು ತೀರಾ ಗೋಚರಿಸದ ಚಾಂದ್ರಮಾನ 27, 28, 29 ಎಂಬೀ ದಿನಗಳಲ್ಲಿ ಸೂರ್ಯಗ್ರಹಣವೂ ಉಂಟಾಗುತ್ತದೆ. ಚಾಂದ್ರಮಾನ ತಿಂಗಳ (Lunar Month) 13, 14, 15 ಎಂಬೀ ರಾತ್ರಿಗಳಲ್ಲೂ 27, 28, 29 ಎಂಬೀ ದಿನಗಳ ಹಗಲಿನಲ್ಲೂ ಯಥಾಕ್ರಮ ಚಂದ್ರಗ್ರಹಣವೂ ಸೂರ್ಯಗ್ರಹಣವೂ ಪ್ರಕೃತಿಯಲ್ಲಿ ನಿಶ್ಚಯಿಸಲ್ಪಟ್ಟಿವೆ. ಹಝ್ರತ್ ಮುಹಮ್ಮದ್ ಪೈಗಂಬರರ ಪ್ರವಾದನದಲ್ಲಿ ಮೊದಲ ರಾತ್ರಿಯಲ್ಲಿ ಚಂದ್ರಗ್ರಹಣವುಂಟಾಗಲಿದೆ ಯೆಂದು ಹೇಳಿದುದರ ತಾತ್ಪರ್ಯವು, ಪ್ರಕೃತಿ ನಿಯಮದಂತೆ ಚಂದ್ರಗ್ರಹಣಕ್ಕೆ ನಿಶ್ಚಯಿಸಲಾದ 13, 14, 15 ಎಂಬೀ ದಿನಗಳ ಮೊದಲನೆಯ ರಾತ್ರಿಯಲ್ಲಿ (13ನೇ ರಾತ್ರಿ) ಚಂದ್ರಗ್ರಹಣವುಂಟಾಗುವುದು ಎಂದಾಗಿದೆ. ಅಂತೆಯೇ ಸೂರ್ಯನಿಗೆ ಅವರ ಮಧ್ಯ ದಿನದಲ್ಲಿ ಗ್ರಹಣವಾಗುವುದೆಂದು ಹೇಳಿದುದರ ಅರ್ಥವೂ ಸೂರ್ಯ ಗ್ರಹಣಕ್ಕೆ ನಿಶ್ಚಯಿಸಲ್ಪಟ್ಟ ಚಾಂದ್ರಮಾನ ಮಾಸದ 27, 28, 29 ಎಂಬೀ ದಿನಾಂಕಗಳ ಪೈಕಿ ಮಧ್ಯ ದಿನವಾದ 28ನೇ ದಿನದ ಹಗಲಿನಲ್ಲಿ ಸೂರ್ಯಗ್ರಹಣವುಂಟಾಗುವುದು ಎಂದಾಗಿದೆ.

ಮುಹಮ್ಮದ್ ಪೈಗಂಬರರು ಭವಿಷ್ಯನುಡಿದಿರುವ ವಾಗ್ದತ್ತ ಪುರುಷ ತಾನೆಂದು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರು 1891ರಲ್ಲಿ ಘೋಷಿಸಿದರು. ಅಲ್ಲಾಹು ತನ್ನನ್ನು ವಾಗ್ದತ್ತ ಮಹ್‌ದಿ ಮತ್ತು ಮಸೀಹ್ ಆಗಿ ನಿಯೋಜಿಸಿರುವನೆಂದು ಹೇಳಿದ ಅವರು ತನ್ನ ವಾದದ ಸತ್ಯತೆಗೆ ಸಾಕ್ಷ್ಯವಾಗಿ ಅನೇಕ ದೃಷ್ಟಾಂತಗಳನ್ನೂ ಪ್ರವಾದನಗಳನ್ನೂ ಸೂಚಕ ಕಾರ್ಯಗಳನ್ನೂ ಲೋಕದ ಮುಂದೆ ಮಂಡಿಸಿದರು. ಅವುಗಳಲ್ಲಿ ಹೆಚ್ಚಿನವುಗಳ ಪೂರ್ತೀಕರಣವು ಆಗಲೇ ಉಂಟಾಯಿತು. ಆದರೆ ಆ ಕಾಲದ ಬಹುತೇಕ ಮತಪಂಡಿತರು ಆ ಮಹಾತ್ಮರ ವಾದವನ್ನು ಸ್ವೀಕರಿಸಲಿಲ್ಲ. ಅದಕ್ಕೆ ಆ ಮೌಲವಿಗಳು ತೋರಿಸಿದ ಪ್ರಧಾನವಾದೊಂದು ಕಾರಣವು, ಮುಹಮ್ಮದ್ ಪೈಗಂಬರರು ಇಮಾಂ ಮಹ್‌ದಿಯ ಕಾಲದಲ್ಲಿ ಒಂದೇ ರಮಝಾನ್ ತಿಂಗಳಲ್ಲಿ ಸಂಭವಿಸಲಿದೆಯೆಂದು ಪ್ರವಾದನಗೈದ ಸೂರ್ಯ–ಚಂದ್ರ ಗ್ರಹಣಗಳು ಉಂಟಾಗಲಿಲ್ಲ ಎಂಬುದಾಗಿತ್ತು. ಆದರೆ, ಆ ಮಹಾ ಸೂಚಕ ಕಾರ್ಯವನ್ನು 1894ರಲ್ಲಿ (ಹಿಜರಿ ಶಕ 1311ರಲ್ಲಿ) ಲೋಕವು ಕಂಡಿತು. ಸೂರ್ಯ–ಚಂದ್ರ ಗ್ರಹಣಗಳು 1894ನೇ ಇಸವಿಯ ರಮಝಾನ್ ತಿಂಗಳಲ್ಲಿ ಭವಿಷ್ಯವಾಣಿಯಲ್ಲಿ ಹೇಳಲಾದ ದಿನ ರಾತ್ರಿಗಳಲ್ಲೇ ಜನರಿಗೆ ಗೋಚರಿಸಿದವು. ಇಂಗ್ಲಿಷ್ ಕ್ಯಾಲೆಂಡರಿನ ಪ್ರಕಾರ ಚಂದ್ರ ಗ್ರಹಣವು 1894ನೇ ಇಸವಿ ಮಾರ್ಚ್ ತಿಂಗಳ 21ನೇ ದಿನಾಂಕದಂದು ರಾತ್ರಿಯಲ್ಲೂ ಸೂರ್ಯಗ್ರಹಣವು ಏಪ್ರಿಲ್ ತಿಂಗಳ 6ನೇ ದಿನಾಂಕದಂದು ಮಧ್ಯಾಹ್ನವೂ

ದರ್ಶನವಾದುವು. ಈ ಎರಡು ಗ್ರಹಣಗಳನ್ನೂ ಖಾದಿಯಾನ್‌ನಲ್ಲಿ ಜನರು ಅತ್ಯಂತ ಕುತೂಹಲದಿಂದ ವೀಕ್ಷಿಸಿದರು. ಹಝ್ರತ್ ಮುಹಮ್ಮದ್ ಪೈಗಂಬರರು ಭವಿಷ್ಯ ನುಡಿದಿರುವ ಸೂಚಕ ಕಾರ್ಯವು ತನ್ನ ಸತ್ಯತೆಗೆ ಸಾಕ್ಷಿಯಾಗಿ ಪೂರ್ತಿಗೊಂಡಿತು ಎಂಬುದಾಗಿ ವಾಗ್ದತ್ತ ಮಸೀಹ್ (ಅ) ಘೋಷಿಸಿದರು. ಹಝ್ರತ್ ಅಹ್ಮದ್ (ಅ) ಅವರು "ನೂರುಲ್ ಹಕ್" (ಸತ್ಯದ ಪ್ರಕಾಶ) ಎಂಬ ಹೆಸರಿನಲ್ಲಿ ಒಂದು ಗ್ರಂಥವನ್ನು ಬರೆದು ಪೈಗಂಬರರ ಸುಪ್ರಸಿದ್ಧವಾದ ಆ ಭವಿಷ್ಯವಾಣಿಯು ಈಡೇರಿರುವುದಾಗಿ ವಿವರಿಸಿದರು. ಅದರಲ್ಲಿ ಆ ಮಹಾತ್ಮರು ಈ ರೀತಿ ಬರೆದರು:

"ಈ ರಮಝಾನ್ ತಿಂಗಳ ನಂತರ ನಾವು ಆಚರಿಸುವ ಈದ್ ಹಬ್ಬವು ನಮಗೆ ಇಮ್ಮಡಿ ಹಬ್ಬವಾಗಿದೆ. ಯಾಕೆಂದರೆ, ಅಲ್ಲಾಹನು ನನ್ನ ಸತ್ಯತೆಗೆ ಸಾಕ್ಷ್ಯವನ್ನು ಈ ರಮಝಾನ್ ತಿಂಗಳಲ್ಲಿ ತೋರಿಸಿಕೊಟ್ಟಿರುತ್ತಾನೆ."

ಇದಕ್ಕೆ ಮೊದಲು ಒಂದೇ ರಮಝಾನ್ ತಿಂಗಳ, ಪೈಗಂಬರರು ಸೂಚಿಸಿರುವ ಅದೇ ರಾತ್ರಿ ಮತ್ತು ಹಗಲುಗಳಲ್ಲಿ ಯಥಾವತ್ ಚಂದ್ರಗ್ರಹಣವೂ ಸೂರ್ಯಗ್ರಹಣವೂ ಒಂದು ಸೂಚಕಕಾರ್ಯವೆಂಬಂತೆ ಸಂಭವಿಸಿರುವುದಾಗಿ ರುಜುವಾತುಪಡಿಸಲು ಯಾರಿಗಾದರೂ ಸಾಧ್ಯವಾದಲ್ಲಿ ಅಂಥವರಿಗೆ ತಾನು ಒಂದು ಸಾವಿರ ರೂಪಾಯಿಗಳ ಬಹುಮಾನವನ್ನು ನೀಡುವುದಾಗಿ ಆ ಮಹಾತ್ಮರು ತನ್ನ ಎದುರಾಳಿಗಳಿಗೆ ಆಹ್ವಾನವೊಡ್ಡಿದ್ದರು.

ಈ ಗ್ರಹಣಗಳು ಬರಲಿರುವ ಇಮಾಂ ಮಹ್‌ದಿಯ ಕುರಿತು ಸ್ಪಷ್ಟವಾದ ಸೂಚಕಕಾರ್ಯಗಳೆಂದು ಪೈಗಂಬರ್(ಸ) ಭವಿಷ್ಯ ನುಡಿದಿರುವರಷ್ಟೆ. ಈ ಭವಿಷ್ಯ ನುಡಿಯ ಪೂರ್ತೀಕರಣವೇ 1894ರ (ಹಿಜರಿ 1311) ರಮಝಾನ್ ತಿಂಗಳಲ್ಲಿ ದೃಶ್ಯವಾದ ಗ್ರಹಣಗಳು. ವಾಗ್ದತ್ತ ಮಸೀಹ್ ತನ್ನ ಗ್ರಂಥದಲ್ಲಿ 1894ರ ಈ ಗ್ರಹಣಗಳ ಕುರಿತು ಗಮನಾರ್ಹವಾದ ಇನ್ನೂ ಕೆಲವು ಸಂಗತಿಗಳನ್ನು ವಿವರಿಸಿದ್ದರು. ಭಾರತದಲ್ಲಿ ಚಂದ್ರ ಗ್ರಹಣವು ರಾತ್ರಿಯ ಮೊದಲ ಹಂತದಲ್ಲೇ ಅಂದರೆ ಸೂರ್ಯಾಸ್ತಮಾನದ ವೇಳೆಯಲ್ಲೇ ಗೋಚರವಾದರೆ ಸೂರ್ಯಗ್ರಹಣವು ಹಗಲಿನ ಮಧ್ಯೆವೇಳೆಯಲ್ಲಿ ದೃಶ್ಯವಾಯಿತು. ಹೀಗೆ ಚಂದ್ರಗ್ರಹಣವು ಪ್ರಥಮದಲ್ಲಿಯೂ ಸೂರ್ಯಗ್ರಹಣವು ಮಧ್ಯದಲ್ಲಿಯೂ ಎಂಬ ಪ್ರವಾದಿವರ್ಯರ ಮಾತು ಅಕ್ಷರಾರ್ಥದಲ್ಲಿಯೂ ಸತ್ಯವಾಯಿತು. (ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದ್). 1895ರ ರಮಝಾನ್ ತಿಂಗಳಲ್ಲಿ ಕೂಡ ಸೂರ್ಯ ಚಂದ್ರ ಗ್ರಹಣಗಳು ಪುನಃ ಉಂಟಾದುವು. ಅಂದರೆ, 1894ರ ರಮಝಾನ್‌ನಲ್ಲಿ ಸೂರ್ಯ ಚಂದ್ರ ಗ್ರಹಣಗಳು ಭಾರತದಲ್ಲಿ ಗೋಚರವಾದ ಮಾರನೆಯ ವರ್ಷವೇ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಪಶ್ಚಿಮಾರ್ಧ ಗೋಳದಲ್ಲಿಯೂ (ಅಮೇರಿಕಾ ಭೂಖಂಡದಲ್ಲಿಯೂ) ಗೋಚರವಾದುವು. ವಾಗ್ದತ್ತ ಮಸೀಹರು ನಂತರ ಬರೆದ "ಹಕೀಕತುಲ್ ವಹ್ಯ್" ಎಂಬ ಗ್ರಂಥದ 94ನೇ ಪುಟದಲ್ಲಿ ಈ ಸಂಗತಿಯನ್ನು ಉಲ್ಲೇಖಿಸಿದ್ದಾರೆ. ಈ ರೀತಿಯಲ್ಲಿ ಆ ಭವಿಷ್ಯವಾಣಿಯು ಸಮಸ್ತ ಲೋಕವೂ ಸಾಕ್ಷಿಯಾಗುವಂತೆ, ಅತ್ಯಂತ ಆಶ್ಚರ್ಯಕರವಾದ ರೀತಿಯಲ್ಲಿ ಈಡೇರಿತು.

ಆ ಭವಿಷ್ಯವಾಣಿಯು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ) ಅವರಿಗೆ ಮಾತ್ರವೇ ಅನ್ವಯವಾಗುವಂತಹದೆಂದು ಭವಿಷ್ಯವಾಣಿಯ ಶಬ್ದಪ್ರಯೋಗವೇ ತಿಳಿಸಿಕೊಡುತ್ತದೆ. ಇನ್ನು ಮುಂದೆ ಯಾರಾದರೂ ಉದ್ಧಾರಕ ಲೋಕದಲ್ಲಿ ಅವತಾರವೆತ್ತಿದರೂ ನಿಶ್ಚಿತ ದಿನಾಂಕಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಸಂಭವಿಸಿದರೂ ಕೂಡ "ಲೋಕಾರಂಭ ಮೊದಲ್ಗೊಂಡು ಇದುವರೆಗೂ ಸಂಭವಿಸದ" ಎಂಬ ವಿಶೇಷಣವು ಆ ಗ್ರಹಣಗಳಿಗೆ ಇರಲಾರದು.

ಇಂದು ಖಗೋಳಶಾಸ್ತ್ರವು ಅಭೂತಪೂರ್ವವಾದ ಮುನ್ನಡೆಯನ್ನು ಸಾಧಿಸಿದೆ. ನಭೋಮಂಡಲವನ್ನು ವೀಕ್ಷಿಸುವ ಹಲವಾರು ಅಂತರಿಕ್ಷ ವೀಕ್ಷಣಾಲಯಗಳು ಲೋಕದ ವಿವಿಧ ಕಡೆಗಳಲ್ಲಿ ಸ್ಥಾಪಿಸಲ್ಪಟ್ಟಿರುತ್ತವೆ. ಆದುದರಿಂದ ಈ ಕೇಂದ್ರಗಳಲ್ಲಿರುವ ದಾಖಲೆಗಳ ಸಹಾಯದಿಂದ ಮೇಲಿನ ಭವಿಷ್ಯವಾಣಿಯ ಈಡೇರಿಕೆಯ ಕುರಿತು ಪರೀಕ್ಷಿಸಲು ಯಾರಿಗೂ ಸಾಧ್ಯವಿದೆ. ನಾನು ಖಗೋಳಶಾಸ್ತ್ರ ವಿಭಾಗದಲ್ಲಿ ಕೆಲಸ ಮಾಡುತ್ತಿರುವುದರಿಂದ ಅನೇಕರು ನನಗೆ ಪತ್ರಬರೆದು ಈ ಪ್ರವಾದನ ಪ್ರಕಾರ ಸೂರ್ಯ ಚಂದ್ರ ಗ್ರಹಣಗಳು ಉಂಟಾದುದರ

ಬಗ್ಗೆ ನನ್ನೊಡನೆ ವಿಚಾರಿಸಿದ್ದಾರೆ. ಅನ್ವೇಷಕರಿಗೆ ನಾನು ಈ ರೀತಿ ಉತ್ತರ ನೀಡಿದ್ದೆ: ಉಸ್ಮಾನಿಯಾ ವಿಶ್ವವಿದ್ಯಾಲಯದ ನನ್ನ ಲೈಬ್ರರಿಯಲ್ಲಿ ಪ್ರಖ್ಯಾತ ಖಗೋಳ ಶಾಸ್ತ್ರಜ್ಞ Oppolzer ಬರೆದ Canon of Eclipses ಎಂಬ ಒಂದು ಗ್ರಂಥವಿದೆ. (Dover Publication -New York, 1962). ಕಳೆದ ಕಾಲದಲ್ಲಿ ಸಂಭವಿಸಿದ ಮತ್ತು ಇನ್ನು ಮುಂದೆ ಗೋಚರವಾಗಲಿರುವ ಸೂರ್ಯ ಚಂದ್ರ ಗ್ರಹಣಗಳ ವಿಸ್ತಾರವಾದ ವಿವರಣೆಯು ಈ ಗ್ರಂಥದಲ್ಲಿದೆ. ಹೈದರಾಬಾದಿಗೆ ಬಂದಲ್ಲಿ ಯಾರಿಗೂ ಈ ಗ್ರಂಥವನ್ನು ನೋಡಿ 1894ನೇ ಮಾರ್ಚ್ 21ರಂದು ಮತ್ತು ಎಪ್ರಿಲ್ 6ನಂದು ಯಥಾಕ್ರಮ ಚಂದ್ರಗ್ರಹಣವೂ ಸೂರ್ಯಗ್ರಹಣವೂ ಸಂಭವಿಸಿರುವುದನ್ನು ಖಚಿತ ಪಡಿಸಿಕೊಳ್ಳಲು ಸಾಧ್ಯವಿದೆ.

ವಾಗ್ದತ್ತ ಮಸೀಹ್ ಹಝ್ರತ್ ಅಹ್ಮದ್ (ಅ) ರವರ ಎದುರಾಳಿಗಳು 1891ರಿಂದ 1894ರ ವರೆಗೆ ಮುಂದಿಟ್ಟ ಆಕ್ಷೇಪವು, ಪೈಗಂಬರರು ಇಮಾಂ ಮಹ್‌ದಿಯ ಕಾಲದಲ್ಲಿ ರಮಝಾನ್ ತಿಂಗಳಲ್ಲಿ ಗೋಚರಿಸುವುದೆಂದು ಭವಿಷ್ಯ ನುಡಿದ ಸೂರ್ಯ ಚಂದ್ರ ಗ್ರಹಣಗಳು ಉಂಟಾಗಲಿಲ್ಲವಲ್ಲಾ ಎಂದಾಗಿತ್ತು. ಆದರೆ, ಆ ಗ್ರಹಣಗಳು 1894ರಲ್ಲಿ ನಿಶ್ಚಿತ ದಿನ ರಾತ್ರಿಗಳಲ್ಲೇ ಗೋಚರವಾದಾಗ ಪ್ರತಿಭಟನೆಯ ಧಾಟಿಯು ಬೇರೆ ರೂಪಕ್ಕೆ ತಿರುಗಿತು. ಇತ್ತೀಚೆಗೆ ಒಂದು ಹೊಸ ರೀತಿಯ ವಿವಾದವು ಉದ್ಭವಿಸಿರುವುದಾಗಿ ಕಂಡುಬಂದಿದೆ. ಅದೇನೆಂದರೆ, ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಮೊದಲು ಸಹ ಹಲವು ಗೋಚರಿಸಿವೆ; ಆದುದರಿಂದ ಈ ಸೂರ್ಯಚಂದ್ರ ಗ್ರಹಣಗಳು ಇಮಾಂ ಮಹ್‌ದಿಯ ಸತ್ಯಕ್ಕೆ ಸೂಚಕ ಕಾರ್ಯಗಳಾಗಿರಲು ಪರ್ಯಾಪ್ತವಲ್ಲವೆಂಬುದೇ ಈ ಹೊಸ ವಾದ. ಪಾಕಿಸ್ಥಾನದ ಲಾಹೋರಿನಿಂದ ಪ್ರಕಟವಾಗುವ "ಚಟ್ಟಾನ್" ಎಂಬ ವಾರ ಪತ್ರಿಕೆಯಲ್ಲಿ (ಜುಲೈ 25, 1983) ಗಾಸಿ ಮುನಜ್ಜಂ ಎಂಬೊಬ್ಬರು ಬರೆದ ಒಂದು ಲೇಖನದಲ್ಲಿ 1807, 1829, 1851, 1873, 1894, 1917, 1959, 1982 ಎಂಬೀ ವರ್ಷಗಳ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಸಂಭವಿಸಿವೆಂದೂ ಆದ್ದರಿಂದ 1894ರ ಗ್ರಹಣಗಳಿಗೆ (ಹಿಜರಿ 1311) ಪ್ರತ್ಯೇಕ ಮಹತ್ವವನ್ನು ನೀಡಬೇಕಾಗಿಲ್ಲವೆಂದೂ ಬರೆದಿದ್ದರು. ಮಿರ್ಝಾ ಸಾಹೇಬರು ತನ್ನ ಗ್ರಂಥದಲ್ಲಿ ಲೋಕಾರಂಭ ಮೊದಲ್ಗೊಂಡು ಇದುವರೆಗೂ ಒಂದೇ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರಗ್ರಹಣಗಳು ಉಂಟಾಗಿಲ್ಲವೆಂದು ಬರೆದಿರುವುದರಿಂದ ಅವರ ಆಹ್ವಾನದಲ್ಲಿ ಹೇಳಿರುವ ಬಹುಮಾನವು ತನಗೆ ಲಭಿಸಬೇಕೆಂಬ ಒಂದು ಪ್ರತಿಪಾದನೆಯನ್ನು ಕೂಡ ಗಾಸಿ ಮುನಜ್ಜಂ ತನ್ನ ಲೇಖನದಲ್ಲಿ ಮಂಡಿಸಿದ್ದರು. ಆದರೆ ವಾಸ್ತವಾಂಶವೇನು? ವಾಗ್ದತ್ತ ಮಸೀಹರು ತನ್ನ ಗ್ರಂಥದಲ್ಲಿ ಸೂರ್ಯ ಚಂದ್ರ ಗ್ರಹಣಗಳ ದಿನಾಂಕಗಳ ಬಗ್ಗೆ ಶಕ್ತಿಯುತವಾಗಿಯೂ ಸ್ಪಷ್ಟವಾಗಿಯೂ ಬರೆದಿದ್ದರು. ಗ್ರಹಣಗಳು, ತಾನು ಮಹ್‌ದಿಯೆಂಬುದಾಗಿ ಓರ್ವ ವ್ಯಕ್ತಿ ವಾದಿಸುತ್ತಿರುವ ಕಾಲದ ಒಂದೇ ರಮಝಾನ್ ತಿಂಗಳಲ್ಲಿ ಸಂಭವಿಸಬೇಕು. ಮಾತ್ರವಲ್ಲ, ಪೈಗಂಬರರು ಸೂಚಿಸಿರುವ ದಿನಾಂಕಗಳಲ್ಲೇ ಗ್ರಹಣಗಳು ಉಂಟಾಗಬೇಕು. ಈ ವೈಶಿಷ್ಟ್ಯಗಳುಳ್ಳ ಸೂರ್ಯ ಚಂದ್ರಗ್ರಹಣಗಳು ಮೊದಲೆಂದಿಗೂ ಉಂಟಾಗಿಲ್ಲವೆಂಬುದಾಗಿ ವಾಗ್ದತ್ತ ಮಸೀಹ್ ಹೇಳಿರುವರೇ ವಿನಾ ಇದುವರೆಗೂ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರಗ್ರಹಣಗಳು ಸಂಭವಿಸಿಯೇ ಇಲ್ಲವೆಂದು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಘೋಷಿಸಿರಲಿಲ್ಲ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಒಂದೇ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳುಂಟಾಗುವುವೆಂಬುದು ಪ್ರತಿಪಾದನೀಯವಾದ ವಿಷಯವೇ ಅಲ್ಲ. ಅಲ್ಲಾಹನ ದಿವ್ಯ ಸೂಚಕಕಾರ್ಯಗಳನ್ನು ಜನರಿಗೆ ವಿವರಿಸಿಕೊಡುತ್ತಾ, ತಾನು ಅಲ್ಲಾಹನಿಂದ ನಿಯೋಜಿಸಲ್ಪಟ್ಟ ಉದ್ಧಾರಕನೆಂಬುದಾಗಿ ಓರ್ವ ವ್ಯಕ್ತಿಯು ವಾದಿಸುತ್ತಿರುವ ಕಾಲದಲ್ಲಿ ಸಂಭವಿಸುವ ಸೂರ್ಯಚಂದ್ರಗ್ರಹಣಗಳು ಮಾತ್ರವೇ ಭವಿಷ್ಯವಾಣಿಗೆ ಅನ್ವಯವಾಗತಕ್ಕ ಗ್ರಹಣಗಳೆಂಬುದನ್ನು ತಿಳಿಯಬೇಕು. "ಚಟ್ಟಾನ್" ವಾರಪತ್ರಿಕೆಯು ಪ್ರಕಟಿಸಿದ ಗಾಸಿ ಮುನಜ್ಜಮರ ಲೇಖನದಲ್ಲಿ ಸೂರ್ಯಚಂದ್ರಗ್ರಹಣಗಳ ನಿಶ್ಚಿತ ದಿನಾಂಕಗಳ ಕುರಿತು ಯಾವುದೇ ವಿವರಣೆ ಇರಲಿಲ್ಲ!

ಆ ಲೇಖನದ ಫೋಟೊ ಪ್ರತಿಯನ್ನು ಕೆಲವರು ನನಗೆ ಕಳುಹಿಸಿ ಕೊಡುತ್ತಾ ಅದರ ಬಗ್ಗೆ ನನ್ನ ಅಭಿಪ್ರಾಯವೇನೆಂದು ಕೇಳಿರುತ್ತಾರೆ. ಉಸ್ಮಾನಿಯಾ ವಿಶ್ವವಿದ್ಯಾಲಯದ ನನ್ನ ಸಹೋದ್ಯೋಗಿಯಾಗಿರುವ ಡಾ। ಮೋಹನ್ ಬಲ್ಲಾಬ್ ಎಂಬ ರೀಡರ್‌ರೊಂದಿಗೆ ನಾನು

ಯುನಿವರ್ಸಿಟಿ ಲೈಬ್ರರಿಯ ಗ್ರಂಥಗಳನ್ನು ಪರಿಶೋಧಿಸಿ ವಿವಿಧ ಕಾಲಘಟ್ಟಗಳಲ್ಲಿ ಸಂಭವಿಸಿರುವ ಸೂರ್ಯ ಚಂದ್ರಗ್ರಹಣಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿದೆನು. ಒಪ್ಪೋಲ್ಜರ್ ಎಂಬ ವಿಜ್ಞಾನಿಯ Canon of Eclipses ಎಂಬ ಗ್ರಂಥವಲ್ಲದೆ Tables of Moon and Sun (By J. Meens-Copyright 1962 by Les Imprimeries Compinoises Bourqe Leopold-Belgium.) ಎಂಬ ಗ್ರಂಥವನ್ನು ಸಹ ನಾವು ಪರಿಶೋಧಿಸಿ ಮೊದಲು ಯಾವೆಲ್ಲಾ ವರ್ಷದ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರಗ್ರಹಣಗಳು ಉಂಟಾಗಿದೆಯೆಂಬುದಾಗಿ ಅಧ್ಯಯನ ನಡೆಸಿದೆವು. ಇದರ ಫಲವಾಗಿ, ಗಾಸಿ ಮುನಜ್ಜಂ ಬರೆದಿರುವಂತೆ ಈ ಹಿಂದೆ 9 ವಿವಿಧ ವರ್ಷಗಳಲ್ಲಿ ಹಾಗೂ ಅವರು ಉಲ್ಲೇಖಿಸದಿರುವ 1895ರಲ್ಲಿ ಕೂಡ ಒಂದೇ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಉಂಟಾಗಿರುವುದನ್ನು ಕಂಡುಕೊಳ್ಳಲು ನಮಗೆ ಸಾಧ್ಯವಾಯಿತು. ಆದರೆ, ಮುಹಮ್ಮದ್ ಪೈಗಂಬರ್ (ಸ) ಭವಿಷ್ಯ ನುಡಿದಿರುವಂತೆ ನಿಶ್ಚಿತ ದಿನಾಂಕಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು 1894ರಲ್ಲಿ ಮಾತ್ರವೇ ಉಟಾಗಿವೆಯೆಂದು ಕಂಡಾಗ ನನ್ನ ಸಹೋದ್ಯೋಗಿ ಕೂಡ ಆಶ್ಚರ್ಯ ಚಕಿತರಾದರು.

ಇಲ್ಲಿ ಉಲ್ಲೇಖಾರ್ಹವಾದ ಇನ್ನೊಂದು ಪ್ರಮುಖ ವಿಷಯವೇನೆಂದರೆ, 1894ರಲ್ಲಿ ಗೋಚರಿಸಿದ ಸೂರ್ಯ ಚಂದ್ರ ಗ್ರಹಣಗಳ ಹೊರತು ಉಳಿದೆಲ್ಲಾ ವರ್ಷಗಳ ಗ್ರಹಣಗಳೂ ಲೋಕದ ಹೆಚ್ಚಿನ ಭಾಗಗಳಲ್ಲಿ ದೃಶ್ಯವಾಗಲಿಲ್ಲ. ಚಂದ್ರಗ್ರಹಣಗಳು ಭೂಮಂಡಲದ ಅರ್ಧದಷ್ಟು ಭಾಗದಲ್ಲಿ ಮಾತ್ರ ಗೋಚರವಾದರೆ, ಸೂರ್ಯಗ್ರಹಣಗಳು ಜನವಾಸ ಕಡಿಮೆ ಇರುವ ಸ್ವಲ್ಪಭಾಗಗಳಲ್ಲಿ ಅಥವಾ ಸಮುದ್ರಾಂತರಿಕ್ಷದಲ್ಲಿ ಮಾತ್ರವೇ ಗೋಚರವಾದುವು. ಆದರೆ, 1894ರಲ್ಲಿ ವಾಗ್ದತ್ತ ಮಸೀಹರ ಕಾಲದಲ್ಲಿ ದೃಶ್ಯವಾದ ಸೂರ್ಯ ಚಂದ್ರ ಗ್ರಹಣಗಳು ಭಾರತವೂ ಸೇರಿದಂತೆ ಏಷ್ಯಾದ ಹೆಚ್ಚಿನ ಕಡೆಗಳಲ್ಲಿ ಗೋಚರಿಸಿದುವು. ವಾಗ್ದತ್ತ ಮಸೀಹ್ (ಅ) ತನ್ನ ಅನುಚರರೊಂದಿಗೆ ಈ ಗ್ರಹಣಗಳನ್ನು ವೀಕ್ಷಿಸಿದ್ದರು. ವಾಗ್ದತ್ತ ಉದ್ಧಾರಕನು ಆವಿರ್ಭವಿಸುವ ಸ್ಥಳದಲ್ಲಿ ಈ ಗ್ರಹಣಗಳು ಗೋಚರಿಸಬೇಕಾದುದು ಅನಿವಾರ್ಯವೆಂಬುದನ್ನು ಜನರು ತಿಳಿದು ಕೊಳ್ಳಬೇಕೆಂದು ಆ ಮಹಾತ್ಮರು "ನೂರುಲ್ ಹಕ್" ಎಂಬ ಗ್ರಂಥದಲ್ಲಿ ಒತ್ತಿ ಹೇಳಿದ್ದರು.

ಕಲ್ಕತ್ತ ನಗರದಲ್ಲಿ ಭಾರತ ಸರಕಾರದ ಸ್ವಾಮ್ಯತ್ವದ Positional Astronomy Centre (P. 546 N. Block, First Floor, New Alepore, Calcutta-700053) ಎಂಬ ಒಂದು ಸಂಸ್ಥೆಯಿದೆ. ನಾನು ಅಲ್ಲಿಗೆ ಪತ್ರ ಬರೆದು, ಮೇಲಿನ 9 ವಿವಿಧ ವರ್ಷಗಳಲ್ಲಿ ಹಾಗೂ 1895ರ ರಮಝಾನ್ ತಿಂಗಳಲ್ಲಿ ಉಂಟಾದ ಸೂರ್ಯ ಚಂದ್ರ ಗ್ರಹಣಗಳ ಪೈಕಿ ಯಾವೆಲ್ಲಾ ವರ್ಷಗಳ ಗ್ರಹಣಗಳು ಭಾರತದ ಖಾದಿಯಾನ್ ಎಂಬಲ್ಲಿಗೆ ಗೋಚರವಾಗಬಹುದೆಂದು ವಿಚಾರಿಸಿದೆ. ಅದಕ್ಕೆ ಆ ಸಂಸ್ಥೆಯಿಂದ ನನಗೆ ಲಭಿದ ಉತ್ತರದಲ್ಲಿ, 1894ರಲ್ಲಿ ಉಂಟಾದ ಗ್ರಹಣಗಳು ಮಾತ್ರವೇ ಭಾರತದ ಖಾದಿಯಾನ್ ಪ್ರದೇಶದಲ್ಲಿ ಗೋಚರವಾದುವೆಂದೂ ಅವುಗಳು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು ಪ್ರಸ್ತಾಪಿಸಿರುವ ರಮಝಾನ್ ತಿಂಗಳ ನಿಶ್ಚಿತ ದಿನಾಂಕಗಳಲ್ಲೇ ಉಂಟಾದುವೆಂದೂ ವಿವರಿಸಲಾಗಿದೆ. ಆ ಪತ್ರವು ಈಗಲೂ ನನ್ನ ಬಳಿಯಲ್ಲಿದೆ. (D. O. No. T-00901 dated 7-3-'84, written by A. K. Bhatnagar, Meteorologist).

ವಾಗ್ದತ್ತ ಮಸೀಹ್ (ಅ) ಈ ರೀತಿ ಬರೆದರು: "ನನ್ನ ಪ್ರಾಣವು ಯಾರೊಬ್ಬನ ಹಿಡಿತದಲ್ಲಿರುವುದೋ ಆ ಅಲ್ಲಾಹನ ಹೆಸರಿನಲ್ಲಿ ಆಣೆಯಿಟ್ಟು ಹೇಳುತ್ತೇನೆ- ಆಕಾಶ ಮಂಡಲದಲ್ಲಿ ಗೋಚರವಾದ ಈ ಅದ್ಭುತ ಸೂಚಕಕಾರ್ಯವು ನನ್ನ ಸತ್ಯತೆಗೆ ಸಾಕ್ಷಿಯಾಗಿರುವುದೆಂದು ಅಲ್ಲಾಹನು ನನಗೆ ತಿಳಿಸಿಕೊಟ್ಟಿರುತ್ತಾನೆ. ಮೌಲವಿಗಳು ನನ್ನನ್ನು ದಜ್ಜಾಲ್, ಕದ್ದಾಬ್ (ಕಳ್ಳವಾದಿ) ಎಂಬಿತ್ಯಾದಿಯಾಗಿ ಕಠೋರವಾಗಿ ಆಕ್ಷೇಪಿಸುತ್ತಿರುವ ಕಾಲದಲ್ಲಿಯೇ ಸರ್ವಲೋಕದ ಪರಿಪಾಲಕನಾದ ಅಲ್ಲಾಹನು ನನ್ನ ಸತ್ಯತೆಯನ್ನು ಪ್ರಕಟಪಡಿಸುವ ಈ ಸೂಚಕ ಕಾರ್ಯವನ್ನು ಲೋಕಕ್ಕೆ ತೋರಿಸಿಕೊಟ್ಟಿದ್ದಾನೆ. ಹಾಗೂ ಇವುಗಳು ನನ್ನ ಕುರಿತು ಸಾಕ್ಷ್ಯಗಳಾಗಿವೆಯೆಂದು ನನಗೆ ತಿಳಿಸಿರುತ್ತಾನೆ. ನನ್ನ ಸತ್ಯತೆಯ ಕುರುಹಾಗಿ ತೋರಿಸಲ್ಪಟ್ಟ ಈ ಸೂಚಕಕಾರ್ಯವು ಹಝ್ರತ್ ಆದಮರ ಕಾಲದಿಂದ ಇದುವರೆಗೂ ನೋಡಿರದಂತಹ ಅದ್ಭುತ ದೃಷ್ಟಾಂತವೇ ಆಗಿದೆ. ಅದಾಗ್ಯೂ ಈ ಸೂರ್ಯ ಚಂದ್ರ ಗ್ರಹಣಗಳು ನನ್ನ ಸತ್ಯತೆಗೆ ಸಾಕ್ಷಿಯಾಗಿವೆಯೆಂಬುದನ್ನು

ನಾನು ಪವಿತ್ರ ಕಅಬಾದಲ್ಲಿ ನಿಂತುಕೊಂಡು ಪ್ರಮಾಣ ಪೂರ್ವಕವಾಗಿ ಹೇಳಬಲ್ಲೆ."

ಅವರು ಒಂದು ಕವನದಲ್ಲಿ ಈ ರೀತಿ ಹೇಳಿದರು:

آسمان تو نے بنایا میرے لئے اک گواہ
چاند اور سورج ہوے میرے لئے
تاریک و تار

"ನೀನು ಆಕಾಶವನ್ನು ನನಗೆ ಒಂದು
ಸಾಕ್ಷಿಯನ್ನಾಗಿ ಮಾಡಿದೆ;
ಚಂದ್ರನೂ ಸೂರ್ಯನೂ ನನಗೆ
ಸಾಕ್ಷಿ ಹೇಳುವ ತರದಲ್ಲಿ ಕಳೆಗುಂದಿ
ಹೋದುವು."

ಅದ್ಭುತಕರವಾದ ಈ ಸಂಭವಗಳ ಕುರಿತು 13 ಶತಕಗಳ ಮೊದಲು ಭವಿಷ್ಯ ನುಡಿದಿದ್ದ ಹಝ್ರತ್ ಮುಹಮ್ಮದ್ ಪೈಗಂಬರ್ (ಸ.ಅ.) ಎಷ್ಟು ಮಹೋನ್ನತರು! ಅಂತೆಯೇ ಈ ಭವಿಷ್ಯವಾಣಿಯ ಪೂರ್ತೀಕರಣವಾಗಿ ಆವಿರ್ಭವಿಸಿದ ಇಮಾಂ ಮಹ್‌ದಿ (ಅ) ಎಷ್ಟು ಮಹೋನ್ನತರು!

ವಾಗ್ದತ್ತ ಮಹ್‌ದೀ ಮಸೀಹರ ಸತ್ಯತೆಯನ್ನು ಕಂಡುಕೊಂಡು ಆ ಮಹಾತ್ಮರ ಅನುಯಾಯಿ ವೃಂದದಲ್ಲಿ ಪ್ರವೇಶಿಸುವ ಮಹಾಭಾಗ್ಯವು ಎಲ್ಲರಿಗೂ ಲಭಿಸುವಂತಾಗಲಿ ಎಂಬ ಪ್ರಾರ್ಥನೆಯೊಂದಿಗೆ ನಾನು ಮುಕ್ತಾಯಗೊಳಿಸುತ್ತೇನೆ.

**(ಕನ್ನಡಕ್ಕೆ : ಎಂ. ಪಿ. ಇಬ್ರಾಹಿಂ)**

*With Best Compliments From :*



**NASIR AHMAD SIDDEEQUE**

**"DARUSSIDQUE", MOGRAL,**

**KUMBLA-670 321**

# ಸರ್ವ ಧರ್ಮ ಮೈತ್ರಿ

★ ಮೌಲ್ವಿ ಮುಹಮ್ಮದ್ ಉಮರ್ ಎಚ್. ಎ.

ವಿಶ್ವದಲ್ಲಿ ಸಮತ್ವಸುಂದರವೂ ಸಮಾಧಾನ ಪೂರ್ಣವೂ ಆದ ಸರ್ವಸಾಹೋದರ್ಯದ ಒಂದು ವಾತಾವರಣವನ್ನು ಸೃಷ್ಟಿಸಲಿಕ್ಕೆ ಪ್ರಯತ್ನಿಸುತ್ತಿರುವ ಅಹ್ಮದಿಯಾ ಸಂಘಟನೆ ಅದರ ಶತಾಬ್ದವನ್ನು ಆಚರಿಸುತ್ತಾ **LOVE FOR ALL HATRED FOR NONE** (ಎಲ್ಲರೊಡನೆಯೂ ಪ್ರೀತಿ, ಯಾರೊಡನೆಯೂ ದ್ವೇಷವಿಲ್ಲ) ಎಂಬ ಆದರ್ಶದಿಂದೊಡಗೂಡಿ ಲೋಕದಲ್ಲೆಲ್ಲೂ ಮುನ್ನೇರುತ್ತಿದೆ.

ಅಕ್ರಮ ಮತ್ತು ಅನೀತಿ ವೃದ್ಧಿಗೊಂಡು, ಸಂಸ್ಕೃತಿ, ನಾಗರಿಕತೆ ಎಂಬೀ ಹೆಸರುಗಳಲ್ಲಿ ಅತಿ ನೀಚ ಹಾಗೂ ಅಸಂಸ್ಕೃತ ಜೀವಿತವನ್ನು ಮನುಷ್ಯನು ಕೈಗೊಂಡಿರುವ ಒಂದು ಕಾಲಘಟ್ಟದಲ್ಲಿ ನಾವು ಜೀವಿಸುತ್ತಿದ್ದೇವೆ.

ಮನುಷ್ಯನ ಅಭಿವೃದ್ಧಿಗೆ ಧರ್ಮವು ಒಂದು ತಡೆಯಾಗಿದೆ ಹಾಗೂ ಜಗತ್ತಿನಲ್ಲಿ ಇಂದು ಕಾಣುವ ಕಲಹ - ಗೊಂದಲಗಳಿಗೆಲ್ಲ ಕಾರಣ ಧರ್ಮವೇ ಆಗಿದೆ ಎಂಬ ತಪ್ಪು ತಿಳುವಳಿಕೆಯಿಂದ ಇಂದು ಸಾಮಾನ್ಯವಾಗಿ ಜನರೆಡೆಯಲ್ಲಿ ಧರ್ಮದ ಕುರಿತು ಹಗೆ ಮತ್ತು ವೈರ ಕಂಡುಬರುತ್ತದೆ.

ಧರ್ಮವು ಮನುಷ್ಯನನ್ನು ಮರುಳುಮಾಡುವ ಮಾದಕವೆಂಬ ಕಾರ್ಲ್ ಮಾರ್ಕ್ಸ್‌ನ ತಪ್ಪು ಅಭಿಪ್ರಾಯವನ್ನು ಎತ್ತಿಹಿಡಿಯುವ ಈ ಜನರಲ್ಲಿ ಹೆಚ್ಚಿನವರು ಯಾವುದೇ ಧರ್ಮದ ಬಗ್ಗೆ ಸರಿಯಾದ ಅಧ್ಯಯನ ಮಾಡದವರಾಗಿದ್ದಾರೆ.

ವಾಸ್ತವದಲ್ಲಿ, ಧರ್ಮದ ಚರಿತ್ರೆ ಮನುಷ್ಯನ - ಮನುಷ್ಯತ್ವದ - ಚರಿತ್ರೆಯಾಗಿದೆ. ಮನುಷ್ಯನ ಹುಟ್ಟಿನೊಂದಿಗೆ ಮತವೂ ಹುಟ್ಟಿದೆ ಎಂಬುದಾಗಿದೆ ನಿಜ.



**ಜನಾಬ್ ಮೌಲ್ವಿ ಮುಹಮ್ಮದ್ ಉಮರ್ ಸಾಹೇಬ್ ಎಚ್. ಎ. ಅವರು ತಮಿಳುನಾಡಿನ ಚೀಫ್ ಅಹ್ಮದಿಯಾ ಮಿಶನರಿಯಾಗಿ ಸುಮಾರು 25 ವರ್ಷಗಳಿಂದ ಸೇವೆಸಲ್ಲಿಸುತ್ತಿದ್ದಾರೆ. ಅವರು ಮಲಯಾಳಂ, ತಮಿಳು ಮತ್ತು ಉರ್ದು ಭಾಷೆಗಳಲ್ಲಿ ಬರೆಯಬಲ್ಲ ಬಹುಭಾಷಾ ಪಂಡಿತರಲ್ಲದೆ ಈ ಮೂರು ಭಾಷೆಗಳಲ್ಲೂ ಮಾತನಾಡಬಲ್ಲ ವಾಗ್ಮಿಯೂ ಆಗಿದ್ದಾರೆ. ಸುಮಾರು ಎರಡು ದಶಕಗಳಿಂದ ತಮಿಳು ಭಾಷೆಯ ಅಹ್ಮದಿಯಾ ಮುಖವಾಣಿ "ಸಮಾಧಾನ ವರ್ಷಿ" ಯ ಸಂಪಾದಕರಾಗಿರುವ ಅವರು ಕೆಲವು ವರ್ಷಗಳ ಕಾಲ ಶ್ರೀಲಂಕಾದಲ್ಲಿ ಸಹ ಮಿಶನರಿಯಾಗಿ ಸೇವೆಸಲ್ಲಿದ್ದಾರೆ.**

ಜಗತ್ತಿನ ವಿವಿಧ ಧರ್ಮ ಚರಿತ್ರೆಗಳ ಕುರಿತು ಸರಿಯಾಗಿ ಕಲಿತು ಸಂಶೋಧನೆ ಮಾಡುವವನಿಗೆ ಧರ್ಮವು ಮಾನವನ ಭೌತಿಕ ಮತ್ತು ಆಧ್ಯಾತ್ಮಿಕ ಉನ್ನತಿಗೆ ಎಷ್ಟರ ಮಟ್ಟಿಗೆ ಸಹಾಯಕವಾಗಿವೆಯೆಂದು ಮನಗಾಣಲು ಸಾಧ್ಯವಿದೆ.

ಊಹಾಪೋಹಗಳು ಮತ್ತು ಧರ್ಮಗಳ ಕುರಿತಾದ ಅಸತ್ಯಗಳು ಹಾಗೂ ಅರ್ಧಸತ್ಯಗಳು ತುಂಬಿರುವ ಹಲವು ತಪ್ಪು ತಿಳುವಳಿಕೆಗಳ ಆಧಾರದಲ್ಲಿ ಧರ್ಮ ತತ್ವಗಳ ಮತ್ತು ಅವುಗಳ ಸ್ಥಾಪಕರುಗಳ ವಿರುದ್ಧವಾಗಿ ಈ ಜನರು ಸದಾ ಸಮರಹೂಡುತ್ತಿದ್ದಾರೆ.

ವಿವಿಧ ಧರ್ಮ ನಾಯಕರುಗಳೂ ಪಂಡಿತರುಗಳೂ ಇತರ ಧರ್ಮಗಳ ಮತ್ತು ಅವುಗಳ ಅಧ್ಯಾಪನಗಳ ಕುರಿತು ಸರಿಯಾಗಿ ಕಲಿತು, ಸಂಶೋಧನೆ ಮಾಡಿ, ಪರಸ್ಪರ ತಪ್ಪುತಿಳುವಳಿಕೆಗಳನ್ನು ಹೋಗಲಾಡಿಸಿ ಅನ್ಯೋನ್ಯ ಪ್ರೀತಿ, ಸಹೋದರತೆ, ಸಹಿಷ್ಣುತೆಗಳಿಂದ ವರ್ತಿಸಿದರೆ ಮಾತ್ರ ಲೋಕದಲ್ಲಿ ಶಾಂತಿ ಸಮಾಧಾನ ನೆಲೆಗೊಳ್ಳಲು ಸಾಧ್ಯ.

ಧರ್ಮಚರಿತ್ರೆಯ ಕುರಿತು ನಾವು ಪರ್ಯಾಲೋಚನೆ ಮಾಡಿದರೆ ವಿವಿಧ ಕಾಲಗಳಲ್ಲಿ ಮತ್ತು ದೇಶಗಳಲ್ಲಿ ಅನೇಕ ಪ್ರವಾದಿಗಳೂ ಧರ್ಮ ಸುಧಾರಕರೂ ಅವತಾರ ಪುರುಷರೂ ಆಗಮಿಸಿರುವುದಾಗಿ ನಮಗೆ ಕಾಣಲು ಸಾಧ್ಯ.

ಅಧರ್ಮವನ್ನು ನಿರ್ಮೂಲನಗೊಳಿಸಿ ಧರ್ಮ ಸಂಸ್ಥಾಪನೆ ಮಾಡುವುದಕ್ಕಾಗಿ ಅವರು ಅತ್ಯಂತ ಶ್ರಮ ವಹಿಸಿದ್ದರೆಂದೂ ಅದರಲ್ಲಿ ಅವರಿಗೆ ವಿಜಯ ಸಿದ್ಧಿಸಿದುದಾಗಿಯೂ ಪ್ರವಾದಿಗಳ ಚರಿತ್ರೆ ನಮಗೆ ತಿಳಿಸಿ ಕೊಡುತ್ತದೆ.

"ಒಬ್ಬ ಮುನ್ನೆಚರಿಕೆಗಾರನು ಬಂದಿಲ್ಲದ ಯಾವುದೇ ಸಮುದಾಯವಿಲ್ಲ" ಮತ್ತು "ಪ್ರತಿಯೊಂದು ಜನಾಂಗದಲ್ಲೂ ಮಾರ್ಗದರ್ಶಕರು ಆಗಮಿಸಿದ್ದಾರೆ" ಎಂದು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಬೋಧಿಸುತ್ತದೆ.

ವಿವಿಧ ಕಾಲಘಟ್ಟಗಳಲ್ಲಿ ಪ್ರವಾದಿಗಳು ಆಗಮಿಸಿ ದೇವವಿಶ್ವಾಸವನ್ನು ಮನುಷ್ಯರ ಹೃದಯಗಳಲ್ಲಿ ಸ್ಥಿರಗೊಳಿಸಿ ಆ ಮೂಲಕ ದುಷ್ಕೃತ್ಯಗಳಿಂದ ಅವರನ್ನು ವಿಮುಕ್ತಗೊಳಿಸಿ ಪವಿತ್ರ ಹಾಗೂ ಪರಿಪಾವನವಾದ ಜೀವನಮಾರ್ಗವನ್ನು ತೋರಿಸಿಕೊಟ್ಟು ಅವರನ್ನು ಮೋಕ್ಷಕ್ಕೆ ಅರ್ಹರನ್ನಾಗಿ ಮಾಡುತ್ತಾರೆಂದು ಪವಿತ್ರ ಖುರ್‌ಆನ್ ಹೇಳುತ್ತದೆ.

ಖುರ್‌ಆನಿನ ಈ ಅಧ್ಯಾಪನಗಳ ಬೆಳಕಿನಲ್ಲಿ, ಮಹಾತ್ಮರುಗಳಾದ ಆದಂ, ಇಬ್ರಾಹೀಂ, ಮೂಸಾ, ಶ್ರೀಕೃಷ್ಣ, ಶ್ರೀರಾಮ, ಶ್ರೀಬುದ್ಧ, ಯೇಸುಕ್ರಿಸ್ತ (ಈಸಾ), ಝೊರಾಸ್ಟರ್, ಕನ್‌ಫ್ಯೂಷ್ಯಸ್, ಮುಹಮ್ಮದ್ ಪೈಗಂಬರ್(ಸ) ಮೊದಲಾದವರು ಮಾನವರಿಗೆ ಮಾರ್ಗದರ್ಶಕರಾಗಿ ಆಗಮಿಸಿದ ಸತ್ಯಾತ್ಮರುಗಳಾದ ಪ್ರವಾದಿಗಳೆಂದು ಅಹ್ಮದೀ ಮುಸ್ಲಿಮರು ಹೃತ್ಪೂರ್ವಕವಾಗಿ ನಂಬುತ್ತಾರೆ. ಆಯಾ ಪ್ರವಾದಿಗಳ ಕಾಲಗಳಲ್ಲಿ ಅವರ ಬೋಧನೆಗಳನ್ನು ಅನುಸರಿಸಿದ ಜನರು ಮುಕ್ತಿ, ಮೋಕ್ಷ ಮತ್ತು ನಿತ್ಯಶಾಂತಿ ಗಳಿಸಿದರೆಂದು ಪವಿತ್ರ **ಖುರ್‌ಅನ್** ಹೇಳುತ್ತದೆ.

ಭಾರತದಲ್ಲಿ ಜನ್ಮತಾಳಿದ ಮಹಾತ್ಮ ಶ್ರೀಕೃಷ್ಣ ಅವರಿಗೆ ಮಹತ್ತಾದೊಂದು ಸ್ಥಾನವಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ ಶ್ರೀಕೃಷ್ಣರ ಬಗ್ಗೆ ಹೀಗೆ ಹೇಳಿದ್ದರು :

كان في الهند نبي اسود اللون اسمه كاهنا

"ಇಂಡಿಯಾದಲ್ಲಿ ಕಪ್ಪು ಬಣ್ಣದ ಓರ್ವ ಪ್ರವಾದಿ ಇದ್ದರು. ಅವರ ಹೆಸರು ಕಾಹಿನಾ (ಕಣ್ಣ, ಕೃಷ್ಣ) ಎಂದಾಗಿತ್ತು" (ದೈಲಮಿ, ಫಿರ್‌ದೌಸುಲ್ ಅಖ್‌ಬಾರ್).

ಎಲ್ಲ ಪ್ರವಾದಿಗಳೂ ಅವತಾರ ಪುರುಷರೂ ಏಕದೇವ ವಿಶ್ವಾಸವನ್ನು, ಸರ್ವಲೋಕ ನಿಯಾಮಕನೂ ಸರ್ವಜ್ಞನೂ ಸರ್ವವ್ಯಾಪಿಯೂ ಸರ್ವಶಕ್ತನೂ ಆದ ದೇವನು ಏಕನೆಂಬ ನಂಬಿಕೆಯನ್ನು ಉಪದೇಶಿಸಿದ್ದರೆಂದು ಎಲ್ಲ ಧರ್ಮಗ್ರಂಥಗಳು ಸಾರುತ್ತವೆ.

ولقد بعثنا في كل امة رسولا ان اعبدوا الله

"ಏಕದೇವನನ್ನು ಮಾತ್ರವೇ ಆರಾಧಿಸಬೇಕು ಎಂಬ ಉಪದೇಶದೊಂದಿಗೆ ನಾವು ಪ್ರತಿಯೊಂದು ಸಮುದಾಯಕ್ಕೆ ಪ್ರವಾದಿಯನ್ನು ಕಳುಹಿಸಿದ್ದೇವೆ" (16:37) ಎಂದು ದೇವರು **ಖುರ್‌ಆನಿನಲ್ಲಿ** ಹೇಳುತ್ತಾನೆ.

ಈ ಕುರಿತು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೀಗೆ ಹೇಳುತ್ತಾರೆ:

ಈಶ್ವರಃ ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ॥

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ।
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್॥

"ಎಲೈ ಅರ್ಜುನ, ಸರ್ವಪ್ರಾಣಿಗಳನ್ನು ಯಂತ್ರಾರೂಢವಾದ ಬೊಂಬೆಗಳಂತೆ ಮಾಯೆಯಿಂದ ತಿರುಗಿಸುತ್ತಾ ಈಶ್ವರನು ಸರ್ವಜೀವರ ಹೃದಯಪ್ರದೇಶದಲ್ಲಿ ನೆಲೆಸಿರುತ್ತಾನೆ. ಎಲೈ ಅರ್ಜುನ, ಸರ್ವಾತ್ಮನಾ ಅವನನ್ನೇ ಶರಣುಹೊಂದು. ಅವನ ಅನುಗ್ರಹದಿಂದ ಪರಮಶಾಂತಿಯನ್ನೂ ಶಾಶ್ವತವಾದ ಸ್ಥಾನವನ್ನೂ ಹೊಂದುವೆ." (ಅಧ್ಯಾಯ 18, ಶ್ಲೋಕ 61, 62.)

ಇದೇ ಪ್ರಕಾರ ಕ್ರೈಸ್ತ ಧರ್ಮೀಯರ ಮೂಲ ತತ್ವ ಏಕದೇವ ವಿಶ್ವಾಸವೆಂದು ಬೈಬಲ್ ಕಲಿಸುತ್ತದೆ. ಅದು ಹೇಳುವುದನ್ನು ನೋಡಿರಿ:

"ನಮ್ಮ ದೇವರಾದ ಕರ್ತನು ಒಬ್ಬನೇ ದೇವರು: ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣಪ್ರಾಣದಿಂದಲೂ ಪೂರ್ಣಬುದ್ಧಿಯಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು" (ಮಾರ್ಕ 12:29, 30)

"ನಾನೇ ಕರ್ತನು, ಇನ್ನು ಯಾವನೂ ಅಲ್ಲ. ನಾನು ಹೊರತು ಯಾವ ದೇವರೂ ಇಲ್ಲ." (ಯೆಶಾಯ 45:5)

"ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನೂ ತಿಳಿಯುವದೇ ನಿತ್ಯಜೀವವು" (ಯೋಹಾನ 17:3)

ಹೀಗೆ ಸರ್ವಧರ್ಮಗಳ ಮೂಲತತ್ವ ಏಕದೇವ ವಿಶ್ವಾಸವೆಂದು ಮನವರಿಕೆಯಾಗುತ್ತದೆ. ಎಲ್ಲ ಧರ್ಮಗಳನ್ನು ಒಂದೇ ದಾರದಲ್ಲಿ ಪೋಣಿಸಿ ಧರ್ಮಸಹಿಷ್ಣುತೆ ಮತ್ತು ಸಾಹೋದರ್ಯವನ್ನು ಬೆಳೆಸಿ ಶಾಶ್ವತವಾದ ಲೋಕಶಾಂತಿಯನ್ನು ಸ್ಥಾಪಿಸಲು ಈ ಮೂಲ ತತ್ವವು ನಮಗೆ ಕರೆ ನೀಡುತ್ತದೆ.

ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"(ಓ ಮುಹಮ್ಮದ್ ಪೈಗಂಬರ್) ನೀನು ಹೇಳು: 'ದೈವಿಕಗ್ರಂಥ ದೊರೆತವರೇ, ನಮಗೂ ನಿಮಗೂ ಮಧ್ಯೆ ನಂಬಿಕೆಯಲ್ಲಿ ಏಕಾಭಿಪ್ರಾಯವಿರುವ ಒಂದು ವಿಚಾರದಲ್ಲಿ ಒಂದುಗೂಡುವರೆ ನೀವು ಬನ್ನಿರಿ. ಅದೇನೆಂದರೆ ನಾವು ಏಕದೇವ ನಂಬಿಕೆಯಲ್ಲಿ ದೃಢಚಿತ್ತರಾಗಿದ್ದುಕೊಂಡು ಒಬ್ಬ ದೇವನನ್ನು ಮಾತ್ರ ಆರಾಧಿಸೋಣ. ಅವನಿಗೆ ಯಾರನ್ನೂ ಏನನ್ನೂ ನಾವು ಭಾಗಿಯನ್ನಾಗಿ ಕಲ್ಪಿಸದಿರೋಣ. ದೇವರ ಹೊರತು ಬೇರೆ ಯಾರನ್ನೂ ಯಾರೂ ಆರಾಧನೆಗರ್ಹರನ್ನಾಗಿ ಮಾಡದಿರೋಣ.' " (3:65)

ಈ ಪ್ರಕಾರ ಇಸ್ಲಾಂ ಸರ್ವಧರ್ಮಗಳನ್ನೂ ಧರ್ಮೀಯರನ್ನೂ ಏಕತೆಯೆಡೆಗೆ, ಸರ್ವಧರ್ಮಗಳ ಮೂಲತತ್ವವಾದ ಏಕದೇವ ವಿಶ್ವಾಸದೆಡೆಗೆ ಆಹ್ವಾನಿಸುತ್ತದೆ.

ಇಸ್ಲಾಂ ಒಬ್ಬನೇ ದೇವ, ಒಂದೇ ಜಾತಿ, ಒಂದೇ ಧರ್ಮ, ಒಂದೇ ಜನಾಂಗ ಎಂಬ ತತ್ವದಲ್ಲಿ ಅಧಿಷ್ಠಿತವಾದ ಧರ್ಮವಾಗಿದೆ. ಮನುಷ್ಯರು ವೇಷಭೂಷಣ, ಸಂಸ್ಕೃತಿ–ನಾಗರಿಕತೆ, ಭಾಷೆ – ಆಚಾರ ಎಂಬಿವುಗಳಲ್ಲಿ ವಿಭಿನ್ನರಾಗಿದ್ದರೂ ದೇವರ ಸೃಷ್ಟಿಗಳೆಂಬ ಸ್ಥಿತಿಯಲ್ಲಿ ಸಮಾನರಾಗಿದ್ದಾರೆ. ದೇವರ ದೃಷ್ಟಿಯಲ್ಲಿ ಒಬ್ಬ ಮನುಷ್ಯನು ಇನ್ನೊಬ್ಬನಿಗಿಂತ ಕೀಳಲ್ಲ. ಸಂಪತ್ತು ಮತ್ತು ಜ್ಞಾನದಲ್ಲಿ ವ್ಯತ್ಯಾಸವಿದ್ದರೂ ದೇವಸನ್ನಿಧಿಯಲ್ಲಿ ಎಲ್ಲರೂ ಸಮಾನರೆಂದು ಇಸ್ಲಾಂ ಕಲಿಸುತ್ತದೆ.

ದೇವರು ಒಂದು ನಿರ್ದಿಷ್ಟ ಜಾತಿಯ, ಸಮುದಾಯದ, ಧರ್ಮದ, ಕಾಲದ ಮಾತ್ರ ಪರಿಪಾಲಕನಲ್ಲವೆಂದು ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯದ ಪ್ರಥಮ ವಚನವೇ ಸ್ಪಷ್ಟಪಡಿಸುತ್ತದೆ:

الحمد لله رب العالمين

"ಸರ್ವ ಸ್ತುತಿಸ್ತೋತ್ರಗಳು ಸರ್ವಲೋಕ ನಿಯಾಮಕನೂ ಸಂರಕ್ಷಕನೂ ಪರಿಪಾಲಕನೂ ಆದ ಅಲ್ಲಾಹನಿಗೆ (ದೇವರಿಗೆ) ಮಾತ್ರ."

ಸಂಕ್ಷಿಪ್ತದಲ್ಲಿ, ವಿವಿಧ ಧರ್ಮಾನುಯಾಯಿಗಳು ತಮ್ಮ ಧರ್ಮಸಿದ್ಧಾಂತಗಳ ಕುರಿತು ಚಿಂತನೆ ಮಾಡು

ವುದರೊಂದಿಗೆ ಇತರ ಧರ್ಮಗಳ ಬಗ್ಗೆ ಮತ್ತು
ಅವುಗಳ ಅಧ್ಯಾಪನಗಳ ಬಗ್ಗೆ ಸರಿಯಾಗಿ ಪರ್ಯಾ
ಲೋಚನೆಮಾಡಿ ಸಂಶೋಧನೆ ನಡೆಸಿದರೆ ಸಮತ್ವ
ಸುಂದರವಾದ ಒಂದು ವಾತಾವರಣವನ್ನು ಸೃಷ್ಟಿಸ
ಲು ನಮಗೆ ಸಾಧ್ಯ. ಅಹ್ಮದಿಯಾ ಸಂಘಟನೆ ಇಂದು
ಜಾಗತಿಕ ಮಟ್ಟದಲ್ಲಿ ಈ ಮಹಾಕಾರ್ಯವನ್ನು ಮಾಡು
ತ್ತಿದೆ. ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರ
ತ್ ಮಿರ್ಝಾ ಗುಲಾಂ ಅಹ್ಮದ್‌ರವರನ್ನು ಈ ಮಹತ್ವ
ದ ಉದ್ದೇಶ ಸಹಿತ ದೇವರು ಲೋಕಕ್ಕೆ ನಿಯೋಜಿಸಿದ್ದಾನೆ.
ಆ ಪುಣ್ಯ ಪುರುಷರು ಹೀಗೆ ನುಡಿಯುತ್ತಾರೆ:

"ಪರಮಾತ್ಮನು ನನಗೆ ತಿಳಿಸಿರುವನು: ಮನು
ಷ್ಯರು ಅವರ ದುಷ್ಕೃತ್ಯಗಳನ್ನು ತ್ಯಜಿಸಿ ತಮ್ಮ ಕುಕೃ
ತ್ಯಗಳ ಕುರಿತು ಪಶ್ಚಾತ್ತಾಪಪಟ್ಟು ಪರಮಾತ್ಮನೊಡನೆ
ಕ್ಷಮೆಯಾಚಿಸದೆ ಇದ್ದರೆ ಲೋಕದಲ್ಲೆಲ್ಲಾ ಭಯಂಕರವಾದ
ವಿಪತ್ತುಗಳೂ ನಾಶನಷ್ಟಗಳೂ ಸಂಭವಿಸುವುವು. ಒಂದು
ಆಪತ್ತು ಮುಕ್ತಾಯವಾಗುವ ಮೊದಲೇ ಇನ್ನೊಂದು
ಭಯಂಕರವಾದ ನಾಶವು ಸನ್ನಿಹಿತವಾಗುವುದು. ಈ
ವಿಪತ್ತುಗಳಿಂದಾಗಿ ಮನುಷ್ಯರು ದಿಗ್ಭ್ರಾಂತರಾಗಿ
ಇನ್ನೇನು ಸಂಭವಿಸಲಿದೆಯೆಂದು ಪ್ರಶ್ನಿಸಲಾರಂಭಿಸು
ವರು. ಅನೇಕರು ವಿವಿಧ ಆಪತ್ತುಗಳಿಗೆ ಗುರಿಯಾಗಿ
ಭ್ರಾಂತರಾಗುವರು. ಆದುದರಿಂದ, ನನ್ನ ದೇಶ ಭಾಂ
ಧವರೇ, ಆ ದಿನಗಳು ಬರುವ ಮೊದಲೇ ನೀವು ಜಾಗ
ರೂಕರಾಗಿರಿ. ಹಿಂದುಗಳೂ ಮುಸ್ಲಿಮರೂ ಪರಸ್ಪರ
ಸಂಧಾನವನ್ನುಂಟುಮಾಡಲಿ. ಐಕ್ಯಭಂಗವಾಗುವ ರೀತಿ
ಯಲ್ಲಿ ಅಕ್ರಮವಾಗಿ ವರ್ತಿಸಿದ ಸಮುದಾಯವು ಆ
ಅನ್ಯಾಯವನ್ನು ತ್ಯಜಿಸಲಿ, ಇಲ್ಲವಾದರೆ ಅನ್ಯೋನ್ಯ
ಶತ್ರುತ್ವದ ಎಲ್ಲ ಪಾಪವು ಆ ಅನ್ಯಾಯವಾಗಿ ವರ್ತಿಸಿದ
ಸಮುದಾಯದ ಕೊರಳಿಗೆ ಉರುಳಾಗಿ ಪರಿಣಮಿಸು
ವುದು." (ಮೈತ್ರಿ ಸಂದೇಶ)

ಈ ಅಧ್ಯಾಪನದ ಆಧಾರದಲ್ಲಿ ಇಂದು ಅಹ್ಮ
ದಿಯಾ ಸಂಘಟನೆ ವಿವಿಧ ಧರ್ಮಾನುಯಾಯಿಗಳೆಡೆ.
ವಿವಿಧ ಸಮುದಾಯಗಳ ಮಧ್ಯೆ ಸಾಹೋದರ್ಯ ಮತ್ತು
ಸರ್ವ ಧರ್ಮ ಮೈತ್ರಿಯನ್ನು ಸ್ಥಾಪಿಸಲು ಅಹೋ
ರಾತ್ರಿ ಪರಿಶ್ರಮಿಸುತ್ತಿದೆ. ಆದರಲ್ಲಿ ಈ ಸಂಘಟನೆಗೆ
ಅತಿ ಮಹತ್ತಾದ ವಿಜಯ ಸಿದ್ಧಿಸುತ್ತಿದೆ.

*WITH BEST COMPLIMENTS FROM:*

Phone: 64409

**MUSTAFA BOOK COMPANY**
**Fort Road, CANNANORE-1.**

Phone: 224, 267

**MUSTAFA BOOK COMPANY**
**P. O. PAYANGADI-670 303.**

**MUSTAFA PRINTING PRESS**
**P. O. PAYANGADI-670 303.**

Agents of Govt. Publications &
Educational Suppliers

*With Best Compliments From :*



**AFZALUNNISA**
**WASIM AHMAD**
**SHAKIRA BEGUM**
**Azad Road, II Cross,**
**SAGAR-577 401**

# ಕೊಡಿಯತ್ತೂರ್‌ನಲ್ಲಿ
# ಮುಖಾಮುಖಿ ಮುಬಾಹಲ

ಇಸ್ಲಾಮಿಕ ಚರಿತ್ರೆಯಲ್ಲಿ ಅಭೂತಪೂರ್ವವೆನ್ನಲಾದ ಮುಖಾಮುಖಿ ಮುಬಾಹಲ ಪ್ರಾರ್ಥನೆಯು ಕೇರಳ ಅಹ್ಮದಿಯಾ ಮುಸ್ಲಿಂ ಜಮಾಅತ್ ಮತ್ತು ಕೊಡಿಯತ್ತೂರಿನ ಅಂಜುಮನ್ ಇಶಾಅತೆ ಇಸ್ಲಾಂ ಮಧ್ಯೆ 1989 ಮೇ 28 ರಂದು (ಆದಿತ್ಯವಾರ) ಸಂಜೆ ಕೊಡಿಯತ್ತೂರ್‌ನಲ್ಲಿ ನಡೆಯಿತು.

ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು 1988 ಜೂನ್ 10 ರಂದು (ಶುಕ್ರವಾರ) ಲಂಡನ್ ಮಸೀದಿಯಲ್ಲಿ ಜುಮುಅ ಖುತ್ಬದಲ್ಲಿ ಪ್ರಕಟಿಸಿದ ಮುಬಾಹಲ ಪಂಥಾಹ್ವಾನವು ಲೋಕವ್ಯಾಪಕವಾಗಿ ಉಂಟುಮಾಡಿದ ಚಲನೆಯ ಭಾಗವಾಗಿ ಕೇರಳದಲ್ಲುಂಟಾದ ಪ್ರತಿಕ್ರಿಯೆಯ ಫಲವಾಗಿದೆ ಈ ಐತಿಹಾಸಿಕ ಮುಖಾಮುಖಿ ಮುಬಾಹಲ.

ಸಂವಾದಗಳು ಮತ್ತು ಸತ್ಯಾನ್ವೇಷಣ ಮಾರ್ಗಗಳು ನಿಷ್ಫಲವಾಗುವಾಗ ಸಮಸ್ಯೆಯನ್ನು ದೇವಸನ್ನಿಧಿಯಲ್ಲಿ ಸಮರ್ಪಿಸಿ, ಉಭಯ ಪಕ್ಷಗಳೂ ಒಟ್ಟು ಸೇರಿ ಪ್ರಾರ್ಥನೆ ಮಾಡಿ ಸತ್ಯದ ಸೂಚಕಕಾರ್ಯವನ್ನು ಯಾಚಿಸುವುದಕ್ಕೆ ಮುಬಾಹಲ ಎಂದು ಹೇಳಲಾಗುತ್ತದೆ.

ಈ ಮುಬಾಹಲ ಪ್ರಾರ್ಥನೆಯಲ್ಲಿ ಪವಿತ್ರ ಖುರ್‌ಆನಿನ ಅಧ್ಯಾಯ 3 – ವಚನ 62ರಲ್ಲಿ ಸೂಚಿಸಿದಂತೆ, ಪುರುಷರು, ಸ್ತ್ರೀಯರು ಮತ್ತು ಮಕ್ಕಳು ಸೇರಿದ್ದರು. ಉಭಯ ಪಕ್ಷದಿಂದಲೂ ತಲಾ 40 ಮಂದಿ ಭಾಗವಹಿಸಿದರು. ಮುಬಾಹಲ ಪ್ರಾರ್ಥನೆಯ ಪೂರ್ಣ ಪಾಠವನ್ನೂ ಭಾಗವಹಿಸಿದವರ ಹೆಸರು ಮತ್ತು ವಿವರಗಳನ್ನೂ ಇಲ್ಲಿ ಕೊಡಲಾಗಿದೆ.

## ಅಹ್ಮದಿಯಾ ಮುಸ್ಲಿಂ ಜಮಾಅತಿನ ಪ್ರಾರ್ಥನೆ

بسم الله الرحمن الرحيم - الحمد لله رب العالمين - اللهم صل على محمد وعلى آل محمد -

"ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ (ಅ) ಮುಸ್ಲಿಮರಿಗೆ ವಾಗ್ದಾನ ಮಾಡಲ್ಪಟ್ಟ ಇಮಾಂ ಮಹ್‌ದಿ ಮತ್ತು ಮಸೀಹಿಬ್ನು ಮರ್‌ಯಂ ಆಗಿರುವರು. ಅವರು ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರವರನ್ನು ಅನುಸರಿಸುವ, ಶರೀಅತ್ ಇಲ್ಲದ, ಉಮ್ಮತೀ ನಬಿ ಹಾಗೂ ರಸೂಲ್ ಆಗಿದ್ದಾರೆಂದು ನಾವು ಹೃತ್ಪೂರ್ವಕವಾಗಿ – ದೃಢವಾಗಿ ನಂಬುತ್ತೇವೆ ಹಾಗೂ ಘೋಷಿಸುತ್ತೇವೆ. ಹಝ್ರತ್ ಅಹ್ಮದುಲ್ ಖಾದಿಯಾನಿ (ಅ) ಅವರು ಲೋಕದ ಮುಂದಿಟ್ಟ ಇಲ್ಹಾಂ ಮತ್ತು ವಹ್ಯ್‌ಗಳೆಲ್ಲಾ ಅಲ್ಲಾಹನಿಂದ ಅವರಿಗೆ ಲಭಿಸಿದವುಗಳೆಂದು ನಾವು ನಂಬುತ್ತೇವೆ. ಅವರನ್ನು ನಿರಾಕರಿಸಿದಲ್ಲಿ, ಅಲ್ಲಾಹನು ಕಳುಹಿಸಿದ ಪ್ರವಾದಿಗಳನ್ನು ನಿರಾಕರಿಸುವವರಿಗೆ ಉಂಟೆಂದು ಪವಿತ್ರ ಖುರ್‌ಆನಿನಲ್ಲಿ ಸೂಚಿಸಲಾದ ಶಿಕ್ಷೆಯು ಉಂಟಾಗುವುದೆಂದೂ ಪ್ರವಾದಿವರ್ಯ (ಸ)ರ ಸಮು



**ಮೌಲ್ವಿ ಮುಹಮ್ಮದ್ ಅಬುಲ್ ವಫಾ ಸಾಹೇಬರ ನೇತೃತ್ವದಲ್ಲಿ ಪ್ರಾರ್ಥಿಸುತ್ತಿರುವ ಅಹ್ಮದೀ ಮುಸ್ಲಿಮರು**

---

ದಾಯದಲ್ಲಿ ಆ ಮಹಾನ್ ಪ್ರವಾದಿಯನ್ನು ಅನುಸರಿಸುವ, ಶರೀಅತ್ ರಹಿತ, ಉಮ್ಮತೀ ನಬಿ (ಅನುಗಾಮಿ ಪ್ರವಾದಿ) ಬರಬಹುದೆಂದೂ ನಾವು ನಂಬುತ್ತೇವೆ. ಸರ್ವಶಕ್ತನಾದ ಅಲ್ಲಾಹನೇ, ನಾವು ಹೇಳುತ್ತಿರುವುದು ಹಾಗೂ ನಂಬುತ್ತಿರುವುದು ಸುಳ್ಳೆಂದಾದರೆ ನಮ್ಮ ಮೇಲೆ ಕಠೋರ ಶಿಕ್ಷೆಯನ್ನು ಇಳಿಸು. لعنة الله على الكاذبين (ಲಅ್‌ನತುಲ್ಲಾಹಿ ಅಲಲ್ ಕಾದಿಬೀನ್). ತದ್ವಿರುದ್ಧವಾಗಿ, ನಮ್ಮ ಈ ನಂಬಿಕೆಗಳು ಸತ್ಯವಾಗಿದ್ದಲ್ಲಿ ನಮ್ಮ ಮೇಲೆ ನಿನ್ನ ಅನುಗ್ರಹವನ್ನು ಸುರಿಸಿ, ಸತ್ಯವು ಪ್ರತ್ಯಕ್ಷ ಪಡುವಂತೆ ಸೂಚಕಕಾರ್ಯಗಳನ್ನು ತೋರಿಸು – ಆಮೀನ್."

## ಅಂಜುಮನ್ ಇಶಾಅತೆ ಇಸ್ಲಾಮಿನ ಪ್ರಾರ್ಥನೆ

بسم الله الرحمن الرحيم - الحمد لله رب العالمين - اللهم صل على محمد وعلى آل محمد -

"ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಅಲ್ಲಾಹನು ನಿಯೋಜಿಸಿದ ನಬಿಯಾಗಲಿ, ರಸೂಲಾಗಲಿ, ಉಮ್ಮತೀ ನಬಿಯಾಗಲಿ ಶರೀಅತ್ ಇಲ್ಲದ ರಸೂಲಾಗಲಿ ಅಲ್ಲವೆಂದು ನಾವು ಪೂರ್ಣಹೃದಯದಿಂದ ನಂಬುತ್ತೇವೆ ಹಾಗೂ ಘೋಷಿಸುತ್ತೇವೆ. ಮುಹಮ್ಮದ್ ಪೈಗಂಬರ್ (ಸ) ರವರ ನಂತರ ಯಾವುದೇ ರೀತಿಯ ನುಬುವ್ವತ್ ಮತ್ತು ರಿಸಾಲತ್ ಇಲ್ಲ. ತನಗೆ ಅಲ್ಲಾಹನಿಂದ ವಹ್ಯ್ ಲಭಿಸಿದೆಯೆಂಬ ಮಿರ್ಝಾ ಖಾದಿಯಾನಿಯ ವಾದ ಸುಳ್ಳು. ಅವರಲ್ಲಿ ವಿಶ್ವಾಸವಿಡದವರು ನರಕವಾಸಿ ಅಥವಾ ಕಾಫಿರ್ ಆಗಲಾರರೆಂದು ನಾವು ಆಣೆಹಾಕಿ ಹೇಳುತ್ತೇವೆ. ನಾವು ನಂಬುತ್ತಿರುವುದು ಹಾಗೂ ಹೇಳುತ್ತಿರುವುದು ಸುಳ್ಳೆಂದಾದರೆ, ಅಲ್ಲಾಹನೇ, ನಮ್ಮ ಮೇಲೆ ನಿನ್ನ ಶಾಪವನ್ನು ಸುರಿಸು. لعنة الله على الكاذبين (ಲಅ್‌ನತುಲ್ಲಾಹಿ ಅಲಲ್ ಕಾದಿಬೀನ್). ತದ್ವಿರುದ್ಧವಾಗಿ, ನಮ್ಮ ಈ ನಂಬಿಕೆಗಳು ಸತ್ಯವಾಗಿದ್ದಲ್ಲಿ ನಮ್ಮ ಮೇಲೆ ನಿನ್ನ ಅನುಗ್ರಹವನ್ನು ಸುರಿಸಿ, ಸತ್ಯವು ಪ್ರತ್ಯಕ್ಷ ಪಡುವಂತೆ ಸೂಚಕಕಾರ್ಯಗಳನ್ನು ತೋರಿಸು – ಆಮೀನ್.



**ಮೌಲ್ವಿ ಮುಹಮ್ಮದ್ ಮದನಿಯವರ ನೇತೃತ್ವದಲ್ಲಿ ಪ್ರಾರ್ಥಿಸುತ್ತಿರುವ ಅಂಜುಮನ್ ಇಶಾಅತೆ ಇಸ್ಲಾಂ ಸದಸ್ಯರು**

## ಉಭಯ ಪಕ್ಷದವರ ಸಮಾನ ಪ್ರಾರ್ಥನೆ

بسم الله الرحمن الرحيم - الحمد لله رب العالمين - اللهم صل على محمد وعلى آل محمد -

"ಸರ್ವಶಕ್ತನಾದ ಅಲ್ಲಾಹನೇ, ರಹಸ್ಯವನ್ನೂ ಬಹಿರಂಗವನ್ನೂ ಬಲ್ಲವನೇ, ನಿನ್ನ ಶಕ್ತಿ, ಪ್ರತಾಪ ಮತ್ತು ಪ್ರತಿಷ್ಠೆಯನ್ನು ಎತ್ತಿಹಿಡಿದುಕೊಂಡು ನಾವಿದೋ ನಿನ್ನೊಡನೆ ಪ್ರಾರ್ಥಿಸುತ್ತೇವೆ: ದೇವಾ, ನಮ್ಮ ಉಭಯ ಪಕ್ಷಗಳಲ್ಲಿ ಯಾರು ಸತ್ಯವಂತರೋ ಅವರಿಗೆ ನೀನು ಇಹ–ಪರ ಲೋಕಗಳ ಅನುಗ್ರಹಗಳನ್ನು ದಯಪಾಲಿಸು. ನಮ್ಮಲ್ಲಿ ಸತ್ಯವಂತರ ಕಷ್ಟಗಳನ್ನು ನೀನು ದೂರೀಕರಿಸು. ಅನುಗ್ರಹಗಳ ಮೇಲೆ ಅನುಗ್ರಹಗಳನ್ನು ಸುರಿಸಿ ಅವರ ಸಮೂಹದಿಂದ ಎಲ್ಲ ವಿಧ ದೋಷಬಾಧೆಗಳನ್ನೂ ಎಲ್ಲ ವೈಷಮ್ಯಗಳನ್ನೂ ದೂರಮಾಡು – ಆಮೀನ್.

ಅಲ್ಲಾಹನೇ, ನಮ್ಮ ಪೈಕಿ ಯಾವ ಪಕ್ಷದವರು ಸುಳ್ಳನ್ನು ಹೇಳುತ್ತಲೂ ಪ್ರಚಾರ ಮಾಡುತ್ತಲೂ ಇರುವರೋ, ಅವರ ಮೇಲೆ ನೀನು ಶಾಪವನ್ನೂ ಕೋಪವನ್ನೂ ವರ್ಷಿಸಿ ಅವರನ್ನು ನಿಂದ್ಯ ಮತ್ತು ನಿಕೃಷ್ಟರನ್ನಾಗಿ ಮಾಡಿ ನಾಶಪಡಿಸು. ಯಾರದೇ ಹಸ್ತಕ್ಷೇಪಕ್ಕೆ ಅತೀತವಾಗಿ ಕಷ್ಟಗಳ ಮೇಲೆ ಕಷ್ಟಗಳನ್ನು ಅವರ ಮೇಲೆ ಸುರಿಸು. ನಮ್ಮ ಪೈಕಿ ಸತ್ಯದ ಪಕ್ಷ ಯಾವುದೆಂದು ಲೋಕಜನರಿಗೆ ಮನವರಿಕೆಯಾಗಲಿಕ್ಕೂ ಅಸತ್ಯದ ಪಕ್ಷವನ್ನು ಗುರುತಿಸಲಿಕ್ಕೂ ಸಾಧ್ಯವಾಗುವ ರೀತಿಯಲ್ಲಿ ಸ್ಪಷ್ಟವಾದ ಸೂಚಕಕಾರ್ಯವನ್ನು ಅಲ್ಲಾಹನೇ, ನೀನು ಇಚ್ಛಿಸುವಿಯಾದರೆ ಆರು ಮಾಸಗಳೊಳಗೆ ಪ್ರಕಟಪಡಿಸು – ಆಮೀನ್.



ಮುಬಾಹಲ ಪ್ರಾರ್ಥನೆಗೆ ಸಾಕ್ಷಿಯಾದ ಸುಮಾರು ಹತ್ತು ಸಹಸ್ರ ಸಂಖ್ಯೆಯ ಜನಸ್ತೋಮ

## ಮುಬಾಹಲದಲ್ಲಿ ಭಾಗವಹಿಸಿದ ಅಹ್ಮದಿಯಾ ಮುಸ್ಲಿಂ ಜಮಾಅತಿನ ಪ್ರತಿನಿಧಿಗಳ ವಿವರ

| ಕ್ರಮಾಂಕ | ಹೆಸರು | ಪ್ರಾಯ | ತಂದೆಯ/ಗಂಡನ ಹೆಸರು | ಸ್ಥಳ |
|---|---|---|---|---|
| 1. | ಮೌಲ್ವಿ ಮುಹಮ್ಮದ್ ಅಬುಲ್ ವಫಾ (ಅಹ್ಮದಿಯಾ ಚೀಫ್ ಮಿಶನರಿ) | 73 | ಮೂಸ ಮುಸ್ಲಿಯಾರ್ | ಪಯಂಗಾಡಿ |
| 2. | ಝುಬೈದ | 52 | ಮೌಲ್ವಿ ಅಬುಲ್ ವಫಾ | " |
| 3. | ರಫೀಕ್ ಅಹ್ಮದ್ | 30 | " " | " |
| 4. | ಡಾ। ಬಿ. ಮನ್ಸೂರ್ ಅಹ್ಮದ್ M.B.B.S. (ಆಕ್ಟಿಂಗ್ ಅಮೀರ್, ಕೇರಳ ರಾಜ್ಯ ಸಮಿತಿ) | 46 | ಎಂ. ಇಬ್ರಾಹಿಂ | ಮಟ್ಟನ್ನೂರ್ |
| 5. | ಎ. ಪಿ. ಝೈನಬ | 38 | ಡಾ। ಬಿ. ಮನ್ಸೂರ್ ಅಹ್ಮದ್ | " |
| 6. | ಫಿರೋಝ್ | 15 | " " | " |
| 7. | ಮೌಲ್ವಿ ಮುಹಮ್ಮದ್ ಅಲವಿ H. A. (ಅಹ್ಮದಿಯಾ ಮಿಶನರಿ) | 63 | ಅಹ್ಮದ್ | ತಿರುವಯಾಂಕುನ್ನ್ |
| 8. | ಕೆ. ಖದೀಜ | 48 | ಮೌಲ್ವಿ ಮುಹಮ್ಮದ್ ಅಲವಿ | " |
| 9. | ಸಿ. ಕುಞ್ಞಬ್ದುಲ್ಲಾಹ್ (ಮಾಲ್ ಸೆಕ್ರಿಟರಿ, ಕೇರಳ ರಾಜ್ಯ ಸಮಿತಿ) | 68 | ಕೆ. ಮೂಸಾನ್ ಕುಟ್ಟಿ | ಕಣ್ಣನ್ನೂರು |
| 10. | ಮುಹಮ್ಮದ್ ಸಾದಿಖ್ | 31 | ಸಿ. ಕುಞ್ಞಬ್ದುಲ್ಲಾಹ್ | " |
| 11. | ಪಿ. ಅಬ್ದುರ್ರಹ್ಮಾನ್ ತಂಬಳ್ (ತರ್ಬಿಯತ್ ಸೆಕ್ರಿಟರಿ, ಕೇರಳ ರಾಜ್ಯ ಸಮಿತಿ) | 60 | ಪಿ. ಇಬ್ರಾಹಿಂ ಮುಸ್ಲಿಯಾರ್ | ಅಂಗಾಡಿತಾಯಂ (ತೃಶೂರ್ ಜಿಲ್ಲೆ) |
| 12. | ಪಿ. ಎ. ಮುಹಮ್ಮದ್ ಶರೀಫ್ | 29 | ಪಿ. ಅಬ್ದುರ್ರಹ್ಮಾನ್ | " |
| 13. | ಬೀನಾ ಶರೀಫ್ | 23 | ಪಿ. ಎ. ಮುಹಮ್ಮದ್ ಶರೀಫ್ | " |

| ಕ್ರಮಾಂಕ | ಹೆಸರು | ಪ್ರಾಯ | ತಂದೆಯ/ಗಂಡನ ಹೆಸರು | ಸ್ಥಳ |
|---|---|---|---|---|
| 14. | ಎನ್. ಕುಞ್ಞಹ್ಮದ್ ಮಾಸ್ಟರ್ (ತಅಲೀಂ ಸೆಕ್ರಿಟರಿ, ಕೇರಳ ರಾಜ್ಯ ಸಮಿತಿ) | 51 | ಅಹ್ಮದ್ ಕುಟ್ಟಿ | ಪಯಂಗಾಡಿ |
| 15. | ಬಿ. ತಾಹಿರ | 41 | ಎನ್. ಕುಞ್ಞಹ್ಮದ್ ಮಾಸ್ಟರ್ | " |
| 16. | ಮುಬಶ್ಶಿರ್ ಅಹ್ಮದ್ | 20 | " " | " |
| 17. | ಯು. ಮನ್ಸೂರ್ ಅಹ್ಮದ್ B. Com. (ಸೆಕ್ರಿಟರಿ, ಕೇರಳ ರಾಜ್ಯ ಸಮಿತಿ) | 41 | ಇ. ಅಬ್ದುರ್ರಹ್ಮಾನ್ ಕುಟ್ಟಿ | ಕಣ್ಣನ್ನೂರ್ |
| 18. | ಎ. ಪಿ. ರುಖ್ಯಾಬಿ | 33 | ಯು. ಮನ್ಸೂರ್ ಅಹ್ಮದ್ | " |
| 19. | ರಫೀನ | 14 | " " | " |
| 20. | ಎಂ. ಸಿ. ಮುಹಮ್ಮದ್ | 66 | ಮಮ್ಮುತನ್ | ಕೊಡಿಯತ್ತೂರ್ |
| 21. | ವಿ. ಪಿ. ರುಬೈವ | 46 | ಎಂ. ಸಿ. ಮುಹಮ್ಮದ್ | " |
| 22. | ಎಂ. ಶಫೀಕ್ ಅಹ್ಮದ್ | 25 | " " | " |
| 23. | ಎಂ. ಎಂ. ಕೋಯ (ಸದಸ್ಯ, ಕೇರಳ ರಾಜ್ಯ ಸಮಿತಿ) | 73 | ಪಿ. ಎಂ. ಮಾಮುಕೋಯ | ಕಲ್ಲಿಕೋಟೆ |
| 24. | ಎ. ಪಿ. ಆಯಿಶಾಬಿ | 62 | ಎಂ. ಎಂ. ಕೋಯ | " |
| 25. | ಪಿ. ಮುಹಮ್ಮದ್ ಕುಟ್ಟಿ ಹಾಜಿ | 52 | ಝೈನುದ್ದೀನ್ ಹಾಜಿ | ಪಳ್ಳಿಪುರಂ |
| 26. | ಝೈನಬ | 47 | ಪಿ. ಮುಹಮ್ಮದ್ ಕುಟ್ಟಿ ಹಾಜಿ | " |
| 27. | ಜಲಾಲುದ್ದೀನ್ ಕಲ್ಪೇನಿ (ಸದಸ್ಯ, ಕೇರಳ ರಾಜ್ಯ ಸಮಿತಿ) | 39 | ವಿ. ಪಿ. ಚೆರಿಯಕೋಯ | ಕಲ್ಪೇನಿ (ಲಕ್ಷದೀಪ) |
| 28. | ಸಿ. ಜಿ. ಮರ್‌ಯಂ | 30 | ಜಲಾಲುದ್ದೀನ್ ಕಲ್ಪೇನಿ | " |
| 29. | ರಿಯಾರುದ್ದೀನ್ | 7 | " " | " |
| 30. | ಎಚ್. ಸುಲೈಮಾನ್ | 34 | ಶಾಹುಲ್ ಹಮೀದ್ | ಕಾವಶ್ಶೇರಿ |
| 31. | ಜಮೀಲ | 26 | ಎಚ್. ಸುಲೈಮಾನ್ | " |
| 32. | ಶಂಸುದ್ದೀನ್ | 40 | ಅಲಿಯಾರ್ ಕುಞ್ಞ | ಕರುನಾಗಪಳ್ಳಿ |
| 33. | ಜೋಸೆಫ್ ಸಾದಿಖ್ | 36 | ಆ್ಯಂಟನಿ ಮಣ್ಣಶ್ಶೇರಿಲ್ | ಎರ್ನಾಕುಳಂ |
| 34. | ಮುಹಮ್ಮದ್ ಯೂಸುಫ್ B. Com. (ಸಂಪಾದಕ, "ಯುಗರಶ್ಮಿ", ಸದಸ್ಯ, ಕೇರಳ ರಾಜ್ಯ ಸಮಿತಿ) | 42 | ಎಂ. ಅಬ್ದುಲ್ ರಶೀದ್ | ಮಂಗಳೂರು |
| 35. | ತಾಹಿರ ಸಿದ್ದೀಖ | 34 | ಮುಹಮ್ಮದ್ ಯೂಸುಫ್ | " |
| 36. | ಕುಞ್ಞೀದ್ ಮಾಸ್ಟರ್ | 36 | ಕೋಯಣ್ಣಿ | ಮುರಿಯಕಣ್ಣಿ |
| 37. | ಸಿ. ಎಚ್. ಅಬ್ದುಲ್ ನಾಸಿರ್ | 23 | ಸಿ. ಎಚ್. ಮಾಯನ್ ಕುಟ್ಟಿ | ನಾದಾಪುರಂ |
| 38. | ಎಂ. ಇಂಬಿಚ್ಚಾಲಿ | 54 | ಎಂ. ಅಹ್ಮದ್ ಕುಟ್ಟಿ | ಕೊಡಿಯತ್ತೂರ್ |
| 39. | ಖದೀಸುಮ್ಮ | 47 | ಎಂ. ಇಂಬಿಚ್ಚಾಲಿ | " |
| 40. | ಎಂ. ಅಹ್ಮದ್ ಕುಟ್ಟಿ | 31 | " | " |

# ಮುಬಾಹಲದಲ್ಲಿ ಭಾಗವಹಿಸಿದ ಇಶಾಅತೆ ಇಸ್ಲಾಂ ಪ್ರತಿನಿಧಿಗಳ ವಿವರ

| ಕ್ರಮಾಂಕ | ಹೆಸರು | ಪ್ರಾಯ | ತಂದೆಯ/ಗಂಡನ ಹೆಸರು | ಸ್ಥಳ |
|---|---|---|---|---|
| 1. | ಕಾಕ್ಕಿರಿ ಅಬ್ದುಲ್ಲ (ಪ್ರೆಸಿಡೆಂಟ್, ಅಂಜುಮನ್ ಇಶಾಅತೆ ಇಸ್ಲಾಂ, ಕೇರಳ) | 40 | ಅಬೂಬಕರ್ ಹಾಜಿ | ಕೊಡಿಯತ್ತೂರ್ |
| 2. | ಯು. ಆಯಿಶ | 30 | ಕಾಕ್ಕಿರಿ ಅಬ್ದುಲ್ಲ | " |
| 3. | ಕೆ. ಜಸ್ನ | 9 | " " | " |
| 4. | ಪಿ. ಪಿ. ಅಬ್ದುಲ್ಲ (ಜನರಲ್ ಸೆಕ್ರೆಟರಿ, ಅಂಜುಮನ್ ಇಶಾಅತೆ ಇಸ್ಲಾಂ, ಕೇರಳ) | 40 | ಅಹ್ಮದ್ | " |
| 5. | ಎ. ನಫೀಸ | 30 | ಪಿ. ಪಿ. ಅಬ್ದುಲ್ಲ | " |
| 6. | ಎ. ಪಿ. ಲುಕ್ಮಾನ್ | 12 | " " | " |
| 7. | ಎಂ. ಅಬ್ದುರ್ರಹ್ಮಾನ್ ಮದನಿ | 39 | ಮುಹಮ್ಮದ್ | " |
| 8. | ಟಿ. ಕೆ. ಸಫಿಯ | 30 | ಎಂ. ಅಬ್ದುರ್ರಹ್ಮಾನ್ ಮದನಿ | " |
| 9. | ಎಂ. ನಬೀಲ್ | 12 | " " | " |
| 10. | ಪಿ. ಪಿ. ಅಬ್ದುರ್ರಹ್ಮಾನ್ M. A. (ಸೆಕ್ರೆಟರಿ) | 35 | ಅಹ್ಮದ್ | " |
| 11. | ಕೆ. ಪಿ. ಸಫಿಯ | 26 | ಪಿ. ಪಿ. ಅಬ್ದುರ್ರಹ್ಮಾನ್ | " |
| 12. | ಪಿ. ಎ. ಶಬ್ನ | 10 | " " | " |
| 13. | ಎಂ. ಅಹ್ಮದ್ M. A. (ಸೆಕ್ರೆಟರಿ) | 34 | ಕುಞಿಮ್ಮೋತೀನ್ ಕುಟ್ಟಿ | " |
| 14. | ಎಂ. ಟಿ. ಅತ್ವಿಖ | 28 | ಎಂ. ಅಹ್ಮದ್ | " |
| 15. | ಎಂ. ಮುನೀಬ್ | 10 | " " | " |
| 16. | ಅಬ್ದುರ್ರಹೀಂ ಕಣ್ಣಾಟ್ಟಿಲ್ B.Sc., B.Ed. | 33 | ಅಬ್ದುಲ್ಲ ಮಾಸ್ಟರ್ | " |
| 17. | ಎಂ. ಮುಹಮ್ಮದ್ ಮದನಿ (ಲೆಕ್ಚರರ್, ಸುಲ್ಲಮುಸ್ಸಲಾಂ ಅರೆಬಿಕ್ ಕಾಲೇಜ್, ಅರೀಕ್ಕೋಡ್) | 43 | ಮೊಯ್ದೀನ್ ಕುಟ್ಟಿ | " |
| 18. | ಟಿ. ಸಿ. ನಫೀಸ | 33 | ಎಂ. ಮುಹಮ್ಮದ್ ಮದನಿ | " |
| 19. | ಎಂ. ಶಬೀರ್ | 14 | " " | " |
| 20. | ಇ. ಎನ್. ಇಬ್ರಾಹೀಂ (ಅಫ್ಸಲುಲ್ ಉಲಮಾ, ಲೆಕ್ಚರರ್, ಇಸ್ಲಾಹಿಯಾ ಕಾಲೇಜ್, ಚೇಂದಮಂಗಳೂರ್) | 41 | ಇ. ಎನ್. ಅಹ್ಮದ್ ಮುಸ್ಲಿಯಾರ್ | ಚಿರುವಾಡಿ |
| 21. | ಕೆ. ಟಿ. ಅನೀಸ | 27 | ಇ. ಎನ್. ಇಬ್ರಾಹಿಂ | " |
| 22. | ಫಿದಾ ನಸೀಫ | 10 | " " | " |

| ಕ್ರಮಾಂಕ | ಹೆಸರು | ಪ್ರಾಯ | ತಂದೆಯ/ಗಂಡನ ಹೆಸರು | ಸ್ಥಳ |
|---|---|---|---|---|
| 23. | ಕೆ. ಸಿ. ಸಿ. ಮುಹಮ್ಮದ್ ಅನ್ಸಾರಿ (ಲೆಕ್ಚರರ್, ಅನ್ಸಾರ್ ಅರೆಬಿಕ್ ಕಾಲೇಜ್, ವಳವನ್ನೂರ್) | 37 | ಇಂಬಿಚ್ಚ ಮಮ್ಮದ್ | ಕೊಡಿಯತ್ತೂರ್ |
| 24. | ಕೆ. ರ್ಝೈನಬ ಸುಲ್ಲಮಿಯ್ಯ (ಅಫ್ಸಲುಲ್ ಉಲಮ) | 30 | ಕೆ. ಸಿ. ಸಿ. ಮುಹಮ್ಮದ್ ಅನ್ಸಾರಿ | " |
| 25. | ಅತ್ವಿಯ ಜೌಹರ | 10 | " " | " |
| 26. | ಎಂ. ಎ. ಅಬ್ದುಸ್ಸಲಾಂ (ಅಫ್ಸಲುಲ್ ಉಲಮ) | 34 | ಎಂ. ಎಂ. ಅಬ್ದುಲ್ ಅಝೀಝ್ | " |
| 27. | ಎಂ. ಎ. ಅಬ್ದುಲ್ ಅಝೀಝ್ ಅಮೀನ್ | 10 | ಎಂ. ಎ. ಅಬ್ದುಸ್ಸಲಾಂ | " |
| 28. | ಕೆ. ಸಿ. ಕೋಯಾಮು ಹಾಜಿ | 55 | ಹುಸೈನ್ | " |
| 29. | ಇ. ಫಾತಿಮ | 48 | ಕೆ. ಸಿ. ಕೋಯಾಮು ಹಾಜಿ | " |
| 30. | ಟಿ. ಟಿ. ಅಹ್ಮದ್ ಹಾಜಿ | 65 | ಉಣ್ಣಿ ಮೋಯಿ | " |
| 31. | ಟಿ. ಟಿ. ಆಮಿನ | 55 | ಟಿ. ಟಿ. ಅಹ್ಮದ್ ಹಾಜಿ | " |
| 32. | ಟಿ. ಟಿ. ಅಬ್ದುಲ್ಲ | 25 | " " | " |
| 33. | ಕೆ. ಅಬೂಬಕರ್ | 35 | ಮುಹಮ್ಮದ್ | " |
| 34. | ಮುಹಮ್ಮದ್ ಶಾಹಿನ್ | 8 | ಕೆ. ಅಬೂಬಕರ್ | " |
| 35. | ಕೆ. ವಿ. ಆಲಿಕುಟ್ಟಿ | 43 | ಅಲವಿ | " |
| 36. | ಕೆ. ಪಿ. ಫಾತಿಮ | 5 | ಕೆ. ವಿ. ಆಲಿಕುಟ್ಟಿ | " |
| 37. | ಟಿ. ಟಿ. ಅಬ್ದುರ್ರಹ್ಮಾನ್ | 28 | ಟಿ. ಟಿ. ಅಹ್ಮದ್ ಹಾಜಿ | " |
| 38. | ಸಿ. ಅಬ್ದುಲ್ ಜಬ್ಬಾರ್ | 26 | ಕುಞ್ಞಿಕ್ಕೋಕು | " |
| 39. | ಕೆ. ಎಂ. ಕೋಯಾಮುಟ್ಟಿ | 23 | ಉಣ್ಣಿಚ್ಚೇಕು | " |
| 40. | ಪಿ. ಎಂ. ಅಬ್ದುನ್ನಾಸರ್ | 21 | ಕುಟ್ಟೂಸ್ಸ | " |

## ಶಾಪ ತಿರುಗಿ ಬೀಳುವುದು

"ನನ್ನ ಶತ್ರುಗಳಾಗಿರುವ ಮೌಲ್ವಿಗಳೊಡನೆ ಮತ್ತು ಅವರ ಸಹವರ್ತಿಗಳೊಡನೆ, ಅಲ್ಲಾಹನನ್ನು ಮುಂದಿಟ್ಟು ಹೃತ್ಪೂರ್ವಕವಾಗಿ ನಾನು ಹೇಳುತ್ತೇನೆ, ಅವಾಚ್ಯ ನುಡಿಯುವುದು ಮತ್ತು ನಿಂದಿಸುವುದು ಮಾನ್ಯವಾದ ಕೆಲಸವಲ್ಲ. ನಿಮ್ಮ ಸ್ವಭಾವ ಇದಾದರೆ ಆಗಲಿ, ನಿಮ್ಮ ಇಷ್ಟ! ಆದರೆ ನೀವು ನನ್ನನ್ನು ಸುಳ್ಳುವಾದಿಯೆಂದು ಭಾವಿಸುವುದಾದರೆ ನೀವು ಹೀಗೆ ಸಹ ಮಾಡಬಹುದು: ನೀವು ಮಸೀದಿಗಳಲ್ಲಿ ಒಟ್ಟು ಸೇರಿ ಅಥವಾ ಒಬ್ಬೊಬ್ಬರಾಗಿ ನನ್ನ ನಾಶಕ್ಕೋಸ್ಕರ ಪ್ರಾರ್ಥಿಸಿಕೊಳ್ಳಿರಿ! ಪ್ರಲಾಪಿಸುತ್ತಾ ನನ್ನ ನಿರ್ಮೂಲನಕ್ಕಾಗಿ ಪ್ರಾರ್ಥಿಸಿರಿ. ನಾನು ಮಿಥ್ಯಾವಾದಿಯೊಂದಾದರೆ ಖಂಡಿತವಾಗಿ ಆ ಪ್ರಾರ್ಥನೆಗಳು ಸ್ವೀಕರಿಸಲ್ಪಡುವುವು. ಆದರೆ, ನೆನಪಿಡಿರಿ, ನಿಮ್ಮ ನಾಲಗೆಗಳು ಘಾಸಿಗೊಳ್ಳುವ ರೀತಿಯಲ್ಲಿ ನೀವು ಪ್ರಾರ್ಥಿಸಿದರೂ ನಿಮ್ಮ ಮೂಗುಗಳು ಸವೆದು ಹೋಗುವಂತೆ ನೀವು 'ಸುಜೂದ್' ಮಾಡಿದರೂ ಅಶ್ರುಧಾರೆಗಳಿಂದ ಕಣ್ಣಿನ ಗುಳಿಗಳು ಕೊಳೆತು ಹೋಗುವಂತೆ, ಕಣ್ಣಿನ ರೆಪ್ಪೆಗಳು ಕಿತ್ತುಬರುವಂತೆ, ಕೊನೆಗೆ ಬುದ್ಧಿಮಾಂದ್ಯವಾಗಿ ಅಪಸ್ಮಾರ ಅಥವಾ ಭ್ರಮೆ ಬಾಧಿಸುವಷ್ಟರ ಮಟ್ಟಿಗೆ ನೀವು ರೋಧಿಸುತ್ತಾ ವಿಲಾಪಿಸುತ್ತಾ ಪ್ರಾರ್ಥಿಸುತ್ತಿದ್ದರೂ ನಿಮ್ಮ ಆ ಪ್ರಾರ್ಥನೆಗಳು ಸ್ವೀಕರಿಸಲ್ಪಡಲಾರವು. ಏಕೆಂದರೆ, ನಾನು ದೇವರ ಕಡೆಯಿಂದ ಬಂದವನಾಗಿದ್ದೇನೆ. ಯಾರು ನನ್ನ ನಾಶಕ್ಕೆ ಪ್ರಾರ್ಥಿಸುತ್ತಾರೋ ಆ ಪ್ರಾರ್ಥನೆ ಅವನೆಡೆಗೆಯೇ ತಿರುಗಿ ಬೀಳುವುದು. ನನ್ನ ಕುರಿತು 'ಅವನ ಮೇಲೆ ಶಾಪ' ಎಂದು ಯಾರು ಹೇಳುತ್ತಾರೋ ಆ 'ಲಅ್‌ನತ್' ಅವನ ಹೃದಯದ ಮೇಲೆಯೇ ಬೀಳುವುದು............!" (ಅರ್ಬಈನ್).

— ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)

with Compliments from

# S. ASHRAFALI

"DARUSSIDQUE"

**Mogral**

## KUMBLA-670 321

# 'ಸನ್ಮಾರ್ಗ'ದ ದುರ್ಬೋಧನೆ

★ ಇಬ್ನು ಅಬ್ದುಲ್ಲಾ

ಜಮಾಅತೆ ಇಸ್ಲಾಮಿ ಪಕ್ಷದವರ ಕನ್ನಡ ವಾರ ಪತ್ರಿಕೆ 'ಸನ್ಮಾರ್ಗ'ದ 1990ನೇ ಫೆಬ್ರುವರಿ ತಿಂಗಳ ಎರಡು ಸಂಚಿಕೆಗಳಲ್ಲಿ (ಸಂಚಿಕೆ 44 ಮತ್ತು 45) ಕೊಡಿಯತ್ತೂರಿನ ಅಂಜುಮನ್ ಇಶಾಅತೆ ಇಸ್ಲಾಮಿ ಸಂಘದ ಕಾರ್ಯದರ್ಶಿ ಅಬ್ದುರ್ರಹ್ಮಾನ್ ಕೊಡಿಯತ್ತೂರ್ ಮತ್ತು ಅಬೂಸಲ್ಮಾನ್ ವಿ. ಎಂಬವರು ಬರೆದ ಎರಡು ಲೇಖನಗಳು ಪ್ರಕಟವಾಗಿವೆ. ಅಹ್ಮದಿಯಾ ಜಮಾಅತನ್ನೂ ಮುಬಾಹಲ ಪಂಥಾಹ್ವಾನದ ಪರಿಣಾಮ ಫಲಗಳನ್ನೂ ಟೀಕಿಸಿ ಬರೆದ ಈ ಲೇಖನಗಳ ಮೂಲಕ 'ಸನ್ಮಾರ್ಗ' ಪತ್ರಿಕೆಯು ಸುಳ್ಳಿನ ಕಂತೆಗಳನ್ನು ಓದುಗರ ಮುಂದಿಟ್ಟಿದೆ.

ಇವರಿಗೆ ಈ ರೀತಿ ಸುಳ್ಳು ಹೇಳಲು ಆ ಪಕ್ಷದ ಸ್ಥಾಪಕರೇ ಪ್ರೇರೇಪಣೆ ನೀಡಿರುತ್ತಾರೆ. ರಾಜಕೀಯ ಮಹತ್ವಾಕಾಂಕ್ಷೆಗಾಗಿ ಇಸ್ಲಾಂ ಧರ್ಮವನ್ನು ದುರ್ಬಳಕೆ ಮಾಡಲು ಸ್ಥಾಪನೆಗೊಂಡ ಒಂದು ರಾಜಕೀಯ ಪಕ್ಷಕ್ಕಿಂತ ಹೆಚ್ಚಿನ ಮಹತ್ವವು 'ಜಮಾಅತೆ ಇಸ್ಲಾಮಿ'ಗೆ ಇಲ್ಲವೆಂಬುದು ಅದರ ಕುರಿತು ಅಧ್ಯಯನ ನಡೆಸಿದವರಿಗೆ ತಿಳಿದಿರುವ ಒಂದು ವಿಚಾರವಾಗಿದೆ. ಸುಳ್ಳು ಹೇಳಿಯಾದರೂ ಕಲಹ ಗೊಂದಲಗಳ ಮೂಲಕವಾದರೂ ಅಥವಾ ಸಮಾಜದಲ್ಲಿ ಅಶಾಂತಿ ಸೃಷ್ಟಿಸಿಯಾದರೂ ತಮ್ಮ ರಾಜಕೀಯ ಪಕ್ಷವನ್ನು ಬೆಳೆಸುವುದು ಇವರ ಧ್ಯೇಯವಾಗಿದೆ. ರಾಜಕೀಯ ರಂಗದಲ್ಲಿ ಸುಳ್ಳು ಒಂದು ಪಾಪವೆಂದು ಪರಿಗಣಿಸಲ್ಪಡುವುದಿಲ್ಲವಲ್ಲ! ಮೌಲಾನಾ ಮೌದೂದಿ ಈ ರೀತಿ ಬರೆದರು:

"ಸತ್ಯ ನಿಷ್ಠೆ ಮತ್ತು ಸ್ಥೈರ್ಯ ಇಸ್ಲಾಂ ಧರ್ಮದ ಅತಿ ಪ್ರಧಾನವಾದ ಘಟಕಗಳಾಗಿವೆ. ಅದರ ದೃಷ್ಟಿಯಲ್ಲಿ ಸುಳ್ಳು ಅತ್ಯಂತ ನೀಚ ಪಾಪವಾಗಿದ್ದರೂ ಸಹ ಪ್ರಾಯೋಗಿಕ ಜೀವನದ ಕೆಲವು ಅವಶ್ಯಕ ಸನ್ನಿವೇಶಗಳಲ್ಲಿ ಸುಳ್ಳು ಹೇಳಲು ಅನುಮತಿಯಿದೆ, ಮಾತ್ರವಲ್ಲ ಕೆಲವು ಸಂದರ್ಭಗಳಲ್ಲಿ ಅದು ನಿರ್ಬಂಧ ಕೂಡಾ ಆಗಿದೆಯೆಂದು ಫತ್ವ ನೀಡಲಾಗಿದೆ."
(ತರ್ಜುಮಾನುಲ್ ಖುರ್‌ಆನ್ 1958, ಮೇ ಸಂಚಿಕೆ)

ಕೆಲವು ಸನ್ನಿವೇಶಗಳಲ್ಲಿ ಸುಳ್ಳು ಹೇಳುವುದನ್ನು ಇಸ್ಲಾಂ ಧರ್ಮವು ಅನುಮತಿಸಿದೆ ಮಾತ್ರವಲ್ಲ ಅಗತ್ಯಬೀಳುವಾಗ ನೀಜ ಜೀವನದಲ್ಲಿ ಸುಳ್ಳು ಹೇಳಬೇಕಾದುದು ಕಡ್ಡಾಯವೂ ಆಗಿದೆ ಎಂಬ ಮೌ। ಮೌದೂದಿ ಸಾಹೇಬರ ಈ ಫತ್ವವನ್ನು ಅವರ ಅನುಯಾಯಿಗಳು ನಿಷ್ಠೆಯಿಂದ ಪಾಲಿಸುತ್ತಿರುವುದು ಕಂಡು ಬರುತ್ತದೆ! ಅಷ್ಟೇ ಅಲ್ಲ, ಅಹ್ಮದಿಯಾ ಜಮಾಅತನ್ನು ಎದುರಿಸುವ ಸಂದರ್ಭಗಳಲ್ಲಾದರೆ, ತಾವು ಸುಳ್ಳನ್ನಲ್ಲದೆ ಎಂದಿಗೂ ಸತ್ಯವನ್ನು ಹೇಳಲಾರೆವೆಂದು ಅವರು ಪ್ರತಿಜ್ಞೆ ಮಾಡಿರುವಂತೆ ತೋರಿಬರುತ್ತದೆ. 'ಸನ್ಮಾರ್ಗ' ದಲ್ಲಿ ಪ್ರಕಟವಾದ ಮೇಲಿನ ಎರಡು ಲೇಖನಗಳ ಆದ್ಯಂತ ಸುಳ್ಳಿನ ಸರಮಾಲೆಗಳನ್ನೇ ಅದು ವಾಚಕರ ಮುಂದಿಟ್ಟಿದೆ. ಸುಳ್ಳು ಹೇಳುವುದರೊಂದಿಗೆ ಸುಳ್ಳನ್ನು ಪ್ರಚಾರ ಮಾಡುವುದು ಹಾಗೂ ಸಂಗತಿಗಳನ್ನು ತಿರುವು ಮುರುವು ಮಾಡಿ ತಪ್ಪಾದ ರೀತಿಯಲ್ಲಿ ಅದನ್ನು ಜನರ ಮುಂದೆ ಸಮರ್ಪಿಸುವುದು 'ಸನ್ಮಾರ್ಗ'ದ ವಿಶಿಷ್ಟ ವೈಖರಿಯಾಗಿದೆ. 'ಖಾದಿಯಾನಿ'ಗಳ ಕುರಿತಾದರೆ, ಏನನ್ನೂ ನಂಬಲು ಸಿದ್ಧರಿರುವ ಜನರ ಮುಂದೆ ಎಂತಹ ಸುಳ್ಳನ್ನು ಬೇಕಾದರೂ ಬರೆಯುವುದರಲ್ಲಿ ಇವರಿಗೆ ಏನೂ ಅಡ್ಡಿಯಿಲ್ಲವಲ್ಲ!

ಅಹ್ಮದಿಯಾ ಜಮಾಅತಿನ ಖಲೀಫ ಘೋಷಿಸಿದ ಮುಬಾಹಲ ಪಂಥಾಹ್ವಾನದ ಕಾಲಾವಧಿಯಲ್ಲಿ ಮತ್ತು ಅದರ ನಂತರ ಜಮಾಅತಿಗೆ ಲಭಿಸಿದ ವಿಜಯ ಮತ್ತು ಅಲ್ಲಾಹನ ಅನುಗ್ರಹ ಲಬ್ಧಿಯು ಅಪಾರವಾಗಿದೆ. ಜಗತ್ತಿನಾದ್ಯಂತವಿರುವ ಅಹ್ಮದೀಯರು ಅಲ್ಲಾಹನ ಈ ಅನುಗ್ರಹಗಳನ್ನು ಅನುಭವಿಸುತ್ತಾ ಅಲ್ಲಾಹನಿಗೆ ಸ್ತುತಿ ಕೀರ್ತನೆಗಳನ್ನು ಸಲ್ಲಿಸುತ್ತಿದ್ದಾರೆ. ಆದರೆ, "ಮುಬಾಹಲ ಕಾಲಾವಧಿ ಮುಗಿದಿದ್ದರೂ ಯಾವುದೇ ದೃಷ್ಟಾಂತ ಗೋಚರಿಸದಿರುವುದರಿಂದ ಕಾದಿಯಾನಿ ಪಾಳಯದಲ್ಲಿ ನಿರಾಶೆ ಹುಟ್ಟಿದೆ" ಎಂದು 'ಸನ್ಮಾರ್ಗ'ವು ಆಲಾಪಿಸುತ್ತಿದೆ. ಮುಬಾಹಲದ ಫಲವಾಗಿ ಪ್ರಕಟವಾದ ಅತಿ ಪ್ರಧಾನವಾದ ಎರಡು ಮಹಾ ದೃಷ್ಟಾಂತಗಳ ಮುಂದೆ ಇವರು ತಮ್ಮ ಕಣ್ಣುಗಳನ್ನು ಮುಚ್ಚಿ ಬಿಡುತ್ತಾರೆ!

ಒಂದನೆಯದು, ಅಹ್ಮದಿಯಾ ಖಲೀಫ ಒಂದು ಬಲುದೊಡ್ಡ ಅಪಾದನೆಯಿಂದ ವಿಮುಕ್ತರಾದರು ಎಂಬುದಾಗಿದೆ. ಪಾಕಿಸ್ಥಾನದ ಓರ್ವ ಅಹ್ಮದಿಯಾ ವಿರೋಧಿ ಮೌಲಾನಾ ಅಸ್ಲಂ ಖುರೈಶಿ ಎಂಬವರನ್ನು ಅಹ್ಮದಿಯಾ ಖಲೀಫರ ಆದೇಶ ಪ್ರಕಾರ ಅಪಹರಿಸಿ ಕೊಂಡೊಯ್ದು ಕೊಲೆ ಮಾಡಲಾಗಿದೆ ಎಂಬುದು ವಿರೋಧಿಗಳ ಆರೋಪವಾಗಿತ್ತು. 1984ರಿಂದ 4 ವರ್ಷಗಳ ಕಾಲ ಇಡೀ ಪಾಕಿಸ್ಥಾನದಲ್ಲಿ ವಾರ್ತಾ ಮಾಧ್ಯಮಗಳ ಮೂಲಕವೂ ಇತರ ವಿಧಾನಗಳಿಂದಲೂ ಈ ಸುಳ್ಳು ಆರೋಪವನ್ನು ಸರ್ವತ್ರ ಪ್ರಚಾರ ಮಾಡಿದರು. ಈ ಕಾರಣಕ್ಕಾಗಿಯೇ ಪಾಕಿಸ್ಥಾನದಲ್ಲಿ 13 ಅಹ್ಮದೀಯರನ್ನು ಕೊಲೆ ಆರೋಪದ ಮೇಲೆ ಶಹೀದ್ (ಹುತಾತ್ಮ) ಮಾಡಲಾಗಿತ್ತು. ಕಣ್ಮರೆಯಾದ ಈ ಮೌಲಾನಾರ 'ವಿಧವೆ'ಗೂ ಮಕ್ಕಳಿಗೂ ದಿವಂಗತ ಪಾಕ್ ಅಧ್ಯಕ್ಷ ಜಿಯಾಉಲ್‌ಹಕ್ ಒಂದು ಬೃಹತ್ ಸಭೆಯಲ್ಲಿ ಶೋಕ ವ್ಯಕ್ತಪಡಿಸಿಕೊಂಡು ಸಹಾಯ ಧನ ವನ್ನು ಸಹ ನೀಡಿದ್ದರು! ಕೊಲೆ ಆಪಾದನೆ ಹೊರಿಸಲ್ಪಟ್ಟ ಅಹ್ಮದಿಯಾ ಖಲೀಫ ಮಿರ್ಝಾ ತಾಹಿರ್ ಅಹ್ಮದರನ್ನು ವಿಚಾರಣೆ ನಡೆಸಿ ಶಿಕ್ಷೆಗೆ ಗುರಿಪಡಿಸ ಬೇಕೆಂಬುದು ಶತ್ರುಗಳ ತೀವ್ರವಾದ ಬೇಡಿಕೆಯಾಗಿತ್ತು. ಅದರಂತೆ "ಇಂಟರ್‌ಪೋಲ್" ಮೂಲಕ ಅಹ್ಮದಿಯಾ ಖಲೀಫರನ್ನು ಲಂಡನಿನಿಂದ ಬಂಧಿಸಿ ತರಲು ಜನರಲ್ ಜಿಯಾ ಏರ್ಪಾಡುಗಳನ್ನು ಮಾಡುತ್ತಿದ್ದರು. ಆ ಮಧ್ಯೆ ಅಂದರೆ 1988ನೇ ಜೂನ್ 10ನೇ ಶುಕ್ರವಾರದಂದು ಅಹ್ಮದಿಯಾ ಖಲೀಫ ಮುಬಾಹಲ ಪಂಥಾಹ್ವಾನವನ್ನು ಘೋಷಿಸಿದರು. ಮುಬಾಹಲ ಘೋಷಣೆಗೆ ಒಂದು ಪ್ರಮುಖ ಕಾರಣ ಮೇಲಿನ ಆರೋಪವೂ ಆಗಿತ್ತು. ಮುಬಾಹಲ ಪ್ರಾರ್ಥನೆಯಲ್ಲಿ ಅಸ್ಲಂ ಖುರೈಶಿಯ ವಿಷಯವನ್ನು ಸಹ ಪ್ರಸ್ತಾಪಿಸುತ್ತಾ ಖಲೀಫ ಅವರು ಪ್ರಾರ್ಥನೆ ಮಾಡಿದ್ದರು.

ಈ ಅಸ್ಲಂ ಖುರೈಶಿ ಮುಬಾಹಲ ಘೋಷಣೆ ನಂತರ ಒಂದು ತಿಂಗಳಲ್ಲೇ ಇದ್ದಕಿದ್ದಂತೆ ಪ್ರತ್ಯಕ್ಷರಾಗುತ್ತಾರೆ!

ಲಾಹೋರ್ ಪೋಲೀಸ್ ಮಹಾ ನಿರ್ದೇಶಕರ ಜತೆ ಏರ್ಪಡಿಸಲಾದ ಒಂದು ಪತ್ರಿಕಾ ಗೋಷ್ಠಿಯಲ್ಲಿ, ತಾನು ಆರ್ಥಿಕ ಮುಗ್ಗಟ್ಟಿನಿಂದ ಬೇಸತ್ತು ಸ್ವಇಚ್ಛೆಯಿಂದಲೇ ಊರು ಬಿಟ್ಟು ಹೋಗಿದ್ದಾಗಿಯೂ ಅದು ವರೆಗೂ ಇರಾನ್ ಸೇನೆಯಲ್ಲಿ ಇದ್ದುದಾಗಿಯೂ ಅವರು ಹೇಳಿಕೆ ನೀಡಿದರು. ಈ ವಾರ್ತೆ ಟಿ. ವಿ., ರೇಡಿಯೋ ಮತ್ತು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅದರೊಂದಿಗೆಯೇ ವಿರೋಧಿಗಳ ಭಯಂಕರ ಗೂಢಾಲೋಚನೆಯು ಸಹ ನುಚ್ಚು ನೂರಾಗಿ ಹೋಯಿತಲ್ಲದೆ ಸಜ್ಜುಗೊಳಿಸಲಾಗಿದ್ದ ಸಕಲ ಷಡ್ಯಂತ್ರಗಳೂ ಬುಡ ಮೇಲಾದವು. ಇದು ಮುಬಾಹಲದ ಫಲವಾಗಿ ಪ್ರಕಟವಾದ ಅತಿ ಮಹತ್ವಪೂರ್ಣವಾದ ಒಂದು ಅನುಗ್ರಹ ಸೂಚನೆಯಾಗಿದೆ.

ಎರಡನೆಯದು, ಮುಬಾಹಲದ ಪ್ರಧಾನ ಲಕ್ಷ್ಯವಾಗಿದ್ದ ಪಾಕ್ ಅಧ್ಯಕ್ಷ ಜ। ಜಿಯಾವುಲ್‌ಹಕ್‌ರ ಅಕಾಲ ಮರಣ ಮತ್ತು ತದನಂತರದ ಸಂಭವಗಳು. ಜನರಲ್ ಜಿಯಾರ ವಿನಾಶದ ಕುರಿತು ಹ॥ ಖಲೀಫ ಅವರು ಸ್ಪಷ್ಟವಾದ ಮುನ್ನೆಚ್ಚರಿಕೆ ನೀಡಿದ್ದರು. 1-7-88ರಂದು ನೀಡಿದ ಶುಕ್ರವಾರದ ಖುತ್‌ಬದಲ್ಲಿ ಅವರು ಈ ರೀತಿ ಹೇಳಿದರು:

"........ಪಾಕಿಸ್ಥಾನದ ಅಧ್ಯಕ್ಷರ ಕುರಿತು ಹೇಳುವುದಾದರೆ, ನಾವು ಪ್ರತೀಕ್ಷೆಯಲ್ಲಿದ್ದೇವೆ – ನೋಡೋಣ, ಅಲ್ಲಾಹನ ವಿಧಿ ಅದೇನು ಪ್ರಕಟಿಸುತ್ತದೆ ಎಂದು.....ಆದರೆ, ಅವರು ಮುಬಾಹಲದ ಪಂಥಾಹ್ವಾನವನ್ನು ಸ್ವೀಕರಿಸಿದರೂ ಸ್ವೀಕರಿಸದೆ ಇದ್ದರೂ ಎಲ್ಲಾ ವಿರೋಧಿ ನೇತಾರರ ಮುಖಂಡರಾಗಿರುವುದರಿಂದ ಎಲ್ಲರಿಗಿಂತಲೂ ಹೆಚ್ಚಿನ ಪಾಪದ ಭಾರ ಆ ಒಬ್ಬ ವ್ಯಕ್ತಿಯ ಮೇಲೆ ನಿಕ್ಷಿಪ್ತವಾಗುತ್ತದೆ. ಅವರು ನಿರಪರಾಧಿಗಳಾದ ಅಹ್ಮದೀಯರ ಮೇಲೆ ದೌರ್ಜನ್ಯವೆಸಗಿದ್ದಾರೆ. ದೌರ್ಜನ್ಯದ ಹಿಂದೆ ಬಿದ್ದು ನಿಗಾ ಇಟ್ಟು ನೋಡುತ್ತಾರೆ – ತಾನು ಆಜ್ಞೆ ಮಾಡಿದ ಹಿಂಸಾಚಾರಗಳಿಗೆ ಅಹ್ಮದೀಯರನ್ನು ಗುರಿಪಡಿಸಲಾಗುತ್ತಿದೆಯೋ ಇಲ್ಲವೋ ಎಂದು. ಓರ್ವ ನಿರಪರಾಧಿ ಅಹ್ಮದಿಯು ಯಾವ ರೀತಿಯಲ್ಲಿ ಹಿಂಸೆಗೆ ಗುರಿಯಾಗಿ ಸಂಕಟಪಡುತ್ತಿದ್ದಾನೆಂದು ಅವರು ಕುತೂಹಲದಿಂದ ವೀಕ್ಷಿಸುತ್ತಿರುತ್ತಾರೆ. ಅದರ ಬಗ್ಗೆ ವರದಿಗಳು ತಲುಪಿದ ಹೊರತು ಆ ಮನುಷ್ಯನಿಗೆ ಸಂತೃಪ್ತಿ ಉಂಟಾಗುವುದಿಲ್ಲ. ಆದುದರಿಂದ ಇಂತಹ ವ್ಯಕ್ತಿಯು ಮುಬಾಹಲವನ್ನು ಬಹಿರಂಗವಾಗಿ ಸ್ವೀಕರಿಸಬೇಕಾದ ಅಗತ್ಯ ಇರುವುದಿಲ್ಲ. ಅವರು ತನ್ನ ದೌರ್ಜನ್ಯ ಮತ್ತು ಅನ್ಯಾಯದ ಹಾದಿಯಲ್ಲಿ ಮುಂದುವರಿಯುತ್ತಿರುವುದೇ ಮುಬಾಹಲವನ್ನು ಸ್ವೀಕರಿಸಿದ್ದಾರೆಂಬುದಕ್ಕೆ ಪುರಾವೆಯಾಗಿದೆ... ಆದುದರಿಂದ ಈ ಮನುಷ್ಯನಿಗೆ ಅಲ್ಲಾಹನನ್ನು ಎದುರಿಸಲು ಹಾಗೂ ನ್ಯಾಯದ ಕೊಲೆಮಾಡಲು ಎಷ್ಟರ ಮಟ್ಟಿಗೆ ಸಾಮರ್ಥ್ಯವಿದೆ ಎಂಬುದನ್ನು ಕಾಲವೇ ನಿರ್ಣಯಿಸುವುದು." (ಖುತ್‌ಬ ಜುಮುಅ 1-7-88)

ನಂತರ 12-8-88ರ ಖುತ್‌ಬದಲ್ಲಿ ಖಲೀಫ ಅವರು ಈ ರೀತಿ ಹೇಳಿದರು :

"ಅವರು ತನ್ನ ಹಿಂಸಾತ್ಮಕ ವರ್ತನೆಯಿಂದ ಹಿಮ್ಮೆಟ್ಟದೆ ಇರುವ ಕಾರಣ ಖಂಡಿತವಾಗಿಯೂ ಅಲ್ಲಾಹನ ವಿಧಿಯು ಅವರನ್ನು ಹಿಡಿಯಲಿದೆ. ನಿಶ್ಚಯವಾಗಿಯೂ ಅವರ ಮೇಲೆ ಶಿಕ್ಷೆ ಬಂದೆರಗಲಿದೆ."

ಆ ನಂತರ ಏನಾಯಿತು ಎಂಬುದನ್ನು ಲೋಕವು ಕಂಡಿದೆ. 1988ನೇ ಆಗಸ್ಟ್ 17ರಂದು ಈ ಅಭಿನವ ಫಿರ್‌ಔನ್ ತನ್ನ 28 ಸೇನಾ ನಾಯಕರೊಂದಿಗೆ, ಅಮೇರಿಕಾದ ಅಂಬಾಸಿಡರ್ 'ಹಾಮಾನ್' ಸಮೇತ ಛಿದ್ರ ಛಿದ್ರವಾಗಿ ತುಂಡರಿಸಲ್ಪಟ್ಟುದನ್ನು ಜನಕೋಟಿಗಳು ಟಿ. ವಿ. ಮೂಲಕ ದರ್ಶಿಸಿದರು. ಅವರ ತಥಾ ಕಥಿತ ಸ್ಮಾರಕಗಳು ಕೂಡ ಉಳಿಯಲಾರದ ಸ್ಥಿತಿಯಲ್ಲಿ ದೇವರ ಭಯಂಕರವಾದ ಶಿಕ್ಷೆಗೆ ಅವರು ಗುರಿಯಾದರು.

ಜನರಲ್ ಜಿಯಾ ಈ ರೀತಿ ಸರ್ವನಾಶ ಹೊಂದುವ ಮೊದಲೇ ಅಹ್ಮದಿಯಾ ಜಮಾಅತಿನ ಇಮಾಮರು ಅವರಿಗೆ ಮುನ್ನೆಚ್ಚರಿಕೆ ನೀಡಿ ಭಯಂಕರವಾದ ಶಿಕ್ಷೆಯ ಕುರಿತು ಭವಿಷ್ಯ ನುಡಿದಿದ್ದರೆಂಬುದು ಲೋಕವು ಸಮ್ಮತಿಸುವ ಒಂದು ಸಂಗತಿಯಾಗಿದೆ. ಮೌದೂದಿಗಳ ಮಲಯಾಳಂ ದಿನಪತ್ರಿಕೆ "ಮಾಧ್ಯಮಂ"ನಲ್ಲಿ ಈ ಕುರಿತು ಪ್ರಕಟವಾದ ಒಂದು ವಾರ್ತೆ ಈ ರೀತಿಯಿದೆ:

"ಕರಾಚಿ: ಅಧ್ಯಕ್ಷ ಜಿಯಾಉಲ್ ಹಕ್ ಅವರು ವಿಮಾನ ದುರ್ಘಟನೆಯಲ್ಲಿ ಸಾಯುವ ಕೆಲವೇ ದಿನಗಳಿಗೆ ಮೊದಲು ಅವರ ಹೆಸರೆತ್ತಿ ಹೇಳುತ್ತಾ ಅತಿ ಭಯಾನಕ ಭವಿಷ್ಯದ ಕುರಿತು ಮುನ್ನೆಚರಿಕೆ ನೀಡಿದ ಕಾದಿಯಾನಿ ನೇತಾರ ಮಿರ್ಝಾ ತಾಹಿರ್ ಅಹ್ಮದ್ ಮಾಡಿದ ಭಾಷಣವನ್ನು ಸಹ ದುರಂತದ ಕುರಿತು ತನಿಖೆಯಲ್ಲಿ ಒಳಪಡಿಸಬೇಕೆಂದು ಜಾಗತಿಕ ಪ್ರವಾದಿತ್ವ ಪರಿಸಮಾಪ್ತಿ ಮಿಶನರಿ ಮೌಲಾನಾ ಮನ್ಸೂರ್ ಅಹ್ಮದ್ ಒತ್ತಾಯಿಸಿದ್ದಾರೆ"

(ಮಾಧ್ಯಮಂ 25-9-88)

ಆದರೆ, ಎಷ್ಟು ಸ್ಪಷ್ಟವಾದ ದೃಷ್ಟಾಂತಗಳೂ ಸೂಚಕ ಕಾರ್ಯಗಳೂ ಪ್ರಕಟವಾದರೂ ಕೂಡ ಬಹು ಸಂಖ್ಯಾತ ಜನರು ವಿಶ್ವಾಸ ಹೊಂದಲಾರರು ಎಂಬ ಪವಿತ್ರ ಖುರ್‌ಆನಿನ ಪ್ರತಿಪಾದನೆಯು ಇಲ್ಲಿಯೂ ಸತ್ಯವಾಗಿ ಪರಿಣಮಿಸುವುದನ್ನು ನಾವು ಕಾಣುತ್ತೇವೆ. ಫಿರ್‌ಔನನ ಅಂತ್ಯದ ಕುರಿತು ಪ್ರಸ್ತಾಪಿಸಿದ ಸ್ಥಳದಲ್ಲಿ ಅಲ್ಲಾಹು ಹೇಳುತ್ತಾನೆ: "ಜನರಲ್ಲಿ ಹೆಚ್ಚಿನವರೂ ನಮ್ಮ ದೃಷ್ಟಾಂತಗಳ ಕುರಿತು ಅಶ್ರದ್ಧರೇ ಆಗಿರುತ್ತಾರೆ." (10:93)

ಮೇಲೆ ವಿವರಿಸಿದ ಎರಡು ದೃಷ್ಟಾಂತಗಳು ಮುಬಾಹಲ ಮೂಲಕ ಪ್ರತ್ಯಕ್ಷಗೊಂಡ ಅತಿ ಮಹತ್ತರವಾದ ವಿಜಯವಾಗಿದೆ. 'ಸತ್ತಿದ್ದ' ಓರ್ವ ವಿರೋಧಿಯನ್ನು ಬದುಕಿಸಿದ ದೃಷ್ಟಾಂತ ಒಂದಾದರೆ, ಫಿರ್‌ಔನನಂತೆ ಮರಣವನ್ನೇ ಮರೆತು ರಾರಾಜಿಸುತ್ತಿದ್ದ ಸರ್ವಾಧಿಕಾರಿಯಾದ ಮತ್ತೋರ್ವ ವಿರೋಧಿಯನ್ನು ನಾಶಪಡಿಸಿ ತೋರಿಸಿದ ದೃಷ್ಟಾಂತವು ಇನ್ನೊಂದಾಗಿತ್ತು. ಜಾಗತಿಕವಾಗಿ ಘೋಷಿಸಲಾದ ಮುಬಾಹಲದ ಕಾಲಾವಧಿಯೊಳಗೆ ಮತ್ತು ಅದರ ನಂತರ ಇನ್ನೂ ಅನೇಕಾನೇಕ ದೈವಿಕ ಅನುಗ್ರಹಗಳೂ ದೃಷ್ಟಾಂತಗಳೂ ಅಹ್ಮದಿಯಾ ಜಮಾಅತಿನ ಪರವಾಗಿ ಪ್ರಕಟವಾಗಿವೆ. ತಮಗೆ ಲಭಿಸುತ್ತಿರುವ ದೈವಿಕ ಅನುಗ್ರಹಗಳನ್ನೂ ವಿಜಯಲಬ್ಧಿಯನ್ನೂ ಸ್ವಯಂ ಅನುಭವಿಸುತ್ತಿರುವ ಅಹ್ಮದೀಯರ ಕುರಿತು "ಯಾವುದೇ ದೃಷ್ಟಾಂತ ಗೋಚರಿಸದಿರುವುದರಿಂದ ಕಾದಿಯಾನಿ ಪಾಳಯದಲ್ಲಿ ನಿರಾಶೆ ಹುಟ್ಟಿದೆ" (ಸನ್ಮಾರ್ಗ: ಫೆಬ್ರವರಿ 18–24, 1990) ಎಂಬುದಾಗಿ ಯಾವುದೇ ಸಂಕೋಚವಿಲ್ಲದೆ ಹೇಳಲು ಮುಂದಾದ ಮೌದೂದಿಗಳ ಸಾಹಸ ಅಪಾರವೇ ಸರಿ.

ಮುಬಾಹಲದಲ್ಲಿ ಭಾಗವಹಿಸುವ ಎಲ್ಲಾ ಎದುರಾಳಿಗಳೂ ದೈಹಿಕವಾಗಿ ನಾಶವಾಗುವರೆಂಬುದು ಮುಬಾಹಲದ ನಿಬಂಧನೆಯಲ್ಲ. ತನ್ನ ಎಲ್ಲಾ ಎದುರಾಳಿಗಳೂ ನಾಶವಾಗುವರೆಂದು ಅಹ್ಮದಿಯಾ ಖಲೀಫ ಎಂದೂ ಹೇಳಿರಲಿಲ್ಲ. ಹೇಳಿದ್ದು ಒಬ್ಬ ಎದುರಾಳಿಯ ಕುರಿತು ಮಾತ್ರ. ಜನರಲ್ ಜಿಯಾ ಚಿಂದಿ ಚಿಂದಿಯಾಗಿ ನಾಶವಾಗುವರೆಂದೂ ಅವರ ಸ್ಮಾರಕಗಳು ಸಹ ಬಾಕಿ ಉಳಿಯಲಾರವೆಂದೂ ಖಲೀಫ ಸ್ಪಷ್ಟವಾಗಿ ಭವಿಷ್ಯ ನುಡಿದಿದ್ದರು. ಅದು ಹಾಗೆಯೇ ಸಂಭವಿಸಿದೆ. ತನ್ನ ಎಲ್ಲಾ ಎದುರಾಳಿಗಳೂ ಮರಣ ಹೊಂದುವರೆಂಬುದಾಗಿ ಖಲೀಫ ಹೇಳಿರಲಿಲ್ಲ. "ಮುಬಾಹಲದಲ್ಲಿ ಭಾಗವಹಿಸುವ ಎದುರಾಳಿಗಳು ನಾಶವಾಗುವ

ರೆಂದು ಅಲ್ಲಾಹನಿಂದ ವಹ್ಯ್ ಲಭಿಸಿದೆಯೆನ್ನುವ ಮಿರ್ಝಾ ತಾಹಿರ್‌ರ ವಾದ ಸುಳ್ಳು" ಎಂದು 'ಸನ್ಮಾರ್ಗ' ಹೇಳುತ್ತದೆ. ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ತನ್ನ ಮುಬಾಹಲ ಪಂಥಾಹ್ವಾನದ ಘೋಷಣೆಯಲ್ಲಾಗಲೀ ಅದರ ನಂತರವಾಗಲೀ ತನ್ನ ಎಲ್ಲಾ ಎದುರಾಳಿಗಳ ಮರಣವೇ ಮುಬಾಹಲದ ದೃಷ್ಟಾಂತವೆಂದು ಹೇಳಲೇ ಇಲ್ಲ. ಆ ರೀತಿ ತನಗೆ ವಹ್ಯ್ ಲಭಿಸಿದೆಯೆಂದು ಸಹ ಅವರು ಹೇಳಲಿಲ್ಲ. 'ಸನ್ಮಾರ್ಗ'ದವರು ಗೋಬೆಲ್ಸ್ ಸಿದ್ಧಾಂತವನ್ನು ಜನರೆಡೆಯಲ್ಲಿ ಪ್ರಚಾರಮಾಡುತ್ತಿದ್ದಾರೆ. ಅಸ್ಲಂ ಖುರೈಶಿ ಎಂಬ ವ್ಯಕ್ತಿ ನಾಶವಾಗದೆ ಬದುಕಿ ಉಳಿದಿದ್ದಾರೆಂದು ಸಾಬೀತಾದುದು ತನ್ನ ಮುಬಾಹಲ ಪಂಥಾಹ್ವಾನದ ಮೊದಲನೆಯ ದೃಷ್ಟಾಂತವೆಂದು ಹ॥ ಖಲೀಫ ಘೋಷಿಸಿದ್ದರು. ಹಾಗೆ ಮುಬಾಹಲದ ಪ್ರಥಮ ದೃಷ್ಟಾಂತವೇ ಗೋಚರವಾದುದು ಮರಣದ ರೂಪದಲ್ಲಾಗಿರಲಿಲ್ಲ. 'ಮೃತಪಟ್ಟ' ಶತ್ರುವೊಬ್ಬ 'ಜೀವಂತ'ವಾಗುವುದರ ಮೂಲಕವಾಗಿತ್ತು.

'ಸನ್ಮಾರ್ಗ'ದ ಲೇಖನದಲ್ಲಿ ಅಹ್ಮದಿಯಾ ಖಲೀಫರಿಗೆ 'ವಹ್ಯ್' ಲಭಿಸುತ್ತಿದೆ ಎಂಬುದನ್ನು ಬಹಳ ಹಗುರವಾಗಿ, ಟೀಕಾಸ್ವರದಲ್ಲಿ ಪ್ರಸ್ತಾಪಿಸಲಾಗಿರುವುದು ಕಂಡು ಬರುತ್ತದೆ. ಅಹ್ಮದೀಯರು ಬೇರೆಯೇ ಒಂದು ದೇವರಲ್ಲಿ ನಂಬಿಕೆಯಿಡುವವರು ಎಂದು ವಾಚಕರು ತಪ್ಪಾಗಿ ತಿಳಿಯುವಂತೆಯೂ 'ಸನ್ಮಾರ್ಗ'ದ ಲೇಖನದಲ್ಲಿ ಕುತಂತ್ರ ಹೂಡಲಾಗಿರುವುದು ಎದ್ದು ಕಾಣುತ್ತದೆ. ಆದರೆ ಪವಿತ್ರ ಖುರ್‌ಆನನ್ನು ಅವತೀರ್ಣ ಗೊಳಿಸಿದ ಅದೇ ಅಲ್ಲಾಹನೇ ಅಹ್ಮದೀಯರಿಗೆ ದೇವನಾಗಿರುವನು. ಆ ಅಲ್ಲಾಹನಿಗೆ "ಮುತಕಲ್ಲಿಂ" (ಮಾತನಾಡುವವನು) ಎಂಬ ಒಂದು ಶಿಫತ್ (ಗುಣ ನಾಮ) ಕೂಡಾ ಇರುವುದಾಗಿ ಪವಿತ್ರ ಖುರ್‌ಆನ್ ಕಲಿಸುತ್ತದೆ. ಅಲ್ಲಾಹನು ಆ ವಿಶಿಷ್ಟ ಗುಣವನ್ನು ಈಗಲೂ ಹೊಂದಿದವನಾಗಿದ್ದಾನೆಂಬುದು ನಮ್ಮ ವಿಶ್ವಾಸವಾಗಿದೆ. ಆದರೆ, ಆ ಗುಣ ನಷ್ಟಗೊಂಡಿದೆಯೆಂದು ನೀವು ನಂಬುತ್ತೀರಿ. ಅಲ್ಲಾಹು ಇಚ್ಛಿಸುವ ಅವನ ಪರಿಶುದ್ಧ ಸತ್ಯವಿಶ್ವಾಸಿಗಳಿಗೆ ದಿವ್ಯಬೋಧನೆಗಳು, ವಹ್ಯ್, ಸುವಾರ್ತೆಗಳು ಲಭಿಸುವುವೆಂದು ನಾವು ನಂಬುತ್ತೇವೆ. ಅದು ಅಲ್ಲಾಹನ "ಮುತಕಲ್ಲಿಂ" ಎಂಬ ಗುಣನಾಮದ ಕಾರ್ಯರೂಪವಾಗಿದೆ. ಅಲ್ಲಾಹನ ಈ ಗುಣ ಅನಂತವಾದುದು. ಅಲ್ಲಾಹನು ಮೊದಲಿನಂತೆ ಈಗಲೂ ಇನ್ನು ಮುಂದೆಯೂ ತನ್ನ ದಾಸರಲ್ಲಿ ತಾನಿಚ್ಛಿಸುವವರೊಡನೆ ಮಾತನಾಡುವನು. ಅಲ್ಲಾಹನ ಔಲಿಯಾಗಳ ಕುರಿತು ಪವಿತ್ರ ಖುರ್‌ಆನ್‌ನಲ್ಲಿ ಈ ರೀತಿ ಹೇಳಲಾಗಿದೆ:

لهم البشرى فى الحيٰوة الدنيا و فى الاخرة
لا تبديل لكلمت الله ذلك هو الفوز العظيم۝

"ಲೌಕಿಕ ಜೀವನದಲ್ಲಿಯೂ ಪರಲೋಕದಲ್ಲಿಯೂ ಅವರಿಗೆ ಶುಭವಾರ್ತೆಯಿದೆ – ಅಲ್ಲಾಹನ ವಚನಗಳು ಬದಲಾಗುವಂತಿಲ್ಲ; ಇದು ಅತಿದೊಡ್ಡ ವಿಜಯವಾಗಿದೆ" (10 : 65).

ಅದೂ ಅಲ್ಲದೆ, ಹ॥ಮೂಸಾ ಪ್ರವಾದಿಯ ಮಾತೆಯವರಿಗೆ ಒಂದು ಸಂದಿಗ್ಧ ಪರಿಸ್ಥಿತಿಯನ್ನು ಅಲ್ಲಾಹನು ವಹ್ಯ್ ಮುಖಾಂತರ ನಿವಾರಿಸಿಕೊಟ್ಟದ್ದಾಗಿ ಪವಿತ್ರ ಖುರ್‌ಆನ್ ಹೇಳುತ್ತದೆ. "ಮೂಸಾರ ಮಾತೆಗೆ ನಾವು ವಹ್ಯ್ ನೀಡಿದೆವು" ಎಂಬುದಾಗಿ ಅದನ್ನು ಪವಿತ್ರ ಖುರ್‌ಆನ್‌ನಲ್ಲಿ ಪ್ರಸ್ತಾಪಿಸಲಾಗಿದೆ (28 : 8). ಮಾತ್ರವಲ್ಲ, ಹಝ್ರತ್ ಮರ್‌ಯಂ (ರ)ಅವರಿಗೆ ಮಲಕ್‌ಗಳ ಮೂಲಕ ಅತಿ ಪ್ರಧಾನವಾದ ಸಂಗತಿಗಳನ್ನು ಅಲ್ಲಾಹನು ತಿಳಿಸಿಕೊಟ್ಟದ್ದಾಗಿಯೂ ಖುರ್‌ಆನ್ ಕಲಿಸುತ್ತದೆ (ಆಲುಇಂರಾನ್, ಮರ್‌ಯಂ).

ಹೀಗೆ, ಪ್ರವಾದಿಗಳಲ್ಲದವರಿಗೂ, ಸ್ತ್ರೀಯರಿಗೂ ಕೂಡಾ ವಹ್ಯ್ ಲಭಿಸುವುದೆಂದು ಪವಿತ್ರ ಖುರ್‌ಆನಿನ ಬೋಧನೆಗಳಿಂದ ತಿಳಿದು ಬರುತ್ತದೆ. ಇಸ್ರಾಈಲ್ ಸಮುದಾಯದ ಪ್ರವಾದಿಗಳಲ್ಲದ ಕೆಲವು ಮಹಾತ್ಮರುಗಳಿಗೆ ಸಹ ದೇವವಾಣಿ ಲಭಿಸುತ್ತಿತ್ತೆಂದು ಹದೀಸ್‌ಗಳಿಂದ ಸ್ಪಷ್ಟವಾಗುತ್ತದೆ. ಅಲ್ಲಾಹನ ಔಲಿಯಾಗಳಿಗೆ ದೇವವಾಣಿ ಲಭಿಸುತ್ತದೆ ಎಂಬುದಾಗಿ ಪೂರ್ವಿಕ ಮುಸ್ಲಿಂ ಪಂಡಿತರು ಹೇಳಿರುತ್ತಾರೆ. ಆ ರೀತಿಯ ಸಾವಿರಾರು ಪುಣ್ಯಾತ್ಮರು ಈ ಅನುಗ್ರಹೀತ ಸಮುದಾಯದಲ್ಲಿ ಮೊದಲು ಆಗಿಹೋಗಿದ್ದಾರೆ. ಹಾಗಿರುವಾಗ, ಇಮಾಂ ಮಹ್‌ದಿಯವರಿಗೂ ಅವರ ಪುಣ್ಯಾತ್ಮರಾದ ಖಲೀಫರುಗಳಿಗೂ ವಹ್ಯ್ ಲಭಿಸುವುದರಲ್ಲಿ 'ಸನ್ಮಾರ್ಗ'ದವರು ಆಶ್ಚರ್ಯಪಡಬೇಕಾದುದು ಏನಿದೆ? ಆ ಬಗ್ಗೆ ಅವರು ಅಸೂಯೆ ಪಡುವುದೇಕೆ? 'ಸನ್ಮಾರ್ಗ'ದವರಿಗೂ ಅವರ ನಾಯಕರಿಗೂ ಅದು ಲಭಿಸುವುದಿಲ್ಲವೆಂಬ ಕಾರಣಕ್ಕಾಗಿರಬಹುದೇ?

## ಮೌಲಾನಾ ಚಿನಿಯೋಟ್ಟಿ

'ಸನ್ಮಾರ್ಗ'ದ ಲೇಖನದಲ್ಲಿ ಮೌಲಾನಾ ಮನ್ಸೂರ್ ಅಹ್ಮದ್ ಚಿನಿಯೋಟ್ಟಿಯ ಕುರಿತು ಸಹ ಕೆಲವು ಸಂಗತಿಗಳನ್ನು ಬರೆಯಲಾಗಿದೆ. ಒಂದೆಡೆ ಲೇಖಕರು ಹೇಳುತ್ತಾರೆ: "1988ರ ನವೆಂಬರ್‌ನಲ್ಲಿ ಖಲೀಫರು ಲಂಡನ್‌ನಲ್ಲಿ ಒಂದು ಘೋಷಣೆ ಹೊರಡಿಸಿದರು. ಮೌಲಾನಾ ಮನ್ಸೂರ್ ಅಹ್ಮದ್ ಚಿನಿಯೂಟ್ಟಿಯವರು 1989ರ ಸೆಪ್ಟೆಂಬರ್ 15ಕ್ಕೆ ಮುಂಚಿತವಾಗಿ ದೇವಶಾಪದಿಂದ ಮರಣ ಹೊಂದುವರು!! ಮೌಲಾನಾ ಮನ್ಸೂರ್‌ರು ಗಡುವಿನ ಬಳಿಕವೂ ಆರೋಗ್ಯದಿಂದ ಜೀವಿಸುತ್ತಿದ್ದಾರೆ. ಮಾತ್ರವಲ್ಲ, ಸಪ್ಟೆಂಬರ್ 15 ದಾಟಿದರೂ ಖಲೀಫರ ಭವಿಷ್ಯ ನಿಜವಾಗಲಿಲ್ಲ." ('ಸನ್ಮಾರ್ಗ' ಸಂಚಿಕೆ 45).

ಇದು ಅಪ್ಪಟ ಸುಳ್ಳು ಮತ್ತು ಮಿಥ್ಯಾರೋಪವಾಗಿದೆ. ಇದಕ್ಕೆ ಮೊತ್ತ ಮೊದಲಾಗಿ ನಾವು ನೀಡುವ ಉತ್ತರ: "ಲಅ್‌ನತುಲ್ಲಾಹಿ ಅಲಲ್ ಕಾದಿಬೀನ್" ಎಂದು. ಮೌಲಾನಾ ಚಿನಿಯೋಟ್ಟಿ 1989ರ ಸೆಪ್ಟೆಂಬರ್ 15ರೊಳಗೆ ಮರಣ ಹೊಂದುವರೆಂದು ಖಲೀಫರು ಹೇಳಿರಲೇ ಇಲ್ಲ. ಹಾಗೆ ಹೇಳಿದ್ದಾಗಿ ರುಜುವಾತು ಪಡಿಸಲು ಇವರಿಂದ ಯಾವತ್ತೂ ಸಾಧ್ಯವಿಲ್ಲ. ಬದಲಾಗಿ, ಚಿನಿಯೋಟ್ಟಿ ಮೌಲಾನಾರು ಅಹ್ಮದಿಯಾ ಜಮಾಅತ್ ಮತ್ತು ಅಹ್ಮದಿಯಾ ಖಲೀಫರ ಕುರಿತು ನಾಶದ ಭವಿಷ್ಯವಾಣಿ ನುಡಿದಿದ್ದರು. ಅವರ ಒಂದು ಹೇಳಿಕೆ ಲಂಡನ್‌ನಿಂದ ಹೊರಡುವ 'ಜಂಗ್' ಪತ್ರಿಕೆಯಲ್ಲಿ ಈ ರೀತಿ ಪ್ರಕಟವಾಯಿತು: "ಮುಂದಿನ ವರ್ಷ ಸೆಪ್ಟೆಂಬರ್ 15ರ ವರೆಗೆ ನಾನು ಬದುಕಿರುವೆನು. ಆದರೆ, ಖಾದಿಯಾನಿ ಜಮಾಅತ್ ಬದುಕಿರಲಾರದು." ('ಜಂಗ್'–ಲಂಡನ್ 21-10-88)

ಅದಕ್ಕೆ ಪ್ರತಿಕ್ರಿಯಿಸುತ್ತಾ ಅಹ್ಮದಿಯಾ ಖಲೀಫರು ಈ ರೀತಿ ಹೇಳಿಕೆ ನೀಡಿದರು: "ಮನ್ಸೂರ್ ಅಹ್ಮದ್ ಚಿನಿಯೋಟ್ಟಿ ಬದುಕಿ ಉಳಿದರೆ, ಅಹ್ಮದಿಯಾ ಜಮಾಅತ್ ನಾಶ ಹೊಂದಿದ ಒಂದೇ ಒಂದು ರಾಜ್ಯವನ್ನಾದರೂ ಕಾಣಲು ಅವರಿಗೆ ಸಾಧ್ಯವಾಗಲಾರದು. ಅಹ್ಮದಿಯ್ಯತ್ ಜೀವಂತ ಇರುವುದು ಮಾತ್ರವಲ್ಲ ಪೂರ್ವೋಪರಿ ತೇಜಸ್ಸಿನಿಂದಲೂ ನೂತನ ಪ್ರಭಾವದಿಂದೊಡಗೂಡಿಯೂ ಅನೇಕ ರಾಜ್ಯಗಳಲ್ಲಿ ಅದು ಹೊಸತಾಗಿ ಪ್ರವೇಶಿಸಿರುವುದನ್ನು ಅವರು ಕಾಣುವರು." ಅಹ್ಮದಿಯಾ ಖಲೀಫರ ಈ ಹೇಳಿಕೆಯಿಂದ ಪರಿಭ್ರಾಂತನಾದ ಮೌಲಾನಾರು ನೀಡಿದ ಸ್ಪಷ್ಟೀಕರಣವನ್ನು 'ಜಂಗ್' ಪತ್ರಿಕೆ ಈ ರೀತಿ ಪ್ರಕಟಿಸಿತು: "1989 ಸಪ್ಟೆಂಬರ್ 15ರೊಳಗೆ ಮಿರ್ಝಾ ತಾಹಿರ್ ಅಹ್ಮದ್ ನಾಶವಾಗುವರೆಂದು ಮಾತ್ರ ಹೇಳಿದ್ದೆನೇ ವಿನಾ ಪೂರಾ ಜಮಾಅತ್ ನಾಶಹೊಂದುವುದಾಗಿ ತಾನು ಹೇಳಿರಲಿಲ್ಲವೆಂದು ಮನ್ಸೂರ್ ಅಹ್ಮದ್ ಚಿನಿಯೋಟ್ಟಿ ಸ್ಪಷ್ಟಪಡಿಸಿದ್ದಾರೆ." ('ಜಂಗ್'–ಲಾಹೋರ್ 30-1-89).

ಆದರೆ, ಈಗ ಇದಕ್ಕೆಲ್ಲಾ ತೀರಾ ವಿರುದ್ಧವಾಗಿ, ಹ। ಖಲೀಫರು ಚಿನಿಯೋಟ್ಟಿ ಮೌಲಾನಾರ ಮರಣದ ಕುರಿತು ಭವಿಷ್ಯ ನುಡಿದಿದ್ದರೆಂದು ಇವರು ಪ್ರಚಾರ ಮಾಡುತ್ತಿದ್ದಾರೆ. ಇವರ ಸುಳ್ಳುಗಳಿಗೆ ಕೊನೆ ಎಂದು?

ಹೌದು, ಜೀವನದ ಪ್ರತಿಯೊಂದು ಹೆಜ್ಜೆಯಲ್ಲೂ ಸುಳ್ಳನ್ನೇ ಹೇಳುತ್ತಾ ತಾವು ನಿಜವಾಗಿಯೂ ದೇವಶಾಪಕ್ಕೆ ಅರ್ಹರೆಂದು ಇವರು ಸಾಬೀತುಪಡಿಸುತ್ತಿದ್ದಾರೆ.

ಓರ್ವ ಅನುಗ್ರಹೀತ ವ್ಯಕ್ತಿಯೆಂದೂ ಜಾಗತಿಕ ಮಟ್ಟದಲ್ಲಿ ಖ್ಯಾತಿ ಮತ್ತು ಗೌರವವನ್ನು ಪಡೆದವರೆಂದೂ 'ಸನ್ಮಾರ್ಗ'ದ ಲೇಖಕರು ಬಣ್ಣಿಸಿದ 'ವೀರನಾಯಕ' ಮೌಲಾನಾ ಮನ್ಸೂರ್ ಅಹ್ಮದ್ ಚಿನಿಯೋಟ್ಟಿಯ ಕುರಿತು ಪಾಕಿಸ್ತಾನದ ಮತ್ತೋರ್ವ ಮತಪಂಡಿತ ಮೌಲಾನಾ ಅಲ್ಲಾಯಾರ್ ಅರ್ಷದ್ ಸಾಹೇಬರು ನೀಡಿದ ಒಂದು ಹೇಳಿಕೆಯನ್ನು ಇಲ್ಲಿ ಉದ್ಧರಿಸ ಬಯಸುತ್ತೇನೆ:

"ಮೌಲಾನಾ ಮನ್ಸೂರ್ ಅಹ್ಮದ್ ಚಿನಿಯೋಟ್ಟಿ ಖತಮುನ್ನುಬುವ್ವತ್‌ನ ಹೆಸರನ್ನು ದುರ್ವಿನಿಯೋಗ ಮಾಡಿಕೊಂಡು ಜನರಿಂದ ಓಟು ಪಡೆದರು. ಅವರು ಪಂಜಾಬ್ ಅಸೆಂಬ್ಲಿಯಲ್ಲಿ ಮಾಡಿದ ನೀಚವಾದ ಭಾಷಣವು ಸಮಸ್ತ ಮುಸ್ಲಿಮ್ ಸಮುದಾಯಕ್ಕೆ ಅವಹೇಳನಕಾರಿಯಾಗಿತ್ತು. ಈ ವ್ಯಕ್ತಿ ಧರ್ಮದ ಹೆಸರನ್ನು ಹೇಳಿ ಸಾಮಾನ್ಯ ಜನರನ್ನು ವಂಚಿಸುತ್ತಿದ್ದಾರೆ. ಫತ್ವ ನೀಡುವುದು ಮಾತ್ರ ಈ ಮನುಷ್ಯನ ಕೆಲಸವಾಗಿದೆ. ಸಮುದಾಯಯದ ಮೇಲೆ ನಡೆಯುತ್ತಿರುವ ಈ ರೀತಿಯ ಮೋಸ-ವಂಚನೆಗಳಿಗೆ ನಾವು ಆಸ್ಪದ ನೀಡಲಾರೆವು. ಸುಳ್ಳು ಹೇಳುವುದು ಇವರ ದೌತ್ಯವೂ ವಂಚನೆ ಇವರ ಕುಸುಬೂ ಆಗಿದೆ. ಪಂಜಾಬ್ ವಿಧಾನ ಸಭೆಯಲ್ಲಿ ಕ್ಷಮಾಯಾಚನೆ ಮಾಡಿಕೊಂಡು ಈ ಮನುಷ್ಯ ಖತಮುನ್ನಬುವ್ವತ್‌ನ ಎಲ್ಲಾ ಮುಂದಾಳುಗಳನ್ನೂ ತಲೆ ತಗ್ಗಿಸುವಂತೆ ಮಾಡಿಬಿಟ್ಟರು. ಖತಮುನ್ನುಬುವ್ವತ್‌ನ ಹೆಸರಿನಲ್ಲಿ ಜನರಿಂದ ಸಂಗ್ರಹಿಸಿದ ಹಣದಿಂದ ಇವರು ಸ್ವಂತಕ್ಕೆ ಆಸ್ತಿಯನ್ನೂ ಕಟ್ಟಡಗಳನ್ನೂ ಖರೀದಿಸುತ್ತಿದ್ದಾರೆ." ('ಮುಸಾವಾತ್'–ಲಾಹೋರ್ 4-11-88)

ಮೌದೂದಿಗಳ ವೀರ ಮುಜಾಹಿದ್, ಪ್ರವಾದಿತ್ವ ಪರಿಸಮಾಪ್ತಿ ಮಿಶನರಿ ಮೌಲಾನಾ ಮನ್ಸೂರ್ ಅಹ್ಮದ್ ಚಿನಿಯೋಟ್ಟಿಯವರ ನಿಜರೂಪವಿದು. ಇದರಿಂದಾದರೂ 'ಸನ್ಮಾರ್ಗ'ದವರ ಕಣ್ಣು ತೆರೆಯುವುದೆಂದು ಭಾವಿಸಬಹುದೇ?

## ಹಸನ್ ಮುಹ್ಮೂದ್ ಔದ

"ಮುಬಾಹಲದ ಸೋಲು – ಖಲೀಫರ ಪ್ರಧಾನ ಕಾರ್ಯದರ್ಶಿ ಸತ್ಯ ಧರ್ಮಕ್ಕೆ" ಎಂಬ ಲೇಖನದಲ್ಲಿ 'ಸನ್ಮಾರ್ಗ' ಪತ್ರಿಕೆಯು ಇನ್ನೂ ಅನೇಕ ಸುಳ್ಳುಗಳನ್ನು ಓದುಗರ ಮುಂದಿಟ್ಟಿದೆ: "ಈಗ ಕಾದಿಯಾನಿಗಳಿಗೆ ಸತ್ಯವನ್ನು ಅಂಗೀಕರಿಸಲು ತಕ್ಕುದಾದ ದೃಷ್ಟಾಂತ ಲಂಡನ್‌ನಲ್ಲಿ ಸಂಭವಿಸಿದೆ. ಇಡೀ ಮುಸ್ಲಿಮ್ ಜಗತ್ತಿಗೆ ಮುಬಾಹಲದ ಸವಾಲೊಡ್ಡಿದ ಕಾದಿಯಾನಿ ಖಲೀಫರ ಪ್ರಧಾನ ಕಾರ್ಯದರ್ಶಿಯವರು ಕಾದಿಯಾನಿಝಮನ್ನು ತೊರೆದು ಇಸ್ಲಾಂ ಸೇರಿದ್ದಾರೆ. ... ಅವರು ಖಲೀಫರ ಖಾಸಗಿ ಕಾರ್ಯದರ್ಶಿಯಾಗಿದ್ದರಲ್ಲದೇ ಬ್ರಿಟನಿನ ಸಮರ್ಥ ಕಾದಿಯಾನಿ ಪ್ರಚಾರಕರು ಮತ್ತು ಲಂಡನ್‌ನಿಂದ ಪ್ರಕಟವಾಗುವ ಕಾದಿಯಾನಿಗಳ 'ಅತ್ತಕ್ವಾ' ಎಂಬ ಅರಬೀ ಪತ್ರಿಕೆಯ ಸಂಪಾದಕರೂ ಆಗಿದ್ದರು." ('ಸನ್ಮಾರ್ಗ' ಸಂಚಿಕೆ 45).

ಆದರೆ, ಮೌದೂದಿ ಪತ್ರಿಕೆ ಹೇಳುವಂತೆ ಹಸನ್ ಔದ ಎಂಬವರು ಅಹ್ಮದಿಯಾ ಜಮಾಅತಿನ ಉನ್ನತ ಹುದ್ದೆಯಲ್ಲಿದ್ದ ವ್ಯಕ್ತಿಯಾಗಿರಲಿಲ್ಲ. ಹಝ್ರತ್ ಖಲೀಫತುಲ್ ಮಸೀಹ್‌ರವರ ಖಾಸಗಿ ಕಾರ್ಯದರ್ಶಿಯಾಗಿ ಹಸನ್ ಔದ ಒಂದು ದಿವಸವಾದರೂ ಕಾರ್ಯವೆಸಗಿರಲಿಲ್ಲ. ಜಮಾಅತಿನ ಓರ್ವ ಹುದ್ದೇದಾರನಾಗಿದ್ದ ಈ ವ್ಯಕ್ತಿಯ ಕೆಲವು ಕುತಂತ್ರಗಳೂ ವಂಚನೆಯ ಪ್ರಕರಣಗಳೂ ಬೆಳಕಿಗೆ ಬಂದಾಗ ಆ ಕುರಿತು ವಿಚಾರಣೆ ನಡೆಸಲಾಗಿ ತಪ್ಪಿತಸ್ಥನೆಂದು ರುಜುವಾತಾದ ನಂತರ ಜಮಾಅತಿನ ಶಿಸ್ತು ಕ್ರಮಕ್ಕೆ ಈಡಾದ ಓರ್ವ ಉದ್ಯೋಗಸ್ಥ. ವಿಚಾರಣಾ ಆಯೋಗದ ವರದಿಯ ಮೇರೆಗೆ ಅಹ್ಮದಿಯಾ ಖಲೀಫರು ಇವರನ್ನು ನೌಕರಿಯಿಂದ ತೆಗೆದು ಹಾಕಿದ್ದರಲ್ಲದೆ ಅವರ ಬೈಅತ್ (ಸದಸ್ಯತ್ವ) ಸಹ ರದ್ದುಗೊಳಿಸಿದ್ದರು. ನೌಕರಿ ಕಳೆಕೊಂಡ ಈ ವ್ಯಕ್ತಿ ಪ್ರತೀಕಾರ ದೃಷ್ಟಿಯಿಂದ ಅಹ್ಮದಿಯಾ ವಿರೋಧಿಗಳ ಪಾಳಯವನ್ನು ಸೇರಿಕೊಂಡದ್ದು ಸ್ವಾಭಾವಿಕವೇ. ಆದರೆ, 'ಸನ್ಮಾರ್ಗ' ಹೇಳುವಂತೆ ಹಸನ್ ಔದ ಅಹ್ಮದಿಯಾ ಜಮಾಅತನ್ನು ತೊರೆದು ಹೋದದ್ದಲ್ಲ; ಬದಲಾಗಿ ಅಹ್ಮದಿಯಾ ಖಲೀಫರು ಅವರನ್ನು ಜಮಾಅತಿನಿಂದ ಹೊರಹಾಕಿದ್ದು. ಅಂತಹ ಈ ವರ್ಜ್ಯ ವಸ್ತುವನ್ನು ತಲೆಮೇಲೆ ಹೇರಿಕೊಂಡು ಅಹ್ಮದಿಯಾ ವಿರೋಧಿಗಳು ವಿಜಯ ನರ್ತನಗೈಯುತ್ತಿರುವುದು ವಿಪರ್ಯಾಸವೇ ಸರಿ. ಶಿಸ್ತು ಕ್ರಮ ಕೈಗೊಳ್ಳುವ ಮೊದಲು ಅವರು ಅಹ್ಮದಿಯಾ ಖಲೀಫರಿಗೆ ಬರೆದು ಕೊಟ್ಟ ಕ್ಷಮಾಯಾಚನೆ ಪತ್ರಗಳೂ ಔದರಿಗೆ ನೀಡಲಾದ ತಾಕೀತುಗಳೂ ಎಚ್ಚರಿಕೆಗಳೂ ಹಲವು ಮೂಲಗಳಿಂದ ಅವರ ಕುರಿತು ಲಭಿಸಿದ ದೂರುಗಳೂ ಜಮಾಅತಿನ ಬಳಿ ದಾಖಲೆ ಇವೆ. ಅಹ್ಮದಿಯಾ ಇಮಾಮ್ 8-12-89ರಂದು ಈ ಕುರಿತು ನೀಡಿದ ಒಂದು ಖುತ್‌ಬ ಪ್ರಭಾಷಣದ ಕೆಲವು ಭಾಗಗಳನ್ನು ಇಲ್ಲಿ ನೀಡುತ್ತೇನೆ:

> ಹಸನ್ ಔದ ನನ್ನ ಬಲಗೈ ಆಗಿದ್ದರೆಂದೂ ಖಾಸಗಿ ಕಾರ್ಯದರ್ಶಿಯಾಗಿದ್ದರೆಂದೂ ಪ್ರಚಾರ ಮಾಡಲಾಗುತ್ತದೆ. ಆದರೆ, ಅವರು ಯಾವತ್ತೂ ನನ್ನ ಖಾಸಗಿ ಕಾರ್ಯದರ್ಶಿಯಾಗಿರಲಿಲ್ಲವೆಂಬುದು ಪೂರಾ ಜಮಾಅತಿಗೆ ಚೆನ್ನಾಗಿ ತಿಳಿದಿರುವ ಒಂದು ಸತ್ಯ ಸಂಗತಿಯಾಗಿದೆ. ಈ ರೀತಿಯ ಮಿಥ್ಯಾರೋಪಗಳೂ ಸುಳ್ಳು ಪ್ರಚಾರಗಳೂ ನಿಜವಾಗಿಯೂ ಜಮಾಅತಿನ ಈಮಾನ್ (ವಿಶ್ವಾಸ)ಅನ್ನು ದೃಢಪಡಿಸುವಂಥದ್ದಾಗಿದೆ. ಈ ಸುಳ್ಳು ಪ್ರಚಾರಗಳಿಗೆ ಯಾವ ರೀತಿಯ ಅಸ್ತಿತ್ವವೂ ಇಲ್ಲ.

1985ರಲ್ಲಿ ಪೆಲೆಸ್ತೀನ್‌ನ ಕಬಾಬೀರ್ ಎಂಬಲ್ಲಿಂದ ಅಲ್ಲಿಯ ನಮ್ಮ ಮಿಶನರಿ (ಪ್ರಚಾರಕ) ಇವರನ್ನು ಪರಿಚಯಪಡಿಸಿಕೊಂಡು ನನಗೆ ಒಂದು ಪತ್ರ ಬರೆದರು. ಇವರು ಉದ್ಯೋಗವಿಲ್ಲದೆ ಅಲೆದಾಡುತ್ತಿರುವರೆಂದೂ ಜಮಾಅತಿನ ಗೌರವಕ್ಕೆ ಕಳಂಕ ತರುತ್ತಿದ್ದಾರೆಂದೂ ಯಾರನ್ನೂ ಅನುಸರಿಸುವ ಸ್ವಭಾವ ಈ ವ್ಯಕ್ತಿಗೆ ಇಲ್ಲವೆಂದೂ ಆದರೆ, ಒಂದು ಗೌರವಾನ್ವಿತ ಅಹ್ಮದಿಯಾ ಕುಟುಂಬದಲ್ಲಿ ಜನಿಸಿದ ವ್ಯಕ್ತಿಯಾಗಿ

ರುವುದರಿಂದ ಈ ರೀತಿ ಜೀವನವನ್ನು ವ್ಯರ್ಥವಾಗಿ ಹಾಳುಮಾಡುವುದಕ್ಕಿಂತಲೂ ಲಂಡನಿನಲ್ಲಿ ಇವರಿಗೆ ಜಮಾಅತಿನ ಏನಾದರೂ ಕೆಲಸವನ್ನು ನೀಡಿ ಅಲ್ಲಿ ನಿಲ್ಲಿಸಿದರೆ ಒಂದು ವೇಳೆ ಜಮಾಅತಿಗೆ ಪ್ರಯೋಜನಕಾರಿಯಾಗಬಹುದೆಂದೂ ಮುಬಲ್ಲಿಗ್ ಆ ಪತ್ರದಲ್ಲಿ ಬರೆದಿದ್ದರು. ಇವರಿಗೆ ಅರಬಿ ಮತ್ತು ಉರ್ದು ಭಾಷೆಯಲ್ಲಿ ಪರಿಜ್ಞಾನವಿರುವುದರಿಂದ ಪುಸ್ತಕ ಪ್ರಕಾಶನದ ಕಾರ್ಯದಲ್ಲೂ ಅರಬಿ ಪತ್ರ ವ್ಯವಹಾರದ ಕೆಲಸಕ್ಕೂ ಇವರನ್ನು ನಿಯಮಿಸಿಕೊಳ್ಳಬಹುದೆಂದು ಸಹ ಮುಬಲ್ಲಿಗ್ ಶಿಫಾರಸು ಮಾಡಿದ್ದರು. ಆ ಶಿಫಾರಸನ್ನು ಸ್ವೀಕರಿಸಿಕೊಂಡು ಹಸನ್ ಔದರನ್ನು ಲಂಡನಿಗೆ ಕರೆಸಿ 1986ರಲ್ಲಿ ಅವರನ್ನು ಅರೆಬಿಕ್ ಡೆಸ್ಕ್‌ನಲ್ಲಿ ನೇಮಿಸಲಾಯಿತು. ತಬ್‌ಶೀರ್‌ನ (ಪ್ರಚಾರ ಕಾರ್ಯಾಲಯ) ಅಧೀನದಲ್ಲಿರುವ ಹಲವಾರು ಭಾಷಾ ಡೆಸ್ಕ್‌ಗಳ ಪೈಕಿ ಇದು ಸಹ ಒಂದಾಗಿದೆ.

ಕೆಲವೇ ಸಮಯದಲ್ಲಿ ಈ ವ್ಯಕ್ತಿಯ ಕುತಂತ್ರಗಳು ಬಯಲಾಗತೊಡಗಿದವು. ಆಗ ಅವರನ್ನು ಕೆಲಸದಿಂದ ವಜಾಗೊಳಿಸಲಾಯಿತು. ಮತ್ತೆ ಕ್ಷಮಾಯಾಚನೆ ಮಾಡಿ ಮುಂದಕ್ಕೆ ತಪ್ಪುಗಳು ಬರಲಾರವೆಂಬ ಭರವಸೆಯನ್ನು ನೀಡಿದುದರಿಂದಲೂ ಹಾಗೂ ಕೆಲವು ಮಾನ್ಯ ವ್ಯಕ್ತಿಗಳಿಂದ ಶಿಫಾರಸು ಮಾಡಲ್ಪಟ್ಟುದರಿಂದಲೂ ಅವರನ್ನು ಪುನಃ ಕೆಲಸದಲ್ಲಿ ನಿಯುಕ್ತಗೊಳಿಸಿದೆನು. ಆದರೆ, ಅವರು ತನ್ನ ದುರ್ಗುಣವನ್ನು ಬಿಡಲಿಲ್ಲ. ಅವರ ಸ್ವಭಾವವನ್ನು ತಿದ್ದಿ ಸರಿಪಡಿಸುವ ಉದ್ದೇಶದಿಂದ ಬೇರೆ ಬೇರೆ ಕೆಲಸಗಳನ್ನು ಅವರಿಗೆ ವಹಿಸಿಕೊಟ್ಟು ನೋಡಿದೆನು. ಆದರೆ, ಫಲಕಾರಿಯಾಗಲಿಲ್ಲ. ಅವರಿಗೆ ನೀಡಲಾದ ಕೆಲಸಗಳಲ್ಲಿ 'ಅತ್ತಖ್‌ವಾ' ಮಾಸ ಪತ್ರಿಕೆಯ ಸಂಪಾದಕ ಹುದ್ದೆಯೂ ಒಂದು.

ಕೊನೆಗೆ ಅವರಿಗೆ ವಹಿಸಿಕೊಟ್ಟ ಕೆಲಸಗಳಿಂದೆಲ್ಲಾ ಅವರನ್ನು ವಜಾಗೊಳಿಸಿದಾಗ ಜಮಾಅತಿನೊಳಗೆ ಪಿತೂರಿ ನಡೆಸಲು ಶುರುಮಾಡಿದರು. ಜಮಾಅತಿನಲ್ಲಿ ವರ್ಗೀಯತೆ (Racialism) ಇದೆಯೆಂದೂ ಇನ್ನೂ ಏನೇನೆಲ್ಲಾ ತಪ್ಪು ಅಭಿಪ್ರಾಯಗಳನ್ನು ಹಬ್ಬಿಸಲು ತೊಡಗಿದರು. ಆಗ ಈ ಮನುಷ್ಯನ ಕುರಿತು ಕೂಲಂಕಷ ವಿಚಾರಣೆ ನಡೆಸಲು ಒಂದು ತ್ರಿಸದಸ್ಯ ಆಯೋಗವನ್ನು ನೇಮಿಸಲಾಯಿತು. ಆ ಮೂರು ಸದಸ್ಯರು ಹಸನ್ ಔದರ ಕುರಿತು ತನಿಖೆ ನಡೆಸಿದ ಬಳಿಕ ನೀಡಿದ ಸರ್ವಾನುಮತದ ಅಭಿಪ್ರಾಯದಲ್ಲಿ -- ಈ ವ್ಯಕ್ತಿ ಕಪಟ ವಿಶ್ವಾಸಿಯೂ ಸುಳ್ಳು ಹೇಳುವವನೂ ಜಮಾಅತಿನ ಯಾವುದೇ ಹುದ್ದೆಯಲ್ಲಿ ಒಂದು ನಿಮಿಷವಾದರೂ ಮುಂದುವರಿಯಲು ಯೋಗ್ಯನಲ್ಲವೆಂದೂ ಹೇಳಿರುತ್ತಾರೆ. ಪದೇ ಪದೇ ನೀಡಿದ ಕ್ಷಮಾಪಣೆಯಿಂದ ಇವರ ಮೇಲೆ ಯಾವ ಪರಿಣಾಮವೂ ಉಂಟಾಗದ ಕಾರಣ ಕೂಡಲೇ ಇವರನ್ನು ಹೊರಹಾಕಬೇಕೆಂದೂ ಆಯೋಗದ ಸದಸ್ಯರು ಅಭಿಪ್ರಾಯ ಸೂಚಿಸಿದ್ದರು.

ಹಾಗೆ ಹೊರಹಾಕಲಾದ ಹಸನ್ ಔದರನ್ನು ನಾನು ಊರಿಗೆ ಹಿಂದಿರುಗುವಂತೆ ಸೂಚಿಸಿದೆನು. ಅವರ ಮೇಲೆ ಶಿಸ್ತು ಕ್ರಮ ಕೈಗೊಂಡಿರುವುದರಿಂದ ಅವರಾಗಿ ಜಮಾಅತನ್ನು ತೊರೆಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಯಾವುದನ್ನು ನಾವು ಬೇಡವೆಂದು ಹೊರಗೆಸೆಯುತ್ತೇವೋ ಅದು ತಾನೇ ಹೊರಹೋದುದಾಗಿ ಹೇಳುವುದರಲ್ಲಿ ಏನರ್ಥವಿದೆ? ಹಸನ್ ಔದರ ಬೈಅತನ್ನೂ ನಾನು ಅಸಿಂಧುಗೊಳಿಸಿರುವೆನು. ಹಾಗೆ, ನಾವು ಬೇರ್ಪಡಿಸಿ ಬಿಟ್ಟಿರುವ ಒಂದು ವರ್ಜ್ಯ ವಸ್ತುವನ್ನು ಹೆಗಲ ಮೇಲೆ ಹೇರಿಕೊಂಡು ನಡೆಯುವ ದೌರ್ಭಾಗ್ಯ ಇವರಿಗೆ ಬಂದೊದಗಿದೆ. ಇದು ಅವರಿಗೆ ಲಭಿಸಿದ ವಿಜಯದ ದೃಷ್ಟಾಂತವಂತೆ! ಲೋಕದೆಲ್ಲೆಡೆ ಇರುವ ಮುಸ್ಲಿಮರಿಗೆ ಮುಬಾಹಲದ ಫಲವಾಗಿ ಲಭಿಸಿದ ವಿಜಯದ ಪ್ರಥಮ ದೃಷ್ಟಾಂತವಿದು ಎಂದು ಹೇಳಲಾಗುತ್ತದೆ. ಒಟ್ಟು ಇವರಿಗೆ ಲಭಿಸಿದ್ದು ಈ ಓರ್ವ ವ್ಯಕ್ತಿ! ಸುಬ್‌ಹಾನಲ್ಲಾಹ್ - ಎಷ್ಟೊಂದು ಮಹತ್ತರವಾದ ದೃಷ್ಟಾಂತವಿದು!

ಇದರ ಮುಂದೆ ಅಹ್ಮದಿಯಾ ಜಮಾಅತಿಗೆ ಈ ವರ್ಷದಲ್ಲಿ ಲಭಿಸಿದ ಅಲ್ಲಾಹನ ಅನುಗ್ರಹಗಳೂ ವಿಜಯಗಳೂ ಅದ್ಭುತಕರವಾದುದು. ಎರಡನೇ ಶತಮಾನದ ಈ ಮೊದಲ ವರ್ಷದ ನಮ್ಮ ಗುರಿ ಒಂದು ಲಕ್ಷ ಜನರನ್ನು ಅಹ್ಮದಿಯಾ ಜಮಾಅತಿಗೆ ಸೇರಿಸುವುದಾಗಿದೆ. ಇದರಲ್ಲಿ ದೊಡ್ಡಭಾಗ ಈಗಾಗಲೇ ಪೂರ್ತಿಯಾಗಿರುತ್ತದೆ. ವರ್ಷ ಕೊನೆಗೊಳ್ಳುವುದರೊಳಗೇ ಈ ಸಂಖ್ಯೆ ಪೂರ್ಣವಾಗುವುದೆಂಬ ಭರವಸೆ ನನಗಿದೆ. ಎಷ್ಟೋ ದೊಡ್ಡ ದೊಡ್ಡ ಆಲಿಮ್‌ಗಳೂ ಇಮಾಮ್‌ಗಳೂ ಅವರ ಅನುಯಾಯಿಗಳ ಸಮೇತ ಮತ್ತು ತಮ್ಮ ಪ್ರದೇಶದಲ್ಲಿರುವ ಮಸೀದಿಗಳ ಸಮೇತ ಅಹ್ಮದಿಯ್ಯತ್‌ಗೆ ಪರಿವರ್ತನೆಗೊಂಡಿದ್ದಾರೆ. ಈ ಆಲಿಮ್‌ಗಳೂ ಇಮಾಮರೂ ಜನರ ಆಶಾ ಕೇಂದ್ರಗಳಾಗಿದ್ದರು. ಜನರಿಗೆ ಅವರೊಡನೆ ಎಷ್ಟು ನಂಬಿಕೆ ಮತ್ತು ಭರವಸೆಯಿತ್ತೆಂದರೆ, ಅವರು ಅಹ್ಮದಿಯ್ಯತ್ ಸ್ವೀಕರಿಸುತ್ತಲೇ ಅವರನ್ನು ಅನುಸರಿಸಿಕೊಂಡು ಜನರು ಗುಂಪು ಗುಂಪಾಗಿ ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸಿದರು. ಇದು ಅಹ್ಮದಿಯಾ ಜಮಾಅತಿಗೆ ಅಲ್ಲಾಹನಿಂದ ಲಭಿಸಿದ ಅತಿ ಮಹತ್ತರವಾದ ವಿಜಯ ದೃಷ್ಟಾಂತವಾಗಿದೆ. ಅದಕ್ಕೆ ಎದುರಾಗಿ ವಿರೋಧಿಗಳಿಗೆ ತೋರಿಸಲಿಕ್ಕಿರುವುದು ಹಸನ್ ಔದ ಎಂಬ ವ್ಯಕ್ತಿಯನ್ನು ಮಾತ್ರ.

ಹಸನ್ ಔದರ ನಿಜವಾದ ಚಿತ್ರವಿದು. ಈ ವ್ಯಕ್ತಿಯನ್ನು ಹೆಗಲ ಮೇಲೆ ಹೊತ್ತು ಕುಣಿಯುವುದರಿಂದ ಮೌಲಾನಾ ಮನ್ಸೂರ್ ಅಹ್ಮದ್ ಚಿನಿಯೋಟ್ಟಿಗೂ ಜಮಾಅತೆ ಇಸ್ಲಾಮಿಯವರಿಗೂ ಏನಾದರೂ ಲಾಭವಾದೀತೇ? ಖಂಡಿತ ಇಲ್ಲ. ಮೌಲಾನಾ ಚಿನಿಯೋಟ್ಟಿ ಮತ್ತು ಮೌದೂದಿಗಳು ಪ್ರಚಾರ ಮಾಡುತ್ತಿದ್ದ ಒಂದು ಬಹುದೊಡ್ಡ ಸುಳ್ಳನ್ನು ಸ್ವತಃ ಹಸನ್ ಔದ ಬೆಳಕಿಗೆ ತಂದಿದ್ದಾರೆ. ಅಹ್ಮದಿಯಾ ಜಮಾಅತನ್ನು 'ತೊರೆದ' ನಂತರ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಇಸ್ರಾಯೇಲ್ ಸೇನೆಯಲ್ಲಿ 600ರಷ್ಟು ಅಹ್ಮದೀಯರು ಇರುವರೆಂಬುದು ಸುಳ್ಳೆಂದೂ ಒಬ್ಬ ಅಹ್ಮದಿ ಕೂಡಾ ಇಸ್ರಾಯೇಲ್ ಸೇನೆಯಲ್ಲಿ ಇಲ್ಲವೆಂದೂ ಹಸನ್ ಔದ ಬಹಿರಂಗಪಡಿಸಿದರು. ಅವರ ಈ ಹೇಳಿಕೆ 1989 ನವೆಂಬರ್ 25ರ 'ಜಂಗ್' ಪತ್ರಿಕೆಯಲ್ಲಿ ಪ್ರಕಟವಾಯಿತು. ಅಹ್ಮದೀಯರು ಇಸ್ರಾಯೇಲ್ ರಾಷ್ಟ್ರದ ಮತ್ತು ಯೆಹೂದಿಯರ ನಿಕಟವರ್ತಿಗಳೆಂದೂ ಅವರು ಫೆಲೆಸ್ತೀನ್ ವಿಮೋಚನಾ ರಂಗವನ್ನು ತೀವ್ರವಾಗಿ ದ್ವೇಷಿಸುತ್ತಿರುವರೆಂದೂ ಅಪ್ಪಟ ಸುಳ್ಳುಗಳನ್ನು ಮೌದೂದಿಗಳೂ ಚಿನಿಯೋಟ್ಟಿ ಮೌಲಾನಾರೂ ಎಲ್ಲೆಡೆಗಳಲ್ಲೂ ಪ್ರಚಾರಮಾಡುತ್ತಿದ್ದರು. ಅದು ಸುಳ್ಳೆಂದು ಈಗ ಹಸನ್ ಔದ ಪತ್ರಕರ್ತರೊಡನೆ ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ.

ಮೌಲಾನಾ ಚಿನಿಯೋಟ್ಟಿ 2-11-89ರ "ನವಾಯೆ ವಕ್ತ್" (ಲಾಹೋರ್) ಎಂಬ ಪತ್ರಿಕೆಯಲ್ಲಿ ನೀಡಿದ ಒಂದು ಹೇಳಿಕೆ ಈ ರೀತಿಯಿದೆ : "ಮಿರ್ಝಾ ತಾಹಿರ್ ಅಹ್ಮದ್ ಲೋಕದೆಲ್ಲೆಡೆ ಇರುವ ಸಮಸ್ತ ಮುಸ್ಲಿಮರಿಗೆ ನೀಡಿದ ಮುಬಾಹಲ ಪಂಥಾಹ್ವಾನದ ಪ್ರಥಮ ಫಲ ಹಸನ್ ಔದ ಆಗಿದ್ದಾರೆ." ಚಿನಿಯೋಟ್ಟಿಯವರ ಈ ಬಾಲಿಶ ಹೇಳಿಕೆಯನ್ನು ಆಸ್ಪದವಮಾಡಿಕೊಂಡು 'ಸನ್ಮಾರ್ಗ'ದವರು ಸಹ ತಮ್ಮ ಉದ್ದುದ್ದ ಕಲಂಗಳನ್ನು ಭರ್ತಿ ಮಾಡಿದ್ದಾರೆ. ಅಹ್ಮದಿಯಾ ಜಮಾಅತಿನ ಮೇಲೆ ಅತಿ ಘೋರ ಹಿಂಸಾಚಾರಗಳಿಗೂ ದೌರ್ಜನ್ಯಗಳಿಗೂ ಪ್ರಚೋದನೆ ನೀಡುತ್ತಾ ನ್ಯಾಯಧರ್ಮಗಳ ಕಗ್ಗೊಲೆ ಮಾಡಿ ಎಲ್ಲೆಮೀರಿ ವರ್ತಿಸಿದ ವಿರೋಧಿ ನೇತಾರರನ್ನು (ಲೋಕದೆಲ್ಲೆಡೆಯಿರುವ ಮುಸ್ಲಿಮರನ್ನಲ್ಲ) ಆಹ್ವಾನಿಸಿಕೊಂಡು ಅಹ್ಮದಿಯಾ ಖಲೀಫರು ಘೋಷಿಸಿದ ಮುಬಾಹಲದ ಕಾಲಾವಧಿಯು 9-6-89ಕ್ಕೆ ಅಂತ್ಯವಾಗುತ್ತದೆ. ಅದು ಕಳೆದು 5 ತಿಂಗಳ ನಂತರ ಮುಬಾಹಲದ ಪ್ರಥಮ ಫಲ ಲಭಿಸಿದೆ ಎಂದು ಹಸನ್ ಔದರನ್ನು ಹೊತ್ತು ಕುಣಿಯುತ್ತಾ ಚಿನಿಯೋಟ್ಟಿ ಮತ್ತು 'ಸನ್ಮಾರ್ಗ' ಬಳಗದವರು ಜಯಘೋಷ ಮೊಳಗುತ್ತಿದ್ದಾರೆ. ಪರಿಶುದ್ಧ ಅಹ್ಮದಿಯಾ ಜಮಾಅತಿನಿಂದ ಹೊರದೂಡಲ್ಪಟ್ಟ ಒಂದು ತ್ಯಾಜ್ಯ ವಸ್ತುವಿನ ಸುತ್ತಲೂ ಸೇರಿಕೊಂಡು ಕೇಕೇ ಹಾಕಿ ಕುಣಿಯುತ್ತಿರುವ ಇವರ ಹೆಪ್ಪುಗಟ್ಟಿದ ಇಂದ್ರಿಯಗಳು ಅಹ್ಮದಿಯಾ ಜಮಾಅತಿನ ಮೇಲೆ ಅಲ್ಲಾಹನು ವರ್ಷಿಸಿದ ವ್ಯಾಪಕವಾದ ಅನುಗ್ರಹಗಳನ್ನು ಕಂಡುಕೊಳ್ಳಲು ಅಸಮರ್ಥವಾದುದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಒಂದು ವರ್ಷದಲ್ಲಿ ನೂರಕ್ಕಿಂತ ಹೆಚ್ಚು ಮಸ್ಜಿದ್‌ಗಳ ಸಮೇತ ಒಂದು ಲಕ್ಷದ ಎಂಟು ಸಾವಿರಕ್ಕಿಂತ ಹೆಚ್ಚು ಜನರು

ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಿದ ಕುರಿತು ಇವರಿಗೆ ಏನು ಹೇಳಲಿಕ್ಕಿದೆ?

ಅಹ್ಮದೀಯರು ಸುಳ್ಳು ಹೇಳುವವರಲ್ಲ. ಸತ್ಯಸಂಧತೆಯ ಉಜ್ವಲ ಪ್ರಕಾಶವಾಗಿದ್ದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ)ರವರ ವಾತ್ಸಲ್ಯ ಶಿಷ್ಯ ಹಝ್ರತ್ ಮಸೀಹ್ ಮೌಊದ್ (ಅ)ರವರು ಅವರಿಗೆ ಆ ರೀತಿಯ ಶಿಕ್ಷಣ ನೀಡಿರಲಿಲ್ಲ. ಆದುದರಿಂದ ಅಹ್ಮದಿಯಾ ಜಮಾಅತಿನ ವಿಜಯದ ಕುರಿತು ವಿವರಣೆಗಳು ಸಂಪೂರ್ಣ ಸತ್ಯವಾಗಿರುತ್ತವೆ.

## 'ಮಾಲಿಯ ಖಾದಿಯಾನಿಗಳು'

"ಮಾಲಿಯ ಖಾದಿಯಾನಿಗಳು: ಇಸ್ಲಾಂ ಧರ್ಮಕ್ಕೆ" ಎಂಬ ತಲೆಬರಹದಲ್ಲಿ ಎಪ್ರಿಲ್ 15-21ರ 'ಸನ್ಮಾರ್ಗ' ಪತ್ರಿಕೆಯು ಏ. ನಸೀಫ್ ಎಂಬವರ ಒಂದು ಲೇಖನವನ್ನು ಪ್ರಕಟಿಸಿದೆ. ಈ ಲೇಖನದ ಮೂಲಕ ಮೌದೂದಿಗಳ ಮತ್ತೊಂದು ಮಹಾ ಸುಳ್ಳು ಬೆಳಕಿಗೆ ಬಂದಿರುತ್ತದೆ. ಸುಳ್ಳು ಹೇಳುತ್ತಾ, ಸುಳ್ಳನ್ನು ಪ್ರಚಾರ ಮಾಡುತ್ತಾ, ಸುಳ್ಳನ್ನೇ ಮತ್ತೆ ಮತ್ತೆ ಪುನರಾವರ್ತಿಸಿ ಹೇಳುವುದರ ಮೂಲಕ ಜನರನ್ನು ತಪ್ಪುದಾರಿಗೆಳೆಯುವುದು ಈ ಫ್ಯಾಸಿಸ್ಟ್ ಮೌದೂದಿಗಳ ಹವ್ಯಾಸವಾಗಿದೆ.

'ಸನ್ಮಾರ್ಗ' ಹೇಳುತ್ತದೆ: "ಆಫ್ರಿಕದ ಮಾಲಿಯಲ್ಲಿರುವ ಬಹಳಷ್ಟು ಖಾದಿಯಾನಿಗಳು ಇಸ್ಲಾಮ್‌ಧರ್ಮವನ್ನು ಸ್ವೀಕರಿಸಿರುವರೆಂದು ಕರಾಚಿಯಿಂದ ಪ್ರಕಟವಾಗುವ ತಕ್‌ಬೀರ್ ವಾರ ಪತ್ರಿಕೆ ವರದಿ ಮಾಡಿದೆ. ಖಾದಿಯಾನಿಗಳ ಪ್ರಲೋಭನೆಗಳಿಂದ ಕಳೆದ ವರ್ಷ ಅಹ್ಮದೀ ಧರ್ಮವನ್ನು ಸ್ವೀಕರಿಸಿದ್ದ ಈ ಬಡ ಹಾಗೂ ಅವಿದ್ಯಾವಂತ ಮಂದಿ ಪಾಕಿಸ್ತಾನದ ತಹಫ್ಫುರೆಘೀ ಖಿತ್ಮುನ್ನುಬುವ್ವತ್ ನಾಯಕರ ಪ್ರಯತ್ನಗಳಿಂದಾಗಿ ಇಸ್ಲಾಮಿಗೆ ಮರಳಿದ್ದಾರೆ."

ಈ ವಾರ್ತೆಯನ್ನು ಮೊತ್ತಮೊದಲು ಪ್ರಕಟಿಸಿದ್ದು ಕರಾಚಿಯಿಂದ ಹೊರಡುವ "ಜಂಗ್" ಪತ್ರಿಕೆಯಾಗಿತ್ತು. "40.000 ಅಹ್ಮದೀಯರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದಾರೆ" ಎಂಬ ಶಿರೋನಾಮೆಯಲ್ಲಿ ಅದು ಮುಖಪುಟದಲ್ಲೇ ಈ ವಾರ್ತೆಯನ್ನು ಮುದ್ರಿಸಿತು. ನಂತರ ಪಾಕಿಸ್ತಾನದ "ಖತ್ಮೆನುಬುವ್ವತ್", "ತಕ್‌ಬೀರ್", ಕಾನ್ಪುರದಿಂದ ಹೊರಡುವ "ಸಿಯಾಸತೆ ಜದೀದ್", ಕೇರಳದ ಮೌದೂದಿ ಮುಖವಾಣಿ "ಪ್ರಬೋಧನಂ" ಮೊದಲಾದ ಪತ್ರಿಕೆಗಳಲ್ಲೂ ಈ ಸುಳ್ಳು ವಾರ್ತೆ ಪುನರಾವರ್ತನೆಗೊಂಡಿತು. ಅದೇ ಸುಳ್ಳು ವಾರ್ತೆಯನ್ನು 'ಸನ್ಮಾರ್ಗ' ಸಹ ಯಥಾವತ್ ಅಚ್ಚುಮಾಡಿದೆ.

ಹಲವರ ಗಮನ ಸೆಳೆದಿರಬಹುದಾದ ಈ ವಾರ್ತೆಯು ಅಹ್ಮದೀಯರಲ್ಲಿ ಏನೂ ಅಚ್ಚರಿಯನ್ನುಂಟುಮಾಡಲಿಲ್ಲ. ಯಾಕೆಂದರೆ 'ಸನ್ಮಾರ್ಗ'ದಂತಹ ಅಹ್ಮದಿಯಾ ವಿರೋಧಿ ಪತ್ರಿಕೆಗಳಲ್ಲಿ ಈ ರೀತಿಯ ಸುಳ್ಳು ವಾರ್ತೆಗಳು ಪ್ರಕಟವಾಗುವುದು ಸಾಮಾನ್ಯ ವಿಚಾರ. ಈ ವಾರ್ತೆ ಸಂಪೂರ್ಣ ಸುಳ್ಳು ಮತ್ತು ನಿರಾಧಾರವಾಗಿದೆ. ಮಾಲಿಯಲ್ಲಿ ಅಹ್ಮದಿಯತ್ ಸ್ವೀಕರಿಸಿದವರ ಪೈಕಿ ಯಾರೂ ಅಹ್ಮದಿಯ್ಯತನ್ನು ತೊರೆಯಲಿಲ್ಲವೆಂದೂ ಎಲ್ಲರೂ ತಮ್ಮ ನಂಬಿಕೆಯಲ್ಲಿ ಅಚಲಚಿತ್ತರಾಗಿದ್ದಾರೆಂದೂ ತಿಳಿದು ಬಂದಿರುತ್ತದೆ. ಪಾಕಿಸ್ತಾನದಿಂದ ಹೊರಡುವ "ಅಲ್‌ಫಝ್ಲ್" ದೈನಿಕವು ಈ ರೀತಿ ವರದಿ ಮಾಡುತ್ತದೆ:

"ಮಾಲಿಯ ಅಹ್ಮದಿಯಾ ಜಮಾಅತ್ ಸದಸ್ಯರೆಲ್ಲರೂ ತಮ್ಮ ವಿಶ್ವಾಸದಲ್ಲಿ ದೃಢಚಿತ್ತರು: ಅಹ್ಮದಿಯಾ ಜಮಾಅತಿನ ನಾಝಿರ್ ಉಮೂರೆ ಆಮ್ಮಃ ಸಾಹೇಬರು ತಮ್ಮ ಒಂದು ಹೇಳಿಕೆಯಲ್ಲಿ ಈ ರೀತಿ ತಿಳಿಸಿರುತ್ತಾರೆ — ಆಫ್ರಿಕದ ಮಾಲಿಯಲ್ಲಿ ಅಹ್ಮದಿಯ್ಯತ್ ಸ್ವೀಕರಿಸಿದ ನಲ್ವತ್ತು ಸಾವಿರ ಜನರು ಅಹ್ಮದಿಯಾ ಜಮಾಅತನ್ನು ತೊರೆದು ತಮ್ಮ ಪೂರ್ವ ವಿಶ್ವಾಸಕ್ಕೆ ಮರಳಿದ್ದಾರೆ ಎಂಬ ಒಂದು ವಾರ್ತೆಯು ಇತ್ತೀಚೆಗೆ ಕರಾಚಿಯ 'ಜಂಗ್' ದೈನಿಕದ ಮುಖಪುಟದಲ್ಲಿ ಪ್ರಕಟವಾಗಿದ್ದು ಇದೇ ವಾರ್ತೆಯನ್ನು ಆ ನಂತರ 'ಖತ್ಮೆನುಬುವ್ವತ್' ಮತ್ತು 'ತಕ್‌ಬೀರ್' ಎಂಬ ಪತ್ರಿಕೆಗಳು ಪ್ರಕಟಿಸಿವೆಯಷ್ಟೆ. ಈ ಬಗ್ಗೆ ಮಾಲಿಯ ಜಮಾಅತ್ ಅಧ್ಯಕ್ಷರನ್ನು ಸಂಪರ್ಕಿಸಿದಾಗ ಅವರು ಈ ವಾರ್ತೆಯನ್ನು ಸಂಪೂರ್ಣ ಅಲ್ಲಗಳೆದಿರುತ್ತಾರೆ. ಅಲ್ಲಾಹನ ಅನುಗ್ರಹದಿಂದ ಮಾಲಿಯ ಎಲ್ಲಾ ಅಹ್ಮದೀಯರೂ ತಮ್ಮ ಸತ್ಯ ವಿಶ್ವಾಸದಲ್ಲಿ ದೃಢಚಿತ್ತರಾಗಿರುವರೆಂದೂ ಜಮಾಅತಿನ ದಾರದಲ್ಲಿ ಪೋಣಿಸಲ್ಪಟ್ಟಿದ್ದಾರೆಂದೂ ಅಲ್ಲಾಹನ ಅನುಗ್ರಹದಿಂದ ಮಾಲಿಯ ಅಹ್ಮದಿಯಾ ಜಮಾಅತ್ ಶಾಖೆಯು ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿದೆಯೆಂದೂ ಅಧ್ಯಕ್ಷರು ತಿಳಿಸಿರುತ್ತಾರೆ."
("ಅಲ್‌ಫಝ್ಲ್" 15-3-1990)

ಅಹ್ಮದೀಯರ ವಿರುದ್ಧ ಸುಳ್ಳುವಾರ್ತೆಗಳನು ಹಬ್ಬಿಸಬೇಕಾದುದು ಪಾಕಿಸ್ತಾನದ ತಹಫ್ಫುಝೆ ಖತ್ಮೆ

ನುಬುವ್ವತ್ ಸಂಘವವರಿಗೆ ಅಗತ್ಯವಿರಬಹುದು. ತಮ್ಮ ಪರಾಭವವನ್ನು ಮುಚ್ಚಿಡಲು ಸತ್ಯವನ್ನು ಮರೆಮಾಚಬೇಕಾದುದು ಅವರಿಗೆ ಅನಿವಾರ್ಯ. ಅವರು ಬದುಕುತ್ತಿರುವುದೇ ಈ ರೀತಿಯ ಸುಳ್ಳಿನ ವ್ಯವಹಾರದಲ್ಲಿ. ಸೌದಿ ಅರೇಬಿಯಾದಿಂದಲೂ ಕೊಲ್ಲಿ ರಾಷ್ಟ್ರಗಳಿಂದಲೂ ಹರಿದು ಬರುತ್ತಿರುವ ಪೆಟ್ರೋಡಾಲರ್ ಮತ್ತು ಚಿನ್ನದ ರಾಶಿ ಮುಂದುವರಿಯಬೇಕಲ್ಲವೇ. ಆಫ್ರಿಕಾದ ಮಾಲಿಯ ಕುರಿತು ಯಾರು ವಿಚಾರಿಸಲು ಹೋಗುವರು? ಖಾದಿಯಾನಿಗಳು ಈ ವಾರ್ತೆಯನ್ನು ಅಲ್ಲಗಳೆದರೆ ಅವರ ಮಾತನ್ನು ಕೇಳುವವರಾರು? ಜಮಾಅತೆ ಇಸ್ಲಾಮಿ ಪತ್ರಿಕೆಗಳಿಗಂತೂ ಸುಳ್ಳು ಹೇಳುವುದು ಧರ್ಮಸಮ್ಮತ. ಮಾತ್ರವಲ್ಲ ಇಂತಹ ಸಂದರ್ಭಗಳಲ್ಲಿ ಅನಿವಾರ್ಯ ಕೂಡ. "ಸಬಳ ನುಂಗುವವನಿಗೆ ಸೂಜಿ ಏನು ಮಹಾ?" ಆದರೆ, ಇವೆಲ್ಲಾ ಎಷ್ಟರ ತನಕ? انّ الباطل كان زهوقا "ನಿಶ್ಚಯವಾಗಿಯೂ ಅಸತ್ಯ ಅಳಿದೇ ಹೋಗುವುದು." (17:82)

ಮುಬಾಹಲದ ಅನುಗ್ರಹ ದೃಷ್ಟಾಂತವೆಂಬಂತೆ ಮಾಲಿಯ 75 ಗ್ರಾಮಗಳಿಂದ ಸುಮಾರು 40,000 ಜನರು ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆಂದು ಅಹ್ಮದಿಯಾ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಲಂಡನ್‌ನಲ್ಲಿ ಮಾಡಿದ ಒಂದು ಭಾಷಣದಲ್ಲಿ ಹೇಳಿದ್ದರು. ಆದರೆ, ಈ ಹೇಳಿಕೆಯನ್ನು ಮೌದೂದಿಗಳು ಅಪಹಾಸ್ಯಮಾಡಿದ್ದರು. ಈ ರೀತಿ ಸಂಭವಿಸಲು ಸಾಧ್ಯವೇ? ಎಂದು ಅವರು ಅಣಕವಾಡಿದರು. ಅಹ್ಮದಿಯಾ ಖಲೀಫ ಘೋಷಿಸಿದ್ದು ಸಂಪೂರ್ಣ ಸತ್ಯವಾಗಿತ್ತೆಂದು ಈಗ 'ಸನ್ಮಾರ್ಗ' ಪತ್ರಿಕೆ ಸಮ್ಮತಿಸುತ್ತದೆ. ನೋಡಿರಿ: "ಮಾಲಿಯ ರಾಜಧಾನಿ ಬಮಾಕೋದಿಂದ 180 ಕಿ. ಮಿ. ದೂರದಲ್ಲಿರುವ ಜಿಜ್ನಿಯಾದ ಉಮರ್ ಕಾಂತರನ್ನು ಖಾದಿಯಾನೀ ಧರ್ಮಕ್ಕೆ ಸೇರಿಸುವಲ್ಲಿ ಅವರು (ಅಹ್ಮದೀಯರು) ಯಶಸ್ವಿಯಾದರು. ಬಹಳ ಪ್ರಭಾವಶಾಲೀ ಧಾರ್ಮಿಕ ಮುಂದಾಳುವಾಗಿದ್ದ ಉಮರ್ ಕಾಂತರು ವಿವಿಧ ಗ್ರಾಮಗಳ ಸುಮಾರು 35 ಸಾವಿರ ಮಂದಿಯನ್ನು ಖಾದಿಯಾನಿ ಧರ್ಮಕ್ಕೆ ಕರೆತಂದರು." ('ಸನ್ಮಾರ್ಗ' ಎಪ್ರಿಲ್ 15–21)

ಆದುದರಿಂದ ಹಝ್ರತ್ **ಖಲೀಫ** ನುಡಿದದ್ದು ಸತ್ಯವೇ ಆಗಿತ್ತು. ಅಹ್ಮದಿಯಾ **ಖಲೀಫ** ಮತ್ತು ಅಹ್ಮದೀಯರು ಸತ್ಯಪಕ್ಷದವರೆಂದೂ ಸುಳ್ಳು ಹೇಳುವವರಲ್ಲವೆಂದೂ 'ಸನ್ಮಾರ್ಗ'ವೇ ಸಾಬೀತು ಪಡಿಸಿದೆ. ಅಹ್ಮದಿಯಾ ಜಮಾಅತಿನ ಎರಡನೇ ಶತಮಾನದ ಮೊದಲನೇ ವರ್ಷದಲ್ಲೇ 1,08,000ಕ್ಕಿಂತ ಹೆಚ್ಚು ಮಂದಿ ಪ್ರತಿಜ್ಞಾಬದ್ಧರಾಗಿ ಅಹ್ಮದಿಯಾ ಜಮಾಅತಿಗೆ ಸೇರಿರುವರೆಂಬ ಸುವಾರ್ತೆಯನ್ನು ಸಹ ಈ ಸಂದರ್ಭದಲ್ಲಿ 'ಸನ್ಮಾರ್ಗ'ದವರಿಗೆ ನಾವು ತಿಳಿಸಬಯಸುತ್ತೇವೆ.

ತನ್ನೊಂದಿಗೆ ಸುಮಾರು ಮೂವತ್ತೈದು ಸಾವಿರ ಮಂದಿಯನ್ನು ಅಹ್ಮದಿಯ್ಯತಿಗೆ ಕರೆತರಲು ಸಮರ್ಥರಾಗಿದ್ದ, "ಬಹಳ ಪ್ರಭಾವಶಾಲಿ ಧಾರ್ಮಿಕ ಮುಂದಾಳು" ಶೈಖ್ ಉಮರ್ ಕಾಂತ ಏನೂ ತಿಳಿಯದೆ ಅಹ್ಮದಿಯ್ಯತ್ ಸ್ವೀಕರಿಸಿದ್ದೆಂದು 'ಸನ್ಮಾರ್ಗ' ಹೇಳುತ್ತದೆ!! ಖಾದಿಯಾನಿ ಮತ್ತು ಇಸ್ಲಾಮಿನ ವ್ಯತ್ಯಾಸವು ತನಗೆ ತಿಳಿದಿರಲಿಲ್ಲವೆಂದು ಒಪ್ಪಿಕೊಂಡು ಇಸ್ಲಾಂ ಧರ್ಮಕ್ಕೆ ಮರಳುವ ಇಚ್ಛೆಯನ್ನು ಉಮರ್ ಕಾಂತ ವ್ಯಕ್ತ ಪಡಿಸಿದರಂತೆ! "ಮಾಲಿಯ ಮುಸ್ಲಿಮರು ಖಾದಿಯಾನಿಝಮನ್ನು ಅಂಗೀಕರಿಸಿರುವ ಬಗ್ಗೆ ಜಾಗತಿಕ ಮುಸ್ಲಿಮರ ಕಳವಳವನ್ನು ಅವರಿಗೆ ತಿಳಿಸಲಾಯಿತು" ಎಂದೂ "ಪ್ರವಾದಿತ್ವ ಪರಿಸಮಾಪ್ತಿಗೆ ಇಸ್ಲಾಮಿನಲ್ಲಿರುವ ಪ್ರಾಮುಖ್ಯತೆಯನ್ನು ಅವರಿಗೆ ಮನದಟ್ಟು ಮಾಡಿಸಲಾಯಿತು" ಎಂದೂ 'ಸನ್ಮಾರ್ಗ' ಹೇಳುತ್ತದೆ. ಆಫ್ರಿಕದ ಮುಸ್ಲಿಮರನ್ನು ಇಷ್ಟೊಂದು ಕೀಳಾಗಿ, ತಿಳಿಗೇಡಿಗಳನ್ನಾಗಿ, ತಲೆ ಬುಡಗೊತ್ತಿಲ್ಲದ ಹೆಡ್ಡರನ್ನಾಗಿ ಚಿತ್ರೀಕರಿಸಬೇಕೇ? ಕಪ್ಪು ಜನಾಂಗದವರಾದ ಕಾರಣ ಅವರೊಡನೆ ಇಷ್ಟೊಂದು ತಾತ್ಸಾರವೇ? ಅಕಟಾ! 'ಸನ್ಮಾರ್ಗ'ದವರಿಗೆ ಬಿಲಾಲ್ (ರ) ಅವರ ಪರಿಚಯವಿದೆಯೇ? ಅಂಗಿ ಧರಿಸದ, ಕಡು ಕಪ್ಪು ವರ್ಣದ ಗುಲಾಮ ಹಝ್ರತ್ ಬಿಲಾಲ್‌ರನ್ನು?

ಆದರೆ, ಆಫ್ರಿಕಾ ಭೂಖಂಡದ ಕಪ್ಪು ಜನಾಂಗದವರನ್ನು ಲೋಕದ ಮುಂದಾಳುತ್ವ ವಹಿಸಲಿಕ್ಕಾಗಿ ಅಲ್ಲಾಹನು ಸಿದ್ಧಗೊಳಿಸುತ್ತಿದ್ದಾನೆಂಬ ವಿಚಾರವನ್ನು ಫ್ಯಾಸಿಸ್ಟ್ ಮೌದೂದಿಗಳು ತಿಳಿದಿರುವುದು ಒಳಿತು.

## ಮಾಲಿಯಲ್ಲಿ ಪುನಃ 11,000 ಬೈಅತ್

ಮಾಲಿಯ ಅತ್ಯಂತ ಪ್ರಭಾವಶಾಲಿ ಧಾರ್ಮಿಕ ಮುಂದಾಳು ಶೈಖ್ ಉಮರ್ ಕಾಂತರ ನೇತೃತ್ವದಲ್ಲಿ

ಸುಮಾರು 40,000 ಜನರು ಅಹ್ಮದಿಯ್ಯತ್ ಸ್ವೀಕರಿಸಿದ್ದಾರೆಂಬ ವಾರ್ತೆಯನ್ನು ಕೆಲವು ಮುಸ್ಲಿಂ ಪತ್ರಿಕೆಗಳು ಮೊದಲು ಅಲ್ಲಗಳೆದವು. ನಂತರ, "ಅವರೆಲ್ಲಾ ಪೂರ್ವ ವಿಶ್ವಾಸಕ್ಕೆ ಮರಳಿದ್ದಾರೆ" ಎಂದವು. ಇವರ ಈ ಸುಳ್ಳು ಪ್ರಚಾರಕ್ಕೆ ಸರ್ವಶಕ್ತನಾದ ಅಲ್ಲಾಹನು ಮತ್ತೊಂದು ಪ್ರಹಾರವನ್ನು ನೀಡಿದ್ದಾನೆ. ಸುಳ್ಳು ಹೇಳುವವರ ಮೇಲೆ ಶಾಪವನ್ನು ಸುರಿಸಿರುತ್ತಾನೆ. ಮಾಲಿಯಲ್ಲಿ ಪುನಃ 11,000 ಜನರು "ಬೈಅತ್" (ಪ್ರತಿಜ್ಞೆ) ಮಾಡಿ ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸಿರುವರು. ಅಹ್ಮದಿಯಾ ಜಮಾಅತಿನ ಮೇಲೆ ಅಲ್ಲಾಹನು ತನ್ನ ಅನುಗ್ರಹವನ್ನು ಮೇಲಿಂದ ಮೇಲೆ ಸುರಿಸುತ್ತಿದ್ದಾನೆ. "ಆನೆ ನಡೆಯುವಾಗ ಶ್ವಾನ ಬೊಗಳುತ್ತದೆ" ಎಂಬಂತೆ ಅಹ್ಮದಿಯಾ ಜಮಾಅತ್ ಲೋಕದ ನಾನಾ ಕಡೆಗಳಲ್ಲಿ ಅಭಿವೃದ್ಧಿ ಹೊಂದುತ್ತಾ ಅಲ್ಲಾಹನ ಮಹತ್ತರ ಅನುಗ್ರಹಗಳಿಗೆ ಪಾತ್ರವಾಗುವಾಗ 'ಸನ್ಮಾರ್ಗ'ದಂತಹ ಪ್ರತಿಗಾಮಿ ಪತ್ರಿಕೆಗಳು ಅಲ್ಲಾಹನ ಈ ದಿವ್ಯ ದೃಷ್ಟಾಂತಗಳನ್ನು ಕಂಡು ಸಹಿಸಲಾಗದೆ ಅಪಸ್ವರ ವೆಬ್ಬಿಸುತ್ತವೆ. ಆದರೆ, ಸತ್ಯವನ್ನು ಎದುರಿಸುವಲ್ಲಿ ಇವರಿಗೆ ಸುಳ್ಳಿನ ಮೊರೆಹೊಗಬೇಕಾಗುತ್ತದೆ. ಆಗ ಅಗತ್ಯಕ್ಕೆ ಸುಳ್ಳು ಹೇಳಬಹುದೆಂಬ ತತ್ವವನ್ನು ಇವರು ಸ್ವಯಂ ನಿರ್ಮಿಸುತ್ತಾರೆ! ಮೌಲಾನಾ ಮೌದೂದಿಯವರ ಈ ಶಿಕ್ಷಣವನ್ನು ಅನುವರ್ತಿಸುತ್ತಿರುವ 'ಜಮಾಅತೆ ಇಸ್ಲಾಮಿ' ಬಾಂಧವರೊಡನೆ – ನಿಮ್ಮ ಈ ಧೋರಣೆಯು ಸತ್ಯಾನ್ವೇಷಿಗಳನ್ನು ಚಕಿತಗೊಳಿಸುವಂಥದ್ದೂ ಪವಿತ್ರ ಇಸ್ಲಾಂ ಧರ್ಮದ ತತ್ತ್ವೋಪದೇಶಗಳಿಗೆ ವಿರುದ್ಧವೂ ಆಗಿದೆ ಎಂದು ನಾವು ಹೇಳಬಯಸುತ್ತೇವೆ. ಪವಿತ್ರ ಖುರ್‌ಆನ್ ಹೇಳುತ್ತದೆ:

"ವಿಗ್ರಹಾರಾಧನೆಯಿಂದ ದೂರವಿರಿ, ಅಸತ್ಯ ಮಾತಿನಿಂದಲೂ ದೂರವಿರಿ." (22:31)

"ನೀವು ಕಟ್ಟು ನಿಟ್ಟಾಗಿ ಸತ್ಯವನ್ನೂ ನ್ಯಾಯವನ್ನೂ ನಿಲೆನಿಲ್ಲಿಸುವವರಾಗಿರಿ. ನೀವು ಅಲ್ಲಾಹನಿಗಾಗಿ ಸಾಕ್ಷ್ಯನುಡಿಯುವವರಾಗಿರಿ. ಸತ್ಯ ನುಡಿಯುವ ನಿಮಿತ್ತ ನಿಮಗೆ ಹಾನಿ ಸಂಭವಿಸಿದರೂ ನಿಮ್ಮ ಮಾತಾ ಪಿತೃಗಳಿಗೆ ತೊಂದರೆಯುಂಟಾದರೂ ಹತ್ತಿರದ ಬಂಧುಗಳಿಗೆ ಹಾನಿಯುಂಟಾಗುವುದಾದರೂ ಸರಿಯೇ – ಅಸತ್ಯ ನುಡಿಯಬಾರದು." (4:136)

ಪವಿತ್ರ ಖುರ್‌ಆನಿನ ಈ ಅನರ್ಘ್ಯ ಉಪದೇಶಗಳ ಪ್ರಕಾರ ಜೀವನ ನಡೆಸುವ ಸೌಭಾಗ್ಯವನ್ನು ಜಮಾಅತೆ ಇಸ್ಲಾಮಿ ಬಾಂಧವರಿಗೂ ಅವರ 'ಮಾರ್ಗ' ದರ್ಶಕರಿಗೂ ಅಲ್ಲಾಹನು ಕರುಣಿಸಲಿ – ಆಮೀನ್.

ವ ಆಖಿರು ದಅ್‌ವಾನಾ ಅನಿಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್.

*With Best Compliments From :*

**BASHIR'S (INDIA) AGENCIES**

**Real Estate Dealers & General Traders**

**Mogral, KUMBLA-670 321 (Kerala State)**

*Managing Director :* Bashir Ahmad Siddeeque

*WITH BEST COMPLIMENTS FROM :*



# SAYEEDA ASHRAFALI

'DARUSSIDQUE'

**Mogral, KUMBLA-670 321**

---

ಅಂದ ಚಂದವಾದ ಭಾವಚಿತ್ರಗಳಿಗೆ
ಸಂದರ್ಶಿಸಿರಿ :

## VIKAS STUDIO

**HETTUR, Saklaspur Taluk**

Prop. : *JALEEL AHMAD*

---

*With Best Compliments From :*

## Muhammad Naseer

**S/o. MOOSA MASTER**

**FRUIT AND TEA STALL**

**Kumbla Railway Station**

**KUMBLA**

## ಅಹ್ಮದಿಯಾ ವಾರ್ತೆಗಳು

# ಬ್ರಿಟನ್‌ನಲ್ಲಿ ರಜತ ಜೂಬಿಲಿ ಸಮ್ಮೇಳನ

ಬ್ರಿಟನ್ ಅಹ್ಮದಿಯಾ 25ನೇ ವಾರ್ಷಿಕ ಸಮ್ಮೇಳನವು ಟಿಲ್‌ಫೋರ್ಡ್‌ನ ಇಸ್ಲಾಮ್‌ಬಾದ್‌ನಲ್ಲಿ ಕಳೆದ ಜುಲಾಯಿ 27ರಿಂದ 29ರ ವರೆಗೆ ಜರಗಿತು.

ಅಮೇರಿಕ, ಆಫ್ರಿಕ, ರಶ್ಯಾ, ಜಪಾನ್, ಭಾರತ, ಪಾಕಿಸ್ಥಾನ, ಬಂಗ್ಲಾದೇಶ ಮೊದಲಾದ 54 ರಾಷ್ಟ್ರಗಳಿಂದ ಸುಮಾರು 10 ಸಾವಿರ ಮಂದಿ ಸಮ್ಮೇಳನದಲ್ಲಿ ಭಾಗವಹಿಸಿದರು. ಸಮ್ಮೇಳನದ ಎಲ್ಲ ಭಾಷಣಗಳು ಇಂಗ್ಲಿಷ್, ಅರಬಿ, ಫ್ರೆಂಚ್, ಟರ್ಕಿಶ್, ರಶ್ಯನ್, ಜರ್ಮನ್, ಇಂಡೋನೇಶ್ಯನ್ ಎಂಬೀ 7 ಭಾಷೆಗಳಲ್ಲಿ ಭಾಷಾಂತರಗೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿತ್ತು.

ಅಹ್ಮದಿಯಾ ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು, ತನ್ನ ಭಾಷಣದಲ್ಲಿ, ಪಾಕಿಸ್ಥಾನದಲ್ಲಿ ಅಹ್ಮದಿಯಾ ದಮನ ಕಾರ್ಯವನ್ನು ವಿವರಿಸುತ್ತಾ, ಅಲ್ಲಿನ ಜನತೆ ಪಶ್ಚಾತ್ತಾಪಪಟ್ಟುಕೊಂಡು ದೇವರಿಂದ ಕ್ಷಮೆಯಾಚಿಸಿದರೆ ಮಾತ್ರ ಅವರಿಗೆ ರಕ್ಷೆಯ ಮಾರ್ಗ ತೆರೆಯಲ್ಪಡುವುದೆಂದು ಹೇಳಿದರು. 1989ನೇ ವರ್ಷ ಅಹ್ಮದಿಯಾ ಜಮಾಅತಿನ ಮಟ್ಟಿಗೆ ಅನುಗ್ರಹಪೂರ್ಣ ವರ್ಷವಾಗಿತ್ತೆಂದು ಅವರು ನುಡಿದರು. ಅಹ್ಮದಿಯಾ ಜಮಾಅತಿನ ಎರಡನೆಯ ಶತಮಾನದ ಪ್ರಥಮ ವರ್ಷದಲ್ಲಿ ಜಮಾಅತಿಗೆ ಸಿದ್ಧಿಸಿದ ಅಭೂತಪೂರ್ವ ಅಭಿವೃದ್ಧಿಯನ್ನೂ ಲೋಕದಾದ್ಯಂತ ವ್ಯಾಪಿಸಿಕೊಂಡಿರುವ ಅಹ್ಮದಿಯಾ ಚಟುವಟಿಕೆಗಳನ್ನೂ ಅವರು ವಿವರಿಸಿದರು. 4 ಹೊಸ ರಾಷ್ಟ್ರಗಳಲ್ಲಿ ಜಮಾಅತ್ ಸ್ಥಾಪನೆಗೊಂಡಿದೆ. 1 ಲಕ್ಷದ 23 ಸಾವಿರ ಮಂದಿ ಹೊಸದಾಗಿ ಅಹ್ಮದಿಯತ್ ಸ್ವೀಕರಿಸಿದ್ದಾರೆ. ಜಮಾಅತಿಗೆ ಸೇರಿದ, ಒಂದು ದೇಶದ ಶಿಕ್ಷಣ ಸಚಿವರು ತನ್ನ ಮನೆಯನ್ನು ಮಿಶನ್ ಹೌಸಿಗೋಸ್ಕರ ದಾನ ಮಾಡಿದ್ದಾರೆ. ಇನ್ನೊಂದು ದೇಶದ ಕ್ರೈಸ್ತ ಗವರ್ನರ್ ಜನರಲ್ ಮತ್ತು ಆಫ್ರಿಕದಲ್ಲಿ 20 ಮಂದಿ ಪಾರಾಮೌಂಟ್ ಚೀಫ್ಸ್ ಅಹ್ಮದಿಯತ್ ಸ್ವೀಕರಿಸಿದ್ದಾರೆ. ಪಾಕಿಸ್ಥಾನ ಮತ್ತು ಬಂಗ್ಲಾದೇಶ ಹೊರತಾಗಿ 1139 ಹೊಸ ಘಟಕಗಳ ಸ್ಥಾಪನೆಯಾಗಿದೆ. ಪಾಕಿಸ್ಥಾನದಲ್ಲಿ 29 ಮಸೀದಿಗಳು ಧ್ವಂಸವಾಗಿದ್ದವು; ಆದರೆ ನಮಗೆ ಈಗ 558 ಮಸೀದಿಗಳ ಹೆಚ್ಚಳ ಉಂಟಾಗಿದೆ. ಆಫ್ರಿಕದ 9 ಕಡೆಗಳಲ್ಲಿ ಹೊಸ ಮಿಶನ್ ಹೌಸ್‌ಗಳು ಸ್ಥಾಪಿತವಾಗಿವೆ. 16 ಕಡೆಗಳಲ್ಲಿ ಹೊಸ ಪ್ರಚಾರ ಕೇಂದ್ರಗಳಿಗಾಗಿ ವಿಶಾಲವಾದ ನಿವೇಶನಗಳನ್ನು ಖರೀದಿಸಲಾಗಿದೆ. ಏಶ್ಯಾದಲ್ಲಿ 6 ಹೊಸ ಮಿಶನ್ ಹೌಸ್‌ಗಳನ್ನು ಸ್ಥಾಪಿಸಲಾಗಿದೆ – ಇತ್ಯಾದಿ ಇತ್ಯಾದಿ ಜಮಾಅತಿನ ಪ್ರಗತಿಯನ್ನು ಖಲೀಫರು ವಿವರಿಸಿದರು.

ಈಗಾಗಲೇ 42 ಭಾಷೆಗಳಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ಖುರ್‌ಆನಿನ ಅನುವಾದಗಳು ಪ್ರಕಟಗೊಂಡಿವೆಯೆಂದೂ 8 ಭಾಷೆಗಳ ಅನುವಾದ ಮುದ್ರಣ ಹಂತದಲ್ಲಿದೆಯೆಂದೂ ಮುಂದಿನ ಕೆಲವೇ ವರ್ಷಗಳೊಳಗೆ 100ಕ್ಕೂ ಹೆಚ್ಚು ಭಾಷೆಗಳಲ್ಲಿ ಖುರ್‌ಆನ್ ಭಾಷಾಂತರವನ್ನು ಪ್ರಕಾಶಪಡಿಸುವ ಇರಾದೆ ಇದೆಯೆಂದೂ ಖಲೀಫರು ನುಡಿದರು.

116 ಭಾಷೆಗಳಲ್ಲಿ ಖುರ್‌ಆನಿನ ಆಯ್ದ ವಚನಗಳು, 113 ಭಾಷೆಗಳಲ್ಲಿ ಮುಹಮ್ಮದ್ ಪೈಗಂಬರ್ (ಸ)ರ ಆಯ್ದ ವಚನಗಳು, 102 ಭಾಷೆಗಳಲ್ಲಿ ಹಝ್ರತ್ ಅಹ್ಮದ್ (ಅ)ರವರ ಆಯ್ದ ನುಡಿಗಳು ಸಿದ್ಧಗೊಂಡಿವೆಯೆಂದೂ ಅವರು ಹೇಳಿದರು.

ಅಹ್ಮದಿಯಾ ಶತಾಬ್ದ ಜೂಬಿಲಿ ಆಚರಣೆಯ ಬಗ್ಗೆ 36 ರಾಷ್ಟ್ರಗಳಲ್ಲಿ 407 ರೇಡಿಯೋ ಕಾರ್ಯಕ್ರಮಗಳೂ 28 ರಾಷ್ಟ್ರಗಳಲ್ಲಿ 223 ಟೆಲಿವಿಶನ್ ಕಾರ್ಯಕ್ರಮಗಳೂ ಬಿತ್ತರಿಸಲ್ಪಟ್ಟಿವೆಯೆಂದು ಖಲೀಫರು ನುಡಿದರು.

# ಆಫ್ರಿಕ - ಭಾರತ ಕ್ಷೇಮಾಭಿವೃದ್ಧಿಗೆ 5 ಕೋಟಿ ರೂಪಾಯಿಗಳ ಜೂಬಿಲಿ ಫಂಡ್

ಆಫ್ರಿಕ ಮತ್ತು ಭಾರತದ ಬಡಜನರ ಕ್ಷೇಮಾಭಿವೃದ್ಧಿಗಾಗಿ ಒಂದು ತ್ರಿವರ್ಷ ಯೋಜನೆಯನ್ನು ಕಾರ್ಯಗತಗೊಳಿಸಲು 5 ಕೋಟಿ ರೂಪಾಯಿಗಳ "ಆಫ್ರಿಕ - ಇಂಡಿಯಾ ಜೂಬಿಲಿ ಫಂಡ್" ಎಂಬ ಒಂದು ನಿಧಿಗೆ ದೇಣಿಗೆ ನೀಡಲು ಅಹ್ಮದಿಯಾ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಕರೆನೀಡಿದ್ದಾರೆ.

ಅಹ್ಮದಿಯಾ ಜಮಾಅತಿನ ಸ್ಥಾಪನೋದ್ದೇಶಗಳ ಪೈಕಿ ಜನಸೇವೆ ಒಂದೆಂದು ಹೇಳಿದ ಖಲೀಫರು ಈ ನಿಧಿಯಿಂದ ಆಫ್ರಿಕ - ಭಾರತ ದೇಶಗಳ ಬಡಜನರ ಕಷ್ಟ ನಿವಾರಣೆ ಮಾಡಲಾಗುವುದೆಂದು ಹೇಳಿದರು. ಈ ನಿಧಿಗೆ 5 ಲಕ್ಷ ರೂಪಾಯಿಗಳ ದೇಣಿಗೆ ನೀಡಿದ ಖಲೀಫರು, ಈ ನಿಧಿಯ ಮೊತ್ತ 5 ಕೋಟಿಗಿಂತ ಎಷ್ಟು ಹೆಚ್ಚಾಗುತ್ತದೋ ಅದರ ಒಂದು ಶತಾಂಶವನ್ನು ಮುಂದೆ ತಾನು ದೇಣಿಗೆಯಾಗಿ ನೀಡುವೆನೆಂದು ಸಾರಿದರು.

# ಇರಾನ್ ರಿಲೀಫ್ ಫಂಡ್

ಇತ್ತೀಚೆಗೆ ಇರಾನ್‌ನಲ್ಲಿ ಸಂಭವಿಸಿದ ಭೂಕಂಪದಿಂದ ಪೀಡಿತರಾದವರಿಗೆ ಸಹಾಯ ನೀಡಲಿಕ್ಕಾಗಿ ಅಹ್ಮದಿಯಾ ಜಮಾಅತ್ ಇರಾನ್ ರಿಲೀಫ್ ಫಂಡನ್ನು ಆರಂಭಿಸಿದೆ. ಇದಕ್ಕೆ ಉದಾರವಾಗಿ ದಾನ ನೀಡಲು ಅಹ್ಮದಿಯಾ ಖಲೀಫರು ಕೇಳಿಕೊಂಡಿದ್ದಾರೆ. ಜಗತ್ತಿನಾದ್ಯಂತವಿರುವ ಅಹ್ಮದೀ ಮುಸ್ಲಿಮರಿಂದ ದೇಣಿಗೆಗಳು ಸಂಗ್ರಹಿಸಲ್ಪಡುತ್ತಿವೆ.

# ನೆಲ್ಸನ್ ಮಂಡೇಲರಿಗೆ ಖಲೀಫರ ಅಭಿನಂದನೆ

30 ವರ್ಷಗಳ ಜೈಲುವಾಸದ ಬಳಿಕ ಬಿಡುಗಡೆ ಹೊಂದಿದ ದಕ್ಷಿಣ ಆಫ್ರಿಕದ ಕಪ್ಪುಜನರ ನಾಯಕ ನೆಲ್ಸನ್ ಮಂಡೇಲರಿಗೆ ಅಹ್ಮದಿಯಾ ಖಲೀಫರು ಕಳುಹಿಸಿದ ಸಂದೇಶದಲ್ಲಿ ಅವರನ್ನು ಅಭಿನಂದಿಸಲಾಗಿದೆ.

ನೆಲ್ಸನ್ ಮಂಡೇಲರ ಮನೋದಾರ್ಢ್ಯ ಮತ್ತು ಸ್ಥಿರೋತ್ಸಾಹ ಮನುಷ್ಯನ ಸ್ಥಾನಮಾನ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಎಲ್ಲರಿಗೂ ಮಾರ್ಗದೀಪವಾಗಿ ವಿರಾಜಿಸುತ್ತದೆಂದೂ ಅದು ಅವರಲ್ಲಿ ಕರ್ಮಚೈತನ್ಯವನ್ನು ವೃದ್ಧಿಗೊಳಿಸುತ್ತದೆಂದೂ ಖಲೀಫರು ಕಳುಹಿಸಿದ ಸಂದೇಶದಲ್ಲಿ ಹೇಳಲಾಗಿದೆ.

ಜಾಗತಿಕ ಅಹ್ಮದಿಯಾ ಸಂಘಟನೆ ತಮ್ಮ ಎಲ್ಲ ಆಫ್ರಿಕನ್ ಸಹೋದರರೊಂದಿಗೆ ಅವರಿಗೆ ಸ್ವಾಗತ ಬಯಸುತ್ತದೆಂದು ಹೇಳಿದ ಖಲೀಫರು ಆಫ್ರಿಕದ ಕಪ್ಪುಜನರ ವಿಮೋಚನೆ ಉಂಟಾಗಿ, ಅವರಿಗೆ ಸ್ಥಾನಮಾನ ಲಭಿಸುವಂತಾಗಿ, ಶಾಂತಿ - ಸಮಾಧಾನ ನೆಲೆಗೊಳ್ಳಲಿ ಎಂದು ಪ್ರಾರ್ಥಿಸಿದ್ದಾರೆ.

ಮಂಡೇಲರಿಗೆ ಆರೋಗ್ಯವನ್ನೂ ಚೈತನ್ಯಪೂರ್ಣ ಜೀವನವನ್ನೂ ಹಝ್ರತ್ ಖಲೀಫ ಹಾರೈಸುತ್ತಾ, ಅತ್ಯಂತ ಶ್ಲಾಘನೀಯವಾದ ತನ್ನ ದೌತ್ಯದಲ್ಲಿ ಅವರಿಗೆ ದೇವರು ಜಯವನ್ನು ದಯಪಾಲಿಸಲಿಯೆಂದು ಕೋರಿದ್ದಾರೆ.

## ನಿಧನ ವಾರ್ತೆಗಳು



# ಮೌಲಾನಾ ಶರೀಫ್ ಅಹ್ಮದ್ ಅಮೀನಿ ಸಾಹೇಬ್

ಜನಾಬ್ ಮೌಲಾನಾ ಶರೀಫ್ ಅಹ್ಮದ್ ಅಮೀನಿ ಸಾಹೇಬ್ ಎಚ್. ಎ. 1990 ಫೆಬ್ರವರಿ 22ರಂದು ತನ್ನ 74ನೇ ವಯಸ್ಸಿನಲ್ಲಿ ಖಾದಿಯಾನ್‌ನಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್).

ಮೌಲಾನಾ ಅಮೀನಿ ಸಾಹೇಬರು ಅಹ್ಮದಿಯಾ ಜಮಾಅತಿನ ಅಗ್ರಗಣ್ಯ ಧರ್ಮಪಂಡಿತರು ಹಾಗೂ ಸುಪ್ರಸಿದ್ಧ ಮಿಶನರಿಗಳಲ್ಲಿ ಓರ್ವರಾಗಿದ್ದರು. ಅವರು ಅರಬೀ, ಉರ್ದು, ಇಂಗ್ಲಿಷ್ ಮತ್ತು ಪಂಜಾಬಿ ಭಾಷೆಗಳಲ್ಲಿ ಭಾಷಣ ಮಾಡಬಲ್ಲ ಬಹುಭಾಷಾ ಪಂಡಿತರಾಗಿದ್ದರು. 1939ರಿಂದ 1947ರ ವರೆಗೆ ಅವರು ಮದ್ರಸ ಅಹ್ಮದಿಯಾದಲ್ಲಿ ಅಧ್ಯಾಪಕರಾಗಿದ್ದರು. 1951ರಿಂದ 1977ರ ವರೆಗೆ ಅವರು ಭಾರತದ ಮುಖ್ಯ ನಗರಗಳಾದ ಹೈದರಾಬಾದ್, ಬೊಂಬಾಯಿ, ಮದ್ರಾಸ್, ಕಲ್ಕತ್ತಾ ಎಂಬೆಡೆಗಳಲ್ಲಿ ಮಾತ್ರವಲ್ಲ, 1984ರಿಂದ 1986ರ ವರೆಗೆ ಪೆಲಸ್ತೀನದಲ್ಲಿ ಸಹ ಅಹ್ಮದಿಯಾ ಮಿಶನರಿಯಾಗಿ ಸೇವೆ ಸಲ್ಲಿಸಿದ್ದಾರೆ. ಆ ಬಳಿಕ ಮರಣದ ವರೆಗೆ ಖಾದಿಯಾನದ ಕೇಂದ್ರ ಅಹ್ಮದಿಯಾ ಪ್ರಚಾರ ವಿಭಾಗದಲ್ಲಿ ಅಡಿಶನಲ್ ನಾಝಿರ್ ಆಗಿ ದುಡಿದಿದ್ದರು.

"ಯುಗರಶ್ಮಿ"ಯ ಪ್ರಾರಂಭದಲ್ಲೇ ಅವರು ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಉತ್ತೇಜನವನ್ನು ಕೊಟ್ಟಿದ್ದರು. ಕನ್ನಡದಲ್ಲಿ ಅಹ್ಮದಿಯಾ ಸಾಹಿತ್ಯಗಳನ್ನು ಪ್ರಕಟಿಸುವ ಕಾರ್ಯದಲ್ಲಿ ಅವರು ಉತ್ಸಾಹವನ್ನು ತೋರಿಸುತ್ತಿದ್ದರು. 1952ರಲ್ಲಿ ಮಂಗಳೂರಿನಲ್ಲಿ ಅಹ್ಮದಿಯಾ ಸಾರ್ವಜನಿಕ ಸಭೆ ಜರಗಿದಾಗ, ಇತರ ಮಿಶನರಿಗಳೊಂದಿಗೆ ಮೌಲಾನಾ ಅಮೀನಿ ಸಾಹೇಬರು ಸಹ ಆಗಮಿಸಿ ಭಾಷಣ ಮಾಡಿದ್ದರು.

ಮೌಲಾನಾ ಅಮೀನಿ ಸಾಹೇಬರು ಪತ್ನಿ, ಮೂವರು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು ಮತ್ತು ಅಪಾರ ಬಂಧು ಮಿತ್ರಾದಿಗಳನ್ನೂ ಅಭಿಮಾನಿಗಳನ್ನೂ ಅಗಲಿದ್ದಾರೆ. ಅಲ್ಲಾಹನು ದಿವಂಗತ ಮೌಲಾನಾ ಅಮೀನಿ ಸಾಹೇಬರಿಗೆ ಮಗ್‌ಫಿರತನ್ನೂ ಪರಲೋಕದಲ್ಲಿ ಉನ್ನತ ಪದವಿಯನ್ನೂ ದಯ ಪಾಲಿಸಲಿ. ಆಮೀನ್.

# ಬೀಫಾತಿಮಾ ಸಾಹಿಬ

ಮಂಜೇಶ್ವರದ ಪ್ರಥಮ ಅಹ್ಮದಿ ಜನಾಬ್ ಎಂ. ಅಬ್ದುಲ್ ರಶೀದ್ ಸಾಹೇಬರ ಪತ್ನಿ ಹಾಗೂ "ಯುಗರಶ್ಮಿ" ಸಂಪಾದಕ ಮುಹಮ್ಮದ್ ಯೂಸುಫ್‌ರವರ ಮಾತೃ ಬೀಫಾತಿಮಾ ಸಾಹಿಬ 1989 ಡಿಸೆಂಬರ್ 7ರಂದು ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್). ಮರಣ ಕಾಲದಲ್ಲಿ ಅವರಿಗೆ ಸುಮಾರು 70 ವರ್ಷ ಪ್ರಾಯವಾಗಿತ್ತು.

1935ರಲ್ಲಿ ತನ್ನ ಪತಿ ಅಹ್ಮದಿಯಾ ಜಮಾಅತಿಗೆ ಸೇರಿ ಸ್ವಲ್ಪ ಸಮಯದ ಬಳಿಕ ಅವರು ಅಹ್ಮದಿಯತ್ ಸ್ವೀಕರಿಸಿದರು. 1935ರಿಂದ 1942ರ ವರೆಗೆ ಮಂಜೇಶ್ವರದಲ್ಲಿ ಅವರಿಬ್ಬರೇ ಅಹ್ಮದಿಗಳಾಗಿದ್ದರು. ಅಹ್ಮದಿಯತ್ ಸ್ವೀಕರಿಸಿದ ಕಾರಣದಿಂದ ಮುಲ್ಲಾ – ಮುಕ್ರಿ ವರ್ಗಕ್ಕೆ ಸೇರಿದ ತನ್ನ ಸಂಬಂಧಿಕರಿಂದ ಹಲವಾರು ವಿಧದ ತೊಂದರೆಗಳಿಗೆ ಅವರು ಗುರಿಯಾಗಿದ್ದರೂ ತನ್ನ ವಿಶ್ವಾಸದಲ್ಲಿ ಅವರು ದೃಢಚಿತ್ತರಾಗಿದ್ದರು. ಅವರು ತ್ಯಾಗಶೀಲೆಯೂ ಉದಾರಿಯೂ ಸುಶೀಲೆಯೂ ಆಗಿದ್ದರು.

ಐವರು ಮಕ್ಕಳನ್ನೂ ಅನೇಕ ಮೊಮ್ಮಕ್ಕಳು, ಮರಿಮಕ್ಕಳನ್ನೂ ಅಪಾರ ಬಂಧು – ಬಳಗವನ್ನೂ ಅವರು ಅಗಲಿದ್ದಾರೆ. ಜ। ಎಂ. ಉಬೈದುಲ್ಲಾ ಬಿ. ಎ. ಎಲ್. ಎಲ್. ಬಿ. ಅವರು ಅವರ ಹಿರಿಯ ಪುತ್ರ. ಬಡಗರದ ಯು. ಅಬೂಬಕರ್ ಸಾಹೇಬ್ (ಅಹ್ಮದಿಯಾ ಮುಅಲ್ಲಿಮ್, ಮದ್ರಾಸ್)ರ ಪತ್ನಿ ಜುಲೈಖಾ, ಕೂಡಾಳಿಯ ಯು. ಇಬ್ರಾಹಿಂ ಕುಞ್ಞಿ ಸಾಹೇಬರ ಪತ್ನಿ ತಾಹಿರ ಮತ್ತು ಮಡಿಕೇರಿಯ ಪಿ. ಕೆ. ಉಮರ್ ಸಾಹೇಬರ ಪತ್ನಿ ಬುಶ್ರಾ ಇವರು ಅವರ ಹೆಣ್ಮಕ್ಕಳು.

ಬೀಫಾತಿಮಾ ಸಾಹಿಬರವರ ಆತ್ಮಕ್ಕೆ ಅಲ್ಲಾಹನು ಮಗ್‌ಫಿರತನ್ನೂ ಪರಲೋಕದಲ್ಲಿ ಉನ್ನತ ಸ್ಥಾನವನ್ನೂ ಕರುಣಿಸಲಿ, ಆಮೀನ್.

# ಜನಾಬ್ ಕೆ. ಎಸ್. ಉಮರ್ ಸಾಹೇಬ್

ಮಡಿಕೇರಿಯ ಗಣ್ಯ ಅಹ್ಮದೀ ಸದಸ್ಯರಲ್ಲಿ ಒಬ್ಬರಾದ ಜನಾಬ್ ಕೆ. ಎಸ್. ಉಮರ್ ಸಾಹೇಬರು ಕಳೆದ ಜೂನ್ 22ರಂದು ತನ್ನ 66ನೇ ವಯಸ್ಸಿನಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್).

1951ರಲ್ಲಿ ಮಡಿಕೇರಿಯಲ್ಲಿ ಅಹ್ಮದಿಯಾ ಮುಬಲ್ಲಿಗ್ ಮೌಲಾನಾ ಬಿ. ಅಬ್ದುಲ್ಲಾ ಸಾಹೇಬ್ ಎಚ್. ಎ. ಮತ್ತು ಸುನ್ನೀ ಧರ್ಮಪಂಡಿತರುಗಳಾದ ಇ. ಕೆ. ಅಬೂಬಕರ್ ಮುಸ್ಲಿಯಾರ್, ಪದಿ ಅಬ್ದುಲ್ ಖಾದಿರ್ ಮುಸ್ಲಿಯಾರ್ ಇವರೊಳಗೆ ನಡೆದ ವಾದ – ಪ್ರತಿವಾದದ ಪರಿಣಾಮವಾಗಿ ಅಲ್ಲಿ ಹಲವು ಮಂದಿ ಅಹ್ಮದಿಯತ್ ಸ್ವೀಕರಿಸಿದ್ದರು. ಆ ಪೈಕಿ ಎರಡನೆ ತಂಡದಲ್ಲಿ ಕೆ. ಎಸ್. ಉಮರ್ ಸಾಹೇಬರು ಸೇರುತ್ತಾರೆ. ಉದಾರಿಯೂ ಸ್ನೇಹಶೀಲನೂ ಆಗಿದ್ದ ಕೆ. ಎಸ್. ಉಮರ್ ಸಾಹೇಬರು ಅಹ್ಮದಿಯಾ ಚಟುವಟಿಕೆಗಳಲ್ಲೆಲ್ಲ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಅವರು "ಯುಗರಶ್ಮಿ"ಯ ಓರ್ವ ಹಿತಕಾಂಕ್ಷಿಯೂ ಆಗಿದ್ದರು.

ಅವರು ಈರ್ವರು ಪತ್ನಿಯರನ್ನೂ ಆರು ಗಂಡು ಮಕ್ಕಳನ್ನೂ ಐದು ಹೆಣ್ಮಕ್ಕಳನ್ನೂ ಅನೇಕ ಬಂಧುಮಿತ್ರಾದಿಗಳನ್ನೂ ಅಗಲಿದ್ದಾರೆ.

ಜ। ಕೆ. ಎಸ್. ಉಮರ್ ಸಾಹೇಬರ ಆತ್ಮಕ್ಕೆ ಮಗ್‌ಫಿರತನ್ನೂ ಉನ್ನತ ದರ್ಜೆಯನ್ನೂ ಅಲ್ಲಾಹನು ನೀಡಲಿ, ಆಮೀನ್.

LOVE FOR ALL HATRED FOR NONE

*Pronouncement of*

*Hazrat Mirza Nasir Ahmad*

**KHALIFATHUL MASIH III**

(The Head of the Ahmadiyya Movement in Islam)

With the Best Compliments of

# M. E. MUHAMMAD ALI

**G. E. C. Hardwares**

**MADIKERI**

# ಕೊಲ್ಲಿ ಬಿಕ್ಕಟ್ಟು

## ಇಸ್ಲಾಮಿಕ ಪರಿಹಾರ

ಪ್ರಸಕ್ತ ಖಾರಿ ಬಿಕ್ಕಟ್ಟಿಗೆ ಇಸ್ಲಾಮಿನ ತತ್ವೋಪದೇಶಗಳ ಆಧಾರದಲ್ಲಿ ಅಹ್ಮದಿಯಾ ಜಮಾಅತಿನ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಸೂಚಿಸಿರುವ ಪರಿಹಾರ ಸೂತ್ರ.

ಉಚಿತ ಪ್ರತಿಗಾಗಿ 50 ಪೈಸೆ ಅಂಚೆ ಚೀಟಿಯೊಂದಿಗೆ ಬರೆಯಿರಿ:

ಸೆಕ್ರೆಟರಿ ತಬ್ಲೀಗ್
**ಅಹ್ಮದಿಯಾ ಮುಸ್ಲಿಂ ಮಿಶನ್**
10-23-1008 ಅನ್ಸಾರಿ ರಸ್ತೆ
ಮಂಗಳೂರು-575 001

*READ*

# MINARET

**A Quarterly Journal**

*The Minaret Quarterly is playing an essential role in conveying the message of Islam to many people. It is devoted purely to the purpose of dissemination of religious knowledge.*

**Annual Snbscription Rate: Rs. 20/-**
**Single Copy: Rs. 5/-**

*Apply to:*

*Manager*
MINARET QUARTERLY
Ahmadiyya Muslim Kerala State Committee
Muthalakulam, Calicut-673 001
Kerala, India.

# ಈ ವಿಶೇಷ ಸಂಚಿಕೆಯನ್ನು ಪ್ರಕಟಿಸಲು ಧನಸಹಾಯ ನೀಡಿದ ಉದಾರಿಗಳು

| | ರೂ. |
|---|---|
| ಸದಸ್ಯರು, ಜಮಾಅತ್ ಅಹ್ಮದಿಯಾ, ಮಡಿಕೇರಿ | 825 |
| ಜನಾಬ್ ಪಿ. ಕೆ. ಉಮರ್ ಸಾಹೇಬ್, ಮಡಿಕೇರಿ | 500 |
| ,, ಕೆ. ಕೆ. ಬದ್ರುದ್ದೀನ್ ಸಾಹೇಬ್, ಬಜ್ಪೆ | 250 |
| ,, ಝಮೀರ್ ಅಹ್ಮದ್ ಸಾಹೇಬ್, ಗಾಂಧಿಗ್‌ನಾಡ್ | 150 |
| ,, ಕೆ. ಎ. ಸಾಲಿಹ್ ಸಾಹೇಬ್, ಉದ್ಮ | 105 |
| ,, ಎಂ. ಅಬ್ದುಲ್ ಲತೀಫ್ ಸಾಹೇಬ್, ಚಂಡೀಗಢ | 100 |
| ,, ಕೆ. ಅಬ್ದುಲ್ ರಜಾಕ್ ಸಾಹೇಬ್, ಮಂಜೇಶ್ವರ | 100 |
| ,, ಎಂ. ಪಿ. ಅಬ್ದುಲ್ ಖಾದರ್ ಸಾಹೇಬ್, ಮಂಜೇಶ್ವರ | 100 |
| ,, ಜೆ. ಮೀರ್ ಶಫೀಉರ್ರಹ್ಮಾನ್ ಸಾಹೇಬ್, ಶಿವಮೊಗ್ಗ | 100 |
| ,, ಅಬ್ದುಲ್ ಹಮೀದ್ ಸಾಹೇಬ್, ಸಾಗರ | 100 |
| ,, ಸಯ್ಯದ್ ಕಾಸಿಂ ಸಾಹೇಬ್, ಸಾಗರ<br>,, ಎಸ್. ಆರ್. ಅಬ್ದುಲ್ ರಹ್ಮಾನ್ ಸಾಹೇಬ್, ಶಿವಮೊಗ್ಗ | 100 |
| ,, ಎ. ಎ. ಚಿಕೋಡಿ ಸಾಹೇಬ್, ಗಾಂಧಿಗ್‌ನಾಡ್ | 100 |
| ,, ಬಿ. ಶೇಕಾಲಿ ಸಾಹೇಬ್, ಕೊಯನಾಡ್ | 100 |
| ,, ಎಂ. ಇ. ಮುಹಮ್ಮದ್ ಅಲೀ ಸಾಹೇಬ್, ಮಡಿಕೇರಿ | 100 |
| ,, ಮುಹಮ್ಮದ್ ಯೂಸುಫ್ ಸಾಹೇಬ್, ಮಂಗಳೂರು | 100 |

## TIMBER MEASUREMENT READY RECKONERS

★ **EMPEES TIMBER CALCULATOR (Feet & Metres)**

Round logs – Cubic metre system.
Round logs – Cubic feet system.
Sawn wood sizes – Cubic feet system.
Conversion tables & coefficient chart.

**Rs. 100-00**
(Postage free)

★ **EMPEES TIMBER CALCULATOR (Metric System)**

Round logs measurement ready reckoner in metric system.
Coefficient chart.

**Rs. 60-00**
(Postage free)

★ **EMPEES TIMBER CALCULATOR (Cubic Feet)**

Round logs measurement ready reckoner in cubic feet system.
Sawn wood sizes.
Conversion tables (CFt to CMtr and CMtr to CFt).

**Rs. 50-00**
(Postage free)

**compiled by M. P. Ibrahim**

*Attractive Commission for bulk orders / Book Sellers*

*Copies available at :*

**Jubilee Printing Press**
Ansari Road, Bunder,
Mangalore-575001.




# NOW FLORIDA MAKES AIR TRAVEL EASIER.

***FLORIDA (INDIA) LTD.*** *following its tradition of making things real comfortable for you, is now embarking on a new era in client service* ***TRAVEL!***

***FLORIDA INDIA - TRAVEL DIVISION***

*is all set to sweep away your travel worries making travel the smoothest, problem-free and most relaxing experience in your life!*

*You are welcome to take advantage of our weakness, (You!) and avail of our services listed below.*

- *Air travel assistance*
- *Air tickets (domestic and international)*
- *Reservation and Confirmation Services*
- *Passport procurement. etc.*

**FLORIDA (INDIA) LTD.** TRAVEL D·I·V·I·S·I·O·N

Jasmine Buildings, Pannyankara, Calicut - 673 003.
Phone: 60825 Gram: "CHAZIYA"

*You'll love the way we Simplify!*

Space Ad/273

Regd. with the Registrar of Newspapers for India Regd. No. R. N. 27354/75
YUGARASHMI Kannada Quarterly SPECIAL ISSUE 1990


# ಸ್ಟ್ಯಾಂಡರ್ಡ್ ಟೈಲರಿ

ಕಡೂರು, ಚಿಕ್ಕಮಗಳೂರು ಜಿಲ್ಲೆ

## ರಾಜಾ ಮಾರ್ಕಿನ ಹಂಚುಗಳು

ಚಾವಣಿ ಹಂಚು, ಮೂಲೆ ಹಂಚು, ಗೋಡೆ ಹಂಚು, ಹಾಸು ಹಂಚು, ಮೆತ್ತಡ ಹಂಚು,

ಆಲಂಕಾರಿಕ ಹಂಚು, ಮೊದಲಾದ ಎಲ್ಲ ತರದ ಆವೆಮಣ್ಣಿನ ಉತ್ಪನ್ನಗಳು ದೊರೆಯುತ್ತವೆ.

# STANDARD TILERY

**KADUR**

**CHICKMAGALUR DISTRICT**

# RAJA MARK

Roofing Tiles, Ridges, Wall Tiles,

Span Tiles, Floorings, Decorative Tiles, Ceilings, Etc., Etc.

**ALL CLAY PRODUCTS AVAILABLE**


Edited and Published by Muhammad Yusuf on behalf of Jamath Ahmadiyya at 10-23-1008, Ansari Road, Bunder, Mangalore-575 001. Phone: 32039 Printed at Jubilee Printing Press, Ansari Road, Bunder, Mangalore-575 001.

Cover Printed at Sharada Press